KA / BG-GPO /2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಆಗಸ್ಟ್ ೨೭, ೨೦೦೯ (ಭಾದ್ರಪದ ೫, ಶಕವರ್ಷ ೧೯೩೧)	ಸಂಚಿಕೆ ೩೫

ವಿಷಯಸೂಚಿ

ಸಂಖ್ಯೆ	ದಿನಾಂಕ	ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ
710	17.8.2009	ಸಂ. ಕಾಇ 262 ಎಲ್‌ಇಟಿ 2009, ದಿ. 17.8.2009 – 'TOTAL' ಮಾಲ್‌ಗಳನ್ನು ರಾತ್ರಿ 12.00 ಗಂಟೆಯವರೆಗೆ ತೆರೆಯಲು ಕೋರಿಕೆಗೆ ಸಂಬಂಧಿಸಿದಂತೆ.
711	18.8.2009	ಸಂ. ಸಂವ್ಯಶಾಇ 30 ಶಾಸನ 2009, ದಿ. 18.8.2009 – ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ಅಧಿನಿಯಮ, 2009.
712	18.8.2009	No. DPAR 5 SCR 2009, Dt. 17.8.2009 – KCS (Direct Recruitment by Competitive Examinations and Selections) (General) (Amendment) Rule, 2009.
713	19.8.2009	ಸಂ. ಸಿಐ 103 ಎಸ್‌ಪಿಕ್ಯೂ 2008, ದಿ. 19.8.2009 – 1897ರ ಜನರಲ್ ಕ್ಲಾಜಸ್ ಕಾಯ್ದೆಯ ಕಲಂ 21ರ ಮೇರೆಗೆ ಅಧಿಸೂಚನೆ.
714	19.8.2009	ಸಂ. ಚು/ವಿವ 5(9)/93–94, ದಿ. 19.8.2009 – ಬ್ರಹ್ಮಸಂದ್ರ ಗ್ರಾಮವನ್ನು ಕೇಂದ್ರ ಸ್ಥಾನವನ್ನಾಗಿ ಬದಲಾಯಿಸುವ ಬಗ್ಗೆ.
715	20.8.2009	No. DCA 7 ARB 2009, Dt. 17.8.2009 – Karnataka Govt. (Allocation of Business) (Amendment) Rules, 2009.
716	20.8.2009	ಸಂ. ಲೋಇ 64 ಸೇಸಕಿ 09, ದಿ. 20.8.2009 – ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ.
717	21.8.2009	ಸಂ. ನಅಇ:146:ಬೆಂರೂಪ್ರಾ:2009, ದಿ. 17.8.2009 – ಶಿವಮೊಗ್ಗ ಜಿಲ್ಲೆಯ ಮಲ್ಲಿಗೇನಹಳ್ಳಿ ಗ್ರಾಮಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಅಂತಿಮ ಅಧಿಸೂಚನೆ.
718	21.8.2009	ಸಂ. ಸಿಐ 737 ಎಸ್‌ಪಿಕ್ಯೂ 2007, ದಿ. 21.8.2009 – ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣದ ಅಭಿವೃದ್ಧಿಯ 2ನೇ ಹಂತದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಅಧಿಸೂಚನೆ.
719	22.8.2009	ಸಂ. ನಅಇ 120 ಎಂಎಲ್‌ಆರ್ 2009, ದಿ. 22.8.2009 – ಬೃ.ಬೆ.ಮ.ಪಾ. ಕ್ಷೇತ್ರಗಳಿಗೆ ಚುನಾವಣೆ ನಡೆಸುವ ಸಲುವಾಗಿ ಕರಡು ಮೀಸಲಾತಿ ನಿಗಧಿಪಡಿಸುವ ಬಗ್ಗೆ.
720	22.8.2009	ಸಂ. ರಾಚುಕೃಮಾಸಸಿಆರ್.79/2007–08, ದಿ. 19.8.2009 – ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಕೃ.ಉ.ಮಾ. ಸಮಿತಿಯ 11 ವ್ಯವಸಾಯ ಕ್ಷೇತ್ರದ ಚುನಾವಣೆ.
721	22.8.2009	No. GOB(I) 314 (II)/2008, Dt. 21.8.2009 – Inviting applications from the eligible Advocates for recruitment to the District Judges.
722	22.8.2009	ಸಂ. ಸಿಆಸುಇ 3 ಚುವಿಸ 2009, ದಿ. 21.8.2009 – 5 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಸಂಬಂಧಿಸಿದಂತೆ ಆಯ್ಕೆಯಾದ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸುವ ಬಗ್ಗೆ.
723	22.8.2009	ಸಂ. ಸಂವ್ಯಶಾಇ 8 ಶಾಸನ 2009, ದಿ. 22.8.2009 – The Karnataka Legislature Salaries, Pensions and Allowances (Amendment) Act, 2009.
724	22.8.2009	ಸಂ. ನಅಇ 120 ಎಂಎಲ್‌ಆರ್ 2009, ದಿ. 22.8.2009 – ಕರಡು ಅಧಿಸೂಚನೆ ಸಂಖ್ಯೆ ನಅಇ 120 ಎಂಎಲ್‌ಆರ್ 2009, ದಿ. 22.8.2009 ಮೀಸಲಾತಿ ಅಧಿಸೂಚನೆ ಹಿಂಪಡೆಯುವ ಬಗ್ಗೆ.
725	24.8.2009	No. HD/374/PMS/2008, Dt. 22.8.2009 - Corrigendum for No. HD/374/PMS/2008, Dt. 12.8.2009

ವಾರದ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು

http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4.	ಭಾಗ - 4	3-00	240-00
5.	ಭಾಗ - 4ಎ	8-00	285-00
6.	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)................................	7-00	325-00
8.	ಭಾಗ - 6ಎ (ಮೈಸೂರು)................................	50-00	1111-00
9.	ಭಾಗ - 6ಬಿ (ಧಾರವಾಡ)................................	25-00	1637-00
10.	ಭಾಗ - 6ಸಿ (ಗುಲ್ಬರ್ಗ)................................	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 3
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :-

1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು " 0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು " ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಚೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಆಗಸ್ಟ್ ೨೭, ೨೦೦೯ (ಭಾದ್ರಪದ ೫, ಶಕ ವರ್ಷ ೧೯೩೧)	ಸಂಚಿಕೆ ೩೫

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಜಲಸಂಪನ್ಮೂಲ ಸಚಿವಾಲಯ

ವಿಷಯ: ಬೀದರ್ ಜಿಲ್ಲೆ, ಬಸವಕಲ್ಯಾಣ ತಾಲ್ಲೂಕಿನ ಮೀರಕಲ್ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ನಿರ್ಮಾಣ ಕಾಮಗಾರಿಗೆ ಸ್ವಾಧೀನ ಪಡಿಸಿಕೊಳ್ಳಲಾದ ಜಮೀನುಗಳಲ್ಲಿ ಕೈಬಿಟ್ಟು ಹೋಗಿದ್ದ ಸದರಿ ಗ್ರಾಮದ ಸರ್ವೆ ನಂಬರ್‌ಗಳಿಗೆ ಸೇರಿದ ಜಮೀನುಗಳಿಗೆ ಪರಿಹಾರ ಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 27/02/09ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ ಭೂಸ್ವಾಪ್ರ/2008-09/1444.

ಪ್ರಸ್ತಾವನೆ:

ಬೀದರ್ ಜಿಲ್ಲೆ, ಬಸವ ಕಲ್ಯಾಣ ತಾಲ್ಲೂಕು ಮೀರಕಲ್ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ನಿರ್ಮಾಣ ಕಾಮಗಾರಿಯನ್ನು 1997ರಲ್ಲಿ ಕೈಗೊಳ್ಳಲಾಗಿದ್ದು, ಈ ಕೆರೆಗೆ ಅಗತ್ಯವಿದ್ದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಕೈಬಿಟ್ಟು ಹೋಗಿದ್ದ ಸದರಿ ಗ್ರಾಮದ ಸರ್ವೆ ನಂ: 237/2(ಬಿ), 231/3(ಎ), ಮತ್ತು 231/4(ಬಿ) ನ 4 ಎಕರೆ ಜಮೀನಿನ ಸ್ವಾಧೀನಕ್ಕೆ ಭೂಸ್ವಾಧೀನ ಪ್ರಕ್ರಿಯೆ ನಡೆಸಿದ್ದು, ಭೂಸ್ವಾಧೀನ ಕಾಯ್ದೆ ಕಾಲಂ 4(1)ರ ಅಧಿಸೂಚನೆಯನ್ನು ದಿನಾಂಕ: 18/05/2000 ರಂದು 6(1)ರ ಅಧಿಸೂಚನೆಯನ್ನು ದಿನಾಂಕ: 20/09/2001 ರಂದು ಹೊರಡಿಸಲಾಗಿದೆ. ಸ್ವಾಧೀನಕ್ಕೊಳಪಟ್ಟ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಾಲಂ 11(ಎ)ರಡಿ ಪರಿಹಾರ ಧನದ ಐತೀರ್ಪನ್ನು ವಿಶೇಷ ಭೂಸ್ವಾಧೀನ ಅಧಿಕಾರಿಗಳು ಕಾರಂಜಾ ಯೋಜನೆ, ಬೀದರ್ ಇವರು ದಿನಾಂಕ: 31/07/2003 ರಂದು ಹೊರಡಿಸಿರುತ್ತಾರೆ. ಐತೀರ್ಪಿನಂತೆ ಪರಿಹಾರ ಧನ ಪಾವತಿಸಲು ರೂ.1,88,424.00 ನ್ನು ಬಿಡುಗಡೆ ಮಾಡುವಂತೆ ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 51 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 9ನೇ ಜೂನ್ 2009

ಬೀದರ್ ಜಿಲ್ಲೆ, ಬಸವ ಕಲ್ಯಾಣ ತಾಲ್ಲೂಕು ಮೀರಕಲ್ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲಾದ ಪ್ರಸ್ತಾವನೆಯಲ್ಲಿ ತಿಳಿಸಿರುವ ಸರ್ವೆ ನಂಬರ್‌ಗಳ ಒಟ್ಟು 4 ಎಕರೆ 3 ಗುಂಟೆ ಜಮೀನಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಕಾರಂಜಾ ಯೋಜನೆ, ಇವರು ಹೊರಡಿಸಿರುವ ಐತೀರ್ಪಿನಂತೆ ರೂ. 1,88,424.00 (ಒಂದು ಲಕ್ಷದ ಎಂಭತ್ತೆಂಟು ಸಾವಿರದ ನಾಲ್ಕು ನೂರ ಇಪ್ಪತ್ತಾಲ್ಕು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ:16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1572

ಕೆ. ಸುಧಾಕರ ಶೆಟ್ಟಿ,

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ).

COMMERCE AND INDUSTRIES SECRETARIAT

Sub: Expansion project proposal of M/s Karnataka Power Corporation Ltd., to establish additional 600 MW Power Plant at Chiksugur and Yegnur villages adjacent to Raichur Growth Centre - Approval for- Orders reg.

Read:
1. Proceedings of the 10th State High Level Clearance Committee [SHLCC] meeting held on 28.08.2007.
2. G.O. No. EN 60 PPC 2008 dated 09.07.2008.
3. Proceedings of the 16th State High Level Clearance Committee [SHLCC] meeting held on 19.11.2008.

Preamble:

The State High Level Clearance Committee [SHLCC] in its 10th meeting held on 28.08.2007 has approved the project proposal of M/s Karnataka Power Corporation Ltd., to establish "2 X 500 MW Coal Based Thermal Power Plant" with an investment of Rs.4160.00 crores in 1000 acres of land at Raichur Growth Centre, Raichur District.

KIADB has allotted 870 acres of land at Raichur Growth Centre to KPCL for establishment of 2X500 MW Coal Based Thermal Power Plant.

Subsequently, Government of Karnataka accorded approval for enhanced installed capacity i.e 2X600 MW vide Government Order No. EN 60 PPC 2008 dated 09.07.2008.

Now, the company has proposed to establish additional 600 MW with a total revised investment of Rs.4254.00 crores in additional land of 234.22 acres at different Sy. Nos. of Chiksugur and Yegnur villages adjacent to 870 acres of land already allotted by KIADB at Raichur Growth Centre and requested the SHLCC to consider the proposal.

The State High Level Clearance Committee, after detailed discussion of the project proposal of the said Company, vide the proceedings read above (3), has recommended for approval of the project.

Government has examined the recommendations made by the State High Level Clearance Committee in its 16th Meeting held on 19.11.2008 in all aspects. Hence the following order.

Government Order No: CI 46 SPI 2009, Bangalore, Dated: 28th May 2009

In the circumstances explained above, Government is pleased to accord approval of M/s Karnataka Power Corporation Ltd. to establish additional 600 MW Power Plant with a total revised investment of Rs.4254.00 crores in additional land of 234.22 acres at various Sy. Nos. mentioned in Annexure of Chiksugur and Yegnur villages adjacent to Raichur Growth Centre, Raichur District.

LAND:

KIADB to acquire the said 234.22 acres of land identified by the company.

ENVIRONMENT:

KSPCB to issue CFE as per their norms. The company shall obtain environmental clearance from State and MOEF, GoI before commencement of work.

EMPLOYMENT:

Project proponents shall play a proactive role in enhancing the employability of the local job seekers, including the land losers. Further, the Company shall prepare a plan for development of human resources required for the project, train local people and provide employment to these trained local youth and comply with Government policy of Employment to local people i.e Dr. Sarojini Mahishi report. A copy of human resources development plan shall be sent to the Commissioner for I.D. & Director of Industries and Commerce for monitoring.

VENDOR DEVELOPMENT:

Where ever there is scope for vendor development for the project, the company shall prepare a vendor development plan develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.

SOCIAL INFRASTRUCTURE DEVELOPMENT:

The Company is advised to take up social infrastructure development projects in the vicinity of proposed location of the unit as per the R&R policy 2007 (GoI). A copy of such projects shall be sent to the Government.

OTHERS:

The promoter shall take all statutory and other necessary clearances and shall submit milestones / progress in implementation of the project regularly, which will be monitored by the Departments concerned.

This approval is valid for a period of two years from the date of issue.

This issues with the concurrence of Energy Department vide No. EN 60 PPC 2008 dated 28.02.2009.

By Order and in the name of the Governor of Karnataka

P.R. 1536

APARNA PAVATE

Desk Officer (Technical Cell), Commerce & Industries Department

Sub: Project proposal of M/s Jindal Saw Limited to establish a unit for manufacture of " Spiral Welded Steel Pipes" at Sultanpur, Bellary.

Ref:
1. Proceedings of the 47th SLSWCC meeting held on 13.1.2009.
2. SLSWCC Letter No.KUM/SLSWCC-47/E5[E4] /804/2008-09 Dated 27.2.2009 issued to the Company.

Preamble:

M/s Jindal Saw Limited to establish a unit for manufacture of " Spiral Welded Steel Pipes" at Sultanpur, Bellary. with an investment of Rs.30.42 crores. in 50 acres of land to be taken on sub-lease from M/s. JSW Steel Ltd, Bellary .

The proposal has been considered in the 47th State Level Single Window Clearance Committee held on 13.1.2009 and after detailed discussions the project is approved to establish a unit for manufacture of " Spiral Welded Steel Pipes" in 50 acres of land to be taken on sub-lease from M/s. JSW Steel Ltd, Bellary . Hence the following order.

Government Order No: CI 103 SPI 2009, Bangalore, Dated: 28th May 2009

In the circumstances explained above, The Government is pleased to approve the project proposal of M/s Jindal Saw Limited., Bellary.

INFRASTRUCTRE FACILITIES:

Land: For manufacture of " Spiral Welded Steel Pipes" in 50 acres of land to be taken on sub-lease from M/s. JSW Steel Ltd, Bellary .

Power: GESCOM to service 3000 KVA power supply

Environment Clearance: The promoters are advised to obtain EC from State. No work shall commence without prior approval to EC, as per prevailing Law.

Pollution Control:- The promoters are advised to obtain consent from KSPCB to establish the units.

Building and Machinery / Layout Plan Approval:- The promoters to obtain prior approval for proposed building plan and machinery layout from factories and boilers Department.

Employment: The Company shall prepare a plan for development of human resource required for the project, train local people and provide employment to these trained local youth and comply with Government policy providing Employment to local people. A copy of human resource development plan shall be sent to the Commissioner for I.D. & Director of Industries and Commerce for monitoring.

Incentives and Concessions:- As applicable under Industrial Policy 2009-14.

Statutory Approval and Clearances: Company to obtain statutory Clearance and approval as applicable.

Others:

The promoter shall provide employment to local Kannadigas as per Dr.Sarojini Mahishi Report, wherever possible solar lighting and solar water heating must be adopted. There shall no violation of zoning regulations.

In pursuance of the decision of the SLWCC, Government has no objection to sub-lease 50 acres of land to M/s Jindal Saw Limited from M/s JSW Steel Ltd., as per the schedule given below:

Sl. No.	Village	Survey Nos.	Extent [Acres]
1.	Yerabanahalli	12	2.16
2.	Yerabanahalli	13	24.84
3.	Yerabanahalli	14	6.11
4.	Yerabanahalli	18	2.72
5.	Yerabanahalli	48A	2.03
6.	Yerabanahalli	48B	5.00
7.	Yerabanahalli	112	7.14
	Total		**50.00**

By Order and in the name of the Governor of Karnataka,

P.R. 1537

APARNA PAVATE

Desk Officer (Technical Cell), Commerce & Industries Department.

Sub: Exemption of Entry Tax on Plant & Machinery & Works Contract Tax to M/s Toyota Kirloskar Motor Ltd., Bidadi, Ramanagaram District for their expansion project – Reg.

Read: Letter No. TKM/IPO-EA/2009/03 dated 13.02.2009 of M/s Toyota Kirloskar Motor Ltd., Bidadi Industrial Area, Ramanagaram District.

Preamble:

M/s Toyota Kirloskar Motors Ltd., Bidadi Industrial Area, Ramanagaram District has taken up expansion project for manufacturing of small / compact cars with an investment of Rs.4,043 Crores over a period of seven years starting from 2009-2016, generating direct employment to 2400 persons & indirect employment to 3000 persons. They have requested for exemption of Entry Tax on Plant & Machinery and Tax on Works Contract starting from 2009-10 to 2013-14 vide their letter dated 13.02.2009 read above.

The request of the company has been considered keeping in view of the following:-

i) In the present economic recession, especially in the automobile sector, this is likely to be the largest investment we will attract for sometime.

ii) Toyota has reportedly put all their investment plans around the entire world 'on hold', except this expansion which is going ahead as planned. This would be the first/small compact car manufacture by Toyota and would re-inforce Karnataka as an important place in the 'automobile industry' worldwide.

iii) Being a manufacturing industry, there are positive spin-offs by way of development of ancillary industries and sub-contracting functions apart from direct and indirect employment in the manufacturing and service support industry that would come-up.

iv) The presence of Toyota in the State acts as a beacon for other manufacturers in the 'automobile sector'. This is important in context of the 'Global Investors Meet' that is scheduled in the current financial year.

The proposal was sent to Finance Department for concurrence. The Finance Department has agreed for the said proposal vide Note No. FD 31 CSL 2009 dated 20.05.2009.

The proposal has been approved in the Cabinet meeting held on 05.06.2009.

Hence the following order.

Government Order No. CI 432 SPI 2005, Bangalore Dated: 12th June 2009

Under the circumstances explained above, Government is pleased to approve the proposal of M/s Toyota Kirloskar Motors Ltd., Bangalore for extending exemption of Entry Tax on Plant & Machinery and Works Contract Tax for a period of 3 years i.e. from 01.06.2009 to 31.05.2012 for its expansion project, subject to the following condition imposed by the Finance Department:

"ಮೆ: ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯು ಮುಂದಿನ 2 ವರ್ಷಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಎರಡನೇ ಸ್ಥಾವರಕ್ಕೆ ಕಂಪನಿಯು ಸುಮಾರು 3200 ಕೋಟಿ ರೂ.ಗಳನ್ನು ಹೂಡಿಕೆ ಮಾಡಲು ಉದ್ದೇಶಿಸಿದೆ. ಇದು ಮೂರನೇ ವರ್ಷಕ್ಕೂ ಮುಂದುವರೆಯುವ ಸಾಧ್ಯತೆ ಇರುತ್ತದೆ. ಈ ದೃಢ ಹೂಡಿಕೆಯ ಯೋಜನೆ ಮತ್ತು ಪ್ರಸ್ತುತ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ ಇಲಾಖೆಯು 3 ವರ್ಷದ ಅವಧಿಗೆ ಪ್ರವೇಶ ತೆರಿಗೆ ಮತ್ತು ವರ್ಕ್ಸ್ ಕಾಂಟ್ರಾಕ್ಟ್ ತೆರಿಗೆಯಿಂದ ವಿನಾಯಿತಿಯನ್ನು ನೀಡಲು ಈ ಕೆಳಗಿನ ಷರತ್ತಿನೊಂದಿಗೆ ಒಪ್ಪಿದೆ.

ಮೆ: ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಲಿಮಿಟೆಡ್ ನೇರವಾಗಿ 3200 ಕೋಟಿ ರೂ.ಗಳನ್ನು ಹೂಡಿಕೆ ಮಾಡಿದ್ದಲ್ಲಿ ಮಾತ್ರ ವಿನಾಯಿತಿಯನ್ನು ನೀಡಲಾಗುವುದು."

This order issues with the concurrence of Finance Department Note No. FD 31 CSL 2009 dated 20.05.2009 and Cabinet meeting held on 05.06.2009.

By order and in the name of Governor of Karnataka

P.R. 1579

APARNA PAVATE

Desk Officer (Technical Cell), Commerce & Industries Department

ಜಲಸಂಪನ್ಮೂಲ ಸಚಿವಾಲಯ

ವಿಷಯ: ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಅಥರ್ಗಾ ಹೊನ್ನಳ್ಳಿ ರಸ್ತೆ ಹತ್ತಿರ ದೊಡ್ಡಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬಾಂದಾರ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಸನೀಇ 02 ನಯೋಕಾ 2009, ದಿನಾಂಕ 05/02/09

2. ದಿನಾಂಕ 14/04/09ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ–9/ಅಥರ್ಗಾ ಹೊನ್ನಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್/2008–09/2888.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮುಸದ/ಆಪ್ತ ಶಾಖೆ/ಟೆಂಡರ್/09–10.

ಪ್ರಸ್ತಾವನೆ:

ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಅಥರ್ಗಾ ಹೊನ್ನಳ್ಳಿ ರಸ್ತೆ ಹತ್ತಿರ ದೊಡ್ಡಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬಾಂದಾರ ನಿರ್ಮಾಣ ಕಾಮಗಾರಿಯ 210.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 05/02/09ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಿಜಾಪುರ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ದ್ವಿಲಕೋಟೆ ಪದ್ಧತಿಯಲ್ಲಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	ರಾಜ್ಯ ಟೆಂಡರ್ ಬುಲೆಟಿನ್	ದಿ:13/02/09
2	ವಿಜಯ ಕರ್ನಾಟಕ ದಿನಪತ್ರಿಕೆ	ದಿ:14/02/09
3	ಇಂಡಿಯನ್ ಎಕ್ಸ್‌ಪ್ರೆಸ್ ಆಂಗ್ಲ ದಿನಪತ್ರಿಕೆ	ದಿ:14/02/09

ಈ ಟೆಂಡರ್ ಕರೆಗೆ ಪ್ರತಿಕ್ರಯಿಸಿ ಖಾಲಿ ಟೆಂಡರ್ ಫಾರಂ ಪಡೆದ 9 ಜನ ಗುತ್ತಿಗೆದಾರರ ಪೈಕಿ ಇಬ್ಬರು ಗುತ್ತಿಗೆದಾರರು ಮಾತ್ರ ನಿಗದಿತ ದಿನದಂದು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್ ಅನ್ನು ದಿನಾಂಕ 25/02/09ರಂದು ತೆರೆಯಲಾಗಿ ಇದರಲ್ಲಿ ಒಬ್ಬರು ಗುತ್ತಿಗೆದಾರರ ಟೆಂಡರ್ ಮಾತ್ರ ಅರ್ಹವಾಗಿದ್ದು, ಅವರ ಆರ್ಥಿಕ ಬಿಡ್‌ನ್ನು ಅಂದೇ ತೆರೆಯಲಾಗಿದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ.1,88,07,750/-
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಟೆಂಡರಿಗೆ ಇಡಲಾದ ಮೊತ್ತ				ರೂ.1,84,33,095/-
ಕ್ರ.ಸಂ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ	ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ
1	ಎ.ಎಸ್.ಪಾಟೀಲ್ 1ನೇ ದರ್ಜೆ ಗುತ್ತಿಗೆದಾರರು	ರೂ.2,20,44,775/-	17.21 ಹೆಚ್ಚು	19.59 ಹೆಚ್ಚು

ಮೇಲ್ಕಂಡಂತೆ ಶ್ರೀ ಎ.ಎಸ್.ಪಾಟೀಲ್, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 19.59ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 20/05/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.1,84,33,095-00ಗಳ ಮೇಲೆ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.2,11,05,893-00ಗಳಿಗೆ ಕಾಮಗಾರಿಯನ್ನು ಶ್ರೀ ಎಸ್.ಎಸ್. ಪಾಟೀಲ್, 1ನೇ ದರ್ಜೆ ಗುತ್ತಿಗೆದಾರರು, ಬಿಜಾಪುರ ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 27 ಅಪಿಬಂ 2009, ಬೆಂಗಳೂರು, ದಿನಾಂಕ: 4ನೇ ಜುಲೈ 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕು, ಅಥರ್ಗಾ ಹೊನ್ನಳ್ಳಿ ರಸ್ತೆ ಹತ್ತಿರ ದೊಡ್ಡಹಳ್ಳಕ್ಕೆ ಅಡ್ಡಲಾಗಿ ಸೇತುವೆ ಸಹಿತ ಬಾಂದಾರ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ.1,84,33,095-00ಗಳ ಮೇಲೆ ಶೇಕಡ 14.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.2,11,05,893-00ಗಳಿಗೆ (ಎರಡು ಕೋಟಿ ಹನ್ನೊಂದು ಲಕ್ಷದ ಐದು ಸಾವಿರದ ಎಂಟುನೂರ ತೊಂಭತ್ತ್ಮೂರು ರೂ.ಗಳು ಮಾತ್ರ) ಶ್ರೀ ಎಸ್.ಎಸ್.ಪಾಟೀಲ್, 1ನೇ ದರ್ಜೆ ಗುತ್ತಿಗೆದಾರರು, ಬಿಜಾಪುರ ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1604

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಶ್ರೀ ಸೋಸಲೆ ಇಂಧುದರ್, ವಿಚಾರಣಾಧಿಕಾರಿಗಳು, ಹಾಗೂ ಜಿಲ್ಲಾ ಸೆಷನ್ಸ್ (ನಿವೃತ್ತ), ಇವರಿಗೆ ವಿಚಾರಣಾ ವರದಿ ಸಲ್ಲಿಸಿರುವುದಕ್ಕಾಗಿ ಗೌರವ ಧನ ಮತ್ತು ವಾಹನ ಭತ್ಯೆ ಮಂಜೂರಾತಿ ಬಗ್ಗೆ

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 78 ಎಸ್‌ಇಎನ್ 2005, ದಿನಾಂಕ: 12.09.2006.

2. ಶ್ರೀ ಸೋಸಲೆ ಇಂಧುದರ್, ನಿವೃತ್ತ ನ್ಯಾಯಾದೀಶರ ಪತ್ರ, ದಿನಾಂಕ: 13.05.2009.

ಪ್ರಸ್ತಾವನೆ:

ಶ್ರೀ ಹೆಚ್.ಕೆ. ಹೊರ್ತಿಕರ್, ನಿವೃತ್ತ ಮುಖ್ಯ ಇಂಜಿನಿಯರ್ ಅವರು ಮುಖ್ಯ ಇಂಜಿನಿಯರ್ ರಾಷ್ಟ್ರೀಯ ಹೆದ್ದಾರಿ ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಹಗರಿ ಸೇತುವೆ ಸುಂಕ ಸಂಗ್ರಹಣ ಕಾಮಗಾರಿ ಗುತ್ತಿಗೆಯ ಗುತ್ತಿಗೆದಾರರಿಗೆ ಕಡಿಮೆ ದಂಡ ವಿಧಿಸಿ ಕರ್ತವ್ಯ ಲೋಪ ಎಸಗುವ ಮೂಲಕ ಸರ್ಕಾರಕ್ಕೆ ಅಪಾರ ಆರ್ಥಿಕ ನಷ್ಟ ಉಂಟುಮಾಡಿರುವುದು ಹಾಗೂ ಕರಾರಿನಂತೆ ಕ್ರಮ ಜರುಗಿಸದೇ ಕರಾರಿನಲ್ಲಿನ ಷರತ್ತನ್ನು ಉದ್ದೇಶ ಪೂರ್ವಕವಾಗಿ ಉಲ್ಲಂಘಿಸಿದ ಆರೋಪಕ್ಕಾಗಿ ಶ್ರೀ ಹೆಚ್.ಕೆ. ಹೊರ್ತಿಕರ್ ನಿವೃತ್ತ ಮುಖ್ಯ ಇಂಜಿನಿಯರ್ ಇವರು ವಿರುದ್ಧ ಕೆಸಿಎಸ್‌ಆರ್ ನಿಯಮ 214ರ ರನ್ವಯ ಮೇಲೆ (1)ರಲ್ಲಿ ಓದಲಾದ ದಿನಾಂಕ: 12.09.2006ರ ಸರ್ಕಾರಿ ಆದೇಶದಲ್ಲಿ ಇಲಾಖಾ ವಿಚಾರಣೆಯನ್ನು ಆದೇಶಿಸಿ ನಿವೃತ್ತ ನ್ಯಾಯಾಧೀಶರಾದ ಶ್ರೀ ಎಸ್. ಇಂದೂಧರ ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು. ವಿಚಾರಣಾಧಿಕಾರಿಗಳು ಈ ಪ್ರಕರಣದ ಇಲಾಖಾ ವಿಚಾರಣೆ ಮುಗಿಸಿ, ಮೇಲೆ (2)ರಲ್ಲಿ ಓದಲಾದ ದಿನಾಂಕ: 13.05.2009ರ ಪತ್ರದಲ್ಲಿ ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ವಿಚಾರಣಾಧಿಕಾರಿಯವರಿಗೆ ನಿಯಮಗಳ ಪ್ರಕಾರ ಗೌರವ ಧನ ಮತ್ತು ವಾಹನ ಭತ್ಯೆಯನ್ನು ಮಂಜೂರು ಮಾಡಲು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 78 ಎಸ್‌ಇಎನ್ 2005, ಬೆಂಗಳೂರು, ದಿನಾಂಕ: 30ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಶ್ರೀ ಸೋಸಲೆ ಇಂದುಧರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ವಿಚಾರಣಾ ವರದಿ ಸಲ್ಲಿಸಿರುವ ಕಾರಣ ಇವರಿಗೆ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 22 ಸೇಇವಿ 2007, ದಿನಾಂಕ:11.04.2008 ರನ್ವಯ, ರೂ. 8000/-ಗಳ ಗೌರವಧನ ಹಾಗೂ ರೂ. 1500/-ಗಳ ವಾಹನ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಈ ವೆಚ್ಚವನ್ನು ಆಯವ್ಯಯದ ಲೆಕ್ಕಶೀರ್ಷಿಕೆ 2052/ಸಚಿವಾಲಯ, ಸಾಮಾನ್ಯ ಸೇವೆಗಳು-090, ಸಚಿವಾಲಯ-01, ಕರ್ನಾಟಕ ಸರ್ಕಾರ ಸಚಿವಾಲಯ-051, ಸಾಮಾನ್ಯ ವೆಚ್ಚಗಳು ಇಲ್ಲಿ ಭರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1605

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3).

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಉಳ್ಳಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ರೂ.6571.00 ಲಕ್ಷಗಳಲ್ಲಿ ಕಲ್ಪಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ವ್ಯ.ನಿ. ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ:ಕಜಮಂ /ತಾಂತ್ರಿಕ/ಉಳ್ಳಾಲ-ಒ.ಚ.ಯೋ-01/381/2009-10 ದಿನಾಂಕ:21.05.2009

ಪ್ರಸ್ತಾವನೆ:

ಉಳ್ಳಾಲ ಪಟ್ಟಣವು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿದ್ದು, ಅರಬಿ ಸಮುದ್ರದ ತೀರದಲ್ಲಿರುತ್ತದೆ. ಪಟ್ಟಣದ ಜನಸಂಖ್ಯೆಯು 2001ರ ಜನಗಣತಿಯ ಪ್ರಕಾರ 49861 ಇದ್ದು ಪ್ರಸ್ತುತ 60000 ಇರುತ್ತದೆ. ಪ್ರಸ್ತುತ ಈ ಪಟ್ಟಣಕ್ಕೆ ತೆರದ ಹಾಗೂ ಕೊಳವೆ ಬಾವಿಗಳಿಂದ ದಿನಂಪ್ರತಿ ತಲಾ 50 ಲೀಟರ್ ನಂತೆ ಪುರಸಭೆವತಿಯಿಂದ ನೀರು ಸರಬರಾಜು

ಮಾಡುತ್ತಿದ್ದು, ಎಡಿಬಿ ಯೋಜನೆಯಡಿ ನೇತ್ರಾವತಿ ನದಿ ಮೂಲದಿಂದ ದಿನಂಪ್ರತಿ ತಲಾ 135 ಲೀಟರ್‌ನಂತೆ ನೀರು ಸರಬರಾಜು ಮಾಡಲು ಯೋಜನೆಯು ಅನುಷ್ಠಾನಗೊಳ್ಳುವ ಹಂತದಲ್ಲಿದೆ.

ಉಳ್ಳಾಲ ಪಟ್ಟಣಕ್ಕೆ ಹಾಲಿ ಯಾವುದೇ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಈ ಪಟ್ಟಣದ ತ್ಯಾಜ್ಯ ನೀರು, ಮಳೆನೀರು ತೆರದ ಚರಂಡಿಗಳಲ್ಲಿ ಹರಿಯುತ್ತಿದ್ದು, ಪಟ್ಟಣದ ಪರಿಸರವು ಹಾಳಾಗುತ್ತಿದೆ. ಆದ್ದರಿಂದ ಒಳಚರಂಡಿ ವ್ಯವಸ್ಥೆಯನ್ನು 2011ನೇ ಸಾಲಿನಲ್ಲಿ ಅಂದಾಜಿಸಲಾದ 75650 ಹಾಗೂ ಮಧ್ಯಂತರ ಹಂತವಾದ 2026ಕ್ಕೆ 126085 ಮತ್ತು ಅಂತಿಮ ಹಂತ 2041ಕ್ಕೆ 204237 ಜನಸಂಖ್ಯೆನ್ನು ಪರಿಗಣಿಸಿ ಯೋಜನೆ ರೂಪಿಸಿ, ಯೋಜನೆಯನ್ನು 2010–11 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಉಳ್ಳಾಲ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸದಿರುವ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ:4861/2007 (GM-CPC) ಇತ್ಯಾರ್ಥಕ್ಕೆ ಬಾಕಿ ಇದ್ದು, ಈ ಯೋಜನೆಯನ್ನು ಪ್ರಸ್ತುತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದೆಂದು ಸರ್ಕಾರವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಮಾಣ ಪತ್ರ ಸಲ್ಲಿಸಿರುತ್ತದೆ.

ಈ ಯೋಜನೆಯನ್ನು 2009–10ನೇ ಸಾಲಿನ ಮಂಡಳಿ ಹಾಗೂ ಮಂಗಳೂರು ವೃತದ ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯ ದರಪಟ್ಟಿಯಂತೆ ರೂ.6571.00 ಲಕ್ಷಗಳಿಗೆ ತಯಾರಿಸಿದ್ದು, ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಯೋಜನೆನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಆರ್ಥಿಕ ಸಂಸ್ಥೆಗಳಿಂದ ಸಾಲ ಶೇ.50	ರೂ.3285.50 ಲಕ್ಷಗಳು
ಸರ್ಕಾರದ ಸಾಲ ಶೇ.30	ರೂ.1971.30 ಲಕ್ಷಗಳು
ಸ್ಥಳೀಯ ಸಂಸ್ಥೆಯ ವಂತಿಗೆ ಶೇ.20	ರೂ.1314.20 ಲಕ್ಷಗಳು
ಒಟ್ಟು	**ರೂ.6571.00 ಲಕ್ಷಗಳು**

ಈ ಯೋಜನೆಯನ್ನು 2009–10 ನೇ ಸಾಲಿನ ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಮಂಡಳಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 14 ಯುಡಿಎಸ್ 2009, ಬೆಂಗಳೂರು, ದಿನಾಂಕ: 23ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉಳ್ಳಾಲ ಪಟ್ಟಣಕ್ಕೆ ರೂ.6571.00 (ಆರು ಸಾವಿರದ ಐನೂರ ಎಪ್ಪತ್ತೊಂದು ಲಕ್ಷಗಳು ಮಾತ್ರ) ಲಕ್ಷಗಳ ಅಂದಾಜು ವೆಚ್ಚದಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು **"ಒಳಚರಂಡಿ ಯೋಜನೆಯಡಿ"** ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ.

1. KUWSDB has to pass a resolution approving the project.
2. Adequate provision of 1/3 of the estimated cost of this project should be made in the Board annual action plan for the year 2009-10.
3. Escalation charges should not be more than 5% and the estimate should be revised accordingly.
4. Water rates as proposed by KUWS&DB has to be implemented to meet O & M cost.
5. KTTP provisions, quality control and timely completion should ensured.
6. Escalation cost will not be borne by the Government.
7. ಸದರಿ ಕಾಮಗಾರಿಯನ್ನು ಕೈಗೊಳ್ಳುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ನ್ನು ಪಾಲಿಸುವುದು.
8. ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡಕೂಡದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:FD 334 Exp–9:2009 ದಿನಾಂಕ: 06.06.2009 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1614

ಸಿ.ಟಿ. ನಾರಾಯಣಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

ಜಲಸಂಪನ್ಮೂಲ ಸಚಿವಾಲಯ

ವಿಷಯ: ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಪಡುಕೋಟೆ ಕಾವಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸದರಿ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರ ಐತೀರ್ಪಿನಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 03/12/08ರ ಪತ್ರ ವ್ಯವಹಾರದೊಂದಿಗೆ ಅಂತ್ಯಗೊಂಡಿರುವ ಪತ್ರ ಸಂಖ್ಯೆ:ಮುಸನೀ(ದ)/ಲೆಶಾ/ಲೆಸ/1–3/ಭೂಸ್ವಾಧೀನ/08–09/2665.

ಪ್ರಸ್ತಾವನೆ:

ಮೇಲೆ ಓದಲಾದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ದಿನಾಂಕ 03/12/08ರ ಪತ್ರದಲ್ಲಿ ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಪಡುಕೋಟೆ ಕಾವಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪಡುಕೋಟೆ ಕಾವಲ್ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಉಪ ವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ಹುಣಸೂರು ಇವರು ಹೊರಡಿಸಿದ ಐತೀರ್ಪಿನಂತೆ ಪರಿಹಾರ ಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಈ ಕೆರೆಯ ಮೂಲ ಭೂಸ್ವಾಧೀನ ಪ್ರಕ್ರಿಯೆಯ ವಿವರಗಳು ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 10/11/1983
- ಉಪ ವಿಭಾಗಾಧಿಕಾರಿಗಳ ಐತೀರ್ಪಿನ ದಿನಾಂಕ 03/10/1988.

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕಿನ ಪಡುಕೋಟೆ ಕಾವಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪಡುಕೋಟೆ ಕಾವಲ್ ಗ್ರಾಮದ ಸ.ನಂ.1/424ರ 2–38 ಎಕರೆ ಜಮೀನಿಗೆ ಎಲ್.ಎ.ಸಿ. ಸಂಖ್ಯೆ:854/92ರಲ್ಲಿ ಸಿವಿಲ್ ನ್ಯಾಯಾಲಯವು ನೀಡಿದ ತೀರ್ಪಿನ್ನು ಉಲ್ಲೇಖಿಸಿ ಇದೇ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸೇರಿದ್ದ ಕೆಳಕಂಡ ಪಡುಕೋಟೆ ಕಾವಲ್ ಗ್ರಾಮದ ಸ.ನಂ.1/424ರ ಜಮೀನಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಹೆಚ್ಚಿನ ಪರಿಹಾರ ಧನಕ್ಕೆ ಐತೀರ್ಪು ನೀಡಿದ್ದಾರೆ. ಈ ಐತೀರ್ಪಿನಂತೆ ಪಾವತಿಸಬೇಕಾದ ಪರಿಹಾರ ಧನದ ಮೊತ್ತದ ವಿವರ ಕೆಳಕಂಡಂತಿದೆ:

ಕ್ರ. ಸಂ	ಪಡುಕೋಟೆ ಕಾವಲ್ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಭೂ.ಸ್ವಾ ಕಾಯ್ದೆ ಕಲಂ 28(ಎ)ರಡಿ ಐತೀರ್ಪಿನ ಸಂಖ್ಯೆ ಮತ್ತು ದಿನಾಂಕ	ಪರಿಹಾರ ಮೊತ್ತ ರೂ.ಗಳಲ್ಲಿ
1	1/424	2–38	ಎಲ್ಎಕ್ಯೂ ಸಿಆರ್ 391/05–06, ದಿನಾಂಕ 02/05/07	2,21,726–00

ವಿಷಯವನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 61 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 18ನೇ ಜೂನ್ 2009

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು ಪಡುಕೋಟೆ ಕಾವಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಪಡುಕೋಟೆ ಕಾವಲ್ ಗ್ರಾಮದ ಸ.ನಂ.1/424ರ 2–38 ಎಕರೆ ಜಮೀನಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರ ಪ್ರಕಾರ ಉಪ ವಿಭಾಗಾಧಿಕಾರಿ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು, ಹುಣಸೂರು ಇವರು ಹೊರಡಿಸಿರುವ ದಿನಾಂಕ 03/10/88ರ ಐತೀರ್ಪಿನಂತೆ ರೂ.2,21,726–00ಗಳನ್ನು (ಎರಡು ಲಕ್ಷದ ಇಪ್ಪತ್ತೊಂದು ಸಾವಿರದ ಏಳುನೂರ ಇಪ್ಪತ್ತಾರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1623

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ: ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಅಂಗಾರಗಟ್ಟಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲಾದ ಜಮೀನುಗಳಿಗೆ ರಾಣೆಬೆನ್ನೂರಿನ ಮಾನ್ಯ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನ ಅನುಸಾರ ಪರಿಹಾರ ಧನ ಪಾವತಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 25/03/09ರ ಪತ್ರ ಸಂಖ್ಯೆ:ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2008-09/2226.

ಪ್ರಸ್ತಾವನೆ:

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಅಂಗಾರಗಟ್ಟಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಾಸಣಗಿ ಗ್ರಾಮದ ಸರ್ವೆ ನಂ: 163/5 ಮತ್ತು 156/5ರ ಒಟ್ಟು 2.18 ಎಕರೆ ಜಮೀನಿಗೆ ರಾಣೆಬೆನ್ನೂರಿನ ಸಿವಿಲ್ ನ್ಯಾಯಾಲಯವು ಎಲ್ಎಸಿ ಸಂಖ್ಯೆ: 138/06 ಮತ್ತು 139/01ರಲ್ಲಿ ದಿನಾಂಕ: 07/09/2007ರಂದು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ ಧನ ಪಾವತಿಸಲು ರೂ. 14,71,284/-ಗಳನ್ನು ಬಿಡುಗಡೆ ಮಾಡುವಂತೆ ಕೋರಿದ್ದಾರೆ.

ಮಾನ್ಯ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 11/11/1999
- ಸ್ವಾಧೀನಗೊಳಪಟ್ಟ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ:25/04/2001.
- ಸ್ವಾಧೀನಗೊಳಪಟ್ಟ ಜಮೀನುಗಳನ್ನು ಕಬ್ಜೆ ಪಡೆದ ದಿನಾಂಕ: 22/10/1970.

ಭೂಸ್ವಾಧೀನಗೊಳಪಟ್ಟ ಬ್ಯಾಡಗಿ ತಾಲ್ಲೂಕಿನ ಮಾಸಣಗಿ ಗ್ರಾಮದ ಸರ್ವೆ ನಂ: 163/5ರ 1-18 ಎಕರೆ ಮತ್ತು ಸರ್ವೆ ನಂ: 156/5ರ 1-00 ಎಕರೆ ಜಮೀನಿನ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಹಣ ಪಡೆದು ಇನ್ನೂ ಹೆಚ್ಚುವರಿ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಾಲಂ 18(1)ರಡಿ ರಾಣೆಬೆನ್ನೂರಿನ ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ) ದಲ್ಲಿ ಎಲ್ಎಸಿ ಸಂಖ್ಯೆ: 138/06 ಮತ್ತು 139/06ರ ಪ್ರಕರಣಗಳನ್ನು ದಾಖಲಿಸಿದ್ದರು. ಈ ಪ್ರಕರಣಗಳಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯವು ದಿನಾಂಕ:7/09/2007ರಂದು ನೀಡಿದ ತೀರ್ಪಿನಲ್ಲಿ ಹೆಚ್ಚಿನ ಪರಿಹಾರ ಧನಕ್ಕೆ ಆದೇಶಿಸಿದಲ್ಲದೆ ಸ್ವಾಧೀನಗೊಳಪಟ್ಟ ಜಮೀನುಗಳಿಗೆ ಕಬ್ಜೆ ಪಡೆದ ದಿನಾಂಕ:27/10/1970ರಿಂದ ಭೂಸ್ವಾಧೀನ ಕಾಯ್ದೆ ಕಾಲಂ 4(1)ರಡಿ ಹೊರಡಿಸಿದ ಅಧಿಸೂಚನೆ ದಿನಾಂಕದ ವರೆಗೆ ಭೂಮಾಲೀಕರಿಗೆ ಉಂಟಾದ ನಷ್ಟದ ಬಗ್ಗೆ ವಿಚಾರಣೆ ಮಾಡಿ ನಷ್ಟ ಪರಿಹಾರವನ್ನು ಮಂಜೂರು ಮಾಡುವಂತೆ ಆದೇಶಿಸಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ: ಆರ್‌ಡಿ 600 ಎಲ್ಎಸಿ (ಎಲ್‌ಸಿ) 2007 ದಿನಾಂಕ: 31/01/2008ರಲ್ಲಿ ಅಭಿಪ್ರಾಯ ನೀಡಿದೆ.

ಮಾನ್ಯ ಸಿವಿಲ್ ನ್ಯಾಯಾಲಯದ ಆದೇಶದಂತೆ ಹಾವೇರಿಯ ಉಪ-ವಿಭಾಗಾಧಿಕಾರಿಗಳು ಮಾಸಣಗಿ ಗ್ರಾಮದ ಸರ್ವೆ ನಂ: 163/5ಕ್ಕೆ ಸಂಬಂಧಿಸಿದಂತೆ ರೂ. 5,02,806/-ಗಳ ಮತ್ತು ಸರ್ವೆ ನಂ:156/5ಕ್ಕೆ ಸಂಬಂಧಿಸಿದಂತೆ ರೂ. 3,46,763/-ಗಳ ನಷ್ಟ ಪರಿಹಾರ ಧನಕ್ಕೆ ಆದೇಶಗಳನ್ನು ಹೊರಡಿಸಿರುತ್ತಾರೆ. ಈ ನಷ್ಟ ಪರಿಹಾರ ಮೊತ್ತ ಹಾಗೂ ಎಲ್ಎಸಿ ಪ್ರಕರಣಗಳಲ್ಲಿ ಸದರಿ ಸರ್ವೆ ನಂಬರ್‌ಗಳಿಗೆ ಹೆಚ್ಚಿಸಿರುವ ಪರಿಹಾರ ಮೊತ್ತ ರೂ. 6,21,715/-ಗಳು ಒಟ್ಟು ಮೊತ್ತ ರೂ. 14,71,284/-ಗಳನ್ನು ಬಿಡುಗಡೆ ಮಾಡುವಂತೆ ಮುಖ್ಯ ಅಭಿಯಂತರರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ನೀಡಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 72 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 11ನೇ ಜೂನ್ 2009

ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಅಂಗಾರಗಟ್ಟಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲಾದ ಮಾಸಣಗಿ ಗ್ರಾಮದ ಸರ್ವೆ ನಂ: 163/5ರ 1-18 ಎಕರೆ ಮತ್ತು ಸರ್ವೆ ನಂ: 156/5ರ 1-00 ಎಕರೆ ಜಮೀನಿಗೆ ರಾಣೇಬೆನ್ನೂರಿನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯವು ಎಲ್ಎಸಿ ಪ್ರಕರಣಗಳಲ್ಲಿ ನೀಡಿದ ತೀರ್ಪಿನಂತೆ ಹೆಚ್ಚಿನ ಪರಿಹಾರ ಮತ್ತು ನಷ್ಟ ಪರಿಹಾರ ಒಟ್ಟು ಮೊತ್ತ ರೂ. 14,71,284/-(ಹದಿನಾಲ್ಕು ಲಕ್ಷದ ಎಪ್ಪತ್ತೊಂದು ಸಾವಿರದ ಇನ್ನೂರ ಎಂಭತ್ತಾನ್ಲಾಲ್ಕು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ.

ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "4702-00-100-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು"-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಗೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರ ದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1634 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಕಂಇ 20 ಎಲ್‌ಆರ್‌ಎಂ 2006, ಬೆಂಗಳೂರು, ದಿನಾಂಕ: 4ನೇ ಜೂನ್ 2009.

ಶ್ರೀ ಕಲ್ಮೇಶ್ವರ ದೇವಸ್ಥಾನ ಹಾಗೂ ಸಮಾಜ ಸೇವಾ ಸಮಿತಿ, ಸಾ:ದೇವಗಿರಿ ಯಲ್ಲಾಪುರ, ಹಾವೇರಿ ಜಿಲ್ಲೆ, ಇವರು ಹಾವೇರಿ ಜಿಲ್ಲೆ, ದೇವಗಿರಿ ಯಲ್ಲಾಪುರ ಗ್ರಾಮದ ರಿ ಸ.ನಂ 46, ರಲ್ಲಿ 3 ಎಕರೆ ಜಮೀನನ್ನು ಧಾರ್ಮಿಕ ಉದ್ದೇಶಕ್ಕಾಗಿ ನಮೂನೆ 15-ಎ ಮತ್ತು ನಮೂನೆ 15-ಎಎ, ಗಳಲ್ಲಿನ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಇವರ ಪತ್ರ ಸಂಖ್ಯೆ:ಭೂಸು:ವಹಿ-4:2005-06 ದಿನಾಂಕ: 02-02-2006ರಲ್ಲಿ ಪ್ರಸ್ತಾಪಿತ ಮೇಲ್ಕಂಡ 3 ಎಕರೆ ಜಮೀನನ್ನು ಖರೀದಿ ಪಡೆಯಲು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109 ರಡಿ ಅನುಮೋದನೆ/ವಿನಾಯಿತಿ ನೀಡುವ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನು ಖರೀದಿಸಲು ಖಾತೆದಾರರಿಂದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಹಾಗೂ ಸದರಿ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿರ್ಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1ಎ) ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38-ಬಿ ಮತ್ತು 38-ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63, 79ಎ, 79ಬಿ, ಅಥವಾ 80ಕ್ಕೆ ವಿನಾಯಿತಿ ನೀಡಿ ಶ್ರೀ ಕಲ್ಮೇಶ್ವರ ದೇವಸ್ಥಾನ ಹಾಗೂ ಸಮಾಜ ಸೇವಾ ಸಮಿತಿ, ಸಾ:ದೇವಗಿರಿ ಯಲ್ಲಾಪುರ, ಹಾವೇರಿ ಜಿಲ್ಲೆ, ಇವರು ಹಾವೇರಿ ಜಿಲ್ಲೆ, ದೇವಗಿರಿ ಯಲ್ಲಾಪುರ ಗ್ರಾಮದ ರಿ ಸ.ನಂ 46, ರಲ್ಲಿ 3 ಎಕರೆ ಜಮೀನನ್ನು ಧಾರ್ಮಿಕ ಉದ್ದೇಶಕ್ಕಾಗಿ ಖರೀದಿ ಪಡೆಯಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ:-

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಆದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷಗಳೊಳಗಾಗಿ ಉಪಯೋಗಿಸತಕ್ಕದ್ದು ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ, 1956ರ ಕಲಂ 3 ರಲ್ಲಿ ಹೇಳಿರುವಂತೆ ಶೇಕಡ 51 ಪೇಯ್ಡ್ ಅಪ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಒಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ

ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

3. ಜಮೀನು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ/ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.
4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109 ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1643 **ಟಿ.ಎನ್. ನಾರಾಯಣ ಗೌಡ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಸುಧಾರಣೆ)

FOREST, ENVIRONMENT AND ECOLOGY SECRETARIAT

Sub: Constitution of Co-ordination Committee for ensuring effective steps to combat climate change reg.

Preamble:

'Climate change' is a major global issue for this century. Patterns of production and consumption in nation and societies that has prospered have drawn on technology fuelled by energy source that emit Green house gases, resulting in global warming and climate change at accelerated and unpredictable degrees than what the natural revolutionary changes may have resulted. It had implication for food production, water supply health and energy.

Building the capacity for societies to adapt to climate change is a key challenge for all communities and government. As a part of responding to the challenge that is reducing emission of these green house gases to a level that will not result in dangerous climate change – governments, multilateral institution, scientists, civil society, NGOs, business and others have to take measures at global, regional, national, state and grass root levels.

An effective roadmap for development is to adopt a sustainable pathway by shifting to environmentally sustainable technologies that is, promotion of energy efficiency, renewable energy, increase in green cover, protection and conservation of forest areas, soil and water conservation, protection of watersheds and catchments areas, recharge of ground water, promotion of Organic cultivation, crop selection and scientific irrigation. Besides this, efficient use of surface and ground water, rainwater harvesting, waste water treatment, recycling and re-use, adoption of green technology, energy efficiency technologies, scientific management of solid waste, recycling, waste to energy, mandatory blending of petroleum fuel with Bio-fuels, introduction of CNG in commercial vehicles, improvements of mass transport system, road network, grade separator, policy on phasing out of old vehicles are the issues to be carried forward in sustainable development.

Owing to the importance and the gravity of the issue, Government of India has come out with 'National Action Plan on Climate Change' which was formally launched by the Hon'ble Prime Minister at New Delhi on 30-6-2008.

The action plan is the result of extensive discussions and meticulous ground-work among Government agencies, scientific institutions and independent experts over the past year. In the National Action Plan the following eight key National Missions have been proposed and these are;

1. National Solar Mission
2. National Mission for Enhanced Energy Efficiency
3. National Mission on Sustainable Habitat
4. National Water Mission
5. National Mission for Sustaining the Himalayan Ecosystem
6. National Mission for a "Green India"
7. National Mission for Sustainable Agriculture
8. National Mission on Strategic Knowledge for Climate Change

These missions need to be further elaborated, refined and for this, inputs, ideas and suggestions from a wide variety of sources are to be considered.

The Government of India have also drawn the action plans arising from the National Action Plan on Climate Change assigning the objectives to all concerned Ministries / agencies or groups which are involved therein.

Now to take this process forward in a focused way, it is essential that a Co-ordination committee is to be constituted at State Level involving the Principal Secretaries/Secretaries of the respective departments for complying the Action Plan. The issues are to be discussed thread bear and recommendations there on are to be vetted through necessary policy decisions / circulars / Government directions / orders for achieving the stipulated objectives.

In view of this, it is felt necessary to constitute a Co-ordination Committee under the chairmanship of the Addl. Chief Secretary to Government and Development Commissioner. Hence the order.

Government Order No.FEE 181 ENV 2007, Bangaloe, Dated: 20th June 2009

After careful consideration, the Government are pleased to constitute a Co-ordination Committee to oversee and co-ordinate the issues spelt out in the preamble related to 'Climate Change' under the Chair person ship of Additional Chief Secretary to Government and the Development Commissioner. The Co-ordination Committee shall constitute the following members.

1.	The Additional Chief Secretary to Government and Development Commissioner	- Chairperson
2.	The Principal Secretary to Government, Forest, Ecology & Environment Dept.	- Member
3.	The Principal Secretary to Government, Urban Development Dept.	- Member
4 .	The Principal Secretary to Government, Energy Dept.	- Member
5.	The Principal Secretary to Government, Health & Family Welfare Dept.	- Member
6.	The Principal Secretary to Government, Transport Dept.	- Member
7.	The Principal Secretary to Government, Public Works Dept.	- Member

8.	The Principal Secretary to Government, Water Resources Dept.	- Member
9.	The Principal Secretary to Government, Housing Department	- Member
10.	The Secretary to Government, Tourism Department	- Member
11.	The Principal Secretary to Government, Revenue Department	- Member
12.	The Principal Secretary to Government, Animal Husbandry & Fisheries Dept.	- Member
13.	The Secretary to Government (Ecology and Environment), Forest, Environment and Ecology Dept.	- Member
14.	The Secretary to Government (Forest), Forest, Ecology and Environment Department	- Member
15.	Director, Town Planning Department	- Member
16.	The Member Secretary, Karnataka State Pollution Control Board	- Member
17.	Representative from the Development Alternatives B-32, Tara Crescent, Qutab Institutional Area, New Delhi – 110 016.	- Member
18.	Representative, Ministry of Environment and Forests, Government of India	- Member
19.	Shri.B.S.Nagendra Prakash, Professor, Department of Civil Engineering, UVCE, Bangalore University, Jnanabharathi Campus, Bangalore-56	- Member
20.	The Director General, Environment Management and Policy Research Institute, Bangalore	- Member Secretary

The Committee shall meet at least once in three months and decide the road map on 'Climate Change' and monitor the actions initiated by the respective departments and ensure enforcement of strategy/guidelines stipulated by the Committee.

By order and in the name of the Governor of Karnataka,

N.R. JAGANMATHA

Under Secretary to Government,

Forest, Environment and Ecology Dept.

P.R. 1654

Sub: Constitution of the Governing Body and the Executive Committee for State Compensatory Afforestation Green Management and Planning Authority (State CAMPA) – reg.

Read: 1) Government Order No.FEE 247 FGL 2002, dated 29-06-2004

2) Government Order No.FEE 247 FGL 2002(1), dated 29-06-2004

3) Letter No. 5-1/2009-FC, dated 28-04-2009 from the Secretary to Government of India, Ministry of Environment and Forests, New Delhi.

Preamble:

In G.Os. read at (1) and (2) above a Steering Committee of the State Level under the Chairmanship of the Chief Secretary to Government and a State Management Committee under the Chairmanship of Principal Chief Conservator of Forests has been constituted.

The Government of India, Ministry of Environment and Forests in its letter dated 28-04-2009 cited at (3) above has formulated guidelines for establishing State Compensatory Afforestation Green Management and Planning Authority (State CAMPA) in the States and putting in place a funding mechanism for enhancing forest and tree cover by utilizing funds under Compensatory Afforestation and Net Present Value, currently available with the adhoc CAMPA. The State CAMPA functions through a Governing Body and Executive Committee headed by the Hon'ble Chief Minister and Chief Secretary respectively. In accordance with this order a Governing Body and Executive Committee is constituted for the purpose of taking policy decision and approve the Annual Plan of Operation etc. Hence the Order.

Government Order No.FEE 53 FAP 2007, Bangalore, Dated: 22nd June 2009

Government hereby constitute a Governing Body under the Chairmanship of the Hon'ble Chief Minister comprising of the following members and shall be assisted by an Executive Committee:

Sl. No.	Name of the Committee Member	
1)	The Hon'ble Chief Minister	Chairperson
2)	The Hon'ble Minister of Forests	Vice Chaiperson
3)	The Hon'ble Minister of Finance	Member
4)	The Hon'ble Minister of Rural Development	Member
5)	The Hon'ble Minister of Tribal Welfare	Member
6)	The Hon'ble Minister of Planning	Member
7)	The Hon'ble Minister of Panchyat Raj	Member
8)	The Chief Secretary to Government	Member
9)	The Development Commissioner/Secretary, Rural Development	Member
10)	The Forest Secretary to Government	Member
11)	The Finance Secretary to Government	Member
12)	The Planning Secretary to Government	Member
13)	The Secretary to Government, Tribal Welfare Department	Member
14)	The Secretary to Government, Panchayat Raj Department	Member
15)	The Chief Wildlife Warden	Member
16)	Dr.Ramachandra Guha, Environment Historian, Bangalore	Member
17)	Dr.P.K.Shetty, Scientist, N.I.A.S., Indian Institute of Scientist (I.I.S.) Campus, Bangalore	Member
18)	Sri Anantha Hegde Aashisara, Chairman, Western Ghat Task Force, Bangalore	Member
19)	The Principal Chief Conservator of Forests (Head of Forest Force in the State)	Member Secretary

The Non-Official Members of the Governing Body are nominated for a period of two years, subject to not more than two consecutive terms

The Governing Body shall-

i) lay down and/or approve rules and procedures for the functioning of the body and its Executive Committee, subject to the overarching objectives and core principles of State CAMPA and Green India;

ii) be responsible for policy decisions;

iii) monitor the progress of the utilization of funds released by the State CAMPA;

iv) approve the annual budget of the State CAMPA for expenditure, which would be subject to an overall ceiling of 10% of the average income from interest etc. on establishment and capital expenditure, excluding income from funds received from funds recoverable from the user agencies in cases where forest land diverted falls within the protected areas, that is, areas notified under sections 18, 26A or 35 of the Wildlife (Protection) Act, 1972 for undertaking activities related to protection of biodiversity and wildlife;

v) approve the annual reports and audited accounts of the State CAMPA;

vi) ensure inter-departmental coordination;

vii) approve the Annual Plan of Operation (APO) prepared by the Executive Committee; and

viii) meet at least once in six months.

Further, the Government hereby constitute a Executive Committee under the Chairmanship of the Chief Secretary comprising of the following members:

Sl. No.	Name of the Committee Member	
1)	The Chief Secretary to Government	Chairperson
2)	The Forest Secretary to Government	Vice Chairperson
3)	The Finance Secretary to Government	Member
4)	The Planning Secretary to Government	Member
5)	The Chief Wildlife Warden	Member
6)	Dr.C.G.Kushalappa, Professor, Forest College, Poonampet, Kodagu	Member
7)	Sri B.H.Raghavendra, Seva Sagar Trust, Sagar	Member
8)	Sri Narayana Yaji, Senior Advocate, High Court Division, Dharwad	Member
9)	Principal Chief Conservator of Forests & Head of Forest Force in the State	Member Secretary

The Non-Official Members of the Executive Committee are nominated for a period of two years at a time, who shall be eligible for renomination.

The State Level Executive Committee shall-

i) take all steps for giving effect to the State CAMPA and Green India overarching objectives and core principles, in accordance with rules and procedures approved by the Governing Body and the approve APO;

ii) prepare the APO of the State for various activities, submit it to the Governing Body before end of December for each financial year and obtain the Governing Body's concurrence for release of funds, while giving break-up of the proposed activities and estimated costs;

iii) supervise the works being implemented in the State out of the funds released from the State CAMPA;

iv) be responsible for proper auditing of both receipt and expenditure of funds;

v) develop the code for maintenance of the account at the implementing agency level;

vi) submit reports to the Governing Body for review/consideration;

vii) prepare Annual Report by end-June for each financial year envisaged in sub-paragraphs (9) to (11) of Paragraph 14 of the Guidelines;

viii) ensure publication of its meeting agenda papers and minutes, as well as those of the Governing Body, on Internet Website in the official language(s) of the State.

By Order and in the name of the Governor of Karnataka,

P.R. KALAVATHI

P.R. 1655

Under Secretary to Government,

Forest, Ecology and Environment Department

Sub: JBIC Phase II - Karnataka Sustainable Forest Management & Bio-diversity Conservation Project- Sanction of the Annual Plan of Operation for the year 2009-10.

Read:
1) G.O. No: FEE 279 FAP 2003, dated: 23-05-2005.
2) G.O. No: FEE 162 FAP 2005, dated: 12-09-2005
3) G.O. No: FEE 97 FAP 2006, dated: 19-07-2006.
4) G.O. No. FEE 79 FAP 2007, dated: 14-06-2007.
5) G.O.No.FEE 85 FAP 2008, dated 02-07-2008
6) Letter No:D1/BUD/CR-90/2009-10 dated: 09-06-2008 from the Principal Chief Conservator of Forests Bangalore.

Preamble:-

In G.O. referred at (1) above, Karnataka Sustainable Forest Management & Bio-diversity Conservation Project has been approved for implementation from 2005-06 to 2012-2013 with a total outlay of Rs. 745.00 crores in the State over a period of 8 years with certain conditions.

In G.O. referred at (2) above, sanction has been accorded for Annual Plan Operations for the year 2005-06 with an outlay Rs. 77.20 crores under the JBIC Phase II - Assisted Karnataka Sustainable Forest Management & Bio-diversity Conservation Project.

In G.O. referred at (3) above, sanction has been accorded for Annual Plan Operations for the year 2006-07 with an outlay Rs. 108.70 crores under the JBIC Phase II - Assisted Karnataka Sustainable Forest Management & Bio-diversity Conservation Project.

In G.O. referred at (4) above, sanction has been accorded for Annual Plan Operations for the year 2007-08 with an outlay Rs. 137.62 crores under the JBIC Phase II - Assisted Karnataka Sustainable Forest Management & Bio-diversity Conservation Project.

In G.O. referred at (5) above, sanction has been accorded for Annual Plan Operations for the year 2008-09 for an outlay Rs. 139.69 crores under the JBIC Phase II - Assisted Karnataka Sustainable Forest Management & Bio-diversity Conservation Project and also sanction was accorded to meet the expenditure on the Honorarium of Forest Motivators to an extent of Rs.2.70 crores and on backlog works of 2005-06, 2006-07 and 2007-08 to an extent of Rs.13.30 crores, on Afforestation, Protected Area Management & Biodiversity Conservation, Participatory Forest Management, Supporting Activities for Forest Management and Basic Infrastructure for Field Work and for the procurement of additional 60 computers and 16 vehicles out of the overall outlay of Rs.139.69 crores, during 2008-09.

In the letter referred at (6) above, the Principal Chief Conservator of Forests has informed that the Special Empowered Committee in its 6th meeting held on 28-05-2009 approved the Annual Plan Operation under the Project for the year 2009-10 with an outlay of Rs. 137.00 crores and has sought issue of Government Order in this regard.

The proposal has been examined in detail. The Government has decided to approve the Annual Plan of Operations for the year 2009-10 for an outlay of Rs. 137.00 crores. Hence the order.

Government Order No. FEE 92 FAP 2009, Bangalore, Dated: 29th June 2009

In the circumstances explained above, sanction is accorded to the JBIC Phase II- Karnataka Sustainable Forest Management & Bio-diversity Conservation Project Annual Plan of Operations for the

year 2009-10 for an outlay of Rs. 137.00 crores (Rupees one hundred thirty seven crores only) as detailed in the Annexure to this Government Order

This order issued in accordance with the decisions taken in the 6th meeting of the Empowered Committee held on 28-05-2009.

By order and in the name of Governor of Karnataka

P.R. KALAVATHI

Under Secretary to Government,

Forest, Environment & Ecology Department.

Government Order No: FEE 92 FAP 2009, Bangalore, dated: 29-06-2009.

ANNEXURE

ANNUAL PROGRAMME OF WORKS FOR THE YEAR 2009-10 UNDER JICA ASSISTED KSFMBC PROJECT

Sl. No	Components/Activities	Unit	Target	
			Physical	Financial (Rs.in lakhs)
1	**AFFORESTATION**			
1.1	**Model-1-Ecological Restoration through natural regeneration**			
1.11	3rd maintenance	Ha.	6,040	60.400
1.12	2nd year maintenance	Ha.	4,960	49.600
1.13	1st year maintenace	Ha.	6,050	114.345
1.14	Monsoon work	Ha.	8,083	649.065
1.2	**Model-2 Assisted Natural Regeneration**			
1.21	2nd year maintenace	Ha.	4,620	90.090
1.22	1st year maintenace	Ha.	14,665	344.628
1.23	Raising Plantation	Ha.	16,569	932.835
1.24	Advance Work	Ha.	11,360	1,591.536
1.3	**Model-3-Plantations for Timber Production**			
1.31	3rd year maintenace	Ha.	25	0.658
1.32	2nd year maintenace	Ha.	7,883	207.323
1.33	1st year maintenace	Ha.	6,175	266.143
1.34	Raising of Plantation	Ha.	5,955	547.860
1.35	Advance Work	Ha.	4,495	851.803
1.4	**Model-4-Plantations for Fuel Wood & Small Timber Production**			
1.41	3rd year maintenace	Ha.	13,615	347.183
1.42	2nd year mainteance	Ha.	8,000	204.000
1.43	1st year mainteance	Ha.	7,005	340.443
1.44	Raising of Plantation	Ha.	8,653	1,092.009
1.45	Advance Work	Ha.	11,227	2,208.912
1.5	**Model-5-NTFP Plantations**			
1.51	2nd year maintenace	Ha.	5,950	152.915
1.52	1st year maintenace	Ha.	6,025	356.078
1.53	Raising of Plantation	Ha.	6,075	498.454

Sl. No	Components/Activities	Unit	Target	
			Physical	Financial (Rs.in lakhs)
1.6	**Model-6-School Forest**			
1.61	1st year maintenace	Ha.	719	8.269
1.62	Raising of Plantation	Ha.	500	27.050
1.63	Advance Work	Ha.	500	43.950
1.7	**Model-7-Restoration of Mangroves**			
1.71	1st year maintenace	Ha.	430	25.972
1.72	Monsoon Work	Ha.	185	55.130
1.8	Model-8-Farm Forestry			
1.81	Workshops/discussion/seminar on Farm Forestry, Tree based agriculture tree	Nos.	10	4.500
1.82	Rewards and incentives for successful farmers	Nos.	200	2.100
1.9	**Soil Conservation & Water Conservation Measures**			
1.91	Model-1-Ecological Restoration through natural regeneration	Ha.	8,083	143.877
1.92	Model-2-Assisted Natural Regeneration	Ha.	11,360	415.776
1.93	Model-3-Plantations for Timber production	Ha.	4,495	235.988
1.94	Model-4-Plantations for Fuel Wood & Small Timber Production	Ha.	11,227	632.080
	Sub-Total			**12,500.968**
2	**PROTECTED AREA MAN-AGEMENT & BIO-DIVERSITY CONSERVATION**			
2.1	New Fire line Formation	Km.	442	4.906
2.2	Habitat Improvement	Ha.	750	12.450
2.3	Eco-development works			
2.32	New Elephant Proof Trench (EPT)	Km.	50	82.885
2.33	EPT Maintenace	Km.	50	13.261
	Sub-Total			**113.502**
3	**PARTICIPATORY FOREST MANAGEMENT**			
3.1	3rd Installment of IGA for 2007-08 VFCs	Nos.	353	105.90
3.2	JFPM Co-ordinator	No.	1	6.00
3.3	Lead NGOs	Nos.	5	12.00
3.4	JFPM Facilitators	Nos.	60	86.40
	Sub-Total			**210.300**
4	**BASIC INFRSTRUCTURE FOR FIELD WORKS**			
4.1	Buildings			
4.11	Residential Buildings	Nos.	14	114.040
4.12	Non-Residential Buildings	Nos.	4	32.560
	Sub Total			**146.600**

Sl. No	Components/Activities	Unit	Target	
			Physical	Financial (Rs.in lakhs)
5	**REPAIR,MAINTENANCE AND OFFICE EXPENSES (RMOE)**			
5.1	Office Expenditure	Nos.	-	74.500
5.2	Telephone Charges	Nos.	-	15.000
5.3	Fuel Expenditure & Repairs of vehicle	Nos.	-	130.800
5.4	Travel Allowance	Nos.	-	63.700
5.5	Building Maintenace	Nos.	-	140.000
	Sub-Total		**-**	**424.000**
6	Salary of reployed staff	Nos.	1,062	318.60
7	Pending payment		-	32.708
	Total			**13,746.677**
	Limited to			**13,700.000**

By order and in the name of Governor of Karnataka,

P.R. KALAVATHI

Under Secretary to Government,

Forest, Environment & Ecology Department.

P.R. 1686

ಸಹಕಾರ ಸಚಿವಾಲಯ

ವಿಷಯ: ಶ್ರೀ ಉಚ್ಚಂಗೆಮ್ಮ ವಿದ್ಯಾ ಸಂಸ್ಥೆ (ಎಸ್.ಸಿ), ಉಚ್ಚಂಗಿ ದುರ್ಗ, ಹರಪನಹಳ್ಳಿ ತಾಲ್ಲೂಕು ಇದಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಓದಲಾಗಿದೆ: ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರ ಪತ್ರ ಸಂಖ್ಯೆ: ಆಡಳಿತ/ಎಸ್‌ಓಆರ್/322/2008–09 ದಿನಾಂಕ: 18/03/2009.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 18/03/2009 ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರು ಶ್ರೀ ಉಚ್ಚಂಗೆಮ್ಮ ವಿದ್ಯಾ ಸಂಸ್ಥೆ (ಎಸ್.ಸಿ), ಉಚ್ಚಂಗಿ ದುರ್ಗ, ಹರಪನಹಳ್ಳಿ ತಾಲ್ಲೂಕು ಈ ಸಂಸ್ಥೆಯು ದಿನಾಂಕ: 07/07/1999 ರಂದು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ರೀತ್ಯ ನೋಂದಣಿಯಾಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಿದೆ. ದಿನಾಂಕ: 31/12/2006 ರ ವರೆಗೆ ಲೆಕ್ಕಪತ್ರಗಳನ್ನು ಸಂಬಂಧಿಸಿದ ಜಿಲ್ಲಾ ನೋಂದಣಾಧಿಕಾರಿಗಳಿಗೆ ಒಪ್ಪಿಸಿ ನವೀಕರಣಗೊಂಡಿರುತ್ತದೆ. ಸದರಿ ಸಂಸ್ಥೆಯ ಕಾರ್ಯಕಾರಿ ಮಂಡಳಿ ಸದಸ್ಯರಲ್ಲಿ ಒಡಕು ಉಂಟಾಗಿ ಶ್ರೀ ಪರಸುಬ್ಬ, ಕಾರ್ಯದರ್ಶಿ ಎಂದು ಮತ್ತೊಂದು ಶ್ರೀ ಎ.ಕೆ.ಬಸಪ್ಪ, ಕಾರ್ಯದರ್ಶಿ ಎಂದು ದೋಷಾರೋಪಣೆ ಮಾಡುತ್ತಾ, ಇಲಾಖೆಗೆ ದೂರು ಅರ್ಜಿಗಳನ್ನು ಸಲ್ಲಿಸಿ ಸಂಘದ ನವೀಕರಣಕ್ಕಾಗಿ ಪ್ರತ್ಯೇಕ ಕಾರ್ಯಕಾರಿ ಮಂಡಳಿ ಮತ್ತು ಆಡಿಟ್ ವರದಿಗಳನ್ನು ಸಲ್ಲಿಸಿ ನವೀಕರಣ ಮಾಡಲು ಕೋರಿರುವುದಾಗಿ ತಿಳಿಸಿರುತ್ತಾರೆ.

ಸದರಿ ಗುಂಪುಗಳ ವೈಮನಸ್ಸಿನಿಂದ ಸಂಸ್ಥೆಯಿಂದ ನಡೆಸಲ್ಪಡುವ ಶ್ರೀ ರೇಣುಕಾಂಭ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ನೌಕರರಿಗೆ ಅನುದಾನ ದೊರೆಯದೇ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಸರಿಯಾದ ಪಾಠ ಪ್ರವಚನಗಳ ಸೌಲಭ್ಯಕ್ಕೆ ತೊಂದರೆಯಾಗುತ್ತಿದೆ. ಈ ಎರಡು ಗುಂಪುಗಳು ಆಡಳಿತ ಮಂಡಳಿ ನವೀಕರಣಕ್ಕಾಗಿ ಪ್ರಸ್ತಾವನೆ ಸಲ್ಲಿಸಿ, ಗೊಂದಲಮಯ ವಾತಾವರಣ ಸೃಷ್ಟಿಯಾಗಿರುವುದರಿಂದ ಹಾಗೂ ಈ ಸಂಸ್ಥೆ ನಡೆಸುತ್ತಿರುವ ಶ್ರೀ ರೇಣುಕಾಂಭ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ನೌಕರರ ಹಾಗೂ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27–ಎ(1)(ಸಿ) ಪ್ರಕಾರ ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಹಾಗೂ ಈ ಅವಧಿಯಲ್ಲಿ ಆಡಳಿತಾಧಿಕಾರಿಯವರು ಅರ್ಹ ಸದಸ್ಯರಿಂದ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ವಹಿಸಿಕೊಡುವ ಷರತ್ತು ವಿಧಿಸಿ ಆಡಳಿತಾಧಿಕಾರಿಯನ್ನು ನೇಮಕ ಮಾಡುವಂತೆ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ಸರ್ಕಾರ ಸಂಘದ ಹಿತದೃಷ್ಠಿಯಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಇ 60 ಸಸಂನೋ 2009 ಬೆಂಗಳೂರು, ದಿನಾಂಕ: 10ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಉಚ್ಚಂಗೆಮ್ಮ ವಿದ್ಯಾ ಸಂಸ್ಥೆ (ಎನ್.ಸಿ), ಉಚ್ಚಂಗಿ ದುರ್ಗ, ಹರಪನಹಳ್ಳಿ ತಾಲ್ಲೂಕು ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ(1)(ಸಿ) ರನ್ವಯ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ರವರನ್ನು ಆಡಳಿತಾಧಿಕಾರಿಯನ್ನಾಗಿ 6 (ಆರು) ತಿಂಗಳ ಅವಧಿಗೆ ನೇಮಿಸಲಾಗಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘದ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವಂತೆ ಸಹ ಸೂಚಿಸಿದೆ. ಆಡಳಿತಾಧಿಕಾರಿಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1577

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ವಿಷಯ: ಕರ್ನಾಟಕ ರಾಜ್ಯ ವಿಶ್ವ ಕರ್ಮ ಸಮಾಜ, ಬೆಂಗಳೂರು ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ:
1. ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರ ಪತ್ರ ಸಂಖ್ಯೆ: ಡಿಆರ್/ಎಸ್‌ಓಆರ್/ಪಿಟಿಷನ್/56/2008-09 ದಿನಾಂಕ: 26/09/2008
2. ದಿನಾಂಕ: 03/11/2008 ರ ಸಂಖ್ಯೆ: ಸಇ 90 ಸಸಂನೋ 2008 ರ ಕಾರಣ ಕೇಳುವ ನೋಟೀಸ್.
3. ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜ (ರಿ), ಬೆಂಗಳೂರು ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ದಿನಾಂಕ:16/05/2009 ರ ಹೇಳಿಕೆ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ: 26/09/2008 ರ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜ, ಬೆಂಗಳೂರು ಈ ಸಂಘವು ದಿನಾಂಕ: 14/03/1942 ರಂದು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಯಡಿ ನೋಂದಣಿಯಾಗಿರುತ್ತದೆ. ಸಂಘದ ಕಾರ್ಯಕಾರಿ ಸಭೆಯಲ್ಲಿ 18 ಸದಸ್ಯರಿದ್ದು, ಕಾರ್ಯಕಾರಿ ಸಮಿತಿಯ ಅವಧಿ 3 ವರ್ಷಗಳಾಗಿರುತ್ತದೆ. ಸದರಿ ಸಂಘದ ಸರ್ವ ಸದಸ್ಯರ ಸಭೆಯನ್ನು ಮತ್ತು ಚುನಾವಣೆಯನ್ನು ದಿನಾಂಕ:07/04/1996 ರಂದು ಜರುಗಿಸಲಾಗಿದೆ.

ಇತ್ತೀಚಿನ ಕಾನೂನುಗಳನ್ವಯ ಸದಸ್ಯರಿಗೆ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ವಿತ್ತರಿಸಲು ಕ್ರಮವಿಡಲಾಗುತ್ತಿರುವುದರಿಂದ ವಾರ್ಷಿಕ ಮಹಾ ಸಭೆ ನಡೆಸಿ ಚುನಾವಣೆ ನಡೆಸಲು ವಿಳಂಬವಾಗಿರುವುದರಿಂದ ಸರ್ವ ಸದಸ್ಯರ ಸಭೆಯನ್ನು ನಡೆಸಲು ಮಾಚ್-2009 ರ ವರೆಗೆ ಕಾಲಾವಕಾಶ ನೀಡಬೇಕೆಂದು ಸಂಘದ ಪ್ರಧಾನ ಕಾರ್ಯದರ್ಶಿ ರವರು ದಿನಾಂಕ: 12/09/2008 ಮತ್ತು 22/09/2008 ರ ಪತ್ರದಲ್ಲಿ ಕೋರಿರುತ್ತಾರೆ. ಇದನ್ನು ಪರಿಶೀಲಿಸಿದ ಸಹಕಾರ ಸಂಘಗಳ ನಿಬಂಧಕರು ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 11 ರನ್ವಯ ಪ್ರತಿ ವರ್ಷ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ದಿನಾಂಕ: 07/04/1996 ರಂದು ನಡೆಸಿ, ನಂತರ ಇದುವರೆವಿಗೂ ವಾರ್ಷಿಕ ಮಹಾ ಸಭೆಯನ್ನು ನಡೆಸಿರುವುದಿಲ್ಲ. ಪ್ರಸ್ತುತ ಇರುವ ಕಾರ್ಯಕಾರಿ ಸಮಿತಿಯ ಅವಧಿಯು ಈಗಾಗಲೇ 1999 ನೇ ಸಾಲಿನಲ್ಲಿ ಮುಗಿದಿರುವುದರಿಂದ ಸಂಘದ ಬೈಲಾ ಉಲ್ಲಂಘನೆಯಾಗಿರುತ್ತದೆ. ಕಛೇರಿಯ ದಾಖಲಾತಿಗಳನ್ನು ಪರಿಶೀಲಿಸಲಾಗಿ 1985 ನೇ ಸಾಲಿನಿಂದ ಸಂಘದ ಲೆಕ್ಕಪತ್ರಗಳನ್ನು ಕಛೇರಿಗೆ ದಾಖಲಿಸದೇ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 13 ಉಲ್ಲಂಘನೆಯಾಗಿರುತ್ತದೆ. ಸಂಘದ ಜ್ಞಾಪನ ಪತ್ರ ಮತ್ತು ನಿಯಮಗಳ ತಿದ್ದುಪಡಿಯನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 9 ಮತ್ತು 10 ನ್ನು ಉಲ್ಲಂಘನೆ ಮಾಡಿರುವುದಾಗಿ ವರದಿ ಮಾಡುತ್ತಾ, ಸಂಘದ ಕಾರ್ಯಕಾರಿ ಸಮಿತಿಯನ್ನು ರದ್ದುಪಡಿಸಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದು ಸೂಕ್ತವೆಂದು ಅಭಿಪ್ರಾಯವನ್ನು ನೀಡಿ ಉಪ ನಿಬಂಧಕರು-1, ಬೆಂಗಳೂರು ನಗರ ಜಿಲ್ಲೆ ರವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ: 03/11/2008 ರ ಕಾರಣ ಕೇಳುವ ನೋಟೀಸನ್ನು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ದಿನಾಂಕ: 05/11/2008 ರಂದು ಜಾರಿ ಮಾಡಲಾಗಿದೆ. ಸದರಿ ನೋಟೀಸಿನಲ್ಲಿ ಸಂಘವು ಬೈಲಾ ಉಲ್ಲಂಘನೆ ಮಾಡಿರುವ ಬಗ್ಗೆ ವಿವರವಾಗಿ ತಿಳಿಸುತ್ತಾ, ಬೈಲಾ ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆಯಾದ್ದರಿಂದ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರ ಪ್ರಕಾರ ತಮ್ಮ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದು ಎಂಬ ಬಗ್ಗೆ ನಿಮ್ಮ ಲಿಖಿತ/ಮೌಖಿಕ ಹೇಳಿಕೆಯನ್ನು ಸೂಚನ ಪತ್ರ ತಲುಪಿದ 15 ದಿವಸಗಳೊಳಗಾಗಿ ಸಲ್ಲಿಸುವಂತೆ, ತಪ್ಪಿದಲ್ಲಿ ನೀವು ಹೇಳುವುದು ಏನೂ ಇಲ್ಲವೆಂದು ಭಾವಿಸಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸುವುದಾಗಿ ತಿಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ: 16/05/2009 ರ ಪತ್ರದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿಗಳು ದಿನಾಂಕ: 03/11/2008 ರ ಕಾರಣ ಕೇಳುವ ನೋಟೀಸಿಗೆ ಉತ್ತರಿಸುತ್ತಾ, ನಮ್ಮ ಸಮಾಜವು ತುಂಬಾ ಹಿಂದುಳಿದ ಸಮಾಜವಾಗಿದ್ದು, ಹಲವಾರು ವರ್ಷಗಳಿಂದ ಸಮಾಜಕ್ಕೆ ಯಾವುದೇ ಆರ್ಥಿಕ ಸಹಾಯವಿಲ್ಲ. ಆಡಳಿತಾಧಿಕಾರಿಗಳನ್ನು ನೇಮಿಸಿದರೆ ಅವರಿಗೆ ವೇತನವನ್ನು ಸಹ ಕೊಡಲು ಸಂಘದಲ್ಲಿ ಹಣವಿಲ್ಲ. ಸಾರ್ವಜನಿಕ ದೇಣಿಗೆಯಿಂದ 80 ರಿಂದ 100 ಜನ ವಿದ್ಯಾರ್ಥಿಗಳಿಗೆ ವಸತಿ ಹಾಗೂ ಊಟದ ವ್ಯವಸ್ಥೆ ಮಾಡಲಾಗುತ್ತಿದೆ. ನೀರಿನ ಸೌಕರ್ಯವಿಲ್ಲದೆ ಹಲವಾರು ದಾನಿಗಳಿಂದ ಹಣ ಸಂಗ್ರಹಿಸಿ ಕೊಳವೆ ಬಾವಿಯನ್ನು ತೆಗೆಸಲಾಗಿದೆ. ವಿದ್ಯುತ್ ಬಿಲ್ಲನ್ನು ಕಟ್ಟಲೂ ಸಹ ಹಣವಿರುವುದಿಲ್ಲ. ದಿನಾಂಕ: 03/03/2009 ರಂದು ಮಾನ್ಯ ಜಿಲ್ಲಾ ನೋಂದಣಾಧಿಕಾರಿಗಳಲ್ಲಿ ಕರೆದಿದ್ದ ಸಭೆಯಲ್ಲಿ ಚುನಾವಣೆಯನ್ನು ನಡೆಸಲು ಪದಾಧಿಕಾರಿಗಳಿಗೆ ತಿಳಿಸಿದ್ದೇನೆ. ಇದೇ ಸಮಯದಲ್ಲಿ ಲೋಕಸಭೆ ಚುನಾವಣೆ ಇದ್ದ ಪ್ರಯುಕ್ತ ಚುನಾವಣೆ ನಡೆಸಲು ನೀತಿ ಸಂಹಿತೆ ಅಡ್ಡಿಯಾಗಿತ್ತು. ಆದ್ದರಿಂದ, ದಯಮಾಡಿ ಎರಡು ತಿಂಗಳ ಕಾಲಾವಕಾಶವನ್ನು ಕೊಟ್ಟರೆ, ಆ ಅವಧಿಯಲ್ಲಿ ಚುನಾವಣೆಯನ್ನು ನಡೆಸುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ಸರ್ಕಾರ ಸಂಘದ ಹಿತದೃಷ್ಟಿಯಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಇ 90 ಸಸಂನೋ 2008 ಬೆಂಗಳೂರು, ದಿನಾಂಕ: 9ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜ (ರಿ), ಬೆಂಗಳೂರು ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ)(ಸಿ) ರನ್ವಯ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಉಪ ನಿಬಂಧಕರು–1, ಬೆಂಗಳೂರು ನಗರ ಜಿಲ್ಲೆ ರವರನ್ನು ಆಡಳಿತಾಧಿಕಾರಿಯನ್ನಾಗಿ 3 (ಮೂರು) ತಿಂಗಳ ಅವಧಿಯಲ್ಲಿ ಹಾಲಿ ಇರುವ ಸದಸ್ಯರಿಂದ ಸಂಘಕ್ಕೆ ಚುನಾವಣೆಯನ್ನು ನಡೆಸಲು ಮಾತ್ರ ನೇಮಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘದ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರಿವನ್ನು ಹಸ್ತಾಂತರಿಸುವಂತೆ ಸಹ ಸೂಚಿಸಿದೆ. ಆಡಳಿತಾಧಿಕಾರಿಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1678

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ವಿಷಯ: ಶ್ರೀ ಉಚ್ಚೆಂಗೆಮ್ಮ ವಿದ್ಯಾ ಸಂಸ್ಥೆ (ಎಸ್.ಸಿ) ಉಚ್ಚಂಗಿ ದುರ್ಗ, ಹರಪನಹಳ್ಳಿ ತಾಲ್ಲೂಕು ಇದಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ:ಸಇ 60 ಸಸಂನೋ 2009 ದಿನಾಂಕ:10–06–2009.

2. ಆಡಳಿತಾಧಿಕಾರಿಗಳು ಶ್ರೀ ಉಚ್ಚೆಂಗೆಮ್ಮ ವಿದ್ಯಾ ಸಂಸ್ಥೆ ಶ್ರೀ ಉಚ್ಚೆಂಗೆಮ್ಮ ವಿದ್ಯಾ ಸಂಸ್ಥೆ ಇದರ ಆಡಳಿತಾಧಿಕಾರಿಗಳ ಪತ್ರ ಸಂಖ್ಯೆ:ಡಿಆರ್/ಡಿವಿಜಿ/ಸಂನೋ/ಸಿಆರ್–12/90–91 ದಿನಾಂಕ:15.06.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂ. (1) ರ ದಿನಾಂಕ: 10/06/2009 ರ ಆದೇಶದಲ್ಲಿ ಶ್ರೀ ಉಚ್ಚೆಂಗೆಮ್ಮ ವಿದ್ಯಾ ಸಂಸ್ಥೆಗೆ ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960ರ ಕಲಂ 27–ಎ (1) (ಸಿ) ರನ್ವಯ ಉಪ ನಿಬಂಧಕರು ದಾವಣಗೆರೆ ಜಿಲ್ಲೆ ದಾವಣಗೆರೆ ಇವರನ್ನು ಆಡಳಿತಾಧಿಕಾರಿಯನ್ನಾಗಿ 6 ತಿಂಗಳ ಅವಧಿಗೆ ನೇಮಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂ. (2) ರ ದಿನಾಂಕ: 15/06/2009ರ ಪತ್ರದಲ್ಲಿ ಆಡಳಿತಾಧಿಕಾರಿಗಳು ಶ್ರೀ ಉಚ್ಚೆಂಗೆಮ್ಮ ವಿದ್ಯಾ ಸಂಸ್ಥೆ ಉಚ್ಚುಂಗಿ ದುರ್ಗ ಹರಪ್ಪನಹಳ್ಳಿ ತಾಲ್ಲೂಕು ಇವರು ಸಂಘ ಸಂಸ್ಥೆಗಳ ಜಿಲ್ಲಾ ನೊಂದಣಾಧಿಕಾರಿಯಾಗಿ ನಾನು ಕರ್ತವ್ಯ ನಿರ್ವಹಿಸುತ್ತಿದ್ದು, ಸಂಘದ ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸಿ ಸಂಸ್ಥೆಯ ವಾರ್ಷಿಕ ಮಹಾ ಸಭೆ ಜರುಗಿಸಿ ವಾರ್ಷಿಕ ಲೆಕ್ಕ ಪತ್ರಗಳನ್ನು ಮತ್ತು ಮುಂದಿನ ಆಡಳಿತ ಮಂಡಳಿಯನ್ನು ನಾನೆ ಅನುಮೋದಿಸಬೇಕಾಗಿರುವುದರಿಂದ ಈ ಎರಡು ಕೆಲಸಗಳಲ್ಲಿ ಅಧಿಕಾರ ಚಲಾಯಿಸುವುದು ಸೂಕ್ತವಲ್ಲ ಹಾಗೂ ಸಂಘ ಸಂಸ್ಥೆಗಳು ನಡೆಸುತ್ತಿರುವ ಶಾಲಾ ಕಾಲೇಜುಗಳ ಸಿಬ್ಬಂದಿಗಳ ಅನುಧಾನ ಮಂಜುರಾತಿ ಸಂಬಂಧದಲ್ಲಿ 3 ಅಧಿಕಾರಿಗಳ ಸಮಿತಿಯಲ್ಲಿ ನಾನು ಒಬ್ಬ ಸದಸ್ಯನಾಗಿದ್ದು ಸಹಿ ಮಾಡಬೇಕಾಗಿರುತ್ತದೆ. ಈ 2 ಕಾರ್ಯಗಳು ನೊಂದಣಾಧಿಕಾರಿಯಾಗಿ ವರದಿ ಮಾಡುವ ಅಧಿಕಾರಿ ಮತ್ತು ಅಂಗೀಕರಿಸುವ ಅಧಿಕಾರಿಯಾಗಿ ಕಾರ್ಯನಿರ್ವಹಿಸಬೇಕಾಗಿರುವುದರಿಂದ ಕಾನೂನಿಗೆ ವಿರುದ್ಧವಾಗಿರುತ್ತದೆ. ಆದ್ದರಿಂದ ದಿನಾಂಕ:10.06.2009ರ ಆದೇಶವನ್ನು ಮಾರ್ಪಾಡು ಮಾಡಿ ಉಪ ವಿಭಾಗಾಧಿಕಾರಿಗಳು ಕಂದಾಯ ಇಲಾಖೆ ಅಥವಾ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸುವಂತೆ ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಗಳನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 60 ಸಸಂನೋ 2009 ಬೆಂಗಳೂರು, ದಿನಾಂಕ: 20ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ:10-06-2009ರ ಆದೇಶವನ್ನು ಭಾಗಸಹ ಮಾರ್ಪಡಿಸಿ ಶ್ರೀ ಉಚ್ಚಂಗೆಮ್ಮ ವಿದ್ಯಾ ಸಂಸ್ಥೆ (ಎಸ್.ಸಿ) ಉಚ್ಚಂಗಿ ದುರ್ಗ ಹರಪನಹಳ್ಳಿ ತಾಲ್ಲೂಕು ಸಂಸ್ಥೆಗೆ ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960 ರ ಕಲಂ 27ಎ(1)(ಸಿ) ರನ್ವಯ ಸರ್ಕಾರಕ್ಕೆ ನಿಹಿತವಾಗಿರುವ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹರಪ್ಪನಹಳ್ಳಿ ಉಪ ವಿಭಾಗ ಹರಪ್ಪನಹಳ್ಳಿ ಇವರನ್ನು ಆಡಳಿತಾಧಿಕಾರಿಯಾಗಿ 6(ಆರು) ತಿಂಗಳ ಅವಧಿಗೆ ಅಥವಾ ಸದರಿ ಅವಧಿಯಲ್ಲಿ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಆಡಳಿತ ಮಂಡಳಿಯ ಅವ್ಯವಹಾರಗಳನ್ನು ಸರಿಪಡಿಸಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವಂತೆ ಸೂಚಿಸಿದೆ. ಆಡಳಿತಾಧಿಕಾರಿಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನು ಸಹ ಒದಗಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1680

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ವಿಷಯ: ಶಿವಮೊಗ್ಗದ ದೇಶೀಯ ವಿದ್ಯಾಶಾಲಾ ಸಮಿತಿ ಶಿವಮೊಗ್ಗ ಇದರ ಆಡಳಿತಾಧಿಕಾರಿಗಳ ಅವಧಿ ವಿಸ್ತರಣೆ ಬಗ್ಗೆ.

ಓದಲಾಗಿದೆ: 1. ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರ ಪತ್ರ ಸಂಖ್ಯೆ:ಆರ್‌ಸಿಎಸ್/ಎಡಿಎಂ/295/ ಎಸ್‌ಒಆರ್/ 2009-10 ದಿನಾಂಕ:13-07-2009

ಪ್ರಸ್ತಾವನೆ:

ಮೇಲಿ ಓದಲಾದ ದಿನಾಂಕ:13-07-2009ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರು ದೇಶೀಯ ವಿದ್ಯಾಶಾಲಾ ಸಮಿತಿ ಶಿವಮೊಗ್ಗ ಇದರ ಆಡಳಿತಾಧಿಕಾರಿಗಳ ಅವಧಿಯನ್ನು ದಿ:06-06-2008 ರಿಂದ 05-12-2008ರ ವರೆಗೆ ಮತ್ತು 06-12-2008 ರಿಂದ 05-06-2009ರ ವರೆಗೆ ವಿಸ್ತರಿಸಿ ಸದರಿ ಅವಧಿಯಲ್ಲಿ ಆಡಳಿತಾಧಿಕಾರಿಗಳು ಕಡ್ಡಾಯವಾಗಿ ಮೇಲ್ಕಂಡ ಸಂಸ್ಥೆಯ ಆಡಳಿತ ಮಂಡಳಿಗೆ ಚುನಾವಣೆ ಜರುಗಿಸಿ ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಆದೇಶಿಸಲಾಗಿತ್ತೆಂದು ತಿಳಿಸಿರುತ್ತಾರೆ. ಸದರಿ ಅವಧಿಯಲ್ಲಿ ಕೆಲವೊಂದು ತೊಂದರೆಗಳಿಂದ ಚುನಾವಣೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಆಡಳಿತಾಧಿಕಾರಿಗಳ ಅವಧಿಯನ್ನು ದಿ:06-06-2009 ರಿಂದ ಮುಂದಿನ 6 ತಿಂಗಳಿಗೆ ವಿಸ್ತರಿಸುವಂತೆ ಆಡಳಿತಾಧಿಕಾರಿಗಳು ಕೋರಿರುವುದಾಗಿ ವರದಿ ಮಾಡಿರುತ್ತಾರೆ.

ಆಡಳಿತಾಧಿಕಾರಿಗಳು ಸಲ್ಲಿಸಿರುವ ವರದಿಯ ಹಿನ್ನಲೆಯಲ್ಲಿ ಆಡಳಿತಾಧಿಕಾರಿಗಳ ಅವಧಿಯನ್ನು ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960ರ ಕಲಂ 27 (ಎ) ಪ್ರಕಾರ 06-06-2009 ರಿಂದ ಮತ್ತೆ 6 ತಿಂಗಳ ಅವಧಿಗೆ ವಿಸ್ತರಿಸಿ ಈ ವಿಸ್ತರಣಾ ಅವಧಿಯೊಳಗೆ ಆಡಳಿತಾಧಿಕಾರಿಗಳು ಕಡ್ಡಾಯವಾಗಿ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಚುನಾವಣೆಯನ್ನು ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಲು ಸೂಚಿಸಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 90 ಸಸಂನೋ 2009 ಬೆಂಗಳೂರು, ದಿನಾಂಕ: 16ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗದ ದೇಶೀಯ ವಿದ್ಯಾಶಾಲಾ ಸಮಿತಿ ಶಿವಮೊಗ್ಗ ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27 (ಎ) ರನ್ವಯ ಸರ್ಕಾರಕ್ಕೆ ನಿಹಿತವಾಗಿರುವ ಅಧಿಕಾರವನ್ನು ಚಲಾಯಿಸಿ ಆಡಳಿತಾಧಿಕಾರಿಯಾಗಿ ನೇಮಕವಾಗಿರುವ ಉಪ ವಿಭಾಗಾಧಿಕಾರಿಗಳು ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ ಇವರ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:06-06-2009 ರಿಂದ ಮತ್ತೆ 6 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಕಡ್ಡಾಯವಾಗಿ ಆಡಳಿತ ಮಂಡಳಿಯ ಚುನಾವಣೆಯನ್ನು ನಡೆಸಿ ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವಂತೆ ಸೂಚಿಸಿದೆ. ಆಡಳಿತಾಧಿಕಾರಿಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿಯನ್ನು ಸಹ ಒದಗಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1749

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ, ಸಹಕಾರ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ (ವಾರ್ಷಿಕ ಕಾರ್ಯ ನಿರ್ವಹಣಾ ವರದಿ) ನಿಯಮ 2000 ರನ್ವಯ ಕೆ.ಎ.ಎಸ್.ಅಧಿಕಾರಿಗಳ ವಾರ್ಷಿಕ ಕಾಯನಿರ್ವಹಣಾ ವರದಿಗಳಲ್ಲಿ ವರದಿ ಪ್ರಾಧಿಕಾರ, ಪುನರಾವಲೋಕನ ಪ್ರಾಧಿಕಾರ ಮತ್ತು ಅಂಗೀಕರಿಸುವ ಪ್ರಾಧಿಕಾರಗಳನ್ನು ಗುರುತಿಸುವ ಬಗ್ಗೆ.

ಓದಲಾಗಿದೆ:
1) ಆದೇಶ ಸಂಖ್ಯೆ:ಸಿಆಸುಇ 134 ಆಸೇಇ 2001 ದಿನಾಂಕ:8–4–02
2) ಆದೇಶ ಸಂಖ್ಯೆ:ಸಿಆಸುಇ 153 ಆಸೇಇ 2007 ದಿನಾಂಕ:10–8–07
3) ದಿನಾಂಕ:4–11–08 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.
4) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ ಮೈಸೂರು ಇವರ ಅ.ಸ.ಪ.ಸಂಖ್ಯೆ:ಸಿಬ್ಬಂದಿ(1)ಸಿಆರ್: 58:2009–10 ದಿನಾಂಕ: 19–05–2009.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ಆದೇಶದ ಅನುಬಂಧ 1 ರಲ್ಲಿ ಕೆ.ಎ.ಎಸ್. ಗ್ರೂಪ್–ಎ ಅಧಿಕಾರಿಗಳ ಕಾರ್ಯ ನಿರ್ವಹಣಾ ವರದಿಗಳಲ್ಲಿ ವರದಿ ಮಾಡುವ ಪ್ರಾಧಿಕಾರ, ಪುನರಾವಲೋಕನ ಪ್ರಾಧಿಕಾರ ಮತ್ತು ಅಂಗೀಕರಿಸುವ ಪ್ರಾಧಿಕಾರಗಳನ್ನು ಗುರುತಿಸಿ ಆದೇಶ ಹೊರಡಿಸಲಾಗಿತ್ತು. ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಆದೇಶದಲ್ಲಿ ಪರಿಶೀಲನಾ ಪ್ರಾಧಿಕಾರವಾಗಿ ಗುರುತಿಸಿರುವ "ವಿಭಾಗಾಧಿಕಾರಿಗಳು" ಎಂಬುದರ ಬದಲಾಗಿ "ಪ್ರಾದೇಶಿಕ ಆಯುಕ್ತರು" ಎಂದು ಮಾರ್ಪಡಿಸಿ ಆದೇಶ ಹೊರಡಿಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ(3) ರಲ್ಲಿ ಓದಲಾದ ನಡವಳಿಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:4–11–08 ರಂದು ಜರುಗಿದ ಸಭೆಯ ನಡವಳಿಯ ನಿರ್ಣಯದಂತೆ ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿ ಪುನರಾವಲೋಕನ ಪ್ರಾಧಿಕಾರವೆಂದು ನಮೂದಿಸಲು ಅಧಿಕಾರವನ್ನು ಪ್ರತ್ಯಾಯೋಜಿಸಲಾದ ಪ್ರಾದೇಶಿಕ ಆಯುಕ್ತರುಗಳನ್ನು ಜಿಲ್ಲಾಧಿಕಾರಿಗಳ ಕಾರ್ಯ ನಿರ್ವಹಣಾ ವರದಿಯ ವರದಿ ಪ್ರಾಧಿಕಾರವೆಂದು ಮತ್ತು ಉಪವಿಭಾಗಾಧಿಕಾರಿಗಳ ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಾರ್ಯ ನಿರ್ವಹಣಾ ವರದಿಯ ಪುನರಾವಲೋಕನ ಪ್ರಾಧಿಕಾರವೆಂದು ಅಧಿಕಾರ ಪ್ರತ್ಯಾಯೋಜಿಸಲು ನಡವಳಿಯಲ್ಲಿ ನಿರ್ಣಯಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ(4) ರಲ್ಲಿ ಪ್ರಾದೇಶಿಕ ಆಯುಕ್ತರು ಮೈಸೂರು ವಿಭಾಗ ಮೈಸೂರು ಇವರು ಉಪವಿಭಾಗಾಧಿಕಾರಿಗಳ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಾರ್ಯ ನಿರ್ವಹಣಾ ವರದಿಯ ಪುನರಾವಲೋಕನ ಪ್ರಾಧಿಕಾರವೆಂಬ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಉಪವಿಭಾಗಾಧಿಕಾರಿ, ವಿಶೇಷ ಭೂಸ್ವಾಧೀನಾಧಿಕಾರಿಗಳನ್ನು ಒಳಗೊಂಡಂತೆ ಪ್ರಾದೇಶಿಕ ಆಯುಕ್ತರ ವ್ಯಾಪ್ತಿಗೆ ಒಳಪಡುವ ಇತರೆ ಹುದ್ದೆಗಳನ್ನು ಒಳಗೊಂಡಂತೆ ಪುನರಾವಲೋಕನಾ ಪ್ರಾಧಿಕಾರವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 98 ಆಸೇವ 2009, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಕೆ.ಎ.ಎಸ್. ಸಮೂಹ–ಎ (ಕಿರಿಯ ಶ್ರೇಣಿ – ಹಿರಿಯ ಶ್ರೇಣಿ) ಅಧಿಕಾರಿಗಳಿಗೆ ಸಂಬಂಧಿಸಿದಂತೆ ಅನುಬಂಧ – "ಅ" ದಲ್ಲಿ ಇರುವಂತೆ ಕರ್ನಾಟಕ ಸಿವಿಲ್ ಸೇವೆಗಳು ನಿಯಮ (ಕಾರ್ಯ ನಿರ್ವಹಣಾ ವರದಿ) 2000 ನಿಯಮ 11 ರನ್ವಯ ಪ್ರಾದೇಶಿಕ ಆಯುಕ್ತರುಗಳನ್ನು ಪುನರಾವಲೋಕನಾ ಪ್ರಾಧಿಕಾರವೆಂದು ಆದೇಶಿಸಲಾಗಿದೆ. ಹಾಗೆಯೇ ವರದಿ ಪ್ರಾಧಿಕಾರ ಮತ್ತು ಅಂಗೀಕಾರ ಪ್ರಾಧಿಕಾರವನ್ನು ಗುರುತಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–2)

ಅನುಬಂಧ– ಅ

ಕಾರ್ಯ ನಿರ್ವಹಣಾ ವರದಿಯ ವಿವಿಧ ಪ್ರಾಧಿಕಾರಗಳು

ಕ್ರ. ಸಂ.	ಹುದ್ದೆ	ಹಾಲಿಯಿರುವ ಪ್ರಾಧಿಕಾರಗಳು			ಈಗ ಅನುಮೋದಿತವಾಗಿರುವ ಪ್ರಾಧಿಕಾರಗಳು		
		ವರದಿ ಪ್ರಾಧಿಕಾರ	ಪುನರಾವಲೋಕನ ಪ್ರಾಧಿಕಾರ	ಅಂಗೀಕಾರ ಪ್ರಾಧಿಕಾರ	ವರದಿ ಪ್ರಾಧಿಕಾರ	ಪುನರಾವಲೋಕನ ಪ್ರಾಧಿಕಾರ	ಅಂಗೀಕಾರ ಪ್ರಾಧಿಕಾರ
1	ಅಪರ ಪ್ರಾದೇಶಿಕ ಆಯುಕ್ತರು	–	–	–	ಪ್ರಾದೇಶಿಕ ಆಯುಕ್ತರು	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ	ಮುಖ್ಯ ಕಾರ್ಯದರ್ಶಿ
2	ಉಪವಿಭಾಗಾಧಿಕಾರಿ	ಜಿಲ್ಲಾಧಿಕಾರಿ	ಕಂದಾಯ ಆಯುಕ್ತರು/ ಪ್ರಾದೇಶಿಕ ಆಯುಕ್ತರು	ಮುಖ್ಯ ಕಾರ್ಯದರ್ಶಿ	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
3	ವಿಶೇಷ ಭೂಸ್ವಾಧೀನಾಧಿಕಾರಿ	ವಿಶೇಷ ಜಿಲ್ಲಾಧಿಕಾರಿ/ ಜಿಲ್ಲಾಧಿಕಾರಿ	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ.	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ.	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
4	ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು (ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನಿಕ ಸಹಾಯಕರು)	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಆಯುಕ್ತರು, ಕಂದಾಯ ಇಲಾಖೆ	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
5	ಸಹಾಯಕ ಆಯುಕ್ತರು, ಅನಧಿಕೃತ ಕಟ್ಟಡಗಳ ನಿರ್ಮಾಣ ತಡೆ ಕೋಶ.	ಜಿಲ್ಲಾಧಿಕಾರಿ	ಆಯುಕ್ತರು, ಕಂದಾಯ ಇಲಾಖೆ / ಪ್ರಾದೇಶಿಕ ಆಯುಕ್ತರು	ಮುಖ್ಯ ಕಾರ್ಯದರ್ಶಿ	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
6	ಮನೆಬಾಡಿಗೆ ನಿಯಂತ್ರಣಾಧಿಕಾರಿ.	ಜಿಲ್ಲಾಧಿಕಾರಿ	ಆಯುಕ್ತರು, ಕಂದಾಯ ಇಲಾಖೆ / ಪ್ರಾದೇಶಿಕ ಆಯುಕ್ತರು	ಮುಖ್ಯ ಕಾರ್ಯದರ್ಶಿ	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
7	ವಿಶೇಷ ಭೂಸ್ವಾಧೀನಾಧಿಕಾರಿ, ಕಬಿನಿ ಯೋಜನೆ, ಚಾಮರಾಜನಗರ	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಆಯುಕ್ತರು, ಕಂದಾಯ ಇಲಾಖೆ	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
8	ವಿಶೇಷ ಭೂಸ್ವಾಧೀನಾಧಿಕಾರಿ, ಕಾರಂಜ ಯೋಜನೆ, ಬೀದರ್	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಆಯುಕ್ತರು, ಕಂದಾಯ ಇಲಾಖೆ	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ
9	ವಿಶೇಷ ಭೂಸ್ವಾಧೀನಾಧಿಕಾರಿ, ಹೇಮಾವತಿ ಯೋಜನೆ, ಹಾಸನ / ತುಮಕೂರು	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಆಯುಕ್ತರು, ಕಂದಾಯ ಇಲಾಖೆ	ಜಿಲ್ಲಾಧಿಕಾರಿ	ಪ್ರಾದೇಶಿಕ ಆಯುಕ್ತರು	ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ

ಎಚ್.ಆರ್. ನಾಗೇಂದ್ರ

ಪಿ.ಆರ್. 1673 ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–2)

ವಿಷಯ: ಶ್ರೀ ಬಿ.ಸಿ. ಮುದೋಳ್. ನಿವೃತ್ತ ಮುಖ್ಯ ಇಂಜಿನಿಯರ್, ಅವರ ವಿರುದ್ಧ ಇಲಾಖೆ ವಿಚಾರಣಾ ಮಂಡನಾಧಿಕಾರಿ ನೇಮಕ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 51 ಎಸ್ ಇ ಎನ್ 05, ದಿನಾಂಕ: 08.06.2007

2. ಸರ್ಕಾರದ ಆದೇಶ ಸಂಖ್ಯೆ: 51 ಎಸ್‌ಇಎನ್ 05, ದಿನಾಂಕ: 22.09.2008

3. ಸರ್ಕಾರದ ಆದೇಶ ಸಂಖ್ಯೆ: 51 ಎಸ್‌ಇಎನ್ 05, ದಿನಾಂಕ: 27.02.2009.

4. ಮುಖ್ಯ ಇಂಜಿನಿಯರ್ (ಅಂತರ ರಾಜ್ಯ) ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಇವರ ಪತ್ರ ದಿನಾಂಕ:10.06.2009

ಪ್ರಸ್ತಾವನೆ:–

ಶ್ರೀ ಬಿ. ಸಿ ಮುದೋಳ್, ನಿವೃತ್ತ ಮುಖ್ಯ ಇಂಜನಿಯರ್, ಅವರು ಬಾಗಲಕೋಟೆ ನಗರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಪ್ರಾಧಿಕಾರದ ವ್ಯಾಪ್ತಿಯಲ್ಲಿ 300 ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸದೇ ತಮಗೆ ಬೇಕಾದ ಕಂಟ್ರಾಕ್ಟರುಗಳಿಗೆ ನೀಡಿ, ಅವುಗಳು ಪೂರ್ಣಗೊಳ್ಳದೆ ಅರ್ಧಕ್ಕೆ ನಿಂತಿದ್ದರೂ ಸಹ ಅವುಗಳಗುಣಮಟ್ಟ ಅರಿಯದೇ

ಪೂರ್ಣ ಹಣವನ್ನು ಪಾವತಿ ಮಾಡಿದ್ದು, ಆಲಮ್ ಕೂರಿನ್ ಮತ್ತು ಪ್ರಾಧಿಕಾರಕ್ಕೆ ಅವಶ್ಯಕತೆಗಿಂತ ಹೆಚ್ಚಾಗಿ ವಾಟರ್ ಮೀಟರ್ ಖರೀಧಿಯಲ್ಲಿ ಅವ್ಯವಹಾರ ಎಸಗಿ ಪಾರದರ್ಶಕತೆ ಕಾಯಿದೆಗಳನ್ನು ಪಾಲಿಸದೆ ಸರ್ಕಾರದ ಹಣವನ್ನು ದುರುಪಯೋಗಪಡಿಸಿರುವ ಆರೋಪಿಗಳಿಗಾಗಿ ಶ್ರೀ ಬಿ.ಸಿ ಮುಧೋಳ್ ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11, 11–ಎ, ರನ್ವಯ ಇಲಾಖಾ ವಿಚಾರಣೆ ಜರುಗಿಸಲು ಮೇಲೆ(1)ರಲ್ಲಿ ಓದಲಾದ ದಿನಾಂಕ: 08.06.2007ರ ಸರ್ಕಾರದ ಆದೇಶದಲ್ಲಿ ಶ್ರೀ ಬಿ. ರಂಗಸ್ವಾಮಿ ನಿವೃತ್ತ ಜಿಲ್ಲಾ ನ್ಯಾಯಾದೀಶರನ್ನು ವಿಚಾರಣಾಧಿಕಾರಿಯಾಗಿ ಮತ್ತು ಶ್ರೀಮತಿ ಹೇಮಲತಾ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತ್, ಉಡುಪಿ ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಶ್ರೀಮತಿ ಹೇಮಲತಾ ಇವರು ಮನವಿ ಸಲ್ಲಿಸಿ, ಮಂಡನಾಧಿಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲವಾದ ಕಾರಣ ಈ ಪ್ರಕರಣದ ಮಂಡನಾಧಿಕಾರಿ ಜವಾಬ್ದಾರಿಯಿಂದ ಬಿಡುಗಡೆಗೊಳಿಸುವಂತೆ ಕೋರಿರುವ ಹಿನ್ನಲೆಯಲ್ಲಿ ದಿನಾಂಕ: 22.09.2008ರಂದು ಶ್ರೀ ಪಾಲಯ್ಯ, ನಿಬಂಧಕರು, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ವೃತ್ತ, ಬೆಂಗಳೂರು, ಇವರನ್ನು ಮಂಡನಾಧಿಕಾರಿಯಾಗಿ ನೇಮಕ ಮಾಡಲಾಗಿತ್ತು. ನಂತರ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಮಂಡನಾಧಿಕಾರಿಯಾಗಿ ನೇಮಕವಾಗಿದ್ದ ಶ್ರೀ ಪಾಲಯ್ಯ ಇವರ ಬದಲಿಗೆ ಶ್ರೀ ಕೆ.ಆರ್. ಶ್ರೀನಿವಾಸ ರಂಗನ್, ಕಾರ್ಯಪಾಲಕ ಇಂಜನಿಯರ್ ಕೃಷ್ಣ ಗೋದಾವರಿ ಘಟಕ ಮತ್ತು ರಾಜ್ಯ ಜಲ, ಜಲ ಸಂಪನ್ಮೂಲ ಸಂಸ್ಥೆ, ಬೆಂಗಳೂರು ಇವರನ್ನು ನೇಮಕ ಮಾಡಲಾಗಿತ್ತು, ಕ್ರಮ ಸಂಖ್ಯೆ (4)ರಲ್ಲಿ ಮುಖ್ಯ ಇಂಇನಿಯರ್, (ಅಂತರ ರಾಜ್ಯ) ಜಲಸಂಪನ್ಮೂಲ ಅಭಿವೃದ್ದಿ ಸಂಸ್ಥೆ, ಬೆಂಗಳೂರು ಇವರು ಮನವಿ ಸಲ್ಲಿಸಿ ಶ್ರೀ ಕೆ.ಆರ್. ಶ್ರೀನಿವಾಸ ರಂಗನ್, ಕಾರ್ಯಪಾಲಕ ಇಂಜಿನಿಯರ್, ಇವರಿಗೆ ಕಾರ್ಯದ ಒತ್ತಡ ಹಾಗೂ ಕೃಷ್ಣ ನ್ಯಾಯಾಧೀಕರಣ ಕಲಾಪಗಳು ತ್ವರಿತ ಗತಿಯಲ್ಲಿ ನಡೆಯುತ್ತಿರುವುದರಿಂದ ಇವರ ಬದಲು ಶ್ರೀ ಆರ್. ರಂಗನಾಥ, ಕಾರ್ಯಪಾಲಕ ಇಂಜಿನಿಯರ್, ಕಾವೇರಿ ಜಲ ವಿವಾದ ಘಟಕ, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರನ್ನು ಮಂಡನಾಧಿಕಾರಿಯಾಗಿ ನೇಮಿಸುವಂತೆ ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 51 ಎಸ್‌ಇಎನ್ 2005, ಬೆಂಗಳೂರು, ದಿನಾಂಕ: 6ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 51 ಎಸ್ ಇಎನ್ 2005, ದಿನಾಂಕ: 22.09.2008ನ್ನು ಭಾಗಶ: ಮಾರ್ಪಡಿಸಿ, ಶ್ರೀ ಕೆ.ಆರ್. ಶ್ರೀನಿವಾಸ ರಂಗನ್ ಕಾರ್ಯಪಾಲಕ ಇಂಜಿನಿಯರ್ ಕೃಷ್ಣ ಗೋದಾವರಿ ಘಟಕ ಮತ್ತು ರಾಜ್ಯ ಜಲ, ಜಲ ಸಮಪನ್ಮೂಲ ಸಂಸ್ಥೆ, ಬೆಂಗಳೂರು, ಇವರ ಸ್ಥಾನದಲ್ಲಿ ಶ್ರೀ ಆರ್. ರಂಗನಾಥ, ಕಾರ್ಯಪಾಲಕ ಇಂಜಿನಿಯರ್, ಕಾವೇರಿ ಜಲ ವಿವಾದ ಘಟಕ, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು, ಇವರನ್ನು ಈ ಪ್ರಕರಣದಲ್ಲಿ ಮಂಡನಾಧಿಕಾರಿಯನ್ನಾಗಿ ಕರ್ನಾಟಕ ನಾಗರೀಕ ಸೇವಾ(ಮೇಲ್ಮನವಿ, ವರ್ಗೀಕರಣ ಮತ್ತು ನಿಯಂತ್ರಣ). ನಿಯಮ 11(15)(ಸಿ) ಅನ್ವಯ ನೇಮಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್. 1675

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ. (ಸೇವೆಗಳು–3)

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ: 2009–10ನೇ ಸಾಲಿನಲ್ಲಿ ಶಿವಮೊಗ್ಗ ಆಹಾರ ಪಾರ್ಕ್ ಯೋಜನೆ ಅನುಷ್ಠಾನಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ವಾಕೈ 88 ಆಂಆಸ(1) 2009 ದಿನಾಂಕ 22.04.2009
2. ವಿಶೇಷಾಧಿಕಾರಿ, ಆಹಾರ ಕರ್ನಾಟಕ ನಿಯಮಿತ ರವರ ಪತ್ರ ಸಂಖ್ಯೆ:ಎಫ್‌ಕೆಎಲ್/17/2009–10 ದಿ:18.05.2009.
3. ಅಧಿಕ ನಿರ್ದೇಶಕರು (ಸಪ್ರಕೈ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಪತ್ರ ಸಂಖ್ಯೆ: ಸಪ್ರಕೈ/ಎಸ್1/ಆಹಾರ ಪಾರ್ಕ್/17/2009–10 ದಿನಾಂಕ 29–05–2009.
4. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಪತ್ರ ಸಂಖ್ಯೆ:ಸಿಐ 352 ಎಸ್‌ಪಿಐ 2008(ಪಿ) ದಿನಾಂಕ 19.06.2009.
5. ಅಧಿಕ ನಿರ್ದೇಶಕರು (ಸಪ್ರಕೈ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಪತ್ರ ಸಂಖ್ಯೆ: ಸಪ್ರಕೈ/ಎಸ್1/ಆಹಾರ ಪಾರ್ಕ್/17/2009–10 ದಿನಾಂಕ 23.06.2009.
6. ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ 16.05.2008

ಪ್ರಸ್ತಾವನೆ:

ಅಧಿಕ ನಿರ್ದೇಶಕರು (ಸಪ್ರಕೈ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಮೇಲೆ ಓದಲಾದ (2)ರ ಪತ್ರ ದಿನಾಂಕ 29.05.2009 ರಲ್ಲಿ ಮೆ:ಆಹಾರ ಕರ್ನಾಟಕ ನಿಯಮಿತ ರವರು ಮೇಲೆ ಓದಲಾದ (1) ರ ಪತ್ರ ದಿನಾಂಕ 18.05.2009 ಮಾಲೂರು, ಹಿರಿಯೂರು, ಜೇವರ್ಗಿ ಮತ್ತು ಬಾಗಲಕೋಟೆ ಆಹಾರ ಪಾರ್ಕ್‌ಗಳು ಅನುಷ್ಠಾನ ಹಂತದಲ್ಲಿರುವುದರಿಂದ ಮತ್ತು ಪಾರ್ಕ್‌ಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕಾಗಿರುವುದರಿಂದ 2009–10ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಲ್ಲಿ ರೂ.386.25 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

2009–10ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 4851–00–800–5–00–132 Capital Expenses "ಶಿವಮೊಗ್ಗ ಆಹಾರ ಪಾರ್ಕ್" ಅಡಿಯಲ್ಲಿ ಆಹಾರ ಪಾರ್ಕ್‌ಗಳ ಅಭಿವೃದ್ಧಿಗೋಸ್ಕರ ರೂ.1000.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ.

ಈ ಮೊತ್ತವನ್ನು ಬಂಡವಾಳ ವೆಚ್ಚದ ಅಡಿ 'ಆಹಾರ ಪಾರ್ಕ್ ಶಿವಮೊಗ್ಗ' ಎಂದು ನಿರ್ಧಿಷ್ಟವಾಗಿ ನಮೂದಿಸಿದ್ದು, ಈಗ ಶಿವಮೊಗ್ಗ ಹೊರತುಪಡಿಸಿ ಇತರ ಸ್ಥಳದ ಪ್ರಸ್ತಾವನೆಗೆ ಹಣ ಬಿಡುಗಡೆ ಮಾಡಲು ಪ್ರಸ್ತಾಪಿಸಲಾಗಿದೆ. ಈ ಬಗ್ಗೆ ಸರಿಯಾಗಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರು ಟಿಪ್ಪಣಿ ಸಂಖ್ಯೆ:ವಾಕೈ 144 ಆಂಆಸ(1) 2009 ದಿನಾಂಕ:19.06.2009 ರಲ್ಲಿ ಸೂಚಿಸಿರುತ್ತಾರೆ.

2009–10ನೇ ಸಾಲಿನಲ್ಲಿ ಮಾಲೂರು, ಹಿರಿಯೂರು, ಜೇವರ್ಗಿ ಮತ್ತು ಬಾಗಲಕೋಟೆ ಆಹಾರ ಪಾರ್ಕ್‌ಗಳು ಅನುಷ್ಠಾನಗೊಳಿಸಲು ಇತರೆ ಲೆಕ್ಕಶೀರ್ಷಿಕೆಯಡಿಯಲ್ಲಿ ಹಣ ಲಭ್ಯವಿಲ್ಲದ ಕಾರಣ ಲೆಕ್ಕಶೀರ್ಷಿಕೆ 4851–00–800–5–00–132 "ಶಿವಮೊಗ್ಗ ಆಹಾರ್ ಪಾರ್ಕ್" ನ್ನು ಸಾಮಾನ್ಯ ಲೆಕ್ಕಶೀರ್ಷಿಕೆಯೆಂದು ಪರಿಗಣಿಸಿ ಶಿವಮೊಗ್ಗ ಆಹಾರ ಪಾರ್ಕ್‌ಗೆ ರೂ.1.00 ಕೋಟಿ ಮತ್ತು ರೂ.286.25 ಲಕ್ಷಗಳನ್ನು ಮಾಲೂರು, ಹಿರಿಯೂರು, ಜೇವರ್ಗಿ ಮತ್ತು ಬಾಗಲಕೋಟೆ ಆಹಾರ ಪಾರ್ಕ್‌ಗಳ ಅನುಷ್ಠಾನಕ್ಕೆ ಅನುದಾನ ಬಿಡುಗಡೆ ಮಾಡಲು ಅಧಿಕ ನಿರ್ದೇಶಕರು (ಸಪ್ರಕೈ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಮೇಲೆ ಓದಲಾದ (5)ರ ಪತ್ರ ದಿನಾಂಕ 23.06.2009 ರಲ್ಲಿ ಕೋರಿರುತ್ತಾರೆ.

ಆದುದರಿಂದ ಈ ಕೆಳಕಂಡ ಆದೇಶ:

ಸರ್ಕಾರಿ ಆದೇಶ ಕ್ರಮ ಸಂಖ್ಯೆ: ಸಿಐ 352 ಎಸ್‌ಪಿಐ 2008, ಬೆಂಗಳೂರು, ದಿನಾಂಕ: 24ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, 2009–10ನೇ ಸಾಲಿನಲ್ಲಿ ಶಿವಮೊಗ್ಗ ಆಹಾರ ಪಾರ್ಕ್ ಯೋಜನೆ ಅನುಷ್ಠಾನಕ್ಕಾಗಿ ರೂ.1.00 ಕೋಟಿ ಅನುದಾನವನ್ನು ಈ ಮೂಲಕ ಬಿಡುಗಡೆ ಮಾಡಲಾಗಿದೆ.

ಸದರಿ ಮೊತ್ತವನ್ನು ವಿಶೇಷ ಅಧಿಕಾರಿ, ಆಹಾರ ಕರ್ನಾಟಕ ನಿಯಮಿತ, ಬೆಂಗಳೂರು ರವರು ಸ್ವೀಕೃತಿ ರಸೀದಿಯ ಮೇಲೆ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆರವರ ಮೇಲು ರುಜು ಪಡೆದು ಖಜಾನೆಯಿಂದ ಡ್ರಾ ಮಾಡಲು ಆದೇಶಿಸಿದೆ.

ಈ ಮೊತ್ತವನ್ನು 2009–10 ಸಾಲಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಲೆಕ್ಕಶೀರ್ಷಿಕೆ 4851–00–800–5–00–132 Capital Expenses "ಶಿವಮೊಗ್ಗ ಆಹಾರ ಪಾರ್ಕ್" ಅಡಿಯಲ್ಲಿ ಆಹಾರ ಪಾರ್ಕ್‌ಗಳ ಅಭಿವೃದ್ಧಿಗೋಸ್ಕರ ರೂ.1000.00 ಲಕ್ಷಗಳ ಅನುದಾನದ ಅಡಿ ಲಭ್ಯವಿರುವ ಆಯವ್ಯಯದಿಂದ ಭರಿಸುವುದು.

ಟಿಪ್ಪಣಿ ಸಂಖ್ಯೆ:ವಾಕೈ 155 ಆಂಆಸ(1) 2009 ದಿನಾಂಕ 24.06.2009 ರಲ್ಲಿ ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಒಪ್ಪಿಗೆ ಪಡೆಯಲಾಗಿದೆ.

ಆರ್ಥಿಕ ಇಲಾಖೆ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ 16.5.2008 ರನ್ವಯ ಕಾರ್ಯದರ್ಶಿಗಳಿಗೆ ಅನುದಾನ ಬಿಡುಗಡೆ ಮಾಡಲು ಪ್ರತ್ಯಾಯೋಜಿಸಿರುವ ಅಧಿಕಾರದಡಿ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1681

ಅಪರ್ಣಾ ಪಾವಟೆ

ಪೀಠಾಧಿಕಾರಿ (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ನವೀದ್ ಅಹ್ಮದ್, ಪಿ.ಸಿ.–893, ಶಿರಾ ಪೋಲೀಸ್ ಠಾಣೆ, ತುಮಕೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೋಲೀಸ್ ಅಧೀಕ್ಷಕರು, ತುಮಕೂರು, ಇವರ ಆದೇಶ ಸಂಖ್ಯೆ:ಪನ್ಸಿ: ಡಿಇ:5/2002 ಓ.ಬಿ:14/2002–03 ದಿ:08–04–2003

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು: 9/03–04 ಓ.ಬಿ:46:03–04 ದಿ:17–07–2003
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:06–01–09
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)108/2008–09 ದಿನಾಂಕ:21–04–2009

ಪ್ರಸ್ತಾವನೆ:

ಶ್ರೀ ನವೀದ್ ಅಹ್ಮದ್, ಪಿ.ಸಿ.–893, ಶಿರಾ ಪೊಲೀಸ್ ಠಾಣೆ, ತುಮಕೂರು ಜಿಲ್ಲೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:–

"ದಿ:20–03–2002 ರಂದು ರಾತ್ರಿ ಸಿ.ಎಚ್.ಸಿ.–167, ಕಂಚಗ್ಯು ರವರು ದೇವಗಡ ಜೆ.ಎಂ.ಎಫ್.ಸಿ. ನ್ಯಾಯಾಲಯದ ಸಿಸಿ ನಂ:979:2000ರ ವಾರೆಂಟ್ ಆಸಾಮಿ ಸಿರಾ ವಾಸಿ ಮಹ್ಮದ್ ಇಸ್ಮಾಯಿಲ್ ಎಂಬುವವರನ್ನು ಕರೆತಂದು ಠಾಣೆಗೆ ಹಾಜರ ಪಡಿಸುವುದರ ಸಿದ್ದತೆಯಲ್ಲಿರುವಾಗ ನಮ್ಮನ್ನು ಆತನ ಬೆಂಗಾವಲು ಕರ್ತವ್ಯಕ್ಕೆ ನೇಮಕ ಮಾಡಿ ದಾಖಲೆಗಳಲ್ಲಿ ನಮೂದಿಸಿದ್ದರೂ ಸಹ ಸದರಿ ಆಸಾಮಿಯನ್ನು ಊಟ ಮಾಡಿಸಿಕೊಂಡು ಬರುವ ನೆಪೊಡ್ಡಿ ಠಾಣೆಯಿಂದ ಕರೆದುಕೊಂಡು ಹೋಗುತ್ತಿದ್ದಾಗ್ಯೆ, ಠಾಣಾ ಎಸ್‌ಎಚ್‌ಒ, ಎಚ್.ಸಿ.–123, ರವರು ಬೇಡವಂತ ಹೇಳಿದ್ದಾಗ್ಯೂ ಅವರ ಮಾತನ್ನು ಧಿಕ್ಕರಿಸಿ ಹೊರಗಡೆ ಕರೆದುಕೊಂಡು ಹೋದವರು ಆಮಿಶಗಳಿಗೆ ಬಲಿಯಾಗಿ ವಾರೆಂಟ್ ಆಸಾಮಿಯೊಂದಿಗೆ ಶಾಮೀಲಾಗಿ, ಆತನನ್ನು ಬಿಟ್ಟು ಪೊಲೀಸ್ ವಶದಿಂದ ತಪ್ಪಿಸಿಕೊಳ್ಳಲು ಸಹಕರಿಸಿ, ಕರ್ತವ್ಯದಲ್ಲಿ ಅತೀವ ನಿರ್ಲಕ್ಷ್ಯತೆ ಹಾಗೂ ದುರ್ನಡತೆ ತೋರಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 08–04–03ರ ಆದೇಶದಲ್ಲಿ "ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರುವಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿ ದಿ:04–06–2002 ರಿಂದ 08–09–2002 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:17–07–03ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪುರಸ್ಕರಿಸುವಂತಹ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 19 ಪೊಸಿಅ 2009 ಬೆಂಗಳೂರು, ದಿನಾಂಕ: 26ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ನವೀದ್ ಅಹ್ಮದ್, ಪಿ.ಸಿ.–893, ಶಿರಾ ಪೊಲೀಸ್ ಠಾಣೆ, ತುಮಕೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1690

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಎಸ್.ಆರ್. ಪಾಟೀಲ್, ಪಿ.ಐ., ನಾಹಜಾನಿ ಪೊಲೀಸ್ ಠಾಣೆ, ಬಾಗಲಕೋಟೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ ಇವರ ಆದೇಶ ಸಂಖ್ಯೆ:ಸಿಬ್ಬಂದಿ-2ವ/ಪಿಆರ್/105/2007 ಆ.ಪು. ಸಂ:538/07 ದಿ:15-05-2007

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಅಪೀಲು/166 4/ಉವ/2007 ದಿನಾಂಕ:10-12-2007

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:06-08-08

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)79/2008-09 ದಿ:19-03-2009

ಪ್ರಸ್ತಾವನೆ:

ಶ್ರೀ ಎಸ್.ಆರ್. ಪಾಟೀಲ್, ಪಿ.ಐ., ನಾಹಜಾನಿ ಪೊಲೀಸ್ ಠಾಣೆ ಬಾಗಲಕೋಟೆ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಬೆಳಗಾವಿ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

"ಆಪಾದಿತ ಪೊಲೀಸ್ ಅಧಿಕಾರಿಯಾದ ನೀವು ಮಾರ್ಕೆಟ್ ಪೊಲೀಸ್ ಠಾಣೆಯ ಗುನ್ನಾ ನಂ.12/2002 ನೇದ್ದರ ಪ್ರಕರಣದ ತನಿಖೆಯನ್ನು ಸಮರ್ಪಕವಾಗಿ ಪೂರ್ಣ ಪ್ರಮಾಣದಲ್ಲಿ ಕೈಕೊಳ್ಳದೇ ತನಿಖೆಯಲ್ಲಿ ಸಾಕಷ್ಟು ಲೋಪದೋಷಗಳನ್ನು ಎಸಗಿರುವುದಲ್ಲದೆ, ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನುಡಿಯಲು ವಿಫಲರಾಗಿ ಪ್ರಕರಣವು ನ್ಯಾಯಾಲಯದಲ್ಲಿ ಬಿಡುಗಡೆಯಾಗಲು ಕಾರಣೀಭೂತರಾಗಿ ನಿಮ್ಮ ಕರ್ತವ್ಯದಲ್ಲಿ ಘೋರ ನಿಷ್ಕಾಳಜಿತನ ಹಾಗೂ ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುವಿರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 15-05-07ರ ಆದೇಶದಲ್ಲಿ "ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷಕಾಲ ಮುಂದೂಡುವ ದಂಡನೆ ವಿಧಿಸಿರುತ್ತಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರವಲಯ, ಬೆಳಗಾವಿ, ಇವರು ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಆರು ತಿಂಗಳ ಕಾಲ ಮುಂದೂಡಿ, ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:10-12-07ರಲ್ಲಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನಿಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 313 ಪೊಸಿಅ 2008 ಬೆಂಗಳೂರು, ದಿನಾಂಕ: 25ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಆರ್. ಪಾಟೀಲ್, ಪಿ.ಐ., ನಾಹಜಾನಿ ಪೊಲೀಸ್ ಠಾಣೆ ಬಾಗಲಕೋಟೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1691

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಮುರಳೀಧರ, ಮಾಜಿ ಸಿ.ಪಿ.ಸಿ.–428, ಟಿ. ನರಸೀಪುರ, ಪೊಲೀಸ್ ಠಾಣೆ, ಮೈಸೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಇವರ ಆದೇಶ ಸಂಖ್ಯೆ: ಡಿಇ:20/05–06, ಓ.ಬಿ/ಸಿವಿಲ್/212/ 06–07 ದಿ:26–01–07

2) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:20–08–2008

3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)68/2008–09 ದಿ:02–12–2008

4) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 5 ಸಿಎಸ್‌ಎಸ್ 09 ದಿನಾಂಕ:18.05.2009

ಪ್ರಸ್ತಾವನೆ:

ಶ್ರೀ ಮುರಳೀಧರ, ಇವರು ಟಿ.ಎನ್. ಪುರದಲ್ಲಿ ಸಿ.ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಸರ್ಕಾರದ ಹಣ ದುರುಪಯೋಗ ಹಾಗೂ ಅನಧಿಕೃತವಾಗಿ ಗೈರುಹಾಜರಾದ ಆರೋಪದ ಹಿನ್ನೆಲೆಯಲ್ಲಿ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:–

1. ಡಿವೈ.ಎಸ್.ಪಿ., ಹುಣಸೂರು ಉಪ–ವಿಭಾಗದ ಕಛೇರಿಯಿಂದ ಜಮಾ ಮಾಡಲು ಕಳುಹಿಸಿದ್ದ 2004ನೇ ಸಾಲಿನ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ ಅಂಗವಾಗಿ ರೂ.5080/– ಗಳನ್ನು ಜಿಲ್ಲಾ ಪೊಲೀಸ್ ಕಛೇರಿಗೆ ಜಮಾ ಮಾಡದೇ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ.
2. ದಿ:21–04–05 ರಿಂದ ಇದುವರೆವಿಗೂ ಅನಧಿಕೃತ ಗೈರು ಹಾಜರಿಯಾಗಿರುವ ಬಗ್ಗೆ.
3. ದಿ:21–04–05 ರಿಂದ ಅನಧಿಕೃತ ಗೈರುಹಾಜರಿಯಾದ ಸಂಬಂಧ ಡೆಸರ್ಟರ್ ನೋಟಿಸ್ ಹೊರಡಿಸಿದ್ದು, ನೋಟಿಸ್‌ನಲ್ಲಿ ನೀಡಿದ ಸೂಚನೆಯಂತೆ ಕರ್ತವ್ಯಕ್ಕೆ ಹಿಂದಿರುಗದೇ ಮೇಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿರುವ ಬಗ್ಗೆ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ:26–01–07ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಿ, ದಿನಾಂಕ:21–04–2005 ರಿಂದ 13–07–2006ರ ವರೆಗೆ ಗೈರು ಹಾಜರಾದ ಅವಧಿಯನ್ನು ವೇತನ ರಹಿತ ರಜೆಯೆಂದು ಪರಿಗಣಿಸಿದ್ದಾರೆ.

ಶಿಸ್ತು ಪ್ರಾಧಿಕಾರದ ಆದೇಶದ ವಿರುದ್ಧ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸದೆ ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ.

ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರ ವಿರುದ್ಧದ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿದೆ ಆದರೆ ಮಾನವೀಯ ದೃಷ್ಟಿಯಿಂದ ಶಿಸ್ತುಪ್ರಾಧಿಕಾರದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಲು ಸರ್ಕಾರವು ತೀರ್ಮಾನಿಸಿ, ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (4)ರ ಪತ್ರದಲ್ಲಿ ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 294 ಪೊಸಿಅ 2008 ಬೆಂಗಳೂರು, ದಿನಾಂಕ: 26ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಮುರಳೀಧರ, ಮಾಜಿ ಸಿ.ಪಿ.ಸಿ.–428, ಟಿ. ನರಸೀಪುರ, ಮೈಸೂರು ಜಿಲ್ಲೆ, ಇವರಿಗೆ ಶಿಸ್ತುಪ್ರಾಧಿಕಾರ ವಿಧಿಸಿದ ದಂಡನಾದೇಶವನ್ನು ಭಾಗಶ: ಮಾರ್ಪಡಿಸಿ ಶಿಸ್ತು ಪ್ರಾಧಿಕಾರದ ಆದೇಶ ದಿ:26–01–07 ರಿಂದಲೇ ಜಾರಿಗೆ ಬರುವಂತೆ "ಕಡ್ಡಾಯ ನಿವೃತ್ತಿಗೊಳಿಸಿ" ಆದೇಶಿಸಿದೆ. ದಿನಾಂಕ: 21–04–05 ರಿಂದ 13–07–06 ರವರೆಗೆ ಗೈರು ಹಾಜರಾದ ಅವಧಿಯನ್ನು ವೇತನರಹಿತ ರಜೆ ಎಂದು ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1692

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಬಸವರಾಜ ಕಡಕೋಳ, ಪಿ.ಐ., ಗ್ರಾಮಾಂತರ ಪೊಲೀಸ್ ಠಾಣೆ, ಬಾಲ್ಕಿ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ:ಪಿಆರ್:128/2007 ಡಿ೦ಬಿ ಸಂ:2062/07 ದಿ:05-11-2007
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ:ಅಪೀಲು/15 ಈವ/2008 ಅ.ಪು.ಸಂ:219/ಈವ/2008 ದಿ:02-04-2008
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:20-07-08
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ:ಸಿಜಿ(8) 48/2008-09 ದಿ:09-09-2008
5) ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 119 ಸಿಎನ್ಎಸ್ 08 ದಿನಾಂಕ:25.03.2009

ಪ್ರಸ್ತಾವನೆ:

ಶ್ರೀ ಬಸವರಾಜ ಕಡಕೋಳ, ಪಿ.ಐ., ಇವರು ಶಹಾಬಾದ ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ದುರ್ನಡತೆ ಹಾಗೂ ಅಶಿಸ್ತು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಿಯಮಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:-

> "ನೀವು ಈ ಕಾರ್ಯಾಲಯದ ಪಿ.ಆರ್.ಸಂಖ್ಯೆ:91/ಗು/ 2006 ದಿನಾಂಕ:30-05-2006, 28-12-2006 ನೇದ್ದರಕ್ಕೆ ಉತ್ತರ ಸಲ್ಲಿನದೆ ಮತ್ತು ಮೇಲಾಧಿಕಾರಿಯವರ ಆದೇಶವನ್ನು ಪಾಲನೆ ಮಾಡದೆ ಕರ್ತವ್ಯದಲ್ಲಿ ದುರ್ನಡತೆ ಹಾಗೂ ಅಶಿಸ್ತು ಪ್ರದರ್ಶಿಸಿದ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ:05-11-2007ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗೆ ದಕ್ಕೆಯಾಗದಂತೆ ಮುಂದೂಡುವ ದಂಡನೆ ವಿಧಿಸಿರುತ್ತಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಿ, ಇವರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಪರಿಣಾಮ ಬೀರದಂತೆ ಮೂರು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ಮೇಲೆ ಕ್ರಮ ಸಂಖ್ಯೆ:(2) ರಲ್ಲಿ ಓದಲಾದ ದಿ:02-04-2008ರ ಆದೇಶದಲ್ಲಿ ಮಾರ್ಪಡಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ವಿಧಿಸಿದ ದಂಡನೆಯು ಆರೋಪಕ್ಕೆ ಅನುಗುಣವಾಗಿಲ್ಲವೆಂದು ಪರಿಗಣಿಸಿ ದಂಡನಾದೇಶವನ್ನು ಮಾರ್ಪಡಿಸುವ ಸಲುವಾಗಿ ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 227 ಪೊಸಿಅ 2008 ಬೆಂಗಳೂರು, ದಿನಾಂಕ: 26ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬಸವರಾಜ ಕಡಕೋಳ, ಪಿ.ಐ., ಬಾಲ್ಕಿ, ಇವರಿಗೆ ಮೇಲ್ಮನವಿ ಪ್ರಾಧಿಕಾರ ವಿಧಿಸಿದ ದಂಡನಾದೇಶವನ್ನು ಮಾರ್ಪಡಿಸಿ, `ವಾಗ್ದಂಡನೆ`ಯನ್ನು ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1693

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಡಿ. ಶಿವಲಿಂಗಯ್ಯ ಎಚ್.ಸಿ.–30, ಹೆಬ್ಬೂರು ಪೊಲೀಸ್ ಠಾಣೆ, ತುಮಕೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ, ಇವರ ಆದೇಶ ಸಂಖ್ಯೆ:ಪನ್ನಿ/ಡಿಇ/07/ 2006–07 ಓ.ಬಿ:20/2008 ದಿ:09–01–2008

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ:ಅಪೀಲು–4/2008–09 ಓ.ಬಿ:48/2007 ದಿನಾಂಕ:19–06–2008

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:26–09–08

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)80/2008–09 ದಿ:18–04–2009

ಪ್ರಸ್ತಾವನೆ:

ಶ್ರೀ ಡಿ. ಶಿವಲಿಂಗಯ್ಯ ಎಚ್.ಸಿ.–30, ಹೆಬ್ಬೂರು ಪೊಲೀಸ್ ಠಾಣೆ, ತುಮಕೂರು ಜಿಲ್ಲೆ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರು ಜಿಲ್ಲಾ ಪೊಲೀಸ್ ಕಛೇರಿಯ ಡಿ.ಸಿ.ಐ.ಬಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:–

ಶ್ರೀ ಶಿವಲಿಂಗಯ್ಯ ಡಿ. ಎಚ್.ಸಿ.–30, [ಹಿಂದೆ ಡಿ.ಸಿ.ಐ.ಬಿ. ಡಿ.ಪಿ.ಓ. ತುಮಕೂರು] ಹಾಲಿ ತಿರುಮಣಿ ಠಾಣೆ ತುಮಕೂರು ಜಿಲ್ಲೆ:

"ಈ ಬಗ್ಗೆ ನಿಮ್ಮನ್ನು ಜಿಲ್ಲಾ ಪೊಲೀಸ್ ಕಛೇರಿ ಆದೇಶ ಸಂಖ್ಯೆ:ಪನ್ನಿ/09/2006–07 ದಿ:05–05–2006, ಓ.ಬಿ.ನಂ:49/06 ರಲ್ಲಿ ಅಮಾನತ್ತುಗೊಳಿಸಿದ್ದು, ನಂತರ ಆದೇಶ ಸಂಖ್ಯೆ:ಪನ್ನಿ/09/2006–07 ದಿನಾಂಕ:01–06–2006, ಓ.ಬಿ:ನಂ:81/06 ರಲ್ಲಿ ಅಮಾನತ್ತಿನಿಂದ ಬಿಡುಗಡೆಗೊಳಿಸಿ ತಿರುಮಣಿ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಿರುತ್ತೆ. ಸದರಿ ಆದೇಶವನ್ನು ನೀವು ದಿ:12–06–2006 ರಂದು ಪಡೆದುಕೊಂಡು ಇದುವರೆವಿಗೂ ನೀವು ವರ್ಗಾವಣೆಯ ಸ್ಥಳವಾದ ತಿರುಮಣಿ ಠಾಣೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಆದೇಶವನ್ನು ಪಾಲಿಸದೆ ಧಿಕ್ಕರಿಸಿ ನಿಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ ಹಾಗೂ ದುರ್ನಡತೆಯನ್ನು ತೋರಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 09–01–08ರ ಆದೇಶದಲ್ಲಿ "ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಎರಡು ವರ್ಷಗಳ ಕಾಲ ಮುಂದೂಡಿದ್ದಾರೆ ಹಾಗೂ ದಿ:05–05–06 ರಿಂದ 12–06–2006ರ ವರೆಗೆ ಹಾಗೂ 02–08–2006 ರಿಂದ 26–01–2007ರ ವರೆಗಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ, ದಿ:13–06–2006 ರಿಂದ 01–08–2006ರ ವರೆಗಿನ ಅವಧಿಯನ್ನು ಸಂಬಳರಹಿತ ರಜೆ ಎಂದು ಪರಿಗಣಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:19–06–2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇಲಾಖಾ ವಿಚಾರಣಾ ವರದಿಯಲ್ಲಿ ಇವರ ವಿರುದ್ಧದ ಆರೋಪವು ಸಾಬೀತಾಗಿದ್ದು, ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 331 ಪೊಸಿಅ 2008 ಬೆಂಗಳೂರು, ದಿನಾಂಕ: 4ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಶಿವಲಿಂಗಯ್ಯ ಡಿ. ಎಚ್.ಸಿ.–30, ಹೆಬ್ಬೂರು ಪೊಲೀಸ್ ಠಾಣೆ, ತುಮಕೂರು ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1694

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ವಿಷಯ: ಶ್ರೀ ಸಿದ್ದರಾಜು, ಮಾಜಿ ಪಿ.ಸಿ., ಕವಲಂದೆ ಪೊಲೀಸ್ ಠಾಣೆ, ಮೈಸೂರು, ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಇವರ ಆದೇಶ ಸಂಖ್ಯೆ:ಡಿಇ16/07–08 ಓ.ಬಿ:73/2008–09 ದಿ:08–07–2008
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ:ಅಪೀಲು/34/2008–09 ಓ.ಬಿ:33/2008–09 ದಿನಾಂಕ:06–11–2008
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:05–02–09
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)119/08–09 ದಿ:24–04–2009

ಪ್ರಸ್ತಾವನೆ:

ಶ್ರೀ ಸಿದ್ದರಾಜು, ಪಿ.ಸಿ., ಕವಲಂದೆ ಪೊಲೀಸ್ ಠಾಣೆ, ಇವರು ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಅನಧಿಕೃತವಾಗಿ ಗೈರು ಹಾಜರಾದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:–

> "ನೀವು ಪದೇ ಪದೇ ಅನಧಿಕೃತ ಗೈರು ಹಾಜರಿಯಾಗುವ ಹವ್ಯಾಸವುಳ್ಳವರಾಗಿದ್ದು, ಈ ಹಿಂದೆ ಗೈರು ಹಾಜರಿಯಾದ ಅವಧಿಗಳನ್ನು ಲಘು ಶಿಕ್ಷೆ ಹಾಗೂ ಕಠಿಣ ಶಿಕ್ಷೆ ವಿಧಿಸುವುದರ ಮೂಲಕ ಗೈರುಹಾಜರಿ ಅವಧಿಗಳನ್ನು ಇತ್ಯರ್ಥಪಡಿಸಿದ್ದರೂ ಸಹ ಈ ಹವ್ಯಾಸದಲ್ಲಿ ಯಾವುದೇ ಸುಧಾರಣೆಯಾಗದೇ ದಿ:26–08–07 ರಿಂದ 20–11–07ರ ವರೆಗೆ ಅನಧಿಕೃತ ಗೈರುಹಾಜರಿಯಾಗಿರುವುದರ ಮೂಲಕ ಬೇಜವಾಬ್ದಾರಿ, ನಿರ್ಲಕ್ಷತೆ ಹಾಗೂ ಅಶಿಸ್ತು ಪ್ರದರ್ಶಿಸಿರುವ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 08–07–08ರ ಆದೇಶದಲ್ಲಿ ಅರ್ಜಿದಾರರನ್ನು ಕಡ್ಡಾಯ ನಿವೃತ್ತಿಗೊಳಿಸಲಾಗಿದೆ, ದಿ:26–08–07 ರಿಂದ 20–11–07 ರವರೆಗೆ ಅನಧಿಕೃತವಾಗಿ ಗೈರುಹಾಜರಾದ ಅವಧಿಯನ್ನು ವೇತನ ರಹಿತ ರಜೆಯೆಂದು ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ:06–11–08ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇವರ ವಿರುದ್ಧದ ಆರೋಪವು ಸಾಬೀತಾಗಿದ್ದು, ಇವರ ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 39 ಪೊಸಿಅ 2009 ಬೆಂಗಳೂರು, ದಿನಾಂಕ: 8ನೇ ಜೂನ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸಿದ್ದರಾಜು, ಮಾಜಿ ಪಿ.ಸಿ., ಕವಲಂದೆ ಪೊಲೀಸ್ ಠಾಣೆ, ಮೈಸೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1695

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 378 ಆಸೇಇ 08, ಬೆಂಗಳೂರು ದಿನಾಂಕ: 27ನೇ ಜೂನ್ 2009

ವಿಷಯ: 2005 ನೇ ಸಾಲಿನ ಕೆ.ಎ.ಎಸ್ (ಸಮೂಹ–ಎ) (ಕಿರಿಯ ಶ್ರೇಣಿ) ಪರೀಕ್ಷಾರ್ಥಿಗಳ ಜನ್ಮ ದಿನಾಂಕವನ್ನು ಒಪ್ಪಿಕೊಳ್ಳುವ ಬಗ್ಗೆ – ಆದೇಶ.

ಓದಲಾಗಿದೆ: ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 88 ಅಸೇವ 2006 ದಿ:27.06.06

ಕರ್ನಾಟಕ ಸರ್ಕಾರಿ ನೌಕರರ (ವಯೋ ನಿರ್ಧಾರ) ಶಾಸನ 1974ರ ಕಲಂ–3ರ ಉಪ ಕಲಂ–2ರ ರೀತ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 88 ಆಸೇವ ದಿ:27.06.06 ರಲ್ಲಿ ನೇಮಕಗೊಂಡ ಈ ಕೆಳಕಂಡ ಕೆ.ಎ.ಎಸ್ ಸಮೂಹ–ಎ (ಕಿರಿಯ ಶ್ರೇಣಿ) ಪರೀಕ್ಷಾರ್ಥಿಗಳ ಜನ್ಮ ದಿನಾಂಕವನ್ನು ಅವರವರ ಹೆಸರುಗಳ ಮುಂದೆ ತೋರಿಸಿರುವಂತೆ ಅವರ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಂಕ ಪಟ್ಟಿ ಕ್ಯುಮ್ಯುಲೇಟಿವ್ ರೆಕಾರ್ಡ್‌ಗಳ ಪರಿಶೀಲಿಸಿದ ನಂತರ ಸರ್ಕಾರವು ಒಪ್ಪಿದೆ.

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರುಗಳು ಶ್ರೀಯುತ / ಶ್ರೀಮತಿ	ಜನ್ಮ ದಿನಾಂಕಗಳು.
01	ಪ್ರವೀಣ್‌ಕುಮಾರ್.ಜಿ.ಎಲ್ ಉಪವಿಭಾಗಧಿಕಾರಿ, ಸಾಗರ.	15.12.78(ಹದಿನೈದು–ಹನ್ನೆರಡು–ಎಪ್ಪತ್ತೆಂಟು)
02	ವಿಜಯಮಹಂತೇಶ್ ಬಿ.ದಾನಮ್ಮನವರ್ ಉಪವಿಭಾಗಧಿಕಾರಿ, ಬೆಳಗಾಂ.	22.07.78(ಇಪ್ಪತ್ತೆರಡು–ಏಳು–ಎಪ್ಪತ್ತೆಂಟು)
03	ಗೋವಿಂದರೆಡ್ಡಿ ಉಪವಿಭಾಗಧಿಕಾರಿ, ಲಿಂಗಸಗೂರು.	15.08.75(ಹದಿನೈದು–ಎಂಟು–ಎಪ್ಪತ್ತೈದು)
04	ಪ್ರಭುಲಿಂಗಕವಳಿಕಟ್ಟಿ ಉಪವಿಭಾಗಧಿಕಾರಿ, ಮಂಗಳೂರು.	14.07.79(ಹದಿನಾಲ್ಕು–ಏಳು–ಎಪ್ಪತ್ತೊಂಬತ್ತು)
05	ವೈಶಾಲಿ ಎಂ.ಎಲ್ ವಿಶೇಷ ಭೂಸ್ವಾಧೀನಾಧಿಕಾರಿ, ಹಾಸನ.	20.05.75(ಇಪ್ಪತ್ತು–ಐದು–ಎಪ್ಪತ್ತೈದು)
06	ರಮ್ಯ.ಎಸ್ ಸಹಾಯಕ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.	24.07.77(ಇಪ್ಪತ್ತನಾಲ್ಕು–ಏಳು–ಎಪ್ಪತ್ತೇಳು)
07	ಬಾಲಚಂದ್ರ ಎಸ್.ಎನ್ ವಿಶೇಷ ಭೂಸ್ವಾಧೀನಾಧಿಕಾರಿ, ರಾಮನಗರ.	20.03.77(ಇಪ್ಪತ್ತು–ಮೂರು–ಎಪ್ಪತ್ತೇಳು)
08	ಭಾರತಿ.ಡಿ ಕಂದಾಯ ಅಧಿಕಾರಿ, ಮೈಸೂರು ಮಹಾನಗರ ಪಾಲಿಕೆ, ಮೈಸೂರು.	02.10.74(ಎರಡು–ಹತ್ತು–ಎಪ್ಪತ್ತನಾಲ್ಕು)
09	ಯೋಗೀಶ್ ಎ.ಎಂ ಉಪವಿಭಾಗಧಿಕಾರಿ, ಕೊಪ್ಪಳ.	20.01.73(ಇಪ್ಪತ್ತು–ಒಂದು–ಎಪ್ಪತ್ತಮೂರು)
10	ಶಿವಪ್ರಸಾದ್ ಪಿ.ಆರ್. ಉಪವಿಭಾಗಧಿಕಾರಿ, ದೊಡ್ಡಬಳ್ಳಾಪುರ.	29.05.73(ಇಪ್ಪತ್ತೊಂಬತ್ತು–ಐದು–ಎಪ್ಪತ್ತಮೂರು)
11	ಗಂಗಾಧರ ಸ್ವಾಮಿ ಜಿ.ಎಂ. ಉಪವಿಭಾಗಧಿಕಾರಿ, ಬೆಂಗಳೂರು ಉತ್ತರ.	20.07.73(ಇಪ್ಪತ್ತು–ಏಳು–ಎಪ್ಪತ್ತಮೂರು)
12	ವಿದ್ಯಾಕುಮಾರಿ.ಕೆ. ಉಪವಿಭಾಗಧಿಕಾರಿ, ಹುಣಸೂರು.	02.04.71(ಎರಡು–ನಾಲ್ಕು–ಎಪ್ಪತ್ತೊಂದು)

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರುಗಳು ಶ್ರೀಯುತ / ಶ್ರೀಮತಿ	ಜನ್ಮ ದಿನಾಂಕಗಳು.
13	ನಾಗೇಂದ್ರಪ್ರಸಾದ್.ಕೆ ಉಪವಿಭಾಗಧಿಕಾರಿ, ಸಕಲೇಶಪುರ.	16.06.75(ಹದಿನಾರು–ಆರು–ಎಪ್ಪತ್ತೈದು)
14	ಕುಮಾರ ಉಪವಿಭಾಗಧಿಕಾರಿ, ತುಮಕೂರು.	20.06.80(ಇಪ್ಪತ್ತು–ಆರು–ಎಂಭತ್ತು)
15	ವೆಂಕಟೇಶ್.ಟಿ ಉಪವಿಭಾಗಧಿಕಾರಿ, ಚಿತ್ರದುರ್ಗ.	01.04.72(ಒಂದು–ನಾಲ್ಕು–ಎಪ್ಪತ್ತೆರಡು)
16	ಗಾಯಿತ್ರಿ.ಕೆ.ಎಂ ಪರಿಷತ್ ಕಾರ್ಯದರ್ಶಿ, ಮೈಸೂರು ಮಹಾನಗರ ಪಾಲಿಕೆ, ಮೈಸೂರು.	20.04.74(ಇಪ್ಪತ್ತು–ನಾಲ್ಕು–ಎಪ್ಪತ್ತನಾಲ್ಕು)
17	ಪೂರ್ಣಿಮಾ ಬಿ.ಆರ್. ಉಪವಿಭಾಗಧಿಕಾರಿ, ಪಾಂಡವಪುರ.	15.08.72(ಹದಿನೈದು–ಎಂಟು–ಎಪ್ಪತ್ತೆರಡು)
18	ಜಯವಿಭವಸ್ವಾಮಿ ವಿಶೇಷ ಭೂಸ್ವಾಧೀನಾಧಿಕಾರಿ, B.D.A, ಬೆಂಗಳೂರು.	15.03.65(ಹದಿನೈದು–ಮೂರು–ಅರವತ್ತೈದು)
19	ವಿಜಯಕುಮಾರ.ಸಿ ಉಪವಿಭಾಗಧಿಕಾರಿ, ತರೀಕೆರೆ.	08.08.65(ಎಂಟು–ಎಂಟು–ಅರವತ್ತೈದು)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಆರ್. ನಾಗೇಂದ್ರ
ಪಿ.ಆರ್. 1700 ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–2)

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 77 ಆಸೇಇ 08, ಬೆಂಗಳೂರು ದಿನಾಂಕ: 24ನೇ ಜೂನ್ 2009

ವಿಷಯ: 1998 ನೇ ಸಾಲಿನ ಕೆ.ಎ.ಎಸ್ (ಸಮೂಹ–ಎ) (ಕಿರಿಯ ಶ್ರೇಣಿ) ಪರೀಕ್ಷಾರ್ಥಿಗಳ ಜನ್ಮ ದಿನಾಂಕವನ್ನು ಒಪ್ಪಿಕೊಳ್ಳುವ ಬಗ್ಗೆ – ಆದೇಶ.

ಓದಲಾಗಿದೆ: ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 48 ಅಸೇವ 2006 ದಿ:06.04.06

ಕರ್ನಾಟಕ ಸರ್ಕಾರಿ ನೌಕರರ (ವಯೋ ನಿರ್ಧಾರ) ಶಾಸನ 1974ರ ಕಲಂ–3ರ ಉಪ ಕಲಂ–2ರ ರೀತ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 48 ಆಸೇವ 06 ದಿ:06.04.06 ರಲ್ಲಿ ನೇಮಕಗೊಂಡ ಈ ಕೆಳಕಂಡ ಕೆ.ಎ.ಎಸ್ ಸಮೂಹ–ಎ (ಕಿರಿಯ ಶ್ರೇಣಿ) ಪರೀಕ್ಷಾರ್ಥಿಗಳ ಜನ್ಮ ದಿನಾಂಕವನ್ನು ಅವರವರ ಹೆಸರುಗಳ ಮುಂದೆ ತೋರಿಸಿರುವಂತೆ ಅವರ ಪ್ರೌಢ ಶಿಕ್ಷಣಾ ಪರೀಕ್ಷಾ ಮಂಡಳಿಯ ಅಂಕ ಪಟ್ಟಿ ಕ್ಯುಮ್ಯೂಲೇಟಿವ್ ರೆಕಾರ್ಡ್‌ಗಳ ಪರಿಶೀಲಿಸಿದ ನಂತರ ಸರ್ಕಾರವು ಒಪ್ಪಿದೆ.

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರುಗಳು	ಜನ್ಮ ದಿನಾಂಕಗಳು.
" M/s BPCL is not entitled for the amount claimed as there is absolutely no violation of the terms & conditions of the agreement by the Government of Karnataka. None of the agreements stipulate that M/s BPCL will be entitled for any damages to be paid by Government of Karnataka if either the authorities delay in granting the permission or refuse to grant permission. But for the refusal by Hampi Heritage Pradhikar, the Government and its agencies have taken all the steps like granting permission etc and hence the Government cannot be held responsible to make the payment as requested as the agreement does not stipulate for compensation or damages.

It is also a fact that M/s BPCL has taken up the project knowing fully well about the clearances and the terms & conditions of the agreement. Under the circumstances, it is opined that the claim of M/s Bhoruka Power Corporation Ltd for refund of amount spent and demurrages in respect of 7 MW MHP across Tungabhadra river at Anegundi near Sanapura village in Koppal District cannot be considered."

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಅಭಿಪ್ರಾಯದ ಹಿನ್ನೆಲೆಯಲ್ಲಿ ಪ್ರಕರಣ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 444 ಎನ್‌ಸಿಇ 2008, ಬೆಂಗಳೂರು, ದಿನಾಂಕ: 23ನೇ ಜೂನ್ 2009

ಮೇಲೆ ವಿವರಿಸಲಾದ ಸನ್ನಿವೇಶದಲ್ಲಿ ಮೆ: ಬೊರುಕಾ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರು ಕೊಪ್ಪಳ ಜಿಲ್ಲೆಯ ಸಾನಾಪುರ ಗ್ರಾಮದ ಬಳಿ ಆನೆಗುಂಡಿ ಎಂಬಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ 7.00 ಮೆ.ವ್ಯಾ. ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆ ಅನುಷ್ಠಾನದ ನಿಟ್ಟಿನಲ್ಲಿ ವೆಚ್ಚ ಮಾಡಿರುವ ರೂ.1,25,87,656/–ಗಳನ್ನು ದಿನಾಂಕ:13–10–2003ರಿಂದ ಶೇಕಡ 12ರ ಬಡ್ಡಿ ದರದಲ್ಲಿ ಹಿಂಬರಿಸುವಂತೆ ಕೋರಿರುವ ಮನವಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1625

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ರೆನೊವೊ ಪವರ್ ಜೆನ್ ಪ್ರೈವೇಟ್ ಲಿಮಿಟೆಡ್ ರವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಳಸೇಶ್ವರ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಕಳಸೇಶ್ವರ/2007/2010 ದಿನಾಂಕ: 3/6.9.2007.
2. ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ರೆನೊವೊ ಪವರ್ ಜೆನ್ ಪ್ರೈವೇಟ್ ಲಿಮಿಟೆಡ್‌ಗೆ ಚಿಕ್ಕಮಗಳೂರು ಜಿಲ್ಲೆಯ, ಮೂಡಿಗೆರೆ ತಾಲ್ಲೂಕು, ಕಳಸ ಗ್ರಾಮದ ಬಳಿ ಭದ್ರಾ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಳಸೇಶ್ವರ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಮುಂದೆ ಮಂಡಿಸಲಾಗಿದ್ದು, ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮೆ:: ರೆನೊವೊ ಪವರ್ ಜೆನ್ ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಳಸೇಶ್ವರ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ : –

ಸರ್ಕಾರದ ಆದೇಶ ಸಂಖ್ಯೆ: ಇಎನ್ 331 ಎನ್‌ಸಿಇ 2007, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಮೆ:: ರೆನೊವೊ ಪವರ್ ಜೆನ್ ಪ್ರೈವೇಟ್ ಲಿಮಿಟೆಡ್‌ಗೆ ಚಿಕ್ಕಮಗಳೂರು ಜಿಲ್ಲೆಯ, ಮೂಡಿಗೆರೆ ತಾಲ್ಲೂಕು, ಕಳಸ ಗ್ರಾಮದ ಬಳಿ ಭದ್ರಾ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಳಸೇಶ್ವರ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:–

1(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ ಮೂರು ತಿಂಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ರೂ. 25,000.00 ದಂತೆ ರೂ. 1.00 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಪಾವತಿಸತಕ್ಕದ್ದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4 ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಪೂರೈಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5 ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6 ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1626

ಎಸ್.ಜಿ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಎಲ್.ಕೆ. ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಗೆ ಹಂಚಿಕೆಯಾಗಿದ್ದು ರದ್ದಾಗಿರುವ 2.00 ಮೆ.ವ್ಯಾ. ಸಾಮರ್ಥ್ಯದ ದೇವರ ಬೆಳಕೆರೆ ಕಿರು ಜಲ ವಿದ್ಯುತ್ ಯೋಜನೆಯ ರದ್ಧತಿ ಆದೇಶವನ್ನು ಹಿಂಪಡೆಯುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ 148 ಪಿಪಿಸಿ 89 (2), ದಿನಾಂಕ:14-03-1990.
2) ಸರ್ಕಾರಿ ಆದೇಶ ಸಂಖ್ಯೆ: ಇಂಇ 205 ಎನ್‌ಸಿಇ 2002, ದಿನಾಂಕ: 28.5.2004.
3) ಮೆ:: ಎಲ್.ಕೆ. ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಯವರ ಮನವಿ ದಿನಾಂಕ.8-4-2008 ಮತ್ತು 08-09-2008.
4) ಟಿಪ್ಪಣಿ ಸಂಖ್ಯೆ :ಇಎನ್ 144 ಎನ್‌ಸಿಇ 2008 (ಭಾಗ), ದಿನಾಂಕ:16-01-2009.
5) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಎಲ್‌ಕೆಪವರ್/09/817, ದಿನಾಂಕ: 9/11.2.2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಎಲ್.ಕೆ. ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಗೆ ಈ ಕೆಳಗೆ ವಿವರಿಸಿರುವಂತೆ 2.00 ಮೆ.ವ್ಯಾ. ಸಾಮರ್ಥ್ಯದ ದೇವರ ಬೆಳಕೆರೆ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು :-

ಕಿರು ಜಲ ವಿದ್ಯುತ್ ಯೋಜನೆ ಹೆಸರು	ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ	ಯೋಜನೆಯ ಸ್ಥಳ	ಸಾಮರ್ಥ್ಯ (ಮೆಗಾ ವ್ಯಾಟ್‌ನಲ್ಲಿ)
ದೇವರ ಬೆಳಕೆರೆ	ಪಿಡಬ್ಲ್ಯೂಡಿ 148 ಪಿಪಿಸಿ 89 (2) ದಿನಾಂಕ:14.3.1990	ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ದೇವರ ಬೆಳಕೆರೆ ಗ್ರಾಮದ ಲಕ್ಕವಳ್ಳಿ ಅಣೆಕಟ್ಟಿನ ಹಿನ್ನೀರಿನ ಶಾಂತಿಸಾಗರ ಬ್ಯಾರೇಜ್‌ಗೆ ಅಡ್ಡಲಾಗಿ	2.00

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಮೇಲ್ಕಂಡ ಕಿರು ಜಲ ವಿದ್ಯುತ್ ಯೋಜನೆ ಹಂಚಿಕೆಯಾಗಿ ಬಹಳ ವರ್ಷಗಳು ಕಳೆದಿದ್ದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಅಭಿವೃದ್ಧಿದಾರರು ಪ್ರಗತಿ ಸಾಧಿಸಿರುವುದಿಲ್ಲವೆಂದು ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಮೆ:: ಎಲ್.ಕೆ. ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಯವರು ಸಲ್ಲಿಸಿದ ಮನವಿಗಳಲ್ಲಿ ಯೋಜನಾ ಹಂಚಿಕೆ ರದ್ಧತಿ ಆದೇಶವನ್ನು ಹಿಂದಕ್ಕೆ ಪಡೆದು ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ವಿಸ್ತರಿಸಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಟಿಪ್ಪಣಿಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರಿಗೆ ಮೇಲ್ಕಂಡ ಯೋಜನಾ ಸ್ಥಳದ ಪರಿವೀಕ್ಷಣೆ ಮಾಡಿ, ಪರಿವೀಕ್ಷಣಾ ವರದಿಯನ್ನು ಸರ್ಕಾರಕ್ಕೆ ಕಳುಹಿಸುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಮೆ:: ಎಲ್.ಕೆ. ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಯ ದೇವರ ಬೆಳಕೆರೆ ಕಿರು ಜಲ ವಿದ್ಯುತ್ ಯೋಜನೆಯನ್ನು ಕ್ರೆಡಲ್ ನ ಡಿ.ಜಿ.ಎಂ. (ಹೈಡ್ರೊ) ರವರು ದಿನಾಂಕ : 2.2.2009 ಮತ್ತು 3.2.2009 ರಂದು ಸ್ಥಳ ಪರಿವೀಕ್ಷಣೆ ಮಾಡಿ ನೀಡಿರುವ ವರದಿಯು ಈ ಕೆಳಗಿನಂತಿದೆ :–

> **"ದೇವರಬೆಳಕೆರೆ:–** ದಾವಣಗೆರೆ ಜಿಲ್ಲೆಯಲ್ಲಿ ಸ್ಥಳ ಪರಿವೀಕ್ಷಣಾ ವರದಿಯ ಪ್ರಕಾರ, ಈ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಕಾಮಗಾರಿಗಳು ನಡೆದಿರುತ್ತವೆ. In take structure, spill way, penstocks works ಶೇಕಡ 90ರಷ್ಟು ಮುಗಿದಿರುತ್ತದೆ. Power House work ಶೇಕಡ 50ರಷ್ಟು ಮುಗಿದಿರುತ್ತದೆ. 7.5 ಎಕರೆ ನೀರಾವರಿ ಜಮೀನು ಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ಈಗಾಗಲೇ ನೀಡಲಾಗಿದೆ."

ಯೋಜನಾ ಅನುಷ್ಠಾನಕ್ಕಾಗಿ ಸಂಸ್ಥೆಯು ರೂ.11,586,715/–ನ್ನು ವೆಚ್ಚ ಮಾಡಿರುತ್ತದೆ.

ಮೇಲ್ಕಂಡ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 379 ಎನ್‌ಸಿಇ 2009, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಮೆ:: ಎಲ್.ಕೆ. ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಗೆ ಸರ್ಕಾರಿ ಆದೇಶ ಸಂಖ್ಯೆ: ಇಂಇ 205 ಎನ್‌ಸಿಇ 2002 ದಿನಾಂಕ: 28.5.2004 ರಲ್ಲಿ ಈ ಕೆಳಗೆ ನಮೂದಿಸಿರುವ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸಲಾಗಿರುವ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂದಕ್ಕೆ ಪಡೆದು, ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿಸಿ ಆದೇಶವನ್ನು ಪೂರ್ವಸ್ಥಿತಿಗೆ ತರಲಾಗಿದೆ (Restored):–

ಕಿರು ಜಲ ವಿದ್ಯುತ್ ಯೋಜನೆ ಹೆಸರು	**ಯೋಜನೆಯ ಸ್ಥಳ**	**ಸಾಮರ್ಥ್ಯ (ಮೆಗಾ ವ್ಯಾಟ್‌ನಲ್ಲಿ)**
ದೇವರ ಬೆಳಕೆರೆ	ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ದೇವರ ಬೆಳಕೆರೆ ಗ್ರಾಮದ ಲಕ್ಕವಳ್ಳಿ ಅಣೆಕಟ್ಟಿನ ಹಿನ್ನೀರಿನ ಶಾಂತಿಸಾಗರ ಬ್ಯಾರೇಜ್‌ಗೆ ಅಡ್ಡಲಾಗಿ	2.00

1(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ರೂ.25,000.00 ದಂತೆ ರೂ. 1.00 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಪಾವತಿಸತಕ್ಕದ್ದು. ಈಗಾಗಲೇ ಪಾವತಿಸಿದ್ದಲ್ಲಿ, ಇದು ಅನ್ವಯವಾಗುವುದಿಲ್ಲ.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ನೀರಾವರಿ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್ ತುರ್ತಾಗಿ ಪಡೆಯತಕ್ಕದ್ದು.

3 ದೇವರ ಬೆಳೆಕೆರೆ ಯೋಜನೆಯನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಅನುಷ್ಠಾನಗೊಳಿಸಿ ವಿದ್ಯುತ್ ಉತ್ಪಾದನೆ ಪ್ರಾರಂಭಿಸತಕ್ಕದ್ದು.

4 ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಮೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

5 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

6 ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

7 ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

8. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

9. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1627 **ಎಸ್.ಜಿ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಮನಲಿ ಶುಗರ್ಸ್ ಲಿಮಿಟೆಡ್‌ಗೆ **6.00** ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಗೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ:
1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/04/ಮನಲಿ/08/1807 ದಿನಾಂಕ:30.10.2008/ 4.11.2008.
2. ಸರ್ಕಾರಿ ಪತ್ರ ಸಂಖ್ಯೆ: ಇಎನ್ 382 ಎನ್‌ಸಿಇ 2008 ದಿನಾಂಕ: 15.12.2008.
3. ಕ್ರೆಡಲ್ ಪತ್ರ ಸಂಖ್ಯೆ: ಕೆಆರ್‌ಇಡಿ/04/ಮನಲಿ/09/229 ದಿನಾಂಕ: 17/28.1.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಮನಲಿ ಶುಗರ್ಸ್ ಲಿಮಿಟೆಡ್‌ಗೆ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಮಲಘಾನ ಗ್ರಾಮದಲ್ಲಿ 6.00 MW (Gross) ಮತ್ತು 3.5 MW (exportable) ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಸರ್ಕಾರದ ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿ, ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರಿ ಪತ್ರದಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲು ಕೆಲವೊಂದು ಪೂರಕ ದಾಖಲಾತಿಗಳನ್ನು ಒದಗಿಸುವಂತೆ ಕ್ರೆಡಲ್ ನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಪೂರಕ ದಾಖಲಾತಿಗಳನ್ನು ಒದಗಿಸಿರುತ್ತಾರೆ ಮತ್ತು ನಿರಕ್ಷೇಪಣ ಪತ್ರ ನೀಡಲು ಪರಿಗಣಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 382 ಎನ್‌ಸಿಇ 2008, ಬೆಂಗಳೂರು, ದಿನಾಂಕ: 26ನೇ ಜೂನ್ 2009

ಮೆ:: ಮನಲಿ ಶುಗರ್ಸ್ ಲಿಮಿಟೆಡ್‌ಗೆ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ ಮಲಘಾನ ಗ್ರಾಮದಲ್ಲಿ 6.00 MW (Gross) ಮತ್ತು 3.5 MW (exportable) ಸಾಮರ್ಥ್ಯದ ಸಹ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ಅನುಷ್ಠಾನ ಮಾಡಲು ಸರ್ಕಾರದ ಅಭ್ಯಂತರವಿರುವುದಿಲ್ಲ :-

1. The company shall obtain separate clearance from Karnataka Power Transmission Corporation Limited in respect of evacuation of power.
2. The company shall enter into wheeling and banking agreement with Karnataka Power Transmission Corporation Limited in case of selling power to third party and power purchase agreement in case of selling power to Karnataka Power Transmission Corporation Limited.
3. The company shall obtain necessary statutory clearance wherever required from the respective Departments / Organizations such as Forest Department, Revenue Department, & Karnataka State Pollution Control Board, etc. for both the Sugar Mill and the Power plant.
4. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1628 **ಎಸ್.ಜೆ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಎಲ್.ಕೆ. ಪವರ್ ಕಾರ್ಪೋರೇಷನ್ ಲಿಮಿಟೆಡ್ ಕಂಪನಿಗೆ ಹಂಚಿಕೆಯಾಗಿದ್ದು ರದ್ದಾಗಿರುವ 2.00 ಮೆ.ವ್ಯಾ. ಸಾಮರ್ಥ್ಯದ ಮದ್ದೂರು ಕಿರು ಜಲ ವಿದ್ಯುತ್ ಯೋಜನೆಯ ರದ್ಧತಿ ಆದೇಶವನ್ನು ಹಿಂಪಡೆಯುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ 148 ಪಿಪಿಸಿ 89 (2), ದಿನಾಂಕ:14-03-1990.
2) ಸರ್ಕಾರಿ ಆದೇಶ ಸಂಖ್ಯೆ: ಇಂಇ 205 ಎನ್‌ಸಿಇ 2002, ದಿನಾಂಕ: 28.5.2004.
3) ಮೆ:: ಎಲ್.ಕೆ. ಪವರ್ ಕಾರ್ಪೋರೇಷನ್ ಲಿಮಿಟೆಡ್ ಕಂಪನಿಯವರ ಮನವಿ ದಿನಾಂಕ:8-4-2008 ಮತ್ತು 08-09-2008.
4) ಟಿಪ್ಪಣಿ ಸಂಖ್ಯೆ :ಇಎನ್ 144 ಎನ್‌ಸಿಇ 2008 (ಭಾಗ), ದಿನಾಂಕ :16-01-2009.
5) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಎಲ್‌ಕೆಪವರ್/09/817, ದಿನಾಂಕ: 9/11.2.2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಮೆ:: ಎಲ್.ಕೆ. ಪವರ್ ಕಾರ್ಪೋರೇಷನ್ ಲಿಮಿಟೆಡ್ ಕಂಪನಿಗೆ ಈ ಕೆಳಗೆ ವಿವರಿಸಿರುವಂತೆ 2.00 ಮೆ.ವ್ಯಾ. ಸಾಮರ್ಥ್ಯದ ದೇವರ ಬೆಳಕೆರೆ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು :-

ಕಿರು ಜಲ ವಿದ್ಯುತ್ ಯೋಜನೆ ಹೆಸರು	ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ	ಯೋಜನೆಯ ಸ್ಥಳ	ಸಾಮರ್ಥ್ಯ (ಮೆಗಾ ವ್ಯಾಟ್‌ನಲ್ಲಿ)
ಮದ್ದೂರು	ಪಿಡಬ್ಲ್ಯೂಡಿ 148 ಪಿಪಿಸಿ 89 (2) ದಿನಾಂಕ: 14.3.1990	ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ ಹುಲಿವನ ಗ್ರಾಮದ ಮದ್ದೂರು ಬ್ರ್ಯಾಂಚ್ ಕೆನಾಲ್‌ನ ವಿಶ್ವೇಶ್ವರಯ್ಯ ಕಾಲುವೆಗೆ ಅಡ್ಡಲಾಗಿ	2.00

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಮೇಲ್ಕಂಡ ಕಿರು ಜಲ ವಿದ್ಯುತ್ ಯೋಜನೆ ಹಂಚಿಕೆಯಾಗಿ ಬಹಳ ವರ್ಷಗಳು ಕಳೆದಿದ್ದರೂ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಅಭಿವೃದ್ಧಿದಾರರು ಪ್ರಗತಿ ಸಾಧಿಸಿರುವುದಿಲ್ಲವೆಂದು ಯೋಜನೆಯ ಹಂಚಿಕೆ ಆದೇಶವನ್ನು ರದ್ದು ಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಮೆ:: ಎಲ್.ಕೆ. ಪವರ್ ಕಾರ್ಪೋರೇಷನ್ ಲಿಮಿಟೆಡ್ ಕಂಪನಿಯವರು ಸಲ್ಲಿಸಿದ ಮನವಿಗಳಲ್ಲಿ ಯೋಜನಾ ಹಂಚಿಕೆ ರದ್ಧತಿ ಆದೇಶವನ್ನು ಹಿಂಪಕ್ಕ ಪಡೆದು ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ವಿಸ್ತರಿಸಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಟಿಪ್ಪಣಿಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರಿಗೆ ಮೇಲ್ಕಂಡ ಯೋಜನಾ ಸ್ಥಳದ ಪರಿವೀಕ್ಷಣೆ ಮಾಡಿ, ಪರಿವೀಕ್ಷಣಾ ವರದಿಯನ್ನು ಸರ್ಕಾರಕ್ಕೆ ಕಳುಹಿಸುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಮೆ:: ಎಲ್.ಕೆ. ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಯ ಮದ್ದೂರು ಕಿರು ಜಲ ವಿದ್ಯುತ್ ಯೋಜನೆಯನ್ನು ಕ್ರೆಡಲ್ ನ ಡಿ.ಜಿ.ಎಂ. (ಹೈಡ್ರೊ) ರವರು ದಿನಾಂಕ : 2.2.2009 ಮತ್ತು 3.2.2009 ರಂದು ಸ್ಥಳ ಪರಿವೀಕ್ಷಣೆ ಮಾಡಿ ನೀಡಿರುವ ವರದಿಯು ಈ ಕೆಳಗಿನಂತಿದೆ :–

" **ಮದ್ದೂರು ಬ್ರ್ಯಾಂಚ್ ಕೆನಾಲ್:–** Intake structure works are 90% completed. Penstock erected. Power house works also 90% completed. Two turbines are yet to be installed in the power house. Switch yard work 50% completed. 4.5 acres of land purchased from private land owners ಎಂದು ತಿಳಿಸಲಾಗಿದೆ."

ಯೋಜನಾ ಅನುಷ್ಠಾನದ ನಿಟ್ಟಿನಲ್ಲಿ ಸಂಸ್ಥೆಯು ಹೆಚ್ಚಿನ ಕ್ರಮ ವಹಿಸಿರುವುದು ಸ್ಥಳ ಪರಿವೀಕ್ಷಣಾ ವರದಿ ಹಾಗೂ ದಾಖಲಾತಿಗಳಿಂದ ತಿಳಿದು ಬರುತ್ತದೆ. ಸಂಸ್ಥೆಯು ರೂ.35,459,785/– ಗಳನ್ನು ಯೋಜನಾ ಅನುಷ್ಠಾನಕ್ಕಾಗಿ ವೆಚ್ಚ ಮಾಡಿರುತ್ತದೆ.

ಮೇಲ್ಕಂಡ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 144 ಎನ್‌ಸಿಇ 2008, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಮೆ:: ಎಲ್.ಕೆ. ಪವರ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಗೆ ಸರ್ಕಾರಿ ಆದೇಶ ಸಂಖ್ಯೆ: ಇಂಇ 205 ಎನ್‌ಸಿಇ 2002 ದಿನಾಂಕ: 28.5.2004 ರಲ್ಲಿ ಈ ಕೆಳಗೆ ನಮೂದಿಸಿರುವ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸಲಾಗಿರುವ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂದಕ್ಕೆ ಪಡೆದು, ಈ ಕೆಳಗಿನ ನಿಬಂಧನೆಗಳಿಗೊಳಪಟ್ಟು ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿಸಿ ಆದೇಶವನ್ನು ಪೂರ್ವಸ್ಥಿತಿಗೆ ತರಲಾಗಿದೆ (Restored):–

ಕಿರು ಜಲ ವಿದ್ಯುತ್ ಯೋಜನೆ ಹೆಸರು	ಯೋಜನೆಯ ಸ್ಥಳ	ಸಾಮರ್ಥ್ಯ (ಮೆಗಾ ವ್ಯಾಟ್‌ನಲ್ಲಿ)
ಮದ್ದೂರು	ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ ಹುಲಿವನ ಗ್ರಾಮದ ಮದ್ದೂರು ಬ್ರ್ಯಾಂಚ್ ಕೆನಾಲ್‌ನ ವಿಶ್ವೇಶ್ವರಯ್ಯ ಕಾಲುವೆಗೆ ಅಡ್ಡಲಾಗಿ	2.00

1(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ರೂ. 25,000.00 ದಂತೆ ರೂ. 1.00 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಪಾವತಿಸತಕ್ಕದ್ದು. ಈಗಾಗಲೇ ಪಾವತಿಸಿದ್ದಲ್ಲಿ, ಇದು ಅನ್ವಯವಾಗುವುದಿಲ್ಲ.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ನೀರಾವರಿ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್ ತುರ್ತಾಗಿ ಪಡೆಯತಕ್ಕದ್ದು.

3. ಮದ್ದೂರು ಯೋಜನೆಯನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಅನುಷ್ಠಾನಗೊಳಿಸಿ ವಿದ್ಯುತ್ ಉತ್ಪಾದನೆ ಪ್ರಾರಂಭಿಸತಕ್ಕದ್ದು.

4. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

5. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

6. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

7. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

8. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

9. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1629 **ಎಸ್.ಜೆ. ಸಂಪತ್ ಕುಮಾರ್**

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಸೋಮನದಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್ಇಡಿ/06/ಸೋಮನದಿ/2007/1887 ದಿನಾಂಕ:25.7.20007/ 24.8.2007.
2. ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ (ಸಿದ್ದಾಪುರ ಪಟ್ಟಣದಿಂದ 17 ಕಿ.ಮೀ.) ಹುಲ್ಕುಟಿ ಗ್ರಾಮದ ಬಳಿ ಸೋಮ (ಅಘನಾಶಿನಿ ನದಿ ಮತ್ತು ತದ್ರಿ ನದಿಯ ಉಪ ನದಿ) ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಸೋಮನದಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಮುಂದೆ ಮಂಡಿಸಲಾಗಿದ್ದು, ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಕಂಪನಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಸೋಮನದಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಎನ್ 292 ಎನ್‌ಸಿಇ 2007, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ (ಸಿದ್ದಾಪುರ ಪಟ್ಟಣದಿಂದ 17 ಕಿ.ಮೀ.) ಹುಲ್ಕುಟಿ, ಹಂಪೇರಿ, ಚಿತಲಮನೆ ಮತ್ತು ಮಣಿಹೊಳೆ ಗ್ರಾಮದ ಬಳಿ ಸೋಮ (ಅಘನಾಶಿನಿ ನದಿ ಮತ್ತು ತದ್ರಿ ನದಿಯ ಉಪ ನದಿ) ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಸೋಮನದಿ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:–

1(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ ಮೂರು ತಿಂಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. **ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಅಭಿವೃದ್ಧಿದಾರರ ಒಡಂಬಡಿಕೆಯನ್ನು ಸರ್ಕಾರಕ್ಕೆ ಕಳುಹಿಸುವ ಮುನ್ನ documentation networth ಇತ್ಯಾದಿಗಳನ್ನು ಪೂರೈಸಿಕೊಂಡಿರತಕ್ಕದ್ದು.**

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ರೂ. 25,000.00 ದಂತೆ ರೂ. 1.00 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಪಾವತಿಸತಕ್ಕದ್ದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4 ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5 ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6 ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1630

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ತದ್ರಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ತದ್ರಿ/2007/1936 ದಿನಾಂಕ: 23/30.8.2007.

2. ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಬಳಿ (ಸಿದ್ದಾಪುರ ಪಟ್ಟಣದಿಂದ 17 ಕಿ.ಮೀ.) ಸೋಮಾ ನದಿಗೆ (ಅಘನಾಶಿನಿ ನದಿ ಮತ್ತು

ತದ್ರಿ ನದಿಯ ಉಪ ನದಿ) ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ತದ್ರಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಮುಂದೆ ಮಂಡಿಸಲಾಗಿದ್ದು, ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಕಂಪನಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ತದ್ರಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ : –

ಸರ್ಕಾರದ ಆದೇಶ ಸಂಖ್ಯೆ: ಇಎನ್ 303 ಎನ್‌ಸಿಇ 2007, ಬೆಂಗಳೂರು, ದಿನಾಂಕ: 25ನೇ ಜೂನ್ 2009.

ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ದನಕಲ್/ಹುಲಿಮನೆ ಗ್ರಾಮದ (ಸಿದ್ದಾಪುರ ಪಟ್ಟಣದಿಂದ 17 ಕಿ.ಮೀ.) ಬಳಿ ಸೋಮಾ ನದಿಗೆ (ಅಘನಾಶಿನಿ ನದಿ ಮತ್ತು ತದ್ರಿ ನದಿಯ ಉಪ ನದಿ) ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ತದ್ರಿ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:–

1(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ ಮೂರು ತಿಂಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. **ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಅಭಿವೃದ್ಧಿದಾರರ ಒಡಂಬಡಿಕೆಯನ್ನು ಸರ್ಕಾರಕ್ಕೆ ಕಳುಹಿಸುವ ಮುನ್ನ documentation networth ಇತ್ಯಾದಿಗಳನ್ನು ಪೂರೈಸಿಕೊಂಡಿರತಕ್ಕದ್ದು.**

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ರೂ. 25,000.00 ದಂತೆ ರೂ. 1.00 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಪಾವತಿಸತಕ್ಕದ್ದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4 ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5 ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6 ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8 ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9 ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10 ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12 ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1631

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ವಿಷಯ: ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ದೇವಿಗಡ್ಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ದೇವಿಗಡ್ಡಿ/2007/1987 ದಿನಾಂಕ:25.7.2007/ 5.9.2007.
2. ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ದೇವಿಗಡ್ಡಿ ಗ್ರಾಮದ ಬಳಿ ಬೇಡ್ತಿ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ದೇವಿಗಡ್ಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.2.2009 ರಂದು ನಡೆದ ಹಂಚಿಕೆ ಸಮಿತಿ ಮುಂದೆ ಮಂಡಿಸಲಾಗಿದ್ದು, ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ 2.00 ಮೆಗಾ ವ್ಯಾಟ್ ಸಾಮರ್ಥ್ಯದ ದೇವಿಗಡ್ಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಎನ್ 320 ಎನ್‌ಸಿಇ 2007, ಬೆಂಗಳೂರು, ದಿನಾಂಕ: 25ನೇ ಜೂನ್ 2009

ಮೆ:: ಜೆ.ಹೆಚ್. ಪಟೇಲ್ ಎನರ್ಜಿ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್ ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ದೇವಿಗಡ್ಡಿ ಗ್ರಾಮದ ಬಳಿ ಬೇಡ್ತಿ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ದೇವಿಗಡ್ಡಿ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:–

1(ಅ) ಸದರಿ ಯೋಜನೆಯಿಂದ ಕೆಳ ತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ ಮೂರು ತಿಂಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ರೂ. 25,000.00 ದಂತೆ ರೂ. 1.00 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಪಾವತಿಸತಕ್ಕದ್ದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ & ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4 ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5 ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6 ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7 ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ / ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8 ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್ / ನೀರಾವರಿ / ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದ್ದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9 ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10 ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11 ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12 ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1632

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಭೀಮಪ್ಪ ಯಮನಪ್ಪ ಬೆಳ್ಳುಬ್ಬಿ, ಡಿವೈ.ಎಸ್.ಪಿ, ಬಸವನಬಾಗೇವಾಡಿ ಪೊಲೀಸ್ ಠಾಣೆ, ವಿಜಾಪುರ ರವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ – ಪರಿಷ್ಕೃತ ಆದೇಶ.

ಓದಲಾಗಿದೆ: 1) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ/ಐಎನ್‌ವಿ(ಜಿ)ಎಲ್:43:ಸಿಆರ್–8/2007–08 ದಿನಾಂಕ 29–08–2008.

2) ಸರ್ಕಾರದ ಆದೇಶ ಸಂಖ್ಯೆ: ಒಇ 410 ಪೊಸಿಪ 2007 ದಿ:20.2.2009

3) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ/ಐಎನ್‌ವಿ(ಜಿ)ಎಲ್:43:ಸಿಆರ್–8/2007–08 ದಿನಾಂಕ 13.3.2009.

ಪ್ರಸ್ತಾವನೆ:

ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಶ್ರೀ ಭೀಮಪ್ಪ ಯಮನಪ್ಪ ಬೆಳ್ಳುಬ್ಬಿ, ಡಿವೈ.ಎಸ್.ಪಿ, ಬಸವನಬಾಗೇವಾಡಿ ಪೊಲೀಸ್ ಠಾಣೆ, ವಿಜಾಪುರ ರವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನಾ ಮಂಜೂರಾತಿಯನ್ನು ನೀಡಿ ಆದೇಶಿಸಲಾಗಿತ್ತು. ಮೇಲೆ ಓದಲಾದ (3) ರಲ್ಲಿನ ಪತ್ರದಲ್ಲಿ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿ ಆದೇಶದಲ್ಲಿ ಕೆಲವು ಬೆರಳಚ್ಚಿನ ನ್ಯೂನತೆಗಳಿರುವುದರಿಂದ ಪರಿಷ್ಕೃತ ಅಭಿಯೋಜನಾ ಮಂಜೂರಾತಿಯ ಆದೇಶವನ್ನು ನೀಡಲು ಕೋರಿರುತ್ತಾರೆ. ಸರ್ಕಾರವು ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರದ ಆದೇಶ ಸಂಖ್ಯೆ:ಒಇ 410 ಪೊಸಿಪ 2007 ದಿನಾಂಕ 20.02.2009 ರಲ್ಲಿ ನೀಡಿದ್ದ ಅಭಿಯೋಜನಾ ಮಂಜೂರಾತಿಯ ಆದೇಶವನ್ನು ಹಿಂದಕ್ಕೆ ಪಡೆದು ಪರಿಷ್ಕೃತ ಮಂಜೂರಾತಿ ಆದೇಶವನ್ನು ಹೊರಡಿಸಲು ತೀರ್ಮಾನಿಸಿದೆ. ಅದರಂತೆ ಪರಿಷ್ಕೃತ ಅಭಿಯೋಜನಾ ಮಂಜೂರಾತಿ ಆದೇಶವನ್ನು ಈ ಮೂಲಕ ಹೊರಡಿಸಲಾಗಿದೆ.

ಶ್ರೀ ಭೀಮಪ್ಪ ಯಮನಪ್ಪ ಬೆಳ್ಳುಬ್ಬಿ, ಡಿವೈ.ಎಸ್.ಪಿ. ಬಸವನಬಾಗೇವಾಡಿ ಪೊಲೀಸ್ ಠಾಣೆ, ವಿಜಾಪುರ ಇವರ ವಿರುದ್ಧ ಗುನ್ನೆ ಸಂಖ್ಯೆ:8/07 ರಲ್ಲಿ ಆರಕ್ಷಕ ನಿರೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ವಿಜಾಪುರ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಮಾನ್ಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಪತ್ರ ದಿನಾಂಕ 29–08–2008 ರೊಡನೆ ಕಳುಹಿಸುತ್ತಾ ಆಪಾದಿತರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ, 1988ರ 19(1)(ಸಿ) ಕಲಂನ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ:ಲೋಕ್:ಐಎನ್‌ವಿ(ಜಿ):ಎಲ್:43:ಸಿಆರ್–8/2007–08 ದಿನಾಂಕ:29.08.2008 ರೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1) ಶ್ರೀ ಮಹದೇವಪ್ಪ ಕೆಂಚಪ್ಪ ಹಿರೇಕುರುಬರ ಸಾ:ಕಣಕಾಲ, ಬಸವನಬಾಗೇವಾಡಿ
2) ಪ್ರಥಮ ವರ್ತಮಾನ ವರದಿ, ಬಸವನಬಾಗೇವಾಡಿ, ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣದ ಸಂಖ್ಯೆ:8/07.
3) ಪ್ರಾಯೋಗಿಕ ಪಂಚನಾಮೆ ದಿನಾಂಕ 25–10–2007.
4) ಟ್ರ್ಯಾಪ್‌ನ ಮಹಜರ್ ದಿನಾಂಕ 25–10–2007.
5) ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ:6(ಎ) ದಿನಾಂಕ 26–11–2007.
6) ಕೃತ್ಯ ನಡೆದ ಸ್ಥಳದ ನಕಾಶೆ
7) ಸಾಕ್ಷಿಗಳ ಹೇಳಿಕೆಗಳು:
    1) ಮಹಾದೇವಪ್ಪ ಕೆಂಚಪ್ಪ ಹಿರೇಕುರುಬರ ಸಾ:ಕಣಕಾಲ (ಫಿರ್ಯಾದಿ)
    2) ರಮೇಶ ಚಿದಾನಂದ ನಳಬಂದ ಪ್ರ.ದ.ಸ. (ಪಂಚ ನಂ.1)
    3) ಬಾಲಾಜಿ ಶ್ರೀನಿವಾಸ ಕುಲಕರ್ಣಿ, ಪ್ರ.ದ.ಸ. (ಪಂಚ ನಂ.2)
    4) ಎಮ್.ಸಿ.ನಾಯಕ. ದ್ವಿ.ದ.ಸ. ತಾಲ್ಲೂಕ್ ಪಂಚಾಯತ್ ಬಿಜಾಪುರ.
    5) ಕಾಂತು @ ಕಾಂತಪ್ಪ ಸಿದ್ರಾಮಪ್ಪ ಹೊಸಮನಿ ಸಾ:ಉತ್ನಾಳ
    6) ಸಿಧ್ಧವ್ವ ಗಂ.ಸುಬ್ಬಣ್ಣಾ ವಾಲೀಕಾರ ಸಾ:ಕಣಕಾಲ
    7) ಸಂಗಪ್ಪ ಮುದಕಪ್ಪ ಹಾಲಿಹಾಳ ಸಾ:ಕಣಕಾಲ

8) ಶಾಂತವ್ವ ಸಿದ್ಧಪ್ಪ ವಾಲೀಕಾರಿ ಸಾ:ಕಣಕಾಲ
9) ಭೀಮಾಬಾಯಿ ಗಂ.ಸಂಗಪ್ಪ ಹಾಲಿಹಾಳ ಸಾ:ಕಣಕಾಲ
10) ಸಿದ್ಧಪ್ಪ ಸುಬ್ಬಣ್ಣಾ ವಾಲೀಕಾರ ಸಾ:ಕಣಕಾಲ
11) ಹಣಮಂತ ಸುಬ್ಬಣ್ಣಾ ವಾಲೀಕಾರ ಸಾ:ಕಣಕಾಲ
12) ಮಲ್ಲಪ್ಪ ಮುದಕಪ್ಪ ಹಾಲಿಹಾಳ ಸಾ:ಕಣಕಾಲ
13) ಕರಿಯಪ್ಪ ಸಿದ್ಧಪ್ಪ ವಾಲೀಕಾರ ಸಾ:ಕಣಕಾಲ
14) ಡಿ.ಸಂತೋಷಕುಮಾರ, ಪಿ.ಎಸ್.ಐ, ಬಸವನಬಾಗೇವಾಡಿ
15) ಕಾಡಯ್ಯ ಚಿದಾನಂದಯ್ಯ ಸ್ಥಾವರಮಠ, ಸಿ.ಎಸ್.ಸಿ, ಡಿ.ಎಸ್.ಪಿ ಆಫೀಸ್ ಬಸವನಬಾಗೇವಾಡಿ.
16) ಭೀಮಣ್ಣ ಬಸವಲಿಂಗಪ್ಪ ಚಿಗರಿ, ಸಿ.ಪಿ.ಸಿ, ಬಸವನಬಾಗೇವಾಡಿ ಪೊಲೀಸ್ ಠಾಣೆ
17) ಶೋಭಾ ಯಮನಪ್ಪ ಹರಿಜನ, ಡಬ್ಲ್ಯೂಪಿಸಿ, ಬಸವನಬಾಗೇವಾಡಿ ಪೊಲೀಸ್ ಠಾಣೆ
18) ಡಿ.ಆರ್.ಪಾಟೀಲ, ಎ.ಇ, ಲೋಕೋಪಯೋಗಿ ಇಲಾಖೆ, ಬಸವನಬಾಗೇವಾಡಿ
19) ಎಚ್.ಎಸ್.ಸೋಲಾಪುರ, ಸಿ.ಎಚ್.ಸಿ, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ.
20) ಬಿ.ಎಂ.ಅಂಕುಲಿ, ಸಿ.ಎಚ್.ಸಿ, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ.
21) ಐ.ಎಂ.ದುಂಡಸಿ, ಸಿಪಿಸಿ, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ.
22) ಜಿ.ಎ.ಹಡಪದ, ಸಿಪಿಸಿ, ವಿಜಾಪುರ.
23) ಎಸ್.ಎಮ್.ಅಕಳವಾಡಿ, ಎ.ಪಿ.ಸಿ, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ.

8) ಲಂಚ ಕೇಳಲು ಆಧಾರವಾದ ಕಡತ ಅಥವಾ ದಾಖಲೆಗಳ ಸಂಖ್ಯೆ:27 ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:152/07.

ತನಿಖಾಧಿಕಾರಿಗಳಾದ ಶ್ರೀ ಎಸ್.ಎಫ್.ಕಂಬಾರ, ಡಿವೈ.ಎಸ್.ಪಿ, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ ಇವರು ಶ್ರೀ ಬಿ.ವೈ.ಬೆಳ್ಳುಬ್ಬಿ, ಡಿವೈ.ಎಸ್.ಪಿ ರವರ ವಿರುದ್ಧ ದಂಡಾರ್ಹ ಪ್ರಕರಣವನ್ನು 8/07,ಕರ್ನಾಟಕ ಲೋಕಾಯುಕ್ತ ಬಸವನಬಾಗೇವಾಡಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ:8/07ರಲ್ಲಿ ಲಂಚ ನಿರೋಧಕ ಕಾಯಿದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆಪಾದಿತರಾದ ಶ್ರೀ ಬಿ.ವೈ.ಬೆಳ್ಳುಬ್ಬಿ, ಡಿವೈ.ಎಸ್.ಪಿ, ರವರು ಫಿರ್ಯಾದಿಯಾದ ಶ್ರೀ ಮಹದೇವಪ್ಪ ಕೆಂಚಪ್ಪ ಹಿರೇ ಕುರುಬರ ಕಣಕಾಲ, ಬಸವನಬಾಗೇವಾಡಿ ಇವರ ಸಂಬಂಧಿಕರ ಮೇಲೆ ಕೊಟ್ಟಿದ್ದ ಪ್ರಕರಣದಲ್ಲಿ ಇಬ್ಬರು ಹೆಣ್ಣು ಮಕ್ಕಳ ಹೆಸರನ್ನು ಕೇಸಿನಿಂದ ತೆಗೆಯಿಸುವ ಕೆಲಸವನ್ನು ಮಾಡಲು ರೂ.20,000/–ಗಳ ಅಕ್ರಮ ಸಂಭಾವನೆಯನ್ನು ಕೇಳಿರುತ್ತಾರೆ. ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ ಸದರಿ ಸಾರ್ವಜನಿಕ ಆಧಿಕಾರಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ದೂರಿನಂತೆ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ಣ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ 25–10–2007ರಂದು ಬಸವನಬಾಗೇವಾಡಿ ಪೊಲೀಸ್ ಠಾಣೆ, ಡಿವೈ.ಎಸ್.ಪಿ ಕಾರ್ಯಾಲಯದಲ್ಲಿ ಬೀಸಿದ ಟ್ರ್ಯಾಪ್ ಪ್ರಕರಣ ಯಶಸ್ವಿಯಾಗಿ ಶ್ರೀ ಬಿ.ವೈ.ಬೆಳ್ಳುಬ್ಬಿ, ಡಿವೈ.ಎಸ್.ಪಿ, ಅಕ್ರಮ ಸಂಭಾವನೆಯಾದ 20,000/– ರೂ.ಗಳನ್ನು ಸದರಿ ಸರ್ಕಾರಿ ಕೆಲಸವನ್ನು ಮಾಡಲು ಕೇಳಿ ಪಡೆಯುತ್ತಿದ್ದಾಗ ಸಿಕ್ಕಿಹಾಕಿಕೊಂಡಿರುತ್ತಾರೆ. ಆಪಾದಿತರಾದ ಶ್ರೀ ಬಿ.ವೈ. ಬೆಳ್ಳುಬ್ಬಿ, ಡಿವೈ.ಎಸ್.ಪಿ. ರವರ ಬಲಗೈ ಬೆರಳುಗಳನ್ನು ಒಂದು ಬಟ್ಟಲಲ್ಲಿ ಅದ್ದಿ ತೊಳೆಯಿಸಿದಾಗ ಬಟ್ಟಲಿನಲ್ಲಿಯ ದ್ರಾವಣವು ರೂಪಾಂತರ ಹೊಂದಲಿಲ್ಲ. ಅದೇ ರೀತಿ ಆಪಾದಿತರ ಎಡಗೈ ಬೆರಳುಗಳನ್ನು ಒಂದು ಬಟ್ಟಲಲ್ಲಿ ಅದ್ದಿ ತೊಳೆಯಿಸಿದಾಗ ಬಟ್ಟಲಿನಲ್ಲಿಯ ದ್ರಾವಣವು ರೂಪಾಂತರ ಹೊಂದಲಿಲ್ಲ ಆಪಾದಿತರಿಗೆ ಫಿರ್ಯಾದಿ ಕಡೆಯಿಂದ ಕೇಳಿ ಪಡೆದುಕೊಂಡ ಲಂಚದ ಹಣವನ್ನು ಹಾಜರುಪಡಿಸಲು ತಿಳಿಸಿದಾಗ ಆಪಾದಿತ ಅಧಿಕಾರಿಯವರ ಟೇಬಲ್ ಮೇಲೆ ಇದ್ದ ಒಂದು ಫೈಲ್ ಕೆಳಗೆ ಇಟ್ಟ ರೂ ಇಪ್ಪತ್ತು ಸಾವಿರ ಲಂಚದ ಹಣವನ್ನು ಹಾಜರುಪಡಿಸಿದರು. ಸದರಿ ಹಣವನ್ನು ಪಂಚರು ಪರಿಶೀಲಿಸಿದಾಗ ಸದರಿ ನೋಟುಗಳು ವಹಿಸಿಕೊಡುವ ಪಂಚನಾಮ ಕಾಲಕ್ಕೆ ನಮೂದಿಸಿದ ನಂಬರಿನ ರೂ. 500/– ದರದ 40 ನೋಟುಗಳು ಒಟ್ಟು ರೂ. ಇಪ್ಪತ್ತು ಸಾವಿರ ಇರುವುದು ಕಂಡು ಬಂದಿತ್ತು. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಆಪಾದಿತ ಸಾರ್ವಜನಿಕ ಅಧಿಕಾರಿ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ. ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ. 20,000/– ಗಳನ್ನು ಶ್ರೀ ಬಿ.ವೈ. ಬೆಳ್ಳುಬ್ಬಿ ರವರಿಂದ ಬಸವನಬಾಗೇವಾಡಿ ಪೊಲೀಸ್ ಠಾಣೆ, ಡಿವೈ.ಎಸ್.ಪಿ ಕಾರ್ಯ ಸ್ಥಳದಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ತನಿಖಾ ಕಾಲದಲ್ಲಿ ಸಂಗ್ರಹಿಸಲಾದ ದಾಖಲೆಗಳನ್ನು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಗಮನಿಸಿ ಆರೋಪಿತ ಅಧಿಕಾರಿಗಳ ವಿರುದ್ಧ ಮಾಡಲಾಗಿರುವ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗುವ ಬಗ್ಗೆ ಪೂರಕ ಅಂಶಗಳಿರುವುದರಿಂದ ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ–1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ

13(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ, 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13(2) ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರವು ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತರನ್ನು ಕೆಲಸದಿಂದ ತೆಗೆದು ಹಾಕಲು ಅಧಿಕಾರವುಳ್ಳದ್ದಾಗಿರುತ್ತದೆ. ಆದ್ದರಿಂದ ಲಂಚ ನಿರೋಧಕ ಕಾಯಿದೆ 1988ರ ಕಲಂ 19 ರನ್ವಯ ಆಪಾಧಿತ ಸಾರ್ವಜನಿಕ ಅಧಿಕಾರಿ ಶ್ರೀ ಬಿ.ವೈ.ಬೆಳ್ಳುಬ್ಬಿ, ಡಿವೈ.ಎಸ್.ಪಿ, ರವರನ್ನು ಕಲಂ 7 ಮತ್ತು 13(ಸಿ) ಜೊತೆಗೆ ಓದಲಾದ 13(2) ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು, ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ. ಅದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 410 ಪೊಸಿಪ 2007, ಬೆಂಗಳೂರು, ದಿನಾಂಕ: 1ನೇ ಏಪ್ರಿಲ್, 2009.

ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988ರ ಕಲಂ 19(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಬಿ.ವೈ.ಬೆಳ್ಳುಬ್ಬಿ, ಡಿವೈ.ಎಸ್.ಪಿ, ಬಸವನಬಾಗೇವಾಡಿ, ಬಿಜಾಪುರ ಇವರನ್ನು ಸದರಿ ಕಾಯಿದೆ ಕಲಂ 7, 13(1)(ಸಿ) ಜೊತೆಯಲ್ಲಿ ಓದಲಾದ ಕಲಂ 13(2) ರನ್ವಯ ಮೇಲೆ ಹೇಳಿದ ಆರೋಪಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಮಂಜೂರಾತಿಯನ್ನು ನೀಡುತ್ತದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಾವಳಿಗಳು, 1977ರ ನಿಯಮ 19 ರನ್ವಯ ಸರ್ಕಾರದ ಪರವಾಗಿ ಹೊರಡಿಸಲಾಗುವ ಆದೇಶಕ್ಕೆ ಸಹಿ ಮಾಡಲು ಈ ಕೆಳಕಂಡ ಪ್ರಾಧಿಕಾರಿಯು ಅಧಿಕಾರ ಹೊಂದಿದ್ದಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1105 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಜಲ ಸಂಪನ್ಮೂಲ ಸಚಿವಾಲಯ

ವಿಷಯ: 2008-09 ನೇ ಸಾಲಿನ ಸವಿವರ ಅಂದಾಜಿನಲ್ಲಿ ಲೆಕ್ಕ ಶೀರ್ಷಿಕೆ 4702 ಅಡಿ ಅನುಮೋದನೆಯಾಗಿರುವ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ದಿನಾಂಕ:25.02.2009ರ ಬಿಜಾಪುರ, ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜೆಪಿ/ಎಇ-12/2008-09/1270.

2) ಸರ್ಕಾರದ ಆದೇಶ ಸಂಖ್ಯೆ ಸನೀಇ 41 ಮಸಾವಿ 2009 (1) ದಿನಾಂಕ 02.03.2009.

ಪ್ರಸ್ತಾವನೆ:

2008-09ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4702-00-101-1-02-139 ಹೊಸಕೆರೆಗಳ ನಿರ್ಮಾಣ-ಪ್ರಧಾನ ಕಾಮಗಾರಿಗಳು ಅಡಿ 1 ಕಾಮಗಾರಿಯ (ಕಾಮಗಾರಿಯ ವಿವರಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ) ಅಂದಾಜು ಪಟ್ಟಿಗೆ (ಅಂದಾಜು ಮೊತ್ತ 246.00ಲಕ್ಷ ರೂ.ಗಳು) ಆಡಳಿತಾತ್ಮಕ ಅನುಮೋದನೆ ನೀಡುವಂತೆ ಮೇಲೆ ಉಲ್ಲೇಖ (1) ರಲ್ಲಿ ಓದಲಾದ ಪತ್ರದಲ್ಲಿ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಕಾಮಗಾರಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ವಾಸ್ತವಿಕ ಅಂದಾಜು ಮೊತ್ತದ ಶೇ.30 ಕ್ಕಿಂತ ಕಡಿಮೆ ಇರುವುದರಿಂದ ಉಲ್ಲೇಖ (2) ರ ಆದೇಶದಲ್ಲಿ ಅನುದಾನದ ಮರುಹೊಂದಾಣಿಕೆ ಮಾಡಿದೆ.

ಆಡಳಿತಾತ್ಮಕ ಅನುಮೋದನೆಗೆ ಕೋರಿರುವ ಕಾಮಗಾರಿಯ ಅಂದಾಜು ಪಟ್ಟಿಯನ್ನು 2008-09ನೇ ಸಾಲಿಗೆ ಮುಂದುವರೆಸಿರುವ 2007-08ನೇ ಸಾಲಿನ ಸಣ್ಣ ನೀರಾವರಿ ಬೆಳಗಾವಿ ವೃತ್ತದ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಲಾಗಿದೆ. ಈ ಕಾಮಗಾರಿಯು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಶಕ್ಯವಾಗಿದೆ.

ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ, ಆಯವ್ಯಯದ ಲೆಕ್ಕ ಶೀರ್ಷಿಕೆ, ಅನುದಾನ, ಕಾಮಗಾರಿಯ ಸ್ವರೂಪ ಹಾಗೂ ಅಂದಾಜಿನಲ್ಲಿ ಅಳವಡಿಸಿರುವ ಕೆಲಸಗಳ ವಿವರ, ಸೃಷ್ಟಿಯಾಗಲಿರುವ ಹೊಸ ಅಚ್ಚುಕಟ್ಟು ಹಾಗೂ ಲಾಭ ವೆಚ್ಚದ ಅನುಪಾತ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಮಸಾವಿ 2009 (4), ಬೆಂಗಳೂರು, ದಿನಾಂಕ: 2ನೇ ಮಾರ್ಚ್ 2009.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ವ್ಯಾಪ್ತಿಗೆ ಬರುವ ಅಡಕಗಳಿಸಿರುವ ಅನುಬಂಧದಲ್ಲಿ ತಿಳಿಸಿರುವ ಒಟ್ಟು ರೂ 246.00 ಲಕ್ಷ (ಇನ್ನೂರ ನಲವತ್ತಾರು ಲಕ್ಷ ರೂ.) ಮೊತ್ತದ 1 ಕಾಮಗಾರಿಯ ಅಂದಾಜು ಪಟ್ಟಿಗೆ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1) ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2) ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
3) ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
4) ಕಾಮಗಾರಿಯ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ/ ತಾಂತ್ರಿಕ ಸಮಿತಿಯು ಸಭೆಯಲ್ಲಿ ನೀಡಿರುವ ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.
5) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
6) ಕಾಮಗಾರಿ ಪೂರ್ಣಗೊಂಡ ಕೂಡಲೇ ಪಿ.ಸಿ.ಆರ್ ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
7) ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.
8) ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
9) ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
10) ಈ ಯೋಜನೆಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ ಸನೀಇ 15 ಮಸಾವಿ 2009, (4) ದಿನಾಂಕ 02.03.2009

(ಮೊತ್ತ ಲಕ್ಷ ರೂ.ಗಳಲ್ಲಿ) ಹಾಗೂ (ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಸ್ವೀಕೃತವಾಗಿರುವ ಅಂದಾಜು ಮೊತ್ತ	ಅನುಬಂಧ–ಇ ವಿವರಗಳು		ನದಿ ಕೊಳ್ಳ	ಕಾಮಗಾರಿ ಸ್ವರೂಪ	ಹೊಸ ಅಚ್ಚುಕಟ್ಟು	ಪುನರ್ ಸ್ಥಾಪಿಸಲಾಗುವ/ ಸ್ಥಿರೀಕರಿಸುವ ಅಚ್ಚುಕಟ್ಟು	ಕಾಮಗಾರಿಯ ಸಂಕ್ಷಿಪ್ತ ವಿವರಗಳು
			ಅಂದಾಜು ಮೊತ್ತ	ಅನುದಾನ					
1	2	3	4	5	6	7	8	9	10
	ಲೆಕ್ಕ ಶೀರ್ಷಿಕೆ 4702–00–101–1–02–139 ಹೊಸ ಕೆರೆಗಳ ನಿರ್ಮಾಣ (ಪ್ರಧಾನ ಕಾಮಗಾರಿಗಳು								
1	ಧಾರವಾಡ ಜಿಲ್ಲೆ ಹಾಗೂ ತಾಲ್ಲೂಕಿನ ದೇವರ ಹುಬ್ಬಳ್ಳಿ (ನಾರಾಯಣ ಕೊಪ್ಪ) ಹತ್ತಿರ ಸ.ನೀ. ಕೆರೆ ನಿರ್ಮಾಣ	246.00	200.00	60.00	ಕೃಷ್ಣಾ	ಹೊಸ ಕಾಮಗಾರಿ	102		ಹೊಸ ಕೆರೆ ನಿರ್ಮಾಣ ಏರಿಯ ಉದ್ದ– 405.00ಮೀ ಎತ್ತರ–9.11ಮೀ., ಕೋಡಿಯ ಉದ್ದ– 15.00ಮೀ ಶೇಖರಣಾ ಸಾಮರ್ಥ್ಯ– 0.2642Mcum
	ಆದೇಶ ಸಂಖ್ಯೆ ಸನೀಇ 41 ಮಸಾವಿ 2009			13.80					

	(1) ದಿನಾಂಕ 02.03.2009 ರಲ್ಲಿ ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ								ಎಡದಂಡೆ ಕಾಲುವೆ ಉದ್ದ–870ಮೀ ಹಾಗೂ ಬಲದಂಡೆ ಕಾಲುವೆ ಉದ್ದ–930ಮೀ ಶೇ.10ರ ಬಡ್ಡಿದರದಲ್ಲಿ ಲಾಭ ವೆಚ್ಚದ ಅನುಪಾತ 1.09
	ಒಟ್ಟು	246.00	200.00	73.80					

ಕೆ. ಸುಧಾಕರ ಶೆಟ್ಟಿ

ಪಿ.ಆರ್. 1125 ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

PERSONNEL AND ADMINISTRATIVE REFORMS SECRETARIAT

Sub: Reconstitution of Departmental Promotion Committees.

Read:
1. Government Order No.DPAR 271 SAS 2000, dated 27-5-2000 & 21-12-2001.
2. Government of India Letter No.20011/4/92-AIS(II), dated 28-3-2000.
3. Government of India Notification No.11031/09/2008-AIS-II(A), dated 30-12-2008

PREAMBLE:

In Government Orders read at (1) above, Departmental Promotion Committees were constituted to screen the promotion of IAS officers to various grades of Pay of IAS, in light of the Government of India letter read at (2) above in which guidelines for promotion of IAS officers to various grades and for constitution of Departmental Promotion Committees for the said purpose were issued.

In the Government of India Notification read at (3) above, cadre strength of IAS officers in Karnataka was reviewed and the total authorized strength of Karnataka cadre was increased. The guidelines of Government of India was reviewed in this backdrop and the following orders are issued.

Government Order No. DPAR 93 SAS 2009, Bangalore, Dated: 20th MAY, 2009

In supersession of Government Order No.DPAR 271 SAS 2000, dated 27-5-2000 and 21-12-2001, Government are pleased to reconstitute the Departmental Promotion Committees to screen the IAS officers of Karnataka Cadre for promotion in the various grades of pay as follows :

I. Promotion in the grade of -

Senior Time Scale (Pay Band-3: Rs.15600-39100 Plus Grade Pay Rs. 6600)
Selection Grade (Pay Band-4: Rs.37400-67000 Plus Grade Pay Rs. 8700)
Supertime Scale (Pay Band-4: Rs.37100-67000 Plus Grade Pay Rs. 10000)

1	Chief Secretary to Government -	Chairman
2	Two officers working in the grade of Principal Secretary to State Government	Members

II. Promotion in the Grade of Above Supertime Scale
(Pay Band 4 – Rs.37400-67000 Plus Grade Pay Rs.12000)

1. Chief Secretary to Government	-	Chairman
2. Additional Chief Secretary to Government	-	Member
3. One senior officer in the grade of Principal Secretary to Government	-	Member

III. Promotion in the grade of Chief Secretary to Government (Rs.80000/- fixed)

1. Chief Secretary to Government	-	Chairman
2. Additional Chief Secretary to Government	-	Member
3. A senior officer in the Apex Scale on Central Deputation	-	Member

IV. Selection Committee as per IAS (Appointment by Promotion) Regulations, 1955 & IAS (Appointment by Selection) Regulations, 1997

1. Chief Secretary to Government - Chairman
2. Additional Chief Secretary - Member
3. Secretary to Government, DP&AR - Member

These order shall come in to force with immediate effect and will remain in force until further orders.

By order and in the name of the Governor of Karnataka,

K.G. ANANTHA

P.R. 1386

Under Secretary to Government,

Department of Personnel and Administrative Reforms (Services-I)

ಕಂದಾಯ ಸಚಿವಾಲಯ

ವಿಷಯ : ಶ್ರೀ ಟಿ. ಜವರೇಗೌಡ, ತಹಶೀಲ್ದಾರ್ ಗ್ರೇಡ್-2, ಪ್ರಸ್ತುತ ತಹಶೀಲ್ದಾರ್, ಕೆ.ಆರ್. ನಗರ ತಾಲ್ಲೂಕು ಇವರ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು.

ಓದಲಾಗಿದೆ : 1 ಸರ್ಕಾರದ ಅಧಿಸೂಚನೆ ಸಂ:ಕಂಇ 8 ಎಟಿಎಸ್ 2006, ದಿನಾಂಕ:15.4.2006

2. ಶ್ರೀ ಟಿ. ಜವರೇಗೌಡ, ಇವರ ಮನವಿ ದಿನಾಂಕ:7.10.2006.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1), ದಿನಾಂಕ:15.4.2006ರ ಅಧಿಸೂಚನೆಯಲ್ಲಿ, ಶ್ರೀ ಟಿ. ಜವರೇಗೌಡ ಇವರು ಕಂದಾಯ ಇಲಾಖೆಯ ತಹಶೀಲ್ದಾರ್ ಗುಂಪು-ಬಿ ಹುದ್ದೆಗೆ ನೇಮಕಾತಿಗೊಂಡಿರುತ್ತಾರೆ. ಸದರಿಯವರು ಈ ಹುದ್ದೆಗೆ, ಸೇರುವ ಪೂರ್ವದಲ್ಲಿ ಶಿಕ್ಷಣ ಇಲಾಖೆಯಲ್ಲಿ, ಸಹ ಶಿಕ್ಷಕರಾಗಿ ದಿನಾಂಕ:12.12.1994 ರಿಂದ 19.4.2006ರ ವರೆಗೆ ಸಲ್ಲಿಸಿದ ಸೇವೆಯನ್ನು ಪಿಂಚಣಿ ಮಂಜೂರಾತಿಗೆ ಪರಿಗಣಿಸಲು ಕೋರಿರುತ್ತಾರೆ. ಸದರಿಯವರು ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಇವರ ಜ್ಞಾಪನಾ ಸಂ:ಜಿ. 4. ಇಲಾಖಾ ಅನು. ಬಗ್ಗೆ. 05. 2006-07 ದಿನಾಂಕ:19.4.2006 ರನ್ವಯ ಶಿಕ್ಷಣ ಇಲಾಖೆಯಿಂದ ಬಿಡುಗಡೆ ಹೊಂದಿರುತ್ತಾರೆ. ಆದ್ದರಿಂದ ಸದರಿಯವರು ಶಿಕ್ಷಣ ಇಲಾಖೆಯಲ್ಲಿ ದಿನಾಂಕ:12.12.1994 ರಿಂದ 19.4.2006 ರವರೆಗೆ ಸೇವಾ ಅವಧಿಯನ್ನು ಪೂರೈಸಿದ್ದು, ಇವರ ಹಿಂದಿನ ಸೇವೆಯನ್ನು ಪರಿಗಣಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ಶ್ರೀ ಟಿ. ಜವರೇಗೌಡ ಇವರ ಮನವಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಸದರಿಯವರ ಮೂಲ ಸೇವಾ ಪುಸ್ತಕದಲ್ಲಿ ದಾಖಲಿಸಿರುವಂತೆ ಇವರು ಈ ಹಿಂದೆ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕರಾಗಿ ಸಲ್ಲಿಸಿದ್ದ ಸೇವೆ ದಿನಾಂಕ:12.12.1994 ರಿಂದ 19.4.2006 ರವರೆಗೆ ಸೇವಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224(ಎ) ರೀತ್ಯ ಪ್ರಸ್ತುತ ಹುದ್ದೆಯ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ:ಆರ್ ಡಿ 275 ಎಎಸ್ ಡಿ 2006, ಬೆಂಗಳೂರು, ದಿನಾಂಕ:30ನೇ ಮಾರ್ಚ್ 2009

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಟಿ. ಜವರೇಗೌಡ, ತಹಶೀಲ್ದಾರ್, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ ಇವರು ಕಂದಾಯ ಇಲಾಖೆಯ ಸೇವೆಗೆ ಸೇರುವ ಪೂರ್ವದಲ್ಲಿ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕರಾಗಿ ದಿನಾಂಕ:12.12.1994 ರಿಂದ 19.4.2006ರವರೆಗೆ ಸಲ್ಲಿಸಲಾಗಿರುವ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224(ಎ) ರೀತ್ಯ ಅವರ ಪ್ರಸ್ತುತ ತಹಶೀಲ್ದಾರ್ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ (ವೆಚ್ಚ7-) ರವರ ಟಿಪ್ಪಣಿ ಸಂ:ಆಇ 1683 ವೆಚ್ಚ-7/2008, ದಿನಾಂಕ:5.3.2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1101

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು-3),

ವಿಷಯ : ಶ್ರೀ ಸಿದ್ದಪ್ಪ ಹುಲ್ಲೋಳಿ ತಹಶೀಲ್ದಾರ್, ಗ್ರೇಡ್–2 ಪ್ರಸ್ತುತ ತಹಶೀಲ್ದಾರ್, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಇವರ ಹಿಂದಿನ ಸೇವೆಯನ್ನು ಪರಿಗಣಿಸುವ ಕುರಿತು.

ಓದಲಾಗಿದೆ : ಶ್ರೀ ಸಿದ್ದಪ್ಪ ಹುಲ್ಲೋಳಿ, ತಹಶೀಲ್ದಾರ್ ಇವರ ಮನವಿ ದಿನಾಂಕ:19.12.2006.

ಪ್ರಸ್ತಾವನೆ:

ಶ್ರೀ ಸಿದ್ದಪ್ಪ ಹುಲ್ಲೋಳಿ, ತಹಶೀಲ್ದಾರ್, ಇವರು ಮೇಲೆ ಓದಲಾದ ದಿನಾಂಕ:19.12.2006ರಲ್ಲಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ, ಸದರಿಯವರು ಹಿಂದೆ ಸರ್ಕಾರಿ ಪ್ರೌಢಶಾಲೆ, ಹರವಾಳ, ಜೇವರ್ಗಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ ಇಲ್ಲಿ ದಿನಾಂಕ:10.1.2004 ರಿಂದ ದಿನಾಂಕ:27.6.2006ರವರೆಗೆ ಸಹ ಶಿಕ್ಷಕರಾಗಿ ಸೇವೆ ಸಲ್ಲಿಸಿರುವುದರಿಂದ ಇವರ ಹಿಂದಿನ ಸೇವೆಯನ್ನು ನಿವೃತ್ತಿ ವೇತನದ ಸೌಲಭ್ಯಕ್ಕಾಗಿ ಪರಿಗಣಿಸುವಂತೆ ಕೋರಿರುತ್ತಾರೆ.

ಸದರಿ ಮನವಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಶ್ರೀಯುತರ ಸೇವಾ ಪುಸ್ತಕದಲ್ಲಿ ದಾಖಲಿಸಿರುವಂತೆ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕರಾಗಿ ಸಲ್ಲಿಸಿದ್ದ ದಿನಾಂಕ:10.1.2004 ರಿಂದ 27.6.2006ರ ವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224–ಎ ರೀತ್ಯ ಪ್ರಸ್ತುತ ಹುದ್ದೆಯ ನಿವೃತ್ತ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ನಿರ್ಧರಿಸಿದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂ:ಆರ್‌ಡಿ 42 ಎಎಸ್‌ಡಿ 2007, ಬೆಂಗಳೂರು, ದಿನಾಂಕ:30ನೇ ಮಾರ್ಚ್ 2009

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಸಿದ್ದಪ್ಪ ಹುಲ್ಲೋಳಿ, ತಹಶೀಲ್ದಾರ್, ಪ್ರಸ್ತುತ ತಹಶೀಲ್ದಾರ್, ಜಮಖಂಡಿ ತಾಲ್ಲೂಕು ಬಾಗಲಕೋಟೆ ಜಿಲ್ಲೆ, ಇವರು ತಹಶೀಲ್ದಾರ್ ಗುಂಪು–ಬಿ ಹುದ್ದೆಗೆ ಸೇರುವ ಪೂರ್ವದಲ್ಲಿ ಶಿಕ್ಷಣ ಇಲಾಖೆಯಲ್ಲಿ ಸಹ ಶಿಕ್ಷಕರಾಗಿ ದಿನಾಂಕ:10.1.2004 ರಿಂದ ದಿನಾಂಕ: 27.6.2006ರವರೆಗೆ ಸಲ್ಲಿಸಲಾಗಿದ್ದ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 224(ಎ) ರೀತ್ಯ ಅವರ ಪ್ರಸ್ತುತ ಹುದ್ದೆಯ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ (ವೆಚ್ಚ–7) ರವರ ಟಿಪ್ಪಣಿ ಸಂ:ಆಇ 16 ವೆಚ್ಚ–7/2008, ದಿನಾಂಕ:13.2.2008ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1102

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3),

ವಿಷಯ : ಬೆಂಗಳೂರು ನಗರ ಜಿಲ್ಲೆಯ 9 ಉಪ ನೋಂದಣಿ ಕಛೇರಿಗಳಿಗೆ ಲೀಸ್ ಲೈನ್ ಸಂಪರ್ಕ ಒದಗಿಸುವ ಬಗ್ಗೆ.

ಓದಲಾಗಿದೆ : ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ:Comp 18:2004–05, ದಿನಾಂಕ:30.9.2008/01.10.2008.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 30.9.2008/1.10.2008ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು ಬೆಂಗಳೂರು ನಗರ ಜಿಲ್ಲೆಯ 6 ಉಪ ನೋಂದಣಿ ಕಛೇರಿಗಳನ್ನು ವಿಭಜಿಸಿ ಹೊಸದಾಗಿ 9 ಉಪ ನೋಂದಣಿ ಕಛೇರಿಗಳನ್ನು ಅಂದರೆ 1) ಮಲ್ಲೇಶ್ವರಂ, 2) ಗಂಗಾನಗರ, 3) ಶಾಂತಿನಗರ, 4) ಬಿ.ಟಿ.ಎಂ. ಲೇಔಟ್, 5) ಚಾಮರಾಜಪೇಟೆ 6)ಯಶವಂತಪುರ, 7)ವಿಜಯನಗರ, 8)ಇಂದಿರಾನಗರ ಹಾಗೂ 9) ಹಲಸೂರು ಉಪ ನೋಂದಣಿ ಕಛೇರಿಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 46 ಮುನೋಸ 2007, ದಿನಾಂಕ:11.1.2008ರಲ್ಲಿ ಸೃಜಿಸಲಾಗಿದೆ.

ಉಪ ನೋಂದಣಿ ಕಛೇರಿಗಳಿಂದ XML ಜೆ–ಫಾರ್ಮಗಳನ್ನು ಆಯಾ ಜಿಲ್ಲಾ ನೋಂದಣಿ ಕಛೇರಿಗಳ ಮೂಲಕ ಎಸ್‌ಡಿಸಿಗೆ ರವಾನಿಸಲು ಹಾಗೂ ಬಿಡಿಎ ಉಪ ನೋಂದಣಿ ಕಛೇರಿಯಿಂದ ಕಳುಹಿಸಲ್ಪಡುವ ಮೆಮೊರ್‍ಯಾಂಡಮ್‌ಗಳನ್ನು ಸ್ವೀಕರಿಸಲು ಸದರಿ ಉಪ ನೋಂದಣಿ ಕಛೇರಿಗಳಿಗೆ ಸಂಪರ್ಕ ಜಾಲ ಸ್ಥಾಪಿಸುವುದು ಅತ್ಯವಶ್ಯವಿರುತ್ತದೆ. ಈಗಾಗಲೇ ಬೆಂಗಳೂರಿನ 39 ಉಪ ನೋಂದಣಿ/ಜಿಲ್ಲಾ ನೋಂದಣಿ ಕಛೇರಿಗಳಿಗೆ ಲೀಸ್‌ಲೈನ್ ಸಂಪರ್ಕ ಹಾಗೂ ಸೇವೆಯನ್ನು ಬಿಎಸ್ ಎನ್ ಎಲ್‌ರವರಿಂದ ಪಡೆದುಕೊಳ್ಳಲಾಗಿದೆ. ಒಂದೇ ಗುಣಮಟ್ಟದ ಸೇವೆ ಪಡೆಯಲು ಹಾಗೂ ಅದೇ ತಾಂತ್ರಿಕತೆಯ ಸಂಪರ್ಕ ಪಡೆಯುವುದಕ್ಕಾಗಿ ಈ 9 ಉಪ ನೋಂದಣಿ ಕಛೇರಿಗಳಿಗೆ ಲೀಸ್‌ಲೈನ್ ಸಂಪರ್ಕವನ್ನು ಬಿಎಸ್‌ಎನ್‌ಎಲ್ ರವರಿಂದ ಪಡೆಯುವುದು ಅತ್ಯವಶ್ಯವಿರುತ್ತದೆ. ಈ ರೀತಿಯಾಗಿ ಬಿಎಸ್‌ಎನ್‌ಎಲ್ ಇವರಿಂದಲೇ ಸೇವೆಯನ್ನು ಪಡೆಯಲು ತೀರ್ಮಾನಿಸಿದ ಸಂದರ್ಭದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ (4)ರಲ್ಲಿ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ಇರುತ್ತದೆ.

ಸದರಿ ಲೀಸ್‌ಲೈನ್ ಸಂಪರ್ಕ ಹಾಗೂ ಸೇವೆಯ ಚಾಲ್ತಿಯಲ್ಲಿರುವ ಇ-ಆಡಳಿತ ಯೋಜನೆಯ ಒಂದು ಭಾಗವಾಗಿರುವುದರಿಂದ ಸರ್ಕಾರಿ ಸುತ್ತೋಲೆ ಸಂಖ್ಯೆ:ಡಿಪಿಎಆರ್ 39 ಇಜಿವಿ 2004, ದಿನಾಂಕ:13.6.2005 ರನ್ವಯ Empowered Committee ಯಿಂದ ಅನುಮತಿ ಪಡೆಯುವ ಅವಶ್ಯಕತೆ ಇರುವುದಿಲ್ಲ ಸದರಿ ಲೀಸ್‌ಲೈನ್ ವೆಚ್ಚ, ನೆಟ್‌ವರ್ಕ್ ಕಾಂಪೋನೆಂಟ್ ವೆಚ್ಚ ಮತ್ತು ಬಿಎಸ್‌ಎನ್‌ಎಲ್ ಪ್ರಾಜೆಕ್ಟ್ ಮ್ಯಾನೇಜ್ ಮೆಂಟ್ ವೆಚ್ಚಗಳ ಕುರಿತಂತೆ ಮೆ:ಬಿಎಸ್‌ಎನ್‌ಎಲ್ ರವರು ಒಟ್ಟು ರೂ. 7,22,668/– ಗಳ ದರ ನೀಡಿರುತ್ತಾರೆ. ಈ ಹಿಂದೆ ಇದೇ ದರಗಳನ್ವಯ 23 ಉಪ ನೋಂದಣಿ ಕಛೇರಿಗಳಿಗೆ ಹೊಸದಾಗಿ ಲೀಸ್ ಲೈನ್ ಸಂಪರ್ಕ ಒದಗಿಸುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 46 ಮುನೋಸ 2007, ದಿನಾಂಕ:11.1.2008 ರಲ್ಲಿ ಆದೇಶ ನೀಡಲಾಗಿದ್ದು, ಅದರಂತೆ ಹೊಸದಾಗಿ ಸೃಜಿಸಲಾಗಿರುವ 9 ಉಪ ನೋಂದಣಿ ಕಛೇರಿಗಳಿಗೆ 64 ಕೆಬಿಪಿಎಸ್ ಲೀಸ್ ಲೈನ್ ಸಂಪರ್ಕ ಜಾಲ ಸ್ಥಾಪಿಸಲು ಅನುಮತಿ ನೀಡಲು ಹಾಗೂ ಈ ಸಂಬಂಧ ಒಟ್ಟು 7,22,668/– ರೂ.ಗಳ ವೆಚ್ಚವನ್ನು ಮೆ:ಬಿಎಸ್‌ಎನ್‌ಎಲ್ ರವರಿಗೆ ಪಾವತಿಸಲು ಆಡಳಿತಾತ್ಮಕ ಹಾಗೂ ಆರ್ಥಿಕ ಮಂಜೂರಾತಿ ನೀಡುವಂತೆ ಹಾಗೂ ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2030–03–001–2–04 Charges of Supply of Registered Documents-051-General Expenses ನಲ್ಲಿ ಭರಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 332 ಮುನೋಮು 2008, ಬೆಂಗಳೂರು, ದಿನಾಂಕ:26ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಹೊಸದಾಗಿ ಸೃಜಿಸಲಾಗಿರುವ 9 ಉಪ ನೋಂದಣಿ ಕಛೇರಿಗಳಿಗೆ 64 ಕೆಬಿಪಿಎಸ್ ಲೀಸ್‌ಲೈನ್ ಸಂಪರ್ಕ ಜಾಲವನ್ನು ಸ್ಥಾಪಿಸಲು ಆಡಳಿತಾತ್ಮಕ ಅನುಮತಿ ನೀಡಲಾಗಿದೆ.

ಸದರಿ ಯೋಜನೆಗೆ ತಗಲುವ ವೆಚ್ಚ ಒಟ್ಟು ರೂ. 7,22,668/–(ಏಳು ಲಕ್ಷದ ಇಪ್ಪತ್ತೆರಡು ಸಾವಿರದ ಆರು ನೂರ ಅರವತ್ತೆಂಟು ರೂಪಾಯಿಗಳು ಮಾತ್ರ) ಗಳನ್ನು ಮೆ:ಬಿಎಸ್‌ಎನ್‌ಎಲ್ ರವರಿಗೆ ಪಾವತಿಸಲು ಆರ್ಥಿಕ ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2030–03–001–2–04 Charges of Supply of Registered Documents-051-General Expenses ನಲ್ಲಿ ಭರಿಸುವುದು

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್ ಡಿ 1 ಟಿಎಫ್‌ಪಿ 1996, ದಿನಾಂಕ:10.7.1996ರಲ್ಲಿ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1103

ಟಿ.ಕೆ. ರಾಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ),

ವಿಷಯ : ಬಸವನಗುಡಿ ಉಪ ನೋಂದಣಿ ಕಛೇರಿ ಕಾರ್ಯ ನಿರ್ವಹಿಸಲು ಖಾಸಗಿ ಕಟ್ಟಡದ ಬಾಡಿಗೆಯನ್ನು ನಿಗಧಿಪಡಿಸುವ ಕುರಿತು.

ಓದಲಾಗಿದೆ : ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ:ಬಿಎಲ್ ಡಿ 38/2007–08, ದಿನಾಂಕ:27.9.2008/1.10.2008.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 27.9.2008/1.10.2008ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು ಸರ್ಕಾರವು ಅಧಿಕ ಕೆಲಸದ ಒತ್ತಡವಿರುವ ಉಪ ನೋಂದಣಿ ಕಛೇರಿಗಳನ್ನು ವಿಭಜಿಸಿದ್ದು, ಬಸವನಗುಡಿ ಕಛೇರಿಯನ್ನು ವಿಭಜಿಸಿ, ಚಾಮರಾಜಪೇಟೆ ಮತ್ತು ಬಸವನಗುಡಿ ಎಂದು ಎರಡು ಕಛೇರಿಗಳನ್ನು ಮಾಡಿದ್ದು, ವಿಭಜಿಸುವ ಪೂರ್ವದಲ್ಲಿ ಬಸವನಗುಡಿ ಕಛೇರಿಯು ಚಾಮರಾಜಪೇಟೆಯಲ್ಲಿರುವುದರಿಂದ, ವಿಭಜನೆಯ ನಂತರ ಕಛೇರಿಯು ಚಾಮರಾಜಪೇಟೆ ಕಛೇರಿಯಾಗಿರುತ್ತದೆ ಹಾಗೂ ಬಸವನಗುಡಿ ಕಛೇರಿಯನ್ನು ಹೊಸದಾಗಿ ಪ್ರಾರಂಭಿಸಬೇಕಾಯಿತು. ಈ ಸಂಬಂಧ ಬಸವನಗುಡಿ ಉಪ ನೋಂದಣಿ ಕಛೇರಿ ಕಾರ್ಯನಿರ್ವಹಿಸಲು ಶ್ರೀ ಧೀರೇಂದ್ರ ಎಸ್.ಎ. ಇವರ ಒಡೆತನಕ್ಕೆ ಸೇರಿದ ನಂ. (41) 52, 2ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬಸವನಗುಡಿ, ಬೆಂಗಳೂರು–19 ಇಲ್ಲಿನ ಖಾಸಗಿ ಕಟ್ಟಡವು ಕಛೇರಿ ಕಾರ್ಯನಿರ್ವಹಿಸಲು ಸೂಕ್ತವಾಗಿರುವುದಾಗಿ ಜಿಲ್ಲಾ ನೋಂದಣಾಧಿಕಾರಿಗಳು, ಬಸವನಗುಡಿ ನೋಂದಣಿ ಜಿಲ್ಲೆ ಇವರು ಶಿಫಾರಸ್ಸು ಮಾಡಿದ್ದು, ಸದರಿ ಕಛೇರಿಯನ್ನು ದಿನಾಂಕ:1.3.2008 ರಿಂದ ಸ್ವಾಧೀನಕ್ಕೆ ಪಡೆದು ಕಛೇರಿ ಕಾರ್ಯಗಳಿಗೆ ಉಪಯೋಗಿಸಲಾಗಿದೆ.

ಸದರಿ ಕಛೇರಿಗೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಚ.ಅಡಿಗೆ ರೂ. 11.76/–ರಂತೆ 1955.76 ಚ.ಅಡಿಗಳಿಗೆ ರೂ. 23,000/–ಬಾಡಿಗೆ ನಿಗಧಿಪಡಿಸಿ, ಬಾಡಿಗೆ ದೃಢೀಕರಣ ಪತ್ರ ನೀಡಿರುತ್ತಾರೆ. ಆದರೆ ಸದರಿ ಕಟ್ಟಡದ ಮಾಲೀಕರು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ನಿಗಧಿಪಡಿಸಿರುವ ಬಾಡಿಗೆ ತುಂಬಾ ಕಡಿಮೆ ಇರುವುದೆಂದು ಅದನ್ನು ಪರಿಷ್ಕರಿಸಲು ಕೋರಿರುವ ಹಿನ್ನೆಲೆಯಲ್ಲಿ ಉಪ ನೋಂದಣಾಧಿಕಾರಿಗಳು ಲೋಕೋಪಯೋಗಿ ಇಲಾಖೆ ಇವರಿಗೆ ಪರಿಷ್ಕೃತ ಬಾಡಿಗೆ ನಿರ್ಧರಿಸುವಂತೆ ಕೋರಿದ್ದು, ಅದರಂತೆ ಲೋಕೋಪಯೋಗಿ ಇಲಾಖೆಯವರು ಪ್ರತಿ ತಿಂಗಳ ಬಾಡಿಗೆ ರೂ. 24,450/– ಗಳಾಗುತ್ತದೆಂದು ದೃಢೀಕರಣ ನೀಡಿರುತ್ತಾರೆ. ಆದ್ದರಿಂದ ದಿನಾಂಕ:1.3.2008 ರಿಂದ ಜಾರಿಗೆ ಬರುವಂತೆ ಸದರಿ ಕಟ್ಟಡಕ್ಕೆ ಮಾಸಿಕ ರೂ. 24,450/– ಬಾಡಿಗೆ ನಿಗಧಿಪಡಿಸಿ ಹಾಗೂ ಸದರಿ ವೆಚ್ಚವನ್ನು 2008–09ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 2030–03–001–071ರಲ್ಲಿ ಈಗಾಗಲೇ ಇತರೆ ಕಟ್ಟಡಗಳಿಗೆ ಭರಿಸುವ ರೀತ್ಯಾ ವೆಚ್ಚ ಭರಿಸಬೇಕಾಗಿದ್ದು, ಅದರಂತೆ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ, ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 340 ಮುನೋಮು 2008, ಬೆಂಗಳೂರು, ದಿನಾಂಕ:24ನೇ ಮಾರ್ಚ್ 2009

ಬಸವನಗುಡಿ ಉಪ ನೋಂದಣಿ ಕಛೇರಿಯ ಕಾರ್ಯವನ್ನು ನಡೆಸಲು ಶ್ರೀ ಧೀರೇಂದ್ರ ಎಸ್.ಎ. ಬಸವನಗುಡಿ ಇವರ ಖಾಸಗಿ ಒಡೆತನದ ನಂ. (41) 52, 2ನೇ ಅಡ್ಡರಸ್ತೆ, ಎನ್.ಆರ್. ಕಾಲೋನಿ, ಬಸವನಗುಡಿ ಬೆಂಗಳೂರು–19 ಇಲ್ಲಿನ ಕಟ್ಟಡದ ಒಟ್ಟು 1955. 76ಚದರ ಅಡಿಯ ವಿಸ್ತೀರ್ಣದ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸಿರುವಂತೆ ಮಾಸಿಕ ಬಾಡಿಗೆ ರೂ. 24,450/– ಗಳನ್ನು (ಇಪ್ಪತ್ನಾಲ್ಕು ಸಾವಿರದ ನಾನೂರಾ ಐವತ್ತು ರೂಪಾಯಿಗಳು ಮಾತ್ರ) ನೀಡಲು ಸರ್ಕಾರವು ಅನುಮತಿ ನೀಡಿದೆ.

ಈ ವೆಚ್ಚವನ್ನು 'ಲೆಕ್ಕ ಶೀರ್ಷಿಕೆ 2030=03–001–071' ರಲ್ಲಿ ಭರಿಸಲು ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಕಂಇ 12992 ಐಎಫ್ಎ 09, ದಿನಾಂಕ:16.3.2009ರಲ್ಲಿ ನೀಡಿರುವ ಸಹಮತಿ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ ! ಟಿಎಫ್‌ಪಿ 1996 ದಿನಾಂಕ:10.7.1996 ರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1104

ಟಿ.ಕೆ. ರಾಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ),

ENERGY SECRETARIAT

CORRIGENDUM

No EN 391 NCE 2008, Bangalore, Dated:31st March, 2009

Sub: Sanction of interest free loans to ESCOMs towards purchase of power including Co-generation and Bio-mass units-Reg.

Ref: G.O.No. EN 391 NCE 2008 dated:11th March 2009,

The first para of the order portion in G.O.No. EN 391 NCE 2008 dated 11th March 2009 shall be substituted by the following:

"In the circumstances explained above, Government is pleased to release an amount of Rs .150 crores (Rupees One hundred fifty crores only) as interest free loan to the Karnataka Power Transmission Corporation Limited (KPTCL) towards purchase of power including Co-generation & Bio-mass units by Electricity Supply Companies (Escoms)under the head of account "6801-00-800-1-01-294 Loans (Non –plan)".

By order and in the name of the Governor of Karnataka

S.J. SAMPATH KUMAR

P.R. 1426

Under Secretary to Government

Energy Department

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ವನ್ಯ ಜೀವಿ ಪಶುವೈದ್ಯ ಔಷಧಿ ಘಟಕ ಸ್ಥಾಪಿಸುವ ಬಗ್ಗೆ.

ಓದಲಾಗಿದೆ : 1 ಕುಲಪತಿಗಳು, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ ಇವರ ಪತ್ರ ಸಂಖ್ಯೆ: VC/KVAFSU/IWVM2007 ದಿನಾಂಕ:2.3.2007.

2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ) ಇವರ ಪತ್ರ ಸಂಖ್ಯೆ ಬಿ/ಡಬ್ಲ್ಯೂಎಲ್/ಸಿಆರ್–58/2008–09 ದಿನಾಂಕ:5.1.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕುಲಪತಿಗಳು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ ಇವರು ಪ್ರಧಾನ ಕಾರ್ಯದರ್ಶಿಗಳು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರಿಗೆ ಬರೆದ ಪತ್ರದಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಚಕ್ರನಗರದಲ್ಲಿ ವನ್ಯಜೀವಿ ಪಶುವೈದ್ಯ ಔಷಧಿ ಘಟಕ ಸ್ಥಾಪಿಸಲು ಯೋಜನಾ ವರದಿ ಸಿದ್ದಪಡಿಸಿ ಪ್ರಸ್ತಾವನೆ ಸಲ್ಲಿಸಿದ್ದರ ಮೇರೆಗೆ ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಇವರು ಪ್ರಸ್ತಾವನೆ ಕುರಿತಂತೆ ಪರಿಶೀಲಿಸಲು ಈ ಕೆಳಗಿನಂತೆ ಒಂದು ಸಮಿತಿಯನ್ನು ರಚಿಸಲು ಕೋರಿರುತ್ತಾರೆ.

1	ಸರ್ಕಾರದ ಕಾರ್ಯದರ್ಶಿಗಳು (ಅರಣ್ಯ)	ಅಧ್ಯಕ್ಷರು
2	ನಿರ್ದೇಶಕರು ಪಶು ಸಂಗೋಪನಾ ಇಲಾಖೆ	ಸದಸ್ಯರು
3	ನಿರ್ದೇಶಕರು ಮೀನುಗಾರಿಕೆ ಇಲಾಖೆ	ಸದಸ್ಯರು
4	ನಿರ್ದೇಶಕರು ಪಶು ವೈದ್ಯ ನಿರ್ದೇಶನಾಲಯ ಹಾಗೂ ಭಾರತೀಯ ಪಶುವೈದ್ಯ ಸಂಶೋಧಾನಾ ಸಂಸ್ಥೆ	ಸದಸ್ಯರು
5	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)	ಸದಸ್ಯ ಕಾರ್ಯದರ್ಶಿ

ಆದ್ದರಿಂದ ಈ ಕೆಳಗಿನಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಅಪಜೀ 133 ಎಫ್‌ಡಬ್ಲ್ಯೂಎಲ್ 2007, ಬೆಂಗಳೂರು, ದಿನಾಂಕ:1ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಚಕ್ರನಗರ ಎಂಬಲ್ಲಿ ವನ್ಯಜೀವಿ ಪಶುವೈದ್ಯ ಔಷಧಿ ಘಟಕ ಸ್ಥಾಪಿಸುವ ಬಗ್ಗೆ ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಯವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲು ಈ ಕೆಳಕಂಡಂತೆ ಸಮಿತಿಯನ್ನು ರಚಿಸಲಾಗಿದೆ:

1	ಸರ್ಕಾರದ ಕಾರ್ಯದರ್ಶಿಗಳು (ಅರಣ್ಯ)	ಅಧ್ಯಕ್ಷರು
2	ನಿರ್ದೇಶಕರು ಪಶು ಸಂಗೋಪನಾ ಇಲಾಖೆ	ಸದಸ್ಯರು
3	ನಿರ್ದೇಶಕರು ಮೀನುಗಾರಿಕೆ ಇಲಾಖೆ	ಸದಸ್ಯರು
4	ನಿರ್ದೇಶಕರು ಪಶು ವೈದ್ಯ ನಿರ್ದೇಶನಾಲಯ ಹಾಗೂ ಭಾರತೀಯ ಪಶುವೈದ್ಯ ಸಂಶೋಧಾನಾ ಸಂಸ್ಥೆ	ಸದಸ್ಯರು
5	ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)	ಸದಸ್ಯ ಕಾರ್ಯದರ್ಶಿ

ಸದರಿ ಸಮಿತಿಯು ಪ್ರಸ್ತಾವನೆಯನ್ನು ಪರಿಶೀಲಿಸಿ ಮೂರು ತಿಂಗಳೊಳಗಾಗಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1109

ಎಸ್.ಪಿ. ಪಾಟೀಲ

ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಕಾರ್ಮಿಕ ಸಚಿವಾಲಯ

ವಿಷಯ : ಶ್ರೀ ಎಸ್.ಸಿ. ರಾಮಚಂದ್ರ, ಕಾರ್ಮಿಕ ಅಧಿಕಾರಿ, ಇವರು ಕಡ್ಡಾಯ ನಿರೀಕ್ಷಣೆಯಲ್ಲಿದ್ದ ಕಾರಣ ದಿನಾಂಕ:5.9.2007ರಿಂದ 2.10.2007ರ ವರೆಗಿನ ಅವಧಿಯನ್ನು ಕಡ್ಡಾಯ ನಿರೀಕ್ಷಣಾ ಅವಧಿಯೆಂದು ಪರಿಗಣಿಸುವ ಬಗ್ಗೆ– ಸರ್ಕಾರದ ಮಂಜೂರಾತಿ ಆದೇಶ.

ಓದಲಾಗಿದೆ : 1 ಸರ್ಕಾರದ ಅಧಿಸೂಚನೆ ಸಂಖ್ಯೆ:ಕಾಇ 109 ಎಲ್ಇಟಿ 2007, ದಿನಾಂಕ:30.8.2007.

2. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಾಇ 246 ಎಲ್ಇಟಿ 2007, ದಿನಾಂಕ:4.9.2007.

3 ಕಾರ್ಮಿಕ ಆಯುಕ್ತರು, ಬೆಂಗಳೂರು ಇವರ ಪತ್ರ ಸಂಖ್ಯೆ:ಜಿಜಡ್‌ಟಿ/ಸಿಆರ್–87/2007–08, ದಿನಾಂಕ:4.12.2007.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆ ದಿನಾಂಕ:30.8.2007ರಲ್ಲಿ ಮಂಗಳೂರಿನಲ್ಲಿ ಕಾರ್ಮಿಕ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಎಸ್.ಸಿ. ರಾಮಚಂದ್ರ ಇವರನ್ನು ದಾವಣಗೆರೆಗೆ ವರ್ಗಾವಣೆ ಮಾಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆ ದಿನಾಂಕ:4.9.2007ರಲ್ಲಿ ಶ್ರೀ ಎಸ್. ವಿಜಯ ಕುಮಾರ್, ಕಾರ್ಮಿಕ ಅಧಿಕಾರಿ, ಶಿವಮೊಗ್ಗ ಇವರನ್ನು ದಾವಣಗೆರೆಗೆ ಮತ್ತು ಶ್ರೀ ಎಸ್.ಸಿ. ರಾಮಚಂದ್ರ ಇವರನ್ನು ಶ್ರೀ ಎಸ್. ವಿಜಯಕುಮಾರ್, ಕಾರ್ಮಿಕ ಅಧಿಕಾರಿ, ಶಿವಮೊಗ್ಗ ಇವರ ಜಾಗಕ್ಕೆ ವರ್ಗಾವಣೆ ಮಾಡಿ ಆದೇಶಿಸಿದೆ.

ಸದರಿ ಅಧಿಸೂಚನೆಯ ವಿರುದ್ಧ ಶ್ರೀ ಎಸ್.ಸಿ. ರಾಮಚಂದ್ರ ಇವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:4239/2007ನ್ನು ಸಲ್ಲಿಸಿದ್ದು, ನ್ಯಾಯ ಮಂಡಳಿಯ ದಿನಾಂಕ:7.9.2007ರ ಆದೇಶದ ಅನುಸಾರವಾಗಿ ಅರ್ಜಿದಾರರು ದಿನಾಂಕ:11.9.2007ರಂದು ಇಲಾಖಾ ವೃಂದ ನಿರ್ವಹಣಾ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿರುತ್ತಾರೆ. ದಿನಾಂಕ:22.9.2007ರಂದು ನಡೆದ ಇಲಾಖಾ ವೃಂದ ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತಡೆಯಾಜ್ಞೆ ಇರುವುದರಿಂದ, ಶ್ರೀ ಎಸ್.ಸಿ. ರಾಮಚಂದ್ರರವರನ್ನು ದಾವಣಗೆರೆಯಲ್ಲೇ ಹಾಗೂ ಶ್ರೀ ಎಸ್. ವಿಜಯಕುಮಾರ್ ರವರನ್ನು ಶಿವಮೊಗ್ಗದಲ್ಲೇ ಮುಂದುವರೆಸಬೇಕಾಗುತ್ತದೆ. ಆದರೆ, ದಾವಣಗೆರೆಯ ಜಿಲ್ಲಾಧಿಕಾರಿಯವರು, ಶ್ರೀ ಎಸ್. ವಿಜಯಕುಮಾರ್ ರವರನ್ನು ಮಹಾನಗರ ಪಾಲಿಕೆಯ ಚುನಾವಣಾ ಕಾರ್ಯಕ್ಕೆ ನಿಯೋಜಿಸಿರುವುದರಿಂದ ಅವರನ್ನು ಶಿವಮೊಗ್ಗಕ್ಕೆ ಹಿಂತಿರುಗಿ ಕಳುಹಿಸುವ ಬಗ್ಗೆ ರಾಜ್ಯ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರನ್ನು ದಿನಾಂಕ:12.9.2007 ರಂದು ಸ್ಪಷ್ಟೀಕರಣ ಕೇಳಲಾಯಿತು ಹಾಗೂ ಅವರು ನೀಡಿದ ಸ್ಪಷ್ಟೀಕರಣದ ಅನ್ವಯ, ಶ್ರೀ ಎಸ್.ಸಿ. ರಾಮಚಂದ್ರರವರು ದಿನಾಂಕ:1.10.2007ರ ನಂತರ ದಾವಣಗೆರೆಯ ಕಾರ್ಮಿಕ ಅಧಿಕಾರಿ ಕರ್ತವ್ಯವನ್ನು ವಹಿಸಿಕೊಳ್ಳುವಂತೆ ಹಾಗೂ ಶ್ರೀ ಎಸ್. ವಿಜಯಕುಮಾರ್ ರವರು ದಿನಾಂಕ:1.10.2007ರ ನಂತರ ಶಿವಮೊಗ್ಗಕ್ಕೆ ಹಿಂತೆರಳಲು ಕಾರ್ಮಿಕ ಆಯುಕ್ತರು ತಮ್ಮ ಕಛೇರಿಯ ದಿನಾಂಕ:18.9.2007ರ ಹಿಂಬರಹದಲ್ಲಿ ಸೂಚಿಸಿರುತ್ತಾರೆ.

ಶ್ರೀ ಎಸ್.ಸಿ. ರಾಮಚಂದ್ರ ಇವರು ಕಡ್ಡಾಯ ನಿರೀಕ್ಷಣೆಯಲ್ಲಿದ್ದ ಕಾರಣ, ದಿನಾಂಕ:5.9.2007 ರಿಂದ 2.10.2007ರ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 8(15)(f) ರಲ್ಲಿ ನೀಡಿರುವ ಅವಕಾಶದಂತೆ 'Duty Period ಅಥವಾ 'Compulsory Waiting Period' ಎಂದು ಪರಿಗಣಿಸಿ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕಾರ್ಮಿಕ ಆಯುಕ್ತರು ಕೋರಿರುತ್ತಾರೆ.

ಈ ವಿಷಯವನ್ನು ಸರ್ಕಾರವು ಪರಿಶೀಲಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಾಇ 337 ಎಲ್‌ಇಟಿ 2007, ಬೆಂಗಳೂರು, ದಿನಾಂಕ:30ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಶ್ರೀ ಎಸ್.ಸಿ. ರಾಮಚಂದ್ರ, ಕಾರ್ಮಿಕ ಅಧಿಕಾರಿ, ಇವರ ದಿನಾಂಕ:5.9.2007 ರಿಂದ 2.10.2007ರ ವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 8(15)(f) ರ ಪ್ರಕಾರ ಕಡ್ಡಾಯ ನಿರೀಕ್ಷಣಾ ಅವಧಿಯೆಂದು ಪರಿಗಣಿಸಿ ಆದೇಶಿಸಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ:ಸಕಕಾ 154 ಆಂಆಸ 2008, ದಿನಾಂಕ:6.2.2009ರ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1110

ಯು.ಎನ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ತಾತ್ಕಾಲಿಕ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ : 1 ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 267 ಸಆಸೇ 2008, ದಿನಾಂಕ:9–7–2008 ಮತ್ತು ಸಮಸಂಖ್ಯೆಯ ತಿದ್ದೋಲೆ ದಿನಾಂಕ:29.7.2008.

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಪತ್ರ ಸಂಖ್ಯೆ:ಐಟಿಡಿ 16 ಡಿಐಎಸ್ 2009, ದಿನಾಂಕ:2.3.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:9.7.2008ರ ಸರ್ಕಾರಿ ಆದೇಶ ಹಾಗೂ ತಿದ್ದೋಲೆ ದಿನಾಂಕ:29.7.2008ರಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ:1.4.2008ರಿಂದ ಒಂದು ವರ್ಷದವರೆಗೆ ತಾತ್ಕಾಲಿಕವಾಗಿ ಮುಂದುವರಿಸಲಾಗಿದ್ದು, ಸದರಿ ಹುದ್ದೆಗಳನ್ನು ದಿನಾಂಕ:1.4.2009 ರಿಂದ 31.3.2010 ರವರೆಗೆ ಮುಂದುವರಿಸುವಂತೆ ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಮೂಲ ಸೌಲಭ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕೋರಿದ್ದಾರೆ, ಅದರಂತೆ ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

1	ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ	1 ಹುದ್ದೆ
2	ವಿಶೇಷ ಕರ್ತವ್ಯಾಧಿಕಾರಿ (ವೇತನ ಶ್ರೇಣಿ ರಹಿತ)	1 ಹುದ್ದೆ
3	ಉಪ ಕಾರ್ಯದರ್ಶಿ	1 ಹುದ್ದೆ
4	ಆರ್ಥಿಕ ಸಲಹೆಗಾರರು (ವೇತನ ಶ್ರೇಣಿ ರಹಿತ)	1 ಹುದ್ದೆ
5	ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ	1 ಹುದ್ದೆ
6	ಶಾಖಾಧಿಕಾರಿ	1 ಹುದ್ದೆ
7	ಪತ್ರಾಂಕಿತ ಆಪ್ತ ಸಹಾಯಕರು	1 ಹುದ್ದೆ
8	ಹಿರಿಯ ಸಹಾಯಕರು/ಶೀಘ್ರಲಿಪಿಗಾರರು	3 ಹುದ್ದೆಗಳು
9	ಕಿರಿಯ ಸಹಾಯಕರು	1 ಹುದ್ದೆ
10	ದಲಾಯತ್	3 ಹುದ್ದೆಗಳು
11	ಚಾಲಕರು	2 ಹುದ್ದೆಗಳು
	ಒಟ್ಟು	**16 ಹುದ್ದೆಗಳು**

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 138 ಸಅಸೇ 2009, ಬೆಂಗಳೂರು, ದಿನಾಂಕ:20ನೇ ಮಾರ್ಚ್ 2009

ಕರ್ನಾಟಕ ಸರ್ಕಾರದ ಸಚಿವಾಲಯದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ:1.4.2009 ರಿಂದ 1 ವರ್ಷದ ಅವಧಿಯವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಿ ಆದೇಶಿಸುತ್ತದೆ.

1	ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ	1 ಹುದ್ದೆ
2	ವಿಶೇಷ ಕರ್ತವ್ಯಾಧಿಕಾರಿ (ವೇತನ ಶ್ರೇಣಿ ರಹಿತ)	1 ಹುದ್ದೆ
3	ಉಪ ಕಾರ್ಯದರ್ಶಿ	1 ಹುದ್ದೆ
4	ಆರ್ಥಿಕ ಸಲಹೆಗಾರರು (ವೇತನ ಶ್ರೇಣಿ ರಹಿತ)	1 ಹುದ್ದೆ
5	ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ	1 ಹುದ್ದೆ
6	ಶಾಖಾಧಿಕಾರಿ	1 ಹುದ್ದೆ
7	ಪತ್ರಾಂಕಿತ ಆಪ್ತ ಸಹಾಯಕರು	1 ಹುದ್ದೆ
8	ಹಿರಿಯ ಸಹಾಯಕರು/ಶೀಘ್ರಲಿಪಿಗಾರರು	3 ಹುದ್ದೆಗಳು
9	ಕಿರಿಯ ಸಹಾಯಕರು	1 ಹುದ್ದೆ
10	ದಲಾಯತ್	3 ಹುದ್ದೆಗಳು
11	ಚಾಲಕರು	2 ಹುದ್ದೆಗಳು
	ಒಟ್ಟು	**16 ಹುದ್ದೆಗಳು**

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ:10.7.1996ರಲ್ಲಿ ಪ್ರತ್ಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1114

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ವಿಷಯ : ವಿವಿಧ ವರ್ಗಗಳ ಮಾರಾಟಗಾರರ ನಮೂದಿತ ಪಟ್ಟಿಯ ಕುರಿತು.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 7 ವಿಮಆ 2006, ಬೆಂಗಳೂರು ದಿನಾಂಕ:9.1.07

2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 74 ವಿಮಆ 2005, ಬೆಂಗಳೂರು, ದಿನಾಂಕ:5.1.09.

ಪ್ರಸ್ತಾವನೆ:

ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಗಣಕೀಕರಣಕ್ಕಾಗಿ ಅವಶ್ಯವಿರುವ ಗಣಕ ಯಂತ್ರಗಳು, ಪ್ರಿಂಟರ್ ಗಳು, ಅವುಗಳ ಪೂರಕ ಸಾಧನಗಳು, ವಿವಿಧ ತಂತ್ರಾಂಶಗಳು ತಂತ್ರಾಂಶ ಸಿದ್ಧಪಡಿಸುವ ನೆಟ್ ವರ್ಕಿಂಗ್, ಯು.ಪಿ.ಎಸ್. ತರಬೇತಿ, ವೆಬ್ ಡಿಸೈನಿಂಗ್, ಡೇಟಾ ಎಂಟ್ರಿ ಹಾಗೂ ವಾರ್ಷಿಕ ನಿರ್ವಹಣೆ ಮುಂತಾದ ಸಾಮಗ್ರಿ/ಸೇವೆಗಳನ್ನು ಪೂರೈಸುವುದಕ್ಕಾಗಿ ನಾನಾ ಸಂಸ್ಥೆಗಳನ್ನು ಸಂಕ್ಷಿಪ್ತಗೊಳಿಸಿ, ಮಾರಾಟಗಾರರ ಪಟ್ಟಿಗೆ (1)ರಲ್ಲಿ ಓದಲಾದ ಸರ್ಕಾರದ ಆದೇಶದ ಮೂಲಕ ಅನುಮೋದನೆ ನೀಡಲಾಗಿತ್ತು. ಸದರಿ ಪಟ್ಟಿಯಲ್ಲಿರುವ ಸಂಸ್ಥೆಗಳ ಸಿಂಧುತ್ವವು 31.12.2008ಗೆ ಕೊನೆಗೊಂಡಿರುತ್ತದೆ. 2009–2010 ನೇ ಸಾಲಿಗೆ ಹೊಸ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆ ಅಂತಿಮವಾಗಿದ್ದಿಲ್ಲವಾದ್ದರಿಂದ, ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ಚಾಲ್ತಿಯಲ್ಲಿದ್ದ ಮಾರಾಟಗಾರರ ಪಟ್ಟಿಯ ಸಿಂಧುತ್ವವನ್ನು 31.3.2009ರವರೆಗೆ ವಿಸ್ತರಿಸಲಾಗಿತ್ತು. ಆದರೆ ಹೊಸ ಪಟ್ಟಿ ಸಿದ್ಧಪಡಿಸುವ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲವಾದ್ದರಿಂದ ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ಚಾಲ್ತಿಯಲ್ಲಿದ್ದ ಮಾರಾಟಗಾರರ ಪಟ್ಟಿಯ ಸಿಂಧುತ್ವವನ್ನು 31.7.2009ರವರೆಗೆ ಅಥವಾ ಹೊಸ ಪಟ್ಟಿ ಸಿದ್ದಗೊಳ್ಳುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸುವುದು ಅವಶ್ಯವಾಗಿದೆ. ಅದರಂತೆ ಕೆಳಕಾಣಿಸಿದ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 74 ವಿಮಆ 2005, ಬೆಂಗಳೂರು, ದಿನಾಂಕ:31ನೇ ಮಾರ್ಚ್ 2009

ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಗಣಕೀಕರಣಕ್ಕಾಗಿ ಅವಶ್ಯವಿರುವ ಗಣಕ ಯಂತ್ರಗಳು, ಪ್ರಿಂಟರ್‌ಗಳು, ಅವುಗಳ ಪೂರಕ ಸಾಧನಗಳು, ವಿವಿಧ ತಂತ್ರಾಂಶಗಳು, ತಂತ್ರಾಂಶ ಸಿದ್ದಪಡಿಸುವ ನೆಟ್ ವರ್ಕಿಂಗ್, ಯು.ಪಿ.ಎಸ್ ತರಬೇತಿ, ವೆಬ್ ಡಿಸೈನಿಂಗ್, ಡೇಟಾ ಎಂಟ್ರಿ ಹಾಗೂ ವಾರ್ಷಿಕ ನಿರ್ವಹಣೆ ಮುಂತಾದ ಸಾಮಗ್ರಿ/ಸೇವೆಗಳನ್ನು ಪೂರೈಸುವುದಕ್ಕಾಗಿ ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿನ ಸಂಸ್ಥೆಗಳ ಸಿಂಧುತ್ವವನ್ನು ದಿನಾಂಕ:31.7.2009ರವರೆಗೆ ಅಥವಾ ಹೊಸ ಪಟ್ಟಿ ಸಿದ್ದಗೊಳ್ಳುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1115

ಚಂದ್ರಶೇಖರ್

ಪೀಠಾಧಿಕಾರಿ, ಇ–ಆಡಳಿತ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಸು)

ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವಾಲಯ

ವಿಷಯ : 2008–09ನೇ ಸಾಲಿನ ಶಾಸನಬದ್ದ ಅನುದಾನದ ನಾಲ್ಕನೇ (ಅಂತಿಮ) ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1 ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 129 ಗ್ರಾಪಂಕಾ 2002(3) ದಿನಾಂಕ:2.12.2003.

2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 234 ಗ್ರಾಪಂಅ 2007, ದಿನಾಂಕ:27.3.2008.

3. ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 363 ವೆಚ್ಚ–6/2008, ದಿನಾಂಕ:14.5.2008.

4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 168 ಗ್ರಾಪಂಅ 2008, ದಿನಾಂಕ:20.5.2008.

5. ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 112 ವೆಚ್ಚ–6/2008,. ದಿನಾಂಕ:6.8.2008.

6 ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 168 ಗ್ರಾಪಂಅ 2008, ದಿನಾಂಕ:8.8.2008.

7. ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 112 ವೆಚ್ಚ 6/2008, ದಿನಾಂಕ:2.12.2008

8. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 168 ಗ್ರಾಪಂಅ 2008, ದಿನಾಂಕ:11.12.2008.

9. ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 363 ವೆಚ್ಚ–6/2009, ದಿನಾಂಕ:6.2.2009.

10. ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ. ಗ್ರಾಅಪ 80 ಪಿಜಿಎಸ್ 09 ದಿನಾಂಕ:2.3.09

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾಗುವ ಸರ್ಕಾರದ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಶೀದಿ ಮೇಲೆ ಪಡೆದು ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ಆದೇಶಿಸಿದೆ.

2008-09ನೇ ಸಾಲಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಶಾಸನಬದ್ಧ ಅನುದಾನವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ 2515-00-198-1-07 (ಯೋಜನೆ) ಅಡಿ ಒಟ್ಟಾರೆ ರೂ. 34,219.61 ಲಕ್ಷಗಳನ್ನು ಒದಗಿಸಲಾಗಿದೆ. ಈ ಅನುದಾನದಿಂದ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ತಲಾ ರೂ. 6.00 ಲಕ್ಷಗಳು ಲಭ್ಯವಾಗುತ್ತದೆ. ಈ ಸಾಲಿನ 1,2 ಮತ್ತು 3 ನೇ ತ್ರೈಮಾಸಿಕ ವೆಚ್ಚಕ್ಕಾಗಿ ಪ್ರಸ್ತಾಪಿತ ಲೆಕ್ಕ ಶೀರ್ಷಿಕೆಯಿಂದ ತಲಾ ರೂ.. 8442.00 ಲಕ್ಷಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರಮ ಸಂಖ್ಯೆ (3) (5) ಮತ್ತು (7)ರಲ್ಲಿ ಸಹಮತಿ ನೀಡಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (4) (6) ಮತ್ತು (8)ರಲ್ಲಿ ತಿಳಿಸಿರುವ ಸರ್ಕಾರದ ಆದೇಶದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಪ್ರತಿ ಕಂತಿಗೆ ರೂ., 1.50 ಲಕ್ಷಗಳಂತೆ ಬಿಡುಗಡೆಗೊಳಿಸಿ, ಸಂಬಂಧಿಸಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಮೂಲಕ ಗ್ರಾಮ ಪಂಚಾಯಿತಿಗಳಿಗೆ ವಿತರಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (9) ರ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು 2008-09ನೇ ಸಾಲಿನ ಶಾಸನಬದ್ಧ ಅನುದಾನದ ನಾಲ್ಕನೇ (ಅಂತಿಮ) ಕಂತಾಗಿ ರೂ. 8442.00 ಲಕ್ಷಗಳನ್ನು ಬಿಡುಗಡೆ ಮಾಡಲು ಸಹಮತಿಸಿರುತ್ತದೆ. ಓದಲಾದ ಕ್ರಮ ಸಂಖ್ಯೆ:10 ರಲ್ಲಿ ಆಂತರಿಕ ಆರ್ಥಿಕ ಸಲಹೆಗಾರರು ನೀಡಿರುವ ಅಭಿಪ್ರಾಯದಲ್ಲಿ 3 ತ್ರೈಮಾಸಿಕಕ್ಕೆ ಬಿಡುಗಡೆ ಮಾಡಿರುವ ಅನುದಾನ ಹೊರತುಪಡಿಸಿ ಬಾಕಿ ಉಳಿದಿರುವ ಅನುದಾನವನ್ನು ಬಿಡುಗಡೆ ಮಾಡಲು ಹಾಗೂ ಜಿಲ್ಲಾವಾರು ಕೊರತೆ ಬೀಳುವ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-00-198-1-07 ರ ಉಪ ಲೆಕ್ಕಶೀರ್ಷಿಕೆ 300 ಅಡಿ ಒಟ್ಟು ಜಿಲ್ಲಾ ಪಂಚಾಯತ್ (Lumpsum-ZP) ನಲ್ಲಿ ಒದಗಿಸಿಕೊಳ್ಳುವಂತೆ ಸೂಚಿಸಲಾಗಿರುವುದರಿಂದ ಸದರಿ ಅನುದಾನವನ್ನು ಪ್ರಸ್ತುತ ರಾಜ್ಯದಲ್ಲಿರುವ 5628 ಗ್ರಾಮ ಪಂಚಾಯಿತಿಗಳಿಗೆ ಮೇಲೆ ಓದಲಾದ ಕ್ರಮಸಂಖ್ಯೆ (2) ರ ಸರ್ಕಾರದ ಆದೇಶದಂತೆ, ಶೇಕಡಾ 40 ರಷ್ಟನ್ನು ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವೇತನ ಮತ್ತು ಶೇಕಡಾ 60 ರಷ್ಟನ್ನು ಗ್ರಾಮ ಪಂಚಾಯಿತಿಗಳ ಜನವರಿ 2009 ರಿಂದ ಮಾರ್ಚ್ 2009ರ ಅವಧಿಯ ವಿದ್ಯುತ್ ಬಿಲ್ ಪಾವತಿಸಲು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮುಖಾಂತರ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 168 ಗ್ರಾಪಂಅ 2008, ಬೆಂಗಳೂರು, ದಿನಾಂಕ:5ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2008-09ನೇ ಸಾಲಿನ ಶಾಸನಬದ್ಧ ಅನುದಾನದ ನಾಲ್ಕನೇ (ಅಂತಿಮ) ತ್ರೈಮಾಸಿಕ ಕಂತಿನ ಮೊತ್ತ ರೂ. 8442.00 ಲಕ್ಷಗಳನ್ನು (ಎಂಭತ್ತನಾಲ್ಕು ಕೋಟಿ ನಲವತ್ತೆರಡು ಲಕ್ಷ ರೂಪಾಯಿಗಳು ಮಾತ್ರ) ಲೆಕ್ಕ ಶೀರ್ಷಿಕೆ 2515-00-198-1-07 (ಯೋಜನೆ) ಮತ್ತು ಸದರಿ ಲೆಕ್ಕ ಶೀರ್ಷಿಕೆಯ ಉಪಲೆಕ್ಕಶೀರ್ಷಿಕೆ 300ರ ಅಡಿಯಲ್ಲಿ ಬಿಡುಗಡೆ ಮಾಡಿ ಆದೇಶಿಸಿದೆ. ಈ ಅನುದಾನದ ಮೊತ್ತವನ್ನು ಪೇಯೀಸ್ ರಸೀದಿಯ ಮೇಲೆ ಪಡೆದು ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಶಾಖೆ, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು, ಇಲ್ಲಿ ತೆರೆದಿರುವ ಖಾತೆಯ ಮುಖಾಂತರ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಲಾ ರೂ. 1.50 ಲಕ್ಷದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿನ ಷರತ್ತುಗಳನ್ವಯ ಪಾಲಿಸುವ ನಿಬಂಧನೆಗೆ ಒಳಪಟ್ಟು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮುಖಾಂತರ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಆದೇಶವನ್ನು ಟಿಪ್ಪಣಿ ಸಂಖ್ಯೆ:ಆಇ 363 ವೆಚ್ಚ-6/2009, ದಿನಾಂಕ:6.2.2009 ರಲ್ಲಿ ಆರ್ಥಿಕ ಇಲಾಖೆಯು ಮತ್ತು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ ಗ್ರಾಅಪ 80 ಪಿಬಿಎಸ್ 2009 ದಿನಾಂಕ:2.3.2009ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1116

ಸ್ವರ್ಣಲತ ಎಂ. ಭಂಡಾರೆ

ಸರ್ಕಾರದ ಅಧೀನ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

ತಿದ್ದುಪಡಿ

ಸಂಖ್ಯೆ:ಗ್ರಾಅಪ 32 ಎಸ್ ಜೆವೈ 2008, ಬೆಂಗಳೂರು, ದಿನಾಂಕ:28ನೇ ಮಾರ್ಚ್ 2009

ಸರ್ಕಾರದ ಆದೇಶ ಸಮಸಂಖ್ಯೆ ದಿನಾಂಕ:26.3.2009ರ ಅನುಬಂಧ (ಅ) ರಲ್ಲಿ ಬೆಂಗಳೂರು ನಗರ ರೂ 2,77,000, ಗುಲ್ಬರ್ಗಾ ರೂ. 7,33,000, ಹಾವೇರಿ ರೂ. 4,14,000 ಶಿವಮೊಗ್ಗ ರೂ. 4,60,000 ಮತ್ತು ಉತ್ತರ ಕನ್ನಡ ರೂ. 14.24,000 ಗಳನ್ನು ಬಿಡುಗಡೆ ಮಾಡಲಾಗಿದ್ದರ ಬದಲಿಗೆ.

1	ಬೆಂಗಳೂರು ನಗರ	2,76,000
2	ಗುಲ್ಬರ್ಗಾ	7,32,000
3	ಹಾವೇರಿ	4,13,000

4	ಶಿವಮೊಗ್ಗ	4,59,000
5	ಉತ್ತರ ಕನ್ನಡ	6,45,000

ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1117

ಡಾ:ಶಮ್ಲಾ ಇಕ್ಬಾಲ್
ನಿರ್ದೇಶಕರು (ಸ್ವ ಉಕಾ) ಹಾಗೂ
ಪ.ನಿ ಸರ್ಕಾರದ ಉಪ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

ಕಂದಾಯ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆಯಲ್ಲಿನ ತುಂಗಾ ಮೇಲ್ದಂಡೆ ಯೋಜನೆ ಮತ್ತು ದಂಡಾವತಿ ಯೋಜನೆಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ ಪುನರ್ವಸತಿ ಸಲಹಾ ಸಮಿತಿಯನ್ನು ಪುನರ್ ರಚನೆ ಮಾಡುವ ಬಗ್ಗೆ

ಓದಲಾಗಿದೆ : 1 ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 59 ಆರ್ ಇಹೆಚ್ 04, ದಿನಾಂಕ 2.8.2005

2. ಜಲಸಂಪನ್ಮೂಲ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಜಸಂಇ 27 ವಿಬ್ಯಾತ 2008, ದಿನಾಂಕ:5.12.2008.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬರುವ ತುಂಗಾ ಮೇಲ್ದಂಡೆ ಮತ್ತು ದಂಡಾವತಿ ಯೋಜನೆಗಳ ಸಂತ್ರಸ್ಥರಿಗೆ ಸಂಬಂಧಿಸಿದಂತೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಸೌಲಭ್ಯಗಳನ್ನು ಒದಗಿಸಲು ಜಿಲ್ಲಾ ಮಟ್ಟದ ಪುನರ್ವಸತಿ ಸಲಹಾ ಸಮಿತಿಯನ್ನು ರಚನೆ ಮಾಡಲಾಗಿದೆ.

2) ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ತುಂಗಾ ಮೇಲ್ದಂಡೆ ಯೋಜನೆಯ ಪುನರ್ವಸತಿ ಸಲಹಾ ಸಮಿತಿಯನ್ನು ಪುನರ್ ರಚಿಸುವಂತೆ ಕೋರಿ ಜಲ ಸಂಪನ್ಮೂಲ ಇಲಾಖೆಯು ಪ್ರಸ್ತಾವನೆ ಸಲ್ಲಿಸಿರುತ್ತದೆ.

3) ಪ್ರಸ್ತಾವನೆಯನ್ನು ಪರಿಶೀಲಿಸಿ ಪುನರ್ವಸತಿ ಸಲಹಾ ಸಮಿತಿಯನ್ನು ರಚಿಸುವ ಅಗತ್ಯತೆಯನ್ನು ಮನಗಂಡು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 47 ಆರ್‌ಇಹೆಚ್ 2009, ಬೆಂಗಳೂರು, ದಿನಾಂಕ:28ನೇ ಫೆಬ್ರವರಿ 2009

ಸರ್ಕಾರವು ಶಿವಮೊಗ್ಗ ಜಿಲ್ಲೆಯಲ್ಲಿ ಬರುವ ತುಂಗಾ ಮೇಲ್ದಂಡೆ ಯೋಜನೆ ಮತ್ತು ದಂಡಾವತಿ ಯೋಜನೆಗಳ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ದಿನಾಂಕ:20.8.2005 ಅಧಿಸೂಚನೆ ಸಂಖ್ಯೆ:ಕಂಇ 59 ಆರ್ ಇಹೆಚ್ 2004ರಲ್ಲಿ ರಚಿಸಲಾಗಿದ್ದ ಜಿಲ್ಲಾ ಮಟ್ಟದ ಪುನರ್ವಸತಿ ಸಲಹಾ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚನೆ ಮಾಡಿ ಆದೇಶಿಸಿದೆ.

ಕ್ರ.ಸಂ	ಸದಸ್ಯರ ಹೆಸರು ಮತ್ತು ಅವರ ಹುದ್ದೆ **ಅಧಿಕಾರೇತರ ಸದಸ್ಯರು**	ಪದನಾಮ
1	ಶ್ರೀ ಬಿ.ಎಸ್. ಯಡಿಯೂರಪ್ಪ, ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಶಾಸಕರು, ಶಿಕಾರಿಪುರ ವಿಧಾನಸಭಾ ಮತಕ್ಷೇತ್ರ	ಅಧ್ಯಕ್ಷರು
2	ಶ್ರೀ ಕೆ.ಎಸ್. ಈಶ್ವರಪ್ಪ ಮಾನ್ಯ ಇಂಧನ ಸಚಿವರು ಹಾಗೂ ಶಾಸಕರು, ಶಿವಮೊಗ್ಗ ವಿಧಾನಸಭಾ ಮತ ಕ್ಷೇತ್ರ	ಸದಸ್ಯರು
3	ಶ್ರೀ ಹೆಚ್. ಹಾಲಪ್ಪ ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು ಹಾಗೂ ಶಾಸಕರು, ಸೊರಬ ವಿಧಾನಸಭಾ ಮತ ಕ್ಷೇತ್ರ	ಸದಸ್ಯರು
4	ಶ್ರೀ ಎಸ್. ಬಂಗಾರಪ್ಪ ಲೋಕಸಭಾ ಸದಸ್ಯರು, ಶಿವಮೊಗ್ಗ ಲೋಕಸಭಾ ಮತ ಕ್ಷೇತ್ರ	ಸದಸ್ಯರು
5	ಲೋಕಸಭಾ ಸದಸ್ಯರು, ಚಿಕ್ಕಮಗಳೂರು ಲೋಕಸಭಾ ಮತ ಕ್ಷೇತ್ರ	ಸದಸ್ಯರು
6	ಶ್ರೀ ಬಿ.ಕೆ. ಸಂಗಮೇಶ್ವರ, ಶಾಸಕರು, ಭದ್ರಾವತಿ ವಿಧಾನಸಭಾ ಮತ ಕ್ಷೇತ್ರ	ಸದಸ್ಯರು
7	ಶ್ರೀ ಕೆ.ಜಿ. ಕುಮಾರಸ್ವಾಮಿ, ಶಾಸಕರು ಶಿವಮೊಗ್ಗ ಗ್ರಾಮೀಣ ವಿಧಾನಸಭಾ ಮತ ಕ್ಷೇತ್ರ	ಸದಸ್ಯರು
8	ಶ್ರೀ ಬಿ.ಕೆ. ಗೋಪಾಲಕೃಷ್ಣ ಬೇಳೂರು, ಶಾಸಕರು, ಸಾಗರ ವಿಧಾನಸಭಾ ಮತ ಕ್ಷೇತ್ರ	ಸದಸ್ಯರು
9	ಶ್ರೀ ಕಿಮ್ಮನೆ ರತ್ನಾಕರ, ಶಾಸಕರು, ತೀರ್ಥಹಳ್ಳಿ, ವಿಧಾನಸಭಾ ಮತ ಕ್ಷೇತ್ರ	ಸದಸ್ಯರು
10	ಶ್ರೀ ಡಿ.ಹೆಚ್. ಶಂಕರಮೂರ್ತಿ, ವಿಧಾನಪರಿಷತ್ ಸದಸ್ಯರು	ಸದಸ್ಯರು

11	ಶ್ರೀ ಅಜೀಜ್ ಅಹ್ಮದ್, ವಿಧಾನಪರಿಷತ್ ಸದಸ್ಯರು	ಸದಸ್ಯರು
	ಅಧಿಕಾರಿ ಸದಸ್ಯರು	
12	ಮುಖ್ಯ ಅಭಿಯಂತರರು, ತುಂಗಾ ಮೇಲ್ದಂಡೆ ಯೋಜನಾವಲಯ, ಶಿವಮೊಗ್ಗ	ಸದಸ್ಯರು
13	ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಜಿಲ್ಲೆ	ಸದಸ್ಯರು
14	ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಶಿವಮೊಗ್ಗ	ಸದಸ್ಯರು
15	ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ವಿದ್ಯುತ್ ವಿತರಣಾ ನಿಗಮ ನಿಯಮಿತ ಶಿವಮೊಗ್ಗ	ಸದಸ್ಯರು
16	ಉಪ ವಿಭಾಗಾಧಿಕಾರಿ, ಶಿವಮೊಗ್ಗ	ಸದಸ್ಯರು
17	ಉಪ ನಿರ್ದೇಶಕರು, ಕೃಷಿ ಇಲಾಖೆ, ಶಿವಮೊಗ್ಗ	ಸದಸ್ಯರು
18	ವಿಶೇಷ ಭೂ ಸ್ವಾಧೀನಾಧಿಕಾರಿ, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ	ಸದಸ್ಯರು
19	ತಹಶೀಲ್ದಾರ ತೀರ್ಥಹಳ್ಳಿ	ಸದಸ್ಯರು
20	ತಹಶೀಲ್ದಾರ, ಸೊರಬ	ಸದಸ್ಯರು
21	ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1119

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂಸ್ವಾ–2 ಮತ್ತು ಪುನರ್ವಸತಿ)

ವಿಷಯ : ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ 2007–08ರ ವಾಸ್ತವಿಕ ಆಯವ್ಯಯ ಪತ್ರ ಮತ್ತು 2008–09ನೇ ಸಾಲಿನ ಅಂದಾಜು ಆಯವ್ಯಯ ಪತ್ರಕ್ಕೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಇವರ ಪತ್ರ ಸಂಖ್ಯೆ:ಆ/ಕೂಸಅಮ/ಆಯವ್ಯಯ/2008–09/463, ದಿನಾಂಕ:31.1.2009 ಇದರೊಂದಿಗೆ ಅಂತ್ಯಗೊಂಡ ಪತ್ರ ವ್ಯವಹಾರ .

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:31.1.2009ರ ಪತ್ರದಲ್ಲಿ ಆಯುಕ್ತರು, ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ 2007–08ರ ವಾಸ್ತವಿಕ ಆಯವ್ಯಯ ಪತ್ರ ಮತ್ತು 2008–09ನೇ ಸಾಲಿನ ಅಂದಾಜು ಆಯವ್ಯಯ ಪತ್ರಗಳಿಗೆ ಸರ್ಕಾರದ ಅನುಮೋದನೆ ಕೋರಿರುತ್ತಾರೆ. ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತಿವೆ.

ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ 2007–08ನೇ ಸಾಲಿನ ಆಯವ್ಯಯ (ವಾಸ್ತವಿಕ)

(ರೂಪಾಯಿ ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಪ್ರಾರಂಭದ ಶಿಲ್ಕು	ಆದಾಯ	ಒಟ್ಟು	ವೆಚ್ಚ	ಉಳಿತಾಯ
1	ಶ್ರೀ ಕೂಡಲ ಸಂಗಮೇಶ್ವರ ದೇವಸ್ಥಾನ ಖಾತೆ	133.75	97.18	230.93	68.96	161.97
2	ಶ್ರೀ ಬಸವೇಶ್ವರ ದೇವಸ್ಥಾನ, ಬಸವನಬಾಗೇವಾಡಿ ಖಾತೆ	44.87	35.37	80.24	31.98	48.26
3	ಕಾಮಗಾರಿಗಳ ಖಾತೆ	429.00	797.01	1226.01	247.62	978.39
4	ಸಿಬ್ಬಂದಿ ಖಾತೆ	28.34	24.20	52.54	18.70	33.84
	ಒಟ್ಟು	635.96	953.76	1589.72	367.26	1222.46

ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ 2008–09ನೇ ಸಾಲಿನ ಆಯವ್ಯಯ (ಅಂದಾಜು)

(ರೂಪಾಯಿ ಲಕ್ಷಗಳಲ್ಲಿ)

ಕ್ರ.ಸಂ	ವಿವರಗಳು	ಪ್ರಾರಂಭದ ಶಿಲ್ಕು	ಆದಾಯ	ಒಟ್ಟು	ವೆಚ್ಚ	ಉಳಿತಾಯ
1	ಶ್ರೀ ಕೂಡಲ ಸಂಗಮೇಶ್ವರ ದೇವಸ್ಥಾನ ಖಾತೆ	161.97	102.01	263.98	98.25	165.73
2	ಶ್ರೀ ಬಸವೇಶ್ವರ ದೇವಸ್ಥಾನ, ಬಸವನಬಾಗೇವಾಡಿ ಖಾತೆ	48.26	44.64	92.90	46.53	46.37
3	ಕಾಮಗಾರಿಗಳ ಖಾತೆ	978.39	118.80	1097.19	846.39	250.80
4	ಸಿಬ್ಬಂದಿ ಖಾತೆ	33.84	24.73	58.57	37.62	20.95
	ಒಟ್ಟು	1222.46	290.18	1512.64	1028.79	483.85

2) ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ, 1994ರ ಕಲಂ 26 (1) ಮತ್ತು (2)ರ ಪ್ರಕಾರ ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ ಆಯವ್ಯಯಕ್ಕೆ ಸರ್ಕಾರದ ಅನುಮೋದನೆ ಅಗತ್ಯವಿರುತ್ತದೆ.

3) ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 54 ಆರ್‌ಇಹೆಚ್ 2009, ಬೆಂಗಳೂರು, ದಿನಾಂಕ:25ನೇ ಮಾರ್ಚ್ 2009

ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ ಈ ಕೆಳಕಂಡ ಆಯವ್ಯಯ ಪತ್ರಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

1) 2007–08ನೇ ಸಾಲಿಗೆ ಹಿಂದಿನ ವರ್ಷದ ಉಳಿತಾಯ ಮೊತ್ತ ರೂ. 635.96 ಲಕ್ಷ ಸೇರಿ ಒಟ್ಟಾರೆ ರೂ. 1,589. 72 ಲಕ್ಷದ ವಾಸ್ತವಿಕ ಆದಾಯ ಮತ್ತು ರೂ. 367.26 ಲಕ್ಷದ ವಾಸ್ತವಿಕ ವೆಚ್ಚದ ಆಯವ್ಯಯ ಪತ್ರ

2) 2008–09ನೇ ಸಾಲಿಗೆ ಹಿಂದಿನ ವರ್ಷದ ಉಳಿತಾಯ ರೂ., 1,222.46 ಲಕ್ಷ ಸೇರಿ ಒಟ್ಟಾರೆ ರೂ. 1512.64 ಲಕ್ಷದ ಅಂದಾಜು ಆದಾಯ ಮತ್ತು ರೂ. 1028.79 ಲಕ್ಷ ಅಂದಾಜು ವೆಚ್ಚದ ಆಯವ್ಯಯ ಪತ್ರ

2) ಈ ಆಯವ್ಯಯ ಪತ್ರಗಳಿಗೆ ನೀಡಿರುವ ಅನುಮೋದನೆಯನ್ನು ಯಾವುದೇ ವೆಚ್ಚಕ್ಕೆ ಅಥವಾ ಸ್ವೀಕೃತಿಗೆ ನೀಡಲಾಗಿರುವ ಅನುಮೋದನೆಯೆಂದು ಪರಿಗಣಿಸಬಾರದು.

3) ಮಂಡಳಿಯ ಲೆಕ್ಕಪತ್ರಗಳ ಬಗ್ಗೆ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ 1994ರ ಕಲಂ 27 ಮತ್ತು 28ರಂತೆ ಅಗತ್ಯ ಕ್ರಮ ಜರುಗಿಸುವಂತೆ ಸಹ ಆದೇಶಿಸಿದೆ.

4) ಈ ಆದೇಶವನ್ನು ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2003, ದಿನಾಂಕ:12.6.2003ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆ ರೀತ್ಯಾ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1120

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂಸ್ವಾ–2 ಮತ್ತು ಪುನರ್ವಸತಿ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ ಸಂಖ್ಯೆ:ಆಕುಕ 105 ಹೆಚ್‌ಎಸ್‌ಎಂ 2008 (ಭಾಗ) ಬೆಂಗಳೂರು, ದಿನಾಂಕ:3ನೇ ಏಪ್ರಿಲ್ 2009

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 105 ಹೆಚ್‌ಎಸ್‌ಎಂ 2008, ದಿನಾಂಕ:29.12.2008ರ ಅಧಿಸೂಚನೆಗೆ ಈ ಕೆಳಗೆ ಕಾಣಿಸಿರುವ ತಿದ್ದುಪಡಿಗಳಂತೆ ಓದಿಕೊಳ್ಳತಕ್ಕದ್ದು.

	ಕಾಲಂನ ಕ್ರಮ ಸಂಖ್ಯೆ	ಅಧಿಸೂಚನೆಯಲ್ಲಿರುವಂತೆ	ತಿದ್ದುಪಡಿ
1	18	ಕಾಲಂ 2 ರಲ್ಲಿನ "ಎ.ಎಸ್. ಲಕ್ಷ್ಮಿಕೃಷ್ಣನ್" ಎಂದಿರುವುದನ್ನು	"ಲಕ್ಷ್ಮಿಕೃಷ್ಣನ್"ಎಂದು ಓದಿಕೊಳ್ಳತಕ್ಕದ್ದು.

2	46	ಕಾಲಂ 3ರಲ್ಲಿನ "ಸಾರ್ವಜನಿಕ ಆಸ್ಪತ್ರೆ ಕೊರಟಗೆರೆ, ತುಮಕೂರು" ಎಂದಿರುವುದನ್ನು	" ಸಾರ್ವಜನಿಕ ಆಸ್ಪತ್ರೆ, ಕೊರಟಗೆರೆ, ತುಮಕೂರು ಜಿಲ್ಲೆ" ಎಂದು ಓದಿಕೊಳ್ಳತಕ್ಕದ್ದು.
3	48	ಕಾಲಂ 3ರಲ್ಲಿನ "ಸಾರ್ವಜನಿಕ ಆಸ್ಪತ್ರೆ, ಮಧುಗಿರಿ, ಚಿಕ್ಕಬಳ್ಳಾಪುರ" ಎಂದಿರುವುದನ್ನು	"ಸಾರ್ವಜನಿಕ ಆಸ್ಪತ್ರೆ, ಮಧುಗಿರಿ ತುಮಕೂರು ಜಿಲ್ಲೆ" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1121

ಚಿಕ್ಕೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ_ಇಲಾಖೆ (ವೃಂದ ಮತ್ತು ನೇಮಕಾತಿ)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಮರಳು ಸಾಗಾಣಿಕೆಗಾಗಿ ತಾತ್ಕಾಲಿಕ ಪರವಾನಿಗೆ ಜಾರಿ ಮಾಡುವ ಬಗ್ಗೆ.

ಓದಲಾಗಿದೆ :
1 ಸರ್ಕಾರದ ಆದೇಶ ಸಂಖ್ಯೆ:ಸಿಐ. 05 ಎಂಎಂಎನ್ 2005 ದಿನಾಂಕ:6.8.2005.
2. ದಿನಾಂಕ:26.9.2008ರ ಆದೇಶ ಸಂಖ್ಯೆ:ಸಿಐ 142. ಎಂಎಂಎನ್. 2008.
3. ದಿನಾಂಕ:20.10.2008ರ ಸೇರ್ಪಡೆ ಸಂಖ್ಯೆ:ಸಿಐ 142. ಎಂಎಂಎನ್. 2008
4. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ದಿನಾಂಕ:16.3.2009ರ ಪತ್ರ ಸಂಖ್ಯೆ:ಗಭೂಇ:ಉನಿ (ಖಿಆ)/ ಮರಳು/2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:26.9.2008ರ ಆದೇಶದಲ್ಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮರಳು ಗಣಿಗಾರಿಕೆ/ಸಾಗಾಣಿಕೆಗಾಗಿ ನೂತನವಾಗಿ ನಿಯಮಾವಳಿಗಳನ್ನು ರೂಪಿಸಲು ಬೇಕಾಗುವ ಸಮಯ ಅಥವಾ ಆದೇಶದ ದಿನಾಂಕದಿಂದ 6 ತಿಂಗಳ ಅವಧಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರದ ಸುತ್ತಲಿನ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳಿಗೆ ಒಳಪಟ್ಟಂತೆ, ಮರಳು ಸಾಗಾಣಿಕೆಗಾಗಿ ತಾತ್ಕಾಲಿಕ ಪರವಾನಿಗೆಗಳನ್ನು, ಸದರಿ ಆದೇಶದಲ್ಲಿ ಹಾಗೂ ಮೇಲೆ (3)ರಲ್ಲಿ ಓದಲಾದ ದಿನಾಂಕ:20.11.2008ರ 'ಸೇರ್ಪಡೆ' ಯಲ್ಲಿನ ನಿಬಂಧನೆಗಳಿಗೊಳಪಟ್ಟು ಜಾರಿಗೊಳಿಸಲು ಸರ್ಕಾರವು ಆದೇಶಿಸಿತ್ತು.

ಮೇಲೆ (4)ರಲ್ಲಿ ಓದಲಾದ ದಿನಾಂಕ:16.3.2009ರ ಪತ್ರದಲ್ಲಿ, ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ಬಗ್ಗೆ ನೆರೆರಾಜ್ಯಗಳಾದ ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಮರಳು ಗಣಿಗಾರಿಕೆ ಕುರಿತಾದ ನಿಯಮಾವಳಿಗಳನ್ನು ಪರಿಶೀಲಿಸಿ ರಾಜ್ಯದಲ್ಲಿನ ನಿಯಮಾವಳಿಗಳನ್ನು ಸರಳೀಕರಿಸುವ ಉದ್ದೇಶದಿಂದ ಹಾಗೂ ಫಿಲ್ಟರ್ ಮರಳಿನ ಗಣಿಗಾರಿಕೆ ಮತ್ತು ಅಕ್ರಮ ಮರಳು ಸಾಗಾಣಿಕೆಯನ್ನು ನಿಯಂತ್ರಿಸುವ ದಿಸೆಯಲ್ಲಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುತ್ತಾ, ಮರಳು ಸಾಗಾಣಿಕೆಗಾಗಿ ತಾತ್ಕಾಲಿಕ ಪರವಾನಿಗೆ ವ್ಯವಸ್ಥೆಯನ್ನು ಸರ್ಕಾರಿ ಆದೇಶ ಸಂಖ್ಯೆ:ಸಿಐ 142, ಎಂಎಂಎನ್ 2008 ದಿನಾಂಕ:26.9.2008ರಲ್ಲಿ 6 ತಿಂಗಳ ಅವಧಿಗೆ ಜಾರಿಮಾಡಿದ್ದು, ಸದರಿ ಅವಧಿಯು ದಿನಾಂಕ:25.3.2009ರಂದು ಮುಕ್ತಾಯಗೊಳ್ಳಲಿರುವ ಪ್ರಯುಕ್ತ ನಿಯಮಾವಳಿಗಳನ್ನು ರೂಪಿಸಲು ಬೇಕಾಗುವ ಸಮಯ ಅಥವಾ 6 ತಿಂಗಳವರೆಗೆ ಅವಧಿಯನ್ನು ವಿಸ್ತರಿಸಲು ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ಕೋರಿದ್ದು, ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಐ 142 ಎಂಎಂಎನ್ 2008, ದಿನಾಂಕ:2ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಮರಳು ಗಣಿಗಾರಿಕೆ/ಸಾಗಾಣಿಕೆಗಾಗಿ ನೂತನವಾಗಿ ನಿಯಮಾವಳಿಗಳನ್ನು ರೂಪಿಸಲು ಬೇಕಾಗುವ ಸಮಯ ಅಥವಾ ಈ ಆದೇಶದ ದಿನಾಂಕದಿಂದ 6 ತಿಂಗಳ ಅವಧಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರದ ಸುತ್ತಲಿನ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ ರಾಮನಗರ, ತುಮಕೂರು, ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳಿಗೆ ಒಳಪಟ್ಟಂತೆ ಮರಳು ಸಾಗಾಣಿಕೆಗಾಗಿ ತಾತ್ಕಾಲಿಕ ಪರವಾನಿಗೆಗಳ

ಪದ್ಧತಿಯನ್ನು ಮೇಲೆ (2), (3) ರಲ್ಲಿ ಕ್ರಮವಾಗಿ ಓದಲಾದ ದಿನಾಂಕ:26.9.2008ರ ಆದೇಶ ಹಾಗೂ ದಿನಾಂಕ:20.11.2008ರ 'ಸೇರ್ಪಡೆ' ಯಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1122

ಎ.ಪಿ. ರಾಮಕೃಷ್ಣ

ಪೀಠಾಧಿಕಾರಿ (ಗಣಿ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಹಿರಿಯ ಸರ್ಕಾರಿ ಅಭಿಯೋಜಕರು/ಸಹಾಯಕ ಅಭಿಯೋಗ ನಿರ್ದೇಶಕರು ಇವರ ಸ್ಥಾನಪನ್ನ ಅವಧಿಯನ್ನು ಘೋಷಿಸುವ ಕುರಿತು.

ಓದಲಾಗಿದೆ : 1 ಸರ್ಕಾರದ ಅಧಿಸೂಚನೆ ನಂ. ಒಇ 88 ಪಿಪಿಇ 2006, ದಿನಾಂಕ:24.1.2007.

2. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ನಂ. ಡಿಪಿಎನ್/ಸಿಶಾ-1/73/2008-09, ದಿನಾಂಕ:24.12.2008

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:24.1.2007ರ ಅಧಿಸೂಚನೆಯಲ್ಲಿ ಈ ಕೆಳಕಂಡ ಅಧಿಕಾರಿಗಳಿಗೆ ಸಹಾಯಕ ಸರ್ಕಾರಿ ಅಭಿಯೋಜಕರ ವೃಂದದಿಂದ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು/ಸಹಾಯಕ ಅಭಿಯೋಗ ನಿರ್ದೇಶಕರ ವೃಂದಕ್ಕೆ ಸ್ಥಾನಪನ್ನ ಮುಂಬಡ್ತಿ ನೀಡಲಾಗಿತ್ತು.

1	ಶ್ರೀ ಶಿವಣ್ಣ	2	ಆರ್.ಆರ್. ಕುಲಕರ್ಣಿ
3	ಎಸ್. ಪರಶಿವಮೂರ್ತಿ	4	ಜಿ. ಬಸವರಾಜು
5	ಆರ್.ಎಸ್. ಮಾವಿನತೋಪು	6	ಎಲ್.ಜೆ. ಕೋಲೇಕರ್
7	ಎನ್. ನಾಗೇಂದ್ರಪ್ಪ	8	ಸಿ.ಎ. ರವೀಂದ್ರ
9	ಎಫ್.ಆರ್. ಪಾಟೀಲ್	10	ಎಂ.ಎ. ತಟಗಾರ್
11	ಕೆ.ಜಿ. ಮುಚ್ಚಂಡಿ	12	ಎಂ.ಹೆಚ್. ಹತ್ತರಿಕಿಹಾಳ್
13	ಎಂ.ಹೆಚ್. ಕಬಾಡಿ	14	ಐ.ಎ. ಆಡಿನ್
15	ರಾಜಗೀರ್ ಬೀರಪ್ಪ	16	ಹೆಚ್.ವಿ. ಕಾಳಪ್ಪನವರ್
17	ಬಿ. ರಂಗಸ್ವಾಮಿ	18	ಆರ್. ಮಾರುತಿ
19	ಚಿನ್ನವೆಂಕಟರಮಣಪ್ಪ	20	ನಾಗರಾಜ್
21	ಕೆ.ಜಿ. ಮೀನಾಕುಮಾರಿ	22	ಜಿ.ಕೆ. ಮಹುರ್‌ಕರ್

ಮೇಲೆ (2)ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ದಿನಾಂಕ:24.12.2008ರ ಪತ್ರದಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಸರ್ಕಾರಿ ಅಭಿಯೋಜಕರು/ ಅಭಿಯೋಗ ಉಪನಿರ್ದೇಶಕರ ವೃಂದಕ್ಕೆ ಬಡ್ತಿ ಮಾಡುವ ಸಲುವಾಗಿ ಮೇಲ್ಕಂಡ 22 ಅಧಿಕಾರಿಗಳ ಸ್ಥಾನಪನ್ನ ಅವಧಿಯನ್ನು ಘೋಷಿಸಬೇಕಿದ್ದು ಸ್ಥಾನಪನ್ನ ಅವಧಿಯಲ್ಲಿ ಅವರಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಣಾ ವರದಿಗಳಲ್ಲಿ ಯಾವುದೇ ಪ್ರತಿಕೂಲ ಷರಾ ಇಲ್ಲದೇ ಇದ್ದು, ಇವರುಗಳ ಸೇವೆಯು ಸದರಿ ಅವಧಿಯಲ್ಲಿ ತೃಪ್ತಿಕರವಾಗಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 19(3)(ಸಿ) ಪ್ರಕಾರ ಸದರಿ ಅಧಿಕಾರಿಗಳ ಸ್ಥಾನಪನ್ನ ಅವಧಿ ತೃಪ್ತಿಕರವೆಂದು ಘೋಷಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಆದುದರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಒಇ 21 ಪಿಪಿಇ 2009, ಬೆಂಗಳೂರು, ದಿನಾಂಕ:2ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 19(3)(ಸಿ)ರ ಪ್ರಕಾರ ಈ ಕೆಳಕಂಡ ಹಿರಿಯ ಸರ್ಕಾರಿ ಅಭಿಯೋಜಕರು/ಸಹಾಯಕ ಅಭಿಯೋಗ ನಿರ್ದೇಶಕರುಗಳ ಅವರ ಹೆಸರಿನ ಮುಂದೆ ಅಂಕಣ (5)ರಲ್ಲಿ ನಮೂದಿಸಿರುವ ದಿನಾಂಕದಿಂದ ಸ್ಥಾನಪನ್ನ ಅವಧಿ ತೃಪ್ತಿಕರವಾಗಿದೆಯೆಂದು ಘೋಷಿಸಲಾಗಿದೆ.

ಕ್ರ.ಸಂ	ಅಧಿಕಾರಿಯ ಹೆಸರು ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀ/ಶ್ರೀಮತಿ	ಈಗಿನ ಉದ್ಯೋಗ ವೃಂದಕ್ಕೆ ವರದಿ ಮಾಡಿಕೊಂಡ ದಿನಾಂಕ	ಸ್ಥಾನಪನ್ನ ಅವಧಿ ಮುಕ್ತಾಯಗೊಂಡ ದಿನಾಂಕ	ಸ್ಥಾನಪನ್ನ ಅವಧಿಯನ್ನು ತೃಪ್ತಿಕರ ವೆಂದು ಘೋಷಣೆ ಮಾಡಿದ ದಿನಾಂಕ
1	ಶಿವಣ್ಣ ಸಹಾಯಕ ಅಭಿಯೋಗ ನಿರ್ದೇಶಕರು, ಎಸ್.ಪಿ. ಕಛೇರಿ ಮಂಡ್ಯ	15.2.2007 ಪೂರ್ವಾಹ್ನ	14.2.2008	15.2.2008
2	ಆರ್.ಆರ್. ಕುಲಕರ್ಣಿ, ಸಹಾಯಕ ಅಭಿಯೋಗ, ನಿರ್ದೇಶಕರು, ಅಭಿಯೋಗ ಉಪನಿರ್ದೇಶಕರ ಕಛೇರಿ, ಬೆಂಗಳೂರು ನಗರ, ಬೆಂಗಳೂರು	9.3.2007 ಅಪರಾಹ್ನ	9.3.2008	10.3.2008
3	ಎಸ್. ಪರಶಿವಮೂರ್ತಿ, ಸಹಾಯಕ ಅಭಿಯೋಗ, ನಿರ್ದೇಶಕರು, ಆರಕ್ಷಕ ಆಯುಕ್ತರ ಕಛೇರಿ, ಬೆಂಗಳೂರು ನಗರ,	15.2.2007 ಪೂರ್ವಾಹ್ನ	14.2.2008	15.2.2008
4	ಜಿ. ಬಸವರಾಜು, ಸಹಾಯಕ ಅಭಿಯೋಗ, ನಿರ್ದೇಶಕರು, ಎಸ್.ಪಿ. ಕಛೇರಿ, ತುಮಕೂರು	23.2.2007 ಪೂರ್ವಾಹ್ನ	22.2.2008	23.2.2008
5	ಆರ್.ಎಸ್. ಮಾವಿನತೋಪು ಸಹಾಯಕ ಅಭಿಯೋಗ, ನಿರ್ದೇಶಕರು, ಅಭಿಯೋಗ ಉಪನಿರ್ದೇಶಕರ ಕಛೇರಿ, ದಾವಣಗೆರೆ ವಿಭಾಗ, ದಾವಣಗೆರೆ	14.2.2007 ಅಪರಾಹ್ನ	14.2.2008	15.2.2008
6	ಎಲ್.ಜೆ. ಕೋಲೇಕರ್ ಸಹಾಯಕ ಅಭಿಯೋಗ, ನಿರ್ದೇಶಕರು, ಅಭಿಯೋಗ ಉಪನಿರ್ದೇಶಕರ ಕಛೇರಿ, ಬೆಳಗಾವಿ ವಿಭಾಗ, ಬೆಳಗಾವಿ	15.2.2007 ಪೂರ್ವಾಹ್ನ	14.2.2008	15.2.2008
7	ಎನ್. ನಾಗೇಂದ್ರಪ್ಪ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, 4ನೇ ಎ.ಸಿ.ಎಂ.ಎಂ. ನ್ಯಾಯಾಲಯ, ಬೆಂಗಳೂರು ನಗರ	20.2.2007	19.2.2008	20.2.2008
8	ಸಿ.ಎ. ರವೀಂದ್ರ ಸಹಾಯಕ ಅಭಿಯೋಗ, ನಿರ್ದೇಶಕರು, ಆರಕ್ಷಕ ಆಯುಕ್ತರ ಕಛೇರಿ, ಬೆಂಗಳೂರು ನಗರ	9.2.2007 ಪೂರ್ವಾಹ್ನ	8.2.2008	9.2.2008
9	ಎಫ್.ಆರ್. ಪಾಟೀಲ್ ಸಹಾಯಕ ಅಭಿಯೋಗ, ನಿರ್ದೇಶಕರು, ಎಸ್.ಪಿ. ಕಛೇರಿ, ಗುಲ್ಬರ್ಗಾ	1.3.2007 ಪೂರ್ವಾಹ್ನ	29.2.2008	1.3.2008

ಕ್ರ.ಸಂ	ಅಧಿಕಾರಿಯ ಹೆಸರು ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀ/ಶ್ರೀಮತಿ	ಈಗಿನ ಉದ್ಯೋಗ ವೃಂದಕ್ಕೆ ವರದಿ ಮಾಡಿಕೊಂಡ ದಿನಾಂಕ	ಸ್ಥಾನಪನ್ನ ಅವಧಿ ಮುಕ್ತಾಯಗೊಂಡ ದಿನಾಂಕ	ಸ್ಥಾನಪನ್ನ ಅವಧಿಯನ್ನು ತೃಪ್ತಿಕರ ವೆಂದು ಘೋಷಣೆ ಮಾಡಿದ ದಿನಾಂಕ
10	ಎಂ.ಎ. ತಟಗಾರ್ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ.ಎಂ. ನ್ಯಾಯಾಲಯ, ಧಾರವಾಡ	7.3.2007 ಪೂರ್ವಾಹ್ನ	6.3.2008	7.3.2008
11	ಕೆ.ಜಿ. ಮುಚ್ಚಂಡಿ, ಸಹಾಯಕ ಅಭಿಯೋಗ, ನಿರ್ದೇಶಕರು, ಅಭಿಯೋಗ ಉಪನಿರ್ದೇಶಕರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು	1.3.2007 ಪೂರ್ವಾಹ್ನ	29.2.2008	1.3.2008
12	ಎಂ.ಹೆಚ್. ಹತ್ತರಿಕಿಹಾಳ್ ಸಹಾಯಕ ಅಭಿಯೋಗ, ನಿರ್ದೇಶಕರು, ಎಸ್.ಪಿ. ಕಛೇರಿ, ಕಾರವಾರ	21.2.2007 ಪೂರ್ವಾಹ್ನ	20.2.2008	21.2.2008
13	ಎಂ.ಹೆಚ್. ಕಬಾಡಿ, ಸಹಾಯಕ ಅಭಿಯೋಗ, ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	15.3.2007 ಪೂರ್ವಾಹ್ನ	14.3.2008	15.3.2008
14	ಐ.ಎ. ಆಡಿನ್ ಸಹಾಯಕ ಅಭಿಯೋಗ, ನಿರ್ದೇಶಕರು, ಎಸ್.ಪಿ. ಕಛೇರಿ, ಬೆಳಗಾವಿ	21.2.2007 ಪೂರ್ವಾಹ್ನ	20.2.2008	21.2.2008
15	ರಾಜಗೀರ್ ಭೀರಪ್ಪ, ಸಹಾಯಕ ಅಭಿಯೋಗ, ನಿರ್ದೇಶಕರು, ಎಸ್.ಪಿ ಕಛೇರಿ, ಹಾಸನ	8.3.2007 ಪೂರ್ವಾಹ್ನ	7.3.2008	8.2.2008
16	ಹೆಚ್.ವಿ. ಕಾಳಪ್ಪನವರ್ ಸಹಾಯಕ ಅಭಿಯೋಗ, ನಿರ್ದೇಶಕರು, ಎಸ್.ಪಿ. ಕಛೇರಿ, ಹಾವೇರಿ	20.2.2007 ಪೂರ್ವಾಹ್ನ	19.2.2008	20.2.2008
17	ಬಿ. ರಂಗಸ್ವಾಮಿ ಸಹಾಯಕ ಅಭಿಯೋಗ, ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	15.2.2007 ಪೂರ್ವಾಹ್ನ	14.2.2008	15.2.2008
18	ಆರ್. ಮಾರುತಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಎ.ಸಿ.ಎಂ.ಎಂ. ನ್ಯಾಯಾಲಯ, ಬೆಂಗಳೂರು ನಗರ	19.2.2007 ಪೂರ್ವಾಹ್ನ	18.2.2008	19.2.2008

ಕ್ರ.ಸಂ	ಅಧಿಕಾರಿಯ ಹೆಸರು ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀ/ಶ್ರೀಮತಿ	ಈಗಿನ ಉದ್ಯೋಗ ವೃಂದಕ್ಕೆ ವರದಿ ಮಾಡಿಕೊಂಡ ದಿನಾಂಕ	ಸ್ಥಾನಪನ್ನ ಅವಧಿ ಮುಕ್ತಾಯಗೊಂಡ ದಿನಾಂಕ	ಸ್ಥಾನಪನ್ನ ಅವಧಿಯನ್ನು ತೃಪ್ತಿಕರ ವೆಂದು ಘೋಷಣೆ ಮಾಡಿದ ದಿನಾಂಕ
19	ಚಿನ್ನವೆಂಕಟರವಣಪ್ಪ, ಸಹಾಯಕ ಅಭಿಯೋಗ, ನಿರ್ದೇಶಕರು, ಎಸ್.ಪಿ. ಕಛೇರಿ, ಕೋಲಾರ	19.2.2007 ಪೂರ್ವಾಹ್ನ	18.2.2008	19.2.2008
20	ನಾಗರಾಜ್, ಸಹಾಯಕ ಅಭಿಯೋಗ, ನಿರ್ದೇಶಕರು, ಎಸ್.ಪಿ. ಕಛೇರಿ, ಮಡಿಕೇರಿ	28.2.2007 ಅಪರಾಹ್ನ	28.2.2008	29.2.2008
21	ಕೆ.ಜಿ. ಮೀನಾಕುಮಾರಿ, ಸಹಾಯಕ ಅಭಿಯೋಗ, ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು	9.2.2007 ಅಪರಾಹ್ನ	9.2.2008	10.2.2008
22	ಜಿ.ಕೆ. ಮಾಹುರ್‌ಕರ್, ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆಎಂ ನ್ಯಾಯಾಲಯ, ಬೆಂಗಳೂರು ನಗರ	9.2.2007 ಅಪರಾಹ್ನ	9.2.2008	10.2.2008

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1123

ಕೆ.ಸಿ. ಸಿದ್ದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಡಿಜಿಟಲ್ ಪ್ರಿಂಟರ್ ಗೆ ಜಿಂಕ್ ಷೀಟ್ ಬಾಕ್ಸ್ ಮಾಡಿರುವ ಬಗ್ಗೆ.

ಓದಲಾಗಿದೆ : 1 ದಿ:8.4.2008ರ ರೀಕೋ ಕಂಪನಿಯ ಪತ್ರ ಸಂಖ್ಯೆ ಬಿಜಿಎಲ್/ಡಿಎಂ/06–07.

2. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 6 ಡಿಎಸ್ವೈ 2008, ದಿ:10.10.2008.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ರೀಕೋ ಕಂಪನಿಯು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಡಿಜಿಟಲ್ ಡೂಪ್ಲಿಕೇಟರ್ ಯಂತ್ರವನ್ನು ಒದಗಿಸಿತ್ತು. ಸದರಿ ಯಂತ್ರದ ವೈರ್‌ಗಳನ್ನು ಇಲಿಗಳು ಕಚ್ಚಿ ಯಂತ್ರವು ಹಾಳಾಗಿದ್ದರಿಂದ ಅದನ್ನು ರಿಪೇರಿ ಮಾಡಿಸುವ ಮುಂಚೆ ಅದಕ್ಕೆ ಒಂದು ಜಿಂಕ್ ಷೀಟ್ ಬಾಕ್ಸ್‌ನ್ನು ಅಳವಡಿಸಲು ತೀರ್ಮಾನಿಸಲಾಯಿತು.

ಮೇಲೆ ಓದಲಾದ (2)ರ ಆದೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಲೇಖನ ಸಾಮಗ್ರಿಗೆ ರೂ. 40.000ಗಳನ್ನು ಹಾಗೂ ಪೀಠೋಪಕರಣಗಳಿಗೆ ರೂ. 80.000ಗಳನ್ನು ಒದಗಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಡಿಜಿಟಲ್ ಡೂಪ್ಲಿಕೇಟರ್ ಯಂತ್ರದ ದುರಸ್ತಿಗೂ ಮುಂಚೆ ಅದಕ್ಕೆ ಒಂದು ಜಿಂಕ್ ಷೀಟ್ ಬಾಕ್ಸ್‌ನ್ನು ರಕ್ಷಾ ಕವಚವಾಗಿ ತಯಾರಿಸುವ ಸಲುವಾಗಿ 03 ಕಂಪನಿಗಳಿಂದ ದರಪಟ್ಟಿಯನ್ನು ಪಡೆಯಲಾಗಿದೆ. ಸದರಿ ದರಪಟ್ಟಿಯಲ್ಲಿ ಪ್ರತಿಯೊಂದು ಡಿಜಿಟಲ್ ಡೂಪ್ಲಿಕೇಟರ್ ಯಂತ್ರದ ಜಿಂಕ್ ಷೀಟ್ ಬಾಕ್ಸ್ ತಯಾರಿಸಲು ಈ ಕೆಳಗಿನಂತೆ ಬೆಲೆಯನ್ನು ನೀಡಿರುತ್ತವೆ.

ಕ್ರ.ಸಂ	ಕಂಪನಿಯ ಹೆಸರು	ವಿವರ	ಪ್ರಮಾಣ	ಬೆಲೆ ರೂ.ಗಳಲ್ಲಿ	ಒಟ್ಟು ರೂ.ಗಳಲ್ಲಿ
1	ಪ್ರಗತಿ ಇಂಜಿನಿಯರಿಂಗ್ ಇಂಡಸ್ಟ್ರೀಸ್	ಜಿಂಕ್ ಷೀಟ್ ಬಾಕ್ಸ್	1	6800+12.5% ವ್ಯಾಟ್ ಹಾಗೂ ಸಾಗಣೆ ವೆಚ್ಚ 500 ಸೇರಿದಂತೆ	8150-00
2	ಚೈತನ್ಯ ಎಂಟರ್ ಪ್ರೈಸಸ್	ಜಿಂಕ್ ಷೀಟ್ ಬಾಕ್ಸ್	1	6300+12.5% ವ್ಯಾಟ್ ಸೇರಿದಂತ ಸಾಗಣೆ ವೆಚ್ಚ 500	7587-00
3	ಹಂಸ ಆಫೀಸ್ ಸಿಸ್ಟಮ್ಸ್	ಜಿಂಕ್ ಷೀಟ್ ಬಾಕ್ಸ್	1	7250/+12.5% ವ್ಯಾಟ್ ಸೇರಿದಂತೆ ಸಾಗಣೆ ವೆಚ್ಚ 800	8956-00

ಈ ಮೇಲ್ಕಂಡ ಕಂಪನಿಗಳಿಂದ ಪಡೆದ ದರಗಳನ್ನು ಅವಲೋಕಿಸಿ, ಅತೀ ಕಡಿಮೆ ದರ 6300-00 ರೂ.ಗಳು ಮತ್ತು ಶೇಕಡಾ 12.5 ವ್ಯಾಟ್ ತೆರಿಗೆ ಹಾಗೂ ಸಾಗಣೆ ವೆಚ್ಚ ರೂ. 500-00 ಸೂಚಿಸಿರುವ ಬೆಂಗಳೂರಿನ ಪ್ರಶಾಂತ ನಗರದ 1ನೇ ಮುಖ್ಯ ರಸ್ತೆ, 10ನೇ ಅಡ್ಡ ರಸ್ತೆಯ ಸಂಖ್ಯೆ:1ರಲ್ಲಿರುವ ಚೈತನ್ಯ ಎಂಟರ್ ಪ್ರೈಸಸ್ ಕಂಪನಿಯು ಒಟ್ಟು ರೂ. 7587-00ಗಳ ವೆಚ್ಚದಲ್ಲಿ ಜಿಂಕ್ ಷೀಟ್ ಬಾಕ್ಸ್‌ನ್ನು ತಯಾರಿಸಿಕೊಡಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಕಸಂವಾಪ್ರ 159 ಸ್ವೀಮರ 2008, ಬೆಂಗಳೂರು, ದಿನಾಂಕ:4ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಡಿಜಿಟಲ್ ಡೂಪ್ಲಿಕೇಟರ್ ಯಂತ್ರದ ದುರಸ್ತಿಗೂ ಮುಂಚೆ ಅದಕ್ಕೆ ಒಂದು ಜಿಂಕ್ ಷೀಟ್ ಬಾಕ್ಸ್‌ನ್ನು ರಕ್ಷಾ ಕವಚವಾಗಿ ತಯಾರಿಸುವ ಸಲುವಾಗಿ 03 ಕಂಪನಿಗಳಿಂದ ದರಪಟ್ಟಿಯನ್ನು ಕರೆದಿದ್ದು, ಅತಿ ಕಡಿಮೆ ದರ 6300-00 ರೂ. ಗಳನ್ನು ಸೂಚಿಸಿರುವ ಬೆಂಗಳೂರಿನ ಪ್ರಶಾಂತ ನಗರದ 1ನೇ ಮುಖ್ಯ ರಸ್ತೆ, 10ನೇ ಅಡ್ಡ ರಸ್ತೆಯ ಸಂಖ್ಯೆ:1 ರಲ್ಲಿರುವ ಚೈತನ್ಯ ಎಂಟರ್ ಪ್ರೈಸಸ್ ಕಂಪನಿಯ ದರ 6300-00 ರೂ. ಗಳು ಮತ್ತು ಶೇಕಡಾ 12.5 ವ್ಯಾಟ್ ತೆರಿಗೆ ಹಾಗೂ ಸಾಗಣೆ ವೆಚ್ಚ ರೂ. 500-00 ಹೀಗೆ ಒಟ್ಟು ರೂ. 7587-00ಗಳ ವೆಚ್ಚದಲ್ಲಿ ಜಿಂಕ್ ಷೀಟ್ ಬಾಕ್ಸ್ ನ್ನು ತಯಾರಿಸಿಕೊಡಲು ಆದೇಶ ನೀಡಿದೆ.

ಈ ವೆಚ್ಚವನ್ನು ಸರ್ಕಾರ ಆದೇಶ ಸಂಖ್ಯೆ ಸಿಆಸುಇ 6 ಡಿಎಸ್ವೆ 2008, ದಿ:10.10.2008ರಲ್ಲಿ ತಿಳಿಸಿರುವ ಲೆಕ್ಕಶೀರ್ಷಿಕೆ 2052-00-090-0-01-51 (ಜನರಲ್ ಎಕ್ಸ್ ಪೆನ್ಸಸ್) (ಯೋಜನೇತರ) ಫಿಕ್ಸ್‌ಚರ್ ಫಾರ್ ಆಫೀಸ್) (ಯೋಜನೇತರ) ಅಡಿಯಲ್ಲಿ ಭರಿಸುವುದು. ಚೈತನ್ಯ ಎಂಟರ್ ಪ್ರೈಸಸ್ ಕಂಪನಿಗೆ ರೂ. 7587-00 ಮೊತ್ತವನ್ನು ಸಿ.ಆ.ಸು.ಇ.ಲೆಕ್ಕಪತ್ರ ಶಾಖೆಯು DC ಬಿಲ್ ಮೂಲಕ ಬಿಡುಗಡೆ ಮಾಡುವುದು.

ಚೈತನ್ಯ ಎಂಟರ್ ಪ್ರೈಸಸ್ ಕಂಪನಿಯು ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಡಿಜಿಟಲ್ ಪ್ರಿಂಟರ್‌ಗೆ ಕೂಡಲೇ ಜಿಂಕ್ ಷೀಟ್ ಬಾಕ್ಸ್‌ನ್ನು ತಯಾರಿಸಿಕೊಡುವುದು ಹಾಗೂ ಸಿ.ಆ.ಸು.. ಇಲಾಖೆಯಿಂದ ನೀಡುವ ಮೊತ್ತಕ್ಕೆ ಸ್ವೀಕೃತಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1126

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ವಿಷಯ : 'ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ' ಸಂಪುಟದ ಪರಿಷ್ಕರಣೆ ಮತ್ತು ಪುನರ್ ಮುದ್ರಣದ ಬಗ್ಗೆ.

ಓದಲಾಗಿದೆ :

1. ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಗ್ಯಾಇ:ಹ್ಯಾಬು:2008-09 ದಿನಾಂಕ:16.6.2008.
2. ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಗ್ಯಾಇ:ಹ್ಯಾ:ಬುಕ್:2008-09 ದಿನಾಂಕ:4.3.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:16.6.2008ರ ಪತ್ರದಲ್ಲಿ ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ರವರು 'ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ' ಸಂಪುಟದ ಪರಿಷ್ಕರಣೆ ಮತ್ತು ಪುನರ್ ಮುದ್ರಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ ಕಸಂವಾಪ್ರ 7 ಕರಾಗೆ 2008, ದಿನಾಂಕ:25.3.2008ರಂದು ಅನುಮತಿ ನೀಡಲಾಗಿದ್ದು. ದಿನಾಂಕ:26.5.2008ರಂದು ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ

ಇಲಾಖೆ ಅವರ ಅಧ್ಯಕ್ಷತೆಯಲ್ಲಿ ನಡೆದ ಮಾಸಿಕ ವಿವಿಧ ಹಂತಗಳ ಪರಿಶೀಲನಾ ಸಭೆಯಲ್ಲಿ ಈ ಸಂಪುಟದ ವಿನ್ಯಾಸವನ್ನು ಉತ್ತಮ ಪಡಿಸಿ ಬಹುವರ್ಣೀಯ ಛಾಯಚಿತ್ರಗಳನ್ನು ಪಠ್ಯದಲ್ಲಿ ಅಳವಡಿಸಿ ಮುದ್ರಿಸಲು ಸೂಚಿಸಿರುವುದರಿಂದ ಹೊಸ ವಿನ್ಯಾಸದೊಂದಿಗೆ ಪುಸ್ತಕವನ್ನು ಮುದ್ರಿಸಲು ಅಧಿಕ ರೂ. 7.00 ಲಕ್ಷಗಳ ಅನುದಾನ ಅವಶ್ಯಕತೆವಿದ್ದು ಈ ಅನುದಾನವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ:4.3.2009ರ ಪತ್ರದಲ್ಲಿ ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆರವರು ಗ್ಯಾಸೆಟಿಯರ್ ಇಲಾಖೆಗೆ 2008–09ನೇ ಸಾಲಿಗೆ ಹಳೆ ಮೈಸೂರು ಪ್ರಾಂತ್ಯದ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಅಮೂಲ್ಯ ಗ್ರಂಥಗಳನ್ನು ಪ್ರಕಟಿಸುವ ಸಲುವಾಗಿ ರೂ. 50.00 ಲಕ್ಷಗಳ ಅನುದಾನ ನೀಡಲಾಗಿದ್ದು. ಸದರಿ ಅನುದಾನದಲ್ಲಿ ರೂ. 17.00 ಲಕ್ಷಗಳು ಉಳಿತಾಯವಾಗುವ ಸಾಧ್ಯತೆ ಇರುವುದರಿಂದ ಈ ಉಳಿತಾಯದಲ್ಲಿ ರೂ. 7.00 ಲಕ್ಷಗಳನ್ನು 'ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ' ಬಹುವರ್ಣಿಯ ಸಂಪುಟದ ಮುದ್ರಣಕ್ಕೆ ತಗಲುವ ವೆಚ್ಚಕ್ಕಾಗಿ ಭರಿಸಲು ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ಕಸಂವಾಪ್ರ 17 ಕರಾಗೆ 2008, ಬೆಂಗಳೂರು, ದಿನಾಂಕ:30ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ 'ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ' ಬಹುವರ್ಣಿಯ ಸಂಪುಟದ ಮುದ್ರಣಕ್ಕೆ ತಗಲುವ ರೂ. 7.00 ಲಕ್ಷಗಳನ್ನು (ರೂಪಾಯಿ ಏಳು ಲಕ್ಷಗಳು ಮಾತ್ರ)ಗಳನ್ನು ಗ್ಯಾಸೆಟಿಯರ್ ಇಲಾಖೆಯ ಅನುದಾನದಲ್ಲಿ ಉಳಿತಾಯವಾಗುವ ರೂ. 17.00ಲಕ್ಷಗಳಲ್ಲಿ ಭರಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

1) ಈ ಯೋಜನೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ನ್ನು ಅನುಸರಿಸಿ ಕ್ರಮ ವಹಿಸುವುದು.

2) ಬಿಡುಗಡೆ ಮಾಡಲಾದ ಹಣವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ಮಾತ್ರ ಬಳಸತಕ್ಕದ್ದು.

3) ಹಣ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು 2008–09ನೇ ಸಾಲಿನ ಲೆಕ್ಕಶೀರ್ಷಿಕೆ 3454–02–110–0–01–059 ಕರ್ನಾಟಕ ಗ್ಯಾಸೆಟಿಯರ್ ಪರಿಷ್ಕರಣೆ (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಇಲಾಖಾ ಕಾರ್ಯದರ್ಶಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2006 ದಿನಾಂಕ:10.7.2006ರಲ್ಲಿ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1127

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ಕಂದಾಯ ಸಚಿವಾಲಯ

ವಿಷಯ : ಶ್ರೀಯುತರುಗಳಾದ ಕೆ.ಆರ್. ರೇಣುಕಾಪ್ರಸಾದ್, ಹಿರಿಯ ಉಪ ನೋಂದಣಾಧಿಕಾರಿ, ಕೆ.ಎಸ್. ಪಾಂಡುರಂಗ ಶೆಟ್ಟಿ, ಹೆಚ್ಚುವರಿ ಉಪ ನೋಂದಣಾಧಿಕಾರಿ, ಆರ್.ಹೆಚ್. ಚಂದ್ರಶೇಖರ್, ದ್ವಿತೀಯ ದರ್ಜೆ ಸಹಾಯಕರು ಮತ್ತು ಎಸ್. ಸದಾಶಿವಮೂರ್ತಿ, ಅಟೆಂಡರ್, ಉಪ ನೋಂದಣಿ ಕಛೇರಿ, ಮೈಸೂರು ಉತ್ತರ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡುವ ಕುರಿತು. ಆದೇಶ.

ಓದಲಾಗಿದೆ :

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂಖ್ಯೆ: Compt:Uplok:Mys.164:94-95 ದಿನಾಂಕ:9.2.1995.
2. ಸರ್ಕಾರದ ಆದೇಶ ಸಂಖ್ಯೆ:ಆರ್ ಡಿ 170 ಇಸೇವಿ 94, ದಿನಾಂಕ:29.6.1995.
3. ಸರ್ಕಾರದ ಆದೇಶ ಸಂಖ್ಯೆ:ಕಂಇ 170 ಇಸೇವಿ 94, ದಿನಾಂಕ:3.7.1996.
4. ಮಾನ್ಯ ಉಪಲೋಕಾಯುಕ್ತರವರ ಪತ್ರ ಸಂಖ್ಯೆ: Compt:Uplok:Mys.164:94-95:ARE. 5 ದಿನಾಂಕ:25.2.1999
5. ಸರ್ಕಾರದ ಆದೇಶ ಸಂಖ್ಯೆ:ಕಂಇ 170 ಇಸೇವಿ 94, ದಿನಾಂಕ:28.9.1999.

6. ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:4932 & 4933/2003 ಕ್ಕೆ ಸಂಬಂಧಿಸಿದಂತೆ ದಿನಾಂಕ:20.10.2008 ರಂದು ನೀಡಿರುವ ತೀರ್ಪು.
7. ಸರ್ಕಾರದ ಪತ್ರ ಸಂಖ್ಯೆ:ಕಂಇ 170 ಇಸೇವಿ 94, ದಿನಾಂಕ:13.2.2009.
8. ಕರ್ನಾಟಕ ಉಪ ಲೋಕಾಯುಕ್ತ ಇವರ ಪತ್ರ ಸಂಖ್ಯೆ: LOK:ARE-4:ENQ-16:1999-2000. ದಿನಾಂಕ:28.2.2009.

ಪ್ರಸ್ತಾವನೆ:

ಮೇಲೆ ಓದಲಾದ (1)ರ ದಿನಾಂಕ:9.2.1995ರ ನಿಬಂಧಕರು, ಕರ್ನಾಟಕ ಲೋಕಾಯುಕ್ತರವರ ಪತ್ರದಲ್ಲಿ ದಿನಾಂಕ:9.6.1994 ರಂದು ಮೈಸೂರು ಉತ್ತರ ಉಪ ನೊಂದಣಿ ಕಛೇರಿಗೆ ದಾಳಿ ಮಾಡಿದ ಸಂಬಂಧ ಸದರಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಕೆ.ಆರ್. ರೇಣುಕಾಪ್ರಸಾದ್, ಉಪ ನೋಂದಣಾಧಿಕಾರಿ ಮತ್ತು ಶ್ರೀ ಪಿ.ಎಸ್. ಪಾಂಡುರಂಗ ಶೆಟ್ಟಿ, ಹೆಚ್ಚುವರಿ ಉಪ ನೋಂದಣಾಧಿಕಾರಿ ಇವರುಗಳು ಇದ್ದ ಜಗುಲಿಯ ಮೇಲೆ ರೂ. 880–00 ಗಳ ಒಂದು ಹಣದ ಪರ್ಸ್, ರೂ. 554–00ಗಳ ನಗದು ಸಮೇತ ಮತ್ತು ರೂ. 450–00 ಗಳ ಹಣದ ಕಟ್ಟು ಸಿಕ್ಕಿ ಬಿದ್ದಿದ್ದು, ಹಣದ ವಾರಸುದಾರರ ಬಗ್ಗೆ ವಿಚಾರಿಸಿದಾಗ, ಅಧಿಕಾರಿಗಳು ನೀಡಿದ ಸಮಜಾಯಿಸಿಯು ತೃಪ್ತಿಕರವಾಗಿಲ್ಲವೆಂದು ತಿಳಿಸುತ್ತಾ, ಅಧಿಕಾರಿಗಳು ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 134 ಇಎಸ್‌ಆರ್ 85, ದಿನಾಂಕ:29.7.1985 ನ್ನು ಉಲ್ಲಂಘನೆ ಮಾಡಿರುವುದರಿಂದ, ಸದರಿ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ನಿಲಂಭನೆಯಲ್ಲಿಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (2)ರ ದಿನಾಂಕ:29.6.1995ರ ಸರ್ಕಾರದ ಆದೇಶದಲ್ಲಿ ಲೋಕಾಯುಕ್ತರವರ ಶಿಫಾರಸ್ಸಿನಂತೆ ಶ್ರೀ ಕೆ.ಆರ್. ರೇಣುಕಾಪ್ರಸಾದ, ಹಿರಿಯ ಉಪ ನೋಂದಣಾಧಿಕಾರಿ ಮತ್ತು ಶ್ರೀ ಪಿ.ಎಸ್. ಪಾಂಡುರಂಗ ಶೆಟ್ಟಿ, ಹೆಚ್ಚುವರಿ ಉಪ ನೋಂದಣಾಧಿಕಾರಿ, ಮೈಸೂರು ಉತ್ತರ ಉಪ ನೋಂದಣಿ ಕಛೇರಿ ಇವರುಗಳನ್ನು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು, 1957ರ ನಿಯಮ 10(1)ರ ಮೇರೆಗೆ ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತ್ತಿನಲ್ಲಿಡಲಾಗಿದೆ.

ಮೇಲೆ ಓದಲಾದ (3)ರ ದಿನಾಂಕ:3.7.1996ರ ಸರ್ಕಾರದ ಆದೇಶದಲ್ಲಿ ಸದರಿಯವರುಗಳ ಮೇಲೆ ಇರುವ ಆರೋಪಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಅಮಾನತ್ತನ್ನು ಹಿಂತೆಗೆದುಕೊಂಡು ಸೇವೆಗೆ ಪುನರ್ ಸ್ಥಾಪಿಸಲಾಗಿದೆ.

ಮೇಲೆ ಓದಲಾದ (4)ರ ದಿನಾಂಕ:25.2.1999ರ ಉಪ ಲೋಕಾಯುಕ್ತರವರ ಪತ್ರದಲ್ಲಿ ಮೈಸೂರು ಉತ್ತರ ಉಪ ನೋಂದಣಿ ಕಛೇರಿಯಲ್ಲಿ ವ್ಯಾಪಕವಾದ ಅಕ್ರಮ ಸಂಭಾವನೆ ಸ್ವೀಕರಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ ಎಂಬ ದೂರಿನ ಮೇರೆಗೆ ಲೋಕಾಯುಕ್ತರವರು ಸದರಿ ಕಛೇರಿಯನ್ನು ತನಿಖೆ ನಡೆಸಿದ್ದು, ತನಿಖಾಧಿಕಾರಿಗಳು ಈ ಕೆಳಕಂಡ ಅಧಿಕಾರಿಗಳನ್ನು ಈ ಲೋಪದೋಷಗಳಿಗೆ ಜವಾಬ್ದಾರರೆಂದು ಗುರುತಿಸಿರುತ್ತಾರೆ.

1) ಶ್ರೀ ರೇಣುಕಾಪ್ರಸಾದ್, ಉಪ ನೋಂದಣಾಧಿಕಾರಿ,
2) ಶ್ರೀ ಪಾಂಡುರಂಗ ಶೆಟ್ಟಿ, ಹೆಚ್ಚುವರಿ ಉಪ ನೋಂದಣಾಧಿಕಾರಿ,
3) ಶ್ರೀ ಆರ್.ಹೆಚ್., ಚಂದ್ರಶೇಖರ್, ದ್ವಿತೀಯ ದರ್ಜೆ ಸಹಾಯಕರು,
4) ಶ್ರೀ ಸದಾಶಿವಮೂರ್ತಿ, ಅಟೆಂಡರ್
5) ಶ್ರೀ ಎಸ್.ಎ. ರಮೇಶ್, ದ್ವಿತೀಯ ದರ್ಜೆ ಸಹಾಯಕರು,
6) ಶ್ರೀ ಎಂ.ಕೆ. ರಾಮಚಂದ್ರ, ಪ್ರಥಮ ದರ್ಜೆ ಸಹಾಯಕರು

ತನಿಖೆಯ ಸಂದರ್ಭದಲ್ಲಿ ಕ್ರಸಂ. 5 ಮತ್ತು 6ರಲ್ಲಿನ ಆರೋಪಿತರು ನೀಡಿರುವ ಸಮಜಾಯಿಷಿಯು ತೃಪ್ತಿಕರವಾಗಿ ಕಂಡು ಬಂದ ಹಿನ್ನೆಲೆಯಲ್ಲಿ ಸದರಿಯವರನ್ನು ಹೊರತುಪಡಿಸಿ ಕ್ರಮ ಸಂಖ್ಯೆ:1 ರಿಂದ 4ರಲ್ಲಿನ ಆರೋಪಿತ ಸರ್ಕಾರಿ ನೌಕರರುಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯಿದೆ, 1985 ರ ಪ್ರಕರಣ 12(4)ರಡಿಯಲ್ಲಿ ಶಿಸ್ತು ಇಲಾಖಾ ವಿಚಾರಣೆಯನ್ನು ನಡೆಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ(5)ರ ದಿನಾಂಕ:28.9.1999ರ ಸರ್ಕಾರದ ಆದೇಶದಲ್ಲಿ ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನಂತೆ ಮೇಲ್ಕಂಡ ಕ್ರಮ ಸಂಖ್ಯೆ:1 ರಿಂದ 4ರಲ್ಲಿನ ಆರೋಪಿತ ಸರ್ಕಾರಿ ನೌಕರರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು, 1957ರ ನಿಯಮ 14(ಎ) ರಂತೆ ನಿಯಮ 13 ರೊಂದಿಗೆ ನಿಹಿತವಾಗಿರುವಂತೆ ಇರುವ ಅಧಿಕಾರದನ್ವಯ ಇಲಾಖಾ ವಿಚಾರಣೆಯನ್ನು ನಡೆಸಲು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲಾಗಿದೆ.

ಮೇಲೆ ಓದಲಾದ (6)ರ ದಿನಾಂಕ:20.10.2008ರಂದು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ:4932 ಮತ್ತು 4933/2003 ಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತರವರ ಪತ್ರ ಸಂಖ್ಯೆ: LOK:ARE-4:ENQ-

16:1999-2000 ದಿನಾಂಕ:17.3.2003ರಲ್ಲಿನ ಶಿಫಾರಸ್ಸು ಹಾಗೂ ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಕಂಇ 170 ಇಸೇವಿ 94, ದಿನಾಂಕ:13.5.2003ನ್ನು ತಳ್ಳಿಹಾಕಿ ಉಪ ಲೋಕಾಯುಕ್ತರವರಿಗೆ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಿಂದಿರುಗಿಸುವಂತೆ ಆದೇಶಿಸಲಾಗಿದೆ.

ಮೇಲೆ ಓದಲಾದ (7) ರ ಸರ್ಕಾರದ ಪತ್ರ ದಿನಾಂಕ:13.2.2009ರಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಉಪ ಲೋಕಾಯುಕ್ತರವರಿಗೆ ಕಳುಹಿಸಲಾಗಿದೆ.

ಮೇಲೆ ಓದಲಾದ (8)ರ ದಿನಾಂಕ:28.2.2009ರ ಉಪ ಲೋಕಾಯುಕ್ತರವರ ಪತ್ರದಲ್ಲಿ ಮಾನ್ಯ ಉಪ ಲೋಕಾಯುಕ್ತರು ವಿಚಾರಣೆ ನಡೆಸಿ 1) ಶ್ರೀ ಕೆ.ಆರ್. ರೇಣುಕಾಪ್ರಸಾದ್, ಹಿರಿಯ ಉಪ ನೋಂದಣಾಧಿಕಾರಿ, 2) ಶ್ರೀ ಕೆ.ಎಸ್. ಪಾಂಡುರಂಗ ಶೆಟ್ಟಿ, ಹೆಚ್ಚುವರಿ ಉಪ ನೋಂದಣಾಧಿಕಾರಿ, 3) ಶ್ರೀ ಆರ್.ಹೆಚ್. ಚಂದ್ರಶೇಖರ್, ದ್ವಿತೀಯ ದರ್ಜೆ ಸಹಾಯಕರು ಹಾಗೂ 4) ಶ್ರೀ ಎಸ್. ಸದಾಶಿವಮೂರ್ತಿ, ಅಟೆಂಡರ್ ಇವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗದೇ ಇರುವುದರಿಂದ ಸದರಿಯವರ ವಿರುದ್ಧ ಮಾಡಲಾದ ಆದೇಶಗಳನ್ನು ಹಿಂದಕ್ಕೆ ಪಡೆಯುವಂತೆ (drop) ವರದಿ ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 170 ಇಸೇವಿ 94, ಬೆಂಗಳೂರು, ದಿನಾಂಕ:2ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಹಿಂದೆ ಮೈಸೂರು ಉತ್ತರ ಉಪ ನೋಂದಣಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಮಾನ್ಯ ಲೋಕಾಯುಕ್ತರ ಬಲೆಗೆ ಸಿಲುಕಿರುವುದಕ್ಕೆ ಸಂಬಂಧಿಸಿದಂತೆ, ಆರೋಪಿತ ಅಧಿಕಾರಿ./ನೌಕರರುಗಳಾದ 1) ಶ್ರೀ ಕೆ.ಆರ್. ರೇಣುಕಾಪ್ರಸಾದ್, ಹಿರಿಯ ಉಪ ನೋಂದಣಾಧಿಕಾರಿ, 2) ಶ್ರೀ ಕೆ.ಎಸ್. ಪಾಂಡುರಂಗ ಶೆಟ್ಟಿ, ಹೆಚ್ಚುವರಿ ಉಪ ನೋಂದಣಾಧಿಕಾರಿ, 3) ಶ್ರೀ ಆರ್.ಹೆಚ್. ಚಂದ್ರಶೇಖರ್, ದ್ವಿತೀಯ ದರ್ಜೆ ಸಹಾಯಕರು ಹಾಗೂ 4) ಶ್ರೀ ಎಸ್. ಸದಾಶಿವಮೂರ್ತಿ, ಅಟೆಂಡರ್ ಇವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗದೇ ಇರುವುದರಿಂದ ಸದರಿಯವರ ವಿರುದ್ಧ ಆರೋಪಗಳ ಕುರಿತಂತೆ ಹೊರಡಿಸಲಾದ ಆದೇಶಗಳನ್ನು ಹಿಂದಕ್ಕೆ ಪಡೆದು ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1128

ಟಿ.ಕೆ. ರಾಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ)

ವಿಷಯ : 2005ನೇ ತಂಡದ ಪರಿವೀಕ್ಷಣಾ ತಹಶೀಲ್ದಾರರುಗಳು ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 110 ಎಎಸ್‌ಡಿ 2006, ದಿನಾಂಕ:22.6.2006.
2. ಸರ್ಕಾರದ ಅಧಿಕೃತ ಜ್ಞಾಪನ ಸಂ:ಆರ್‌ಡಿ 135 ಎಎಸ್‌ಡಿ 2006, ದಿನಾಂಕ:25.8.2006.
3. ಸರ್ಕಾರದ ಪತ್ರ ಸಂ:ಕಂಇ 292 ಎಎಸ್‌ಡಿ 2008, ದಿನಾಂಕ:24.7.2008.
4. ಸರ್ಕಾರದ ಆದೇಶ ಸಂ:ಆರ್‌ಡಿ 292 ಎಎಸ್‌ಡಿ 2008, ದಿನಾಂಕ:19.11.2008 ಮತ್ತು 19.1.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಸಂ. (1) ದಿನಾಂಕ: 22.6.2006ರ ಸರ್ಕಾರಿ ಅಧಿಸೂಚನೆಯಲ್ಲಿ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು 1997ರ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಒಟ್ಟು 40 ಅಭ್ಯರ್ಥಿಗಳನ್ನು ಪರಿವೀಕ್ಷಣಾ ತಹಶೀಲ್ದಾರ್ ಗುಂಪು–ಬಿ ಹುದ್ದೆಗೆ ನೇಮಕಾತಿ ಆದೇಶ ನೀಡಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಒಟ್ಟು 40 ಪರಿವೀಕ್ಷಣಾ ತಹಶೀಲ್ದಾರರುಗಳನ್ನು 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯ ಮೇಲೆ ಇರುತ್ತಾರೆಂದು ಮತ್ತು ಈ ಅವಧಿಯಲ್ಲಿ ಕನ್ನಡ ಭಾಷಾ ಪರೀಕ್ಷೆ ಮತ್ತು ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂದು ತಿಳಿಸಲಾಗಿತ್ತು. ನೇಮಕಗೊಂಡ ಎಲ್ಲಾ 40 ಪರಿವೀಕ್ಷಣಾ ತಹಶೀಲ್ದಾರರುಗಳು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ,

ಮೇಲೆ ಓದಲಾದ ಕ್ರಸಂ. (2) ದಿನಾಂಕ:25.8.2006ರಲ್ಲಿ ಎಲ್ಲಾ ಪರಿವೀಕ್ಷಣಾ ತಹಶೀಲ್ದಾರರುಗಳಿಗೆ ಎರಡು ವರ್ಷಗಳ ತರಬೇತಿಗಾಗಿ ವಿವಿಧ ಜಿಲ್ಲೆಗಳಿಗೆ ತೈನಾತಿಸಲಾಗಿತ್ತು. ಅದರಂತೆ, ಇವರುಗಳಲ್ಲಿ ವಿವಿಧ ಕಾರಣಗಳಿಂದ/ ಬೇರೆ ಹುದ್ದೆಗೆ ನೇಮಕಗೊಂಡಿದ್ದರಿಂದ ಒಟ್ಟು 6 ಪರಿವೀಕ್ಷಣಾ ತಹಶೀಲ್ದಾರರುಗಳು (ಶ್ರೀ ಹೆಚ್.ಡಿ. ಲೋಕೇಶ್, ಕು ರೂಪಾ. ಐ.ಪಿ,

ಶ್ರೀ ಶಶಿಕುಮಾರ್ ಎನ್., ಶ್ರೀ ಹರ್ಷ ಎಸ್. ಶೆಟ್ಟಿ, ಶ್ರೀ ನವೀನ್ ಕುಮಾರ್ ರಾಜು, ಎಸ್.ಶ್ರೀ ನಿರಂಜನ್ ಪಿ.ಸಿ.) ಸೇವೆಯಿಂದ ಬಿಟ್ಟುಹೋಗಿರುತ್ತಾರೆ. ಇನ್ನುಳಿದ 34 ಪರಿವೀಕ್ಷಣಾ ತಹಶೀಲ್ದಾರರುಗಳ ನಿಗದಿತ ಇಲಾಖಾ ಪರೀಕ್ಷೆಗಳನ್ನು ಉತ್ತೀರ್ಣರಾಗಿರುವ ಬಗ್ಗೆ, ಜಿಲ್ಲಾ ತರಬೇತಿಯಲ್ಲಿದ್ದಾಗ, ತರಬೇತಿಯನ್ನು ತೃಪ್ತಿಕರವಾಗಿ ಪೂರೈಸಿರುವ ಬಗ್ಗೆ ಹಾಗೂ ಇವರುಗಳ ವಿರುದ್ಧ ಇಲಾಖಾ ವಿಚಾರಣೆಗಳ ಬಗ್ಗೆ, ಮಾಹಿತಿಯನ್ನು ಮೇಲೆ ಓದಲಾದ ಕ್ರಸಂ (3)ರ ದಿನಾಂಕ:24.7.2008ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಂದ ಪಡೆಯಲು ಪತ್ರ ಬರೆಯಲಾಗಿತ್ತು. ಅದರಂತೆ ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಇದ್ದ ಪರಿವೀಕ್ಷಣಾ ತಹಶೀಲ್ದಾರರುಗಳ ಬಗ್ಗೆ ನಿಗದಿತ ಇಲಾಖಾ ಪರೀಕ್ಷೆಗಳಲ್ಲಿ (ಕನ್ನಡ ಭಾಷಾ ವಿನಾಯಿತಿ ಸೇರಿ) ಉತ್ತೀರ್ಣರಾಗಿರುವುದಾಗಿ ಹಾಗೂ ಪರಿವೀಕ್ಷಣಾ ತಹಶೀಲ್ದಾರರುಗಳು ತೃಪ್ತಿಕರವಾಗಿ ಪರಿವೀಕ್ಷಣಾ ಅವಧಿಯನ್ನು ಕಾರ್ಯ ನಿರ್ವಹಿಸಿರುತ್ತಾರೆ ಎಂದು ಶಿಫಾರಸ್ಸು ಮಾಡಿರುವುದರಿಂದ ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1)ರನ್ವಯ ಮೇಲೆ ಓದಲಾದ ಕ್ರಸಂ. (4), ರ ದಿನಾಂಕ:19.11.2008 ಹಾಗೂ 19/1/2009ರಲ್ಲಿ ಕ್ರಮವಾಗಿ 15 ಹಾಗೂ 13 ಪರಿವೀಕ್ಷಣಾ ತಹಶೀಲ್ದಾರರುಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಲಾಗಿರುತ್ತದೆ. ಮುಂದುವರೆದು, ಜಿಲ್ಲಾಧಿಕಾರಿಗಳಿಂದ ಬಂದ ವರದಿಯ ಆಧಾರದ ಮೇಲೆ ಹಾಗೂ ಸಂಬಂಧಪಟ್ಟ ಇಲಾಖಾ ಪರೀಕ್ಷೆಗಳನ್ನು (ಕನ್ನಡ ಭಾಷಾ ವಿನಾಯಿತಿ ಸೇರಿ) ಉತ್ತೀರ್ಣರಾಗಿರುವ ಬಗ್ಗೆ ಹಾಗೂ ಇವರುಗಳ ಬಗ್ಗೆ ಯಾವುದೇ ಇಲಾಖಾ ವಿಚಾರಣೆ ಬಾಕಿಯಿಲ್ಲವೆಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುವ ಹಿನ್ನಲೆಯಲ್ಲಿ, ಈ ಕೆಳಕಂಡ 04 ಪರಿವೀಕ್ಷಣಾ ತಹಶೀಲ್ದಾರರುಗಳನ್ನು ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1)ರನ್ವಯ ತೃಪ್ತಿಕರವಾಗಿ ಪರಿವೀಕ್ಷಣಾ ಅವಧಿಯನ್ನು ಪೂರೈಸಿರುತ್ತಾರೆಂದು ಘೋಷಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ:ಆರ್‌ಡಿ 292 ಎಎಸ್‌ಡಿ 2008, ಬೆಂಗಳೂರು, ದಿನಾಂಕ:4ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಈ ಕೆಳಕಂಡ 04 ಪರಿವೀಕ್ಷಣಾ ತಹಶೀಲ್ದಾರರುಗಳನ್ನು ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣಾ) ನಿಯಮಗಳು 1977ರ ನಿಯಮ 5(1)ರಡಿ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಿ ಆದೇಶಿಸಿದೆ.

ಉಳಿದ 02 ಪರಿವೀಕ್ಷಣಾ ತಹಶೀಲ್ದಾರರುಗಳ ಬಗ್ಗೆ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದು ನಂತರದಲ್ಲಿ, ಆದೇಶ ಹೊರಡಿಸಲಾಗುವುದು.

ಕ್ರಸಂ	ಪರಿವೀಕ್ಷಣಾ ತಹಶೀಲ್ದಾರರ ಹೆಸರು– (ಶ್ರೀ/ ಶ್ರೀಮತಿ)	ಪರಿವೀಕ್ಷಣಾ ಅವಧಿ ಪ್ರಾರಂಭವಾದ ದಿನಾಂಕ	ಪರಿವೀಕ್ಷಣಾ ಅವಧಿ ಮುಕ್ತಾಯವಾದ ದಿನಾಂಕ
1	ಮಂಜುಶ್ರೀ. ಎನ್	23.6.2006	22.6.2008
2	ಮೇಘನಾ ಆರ್.	23.6.2006	22.6.2008
3	ರವಿಚಂದ್ರನಾಯಕ್	23.6.2006	22.6.2008
4	ಗೀತಾ ಸಿ.ಡಿ	23.6.2006	22.6.2008

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1129

ಬಿ.ವಿ. ಚೌಕಿಮಠ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಸೇವೆಗಳು–3)

ವಸತಿ ಸಚಿವಾಲಯ

ವಿಷಯ : ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಅಧಿಕಾರಿ/ಸಿಬ್ಬಂದಿಯವರಿಗೆ ವೇತನ ಶ್ರೇಣಿ ಪರಿಷ್ಕರಣೆ ಕುರಿತು.

ಓದಲಾಗಿದೆ :
1 ಸರ್ಕಾರದ ಆದೇಶ ಸಂ. ಎಫ್‌ಡಿ 8 ಎಸ್‌ಆರ್‌ಪಿ 2007. ದಿನ ದಿನಾಂಕ:16.5.2007.
2. ಸರ್ಕಾರದ ಆದೇಶ ಸಂಖ್ಯೆ:ವಇ 73 ಹೆಚ್ ಎಎಸ್ 07 ದಿನಾಂಕ:5.7.08
3. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಪತ್ರ ಸಂ. RGHCL 57 MIS 08 2007 ದಿನಾಂಕ 3.11.2008.

ಪ್ರಸ್ತಾವನೆ:

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಅಧಿಕಾರಿ/ಸಿಬ್ಬಂದಿಯವರಿಗೆ 5ನೇ ವೇತನ ಆಯೋಗದ ಶಿಫಾರಸ್ಸಿನ ಮೇರೆಗೆ ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ವೇತನ ಪರಿಷ್ಕರಣೆ ಮಾಡಿರುವಂತೆ ವೇತನ ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ. ನಿಗಮವು ದಿನಾಂಕ:26.11.2008ರಂದು ನೇಮಕ ಮಾಡಿಕೊಂಡ ಶ್ರೀ ಜಾನ್ ಪಾಲ್ ಡಿ. ಸಿಸ್ಟಮ್ ಅನಾಲಿಸ್ಟ್ ಇವರ ವೇತನ ಶ್ರೇಣಿ 6000–11000 ಕ್ಕೆ 5ನೇ ವೇತನ

ಆಯೋಗದ ಶಿಫಾರಸ್ಸಿನ ಮೇರೆಗೆ ವೇತನ ಪರಿಷ್ಕರಿಸಿ ಆದೇಶ ಹೊರಡಿಸುವಂತೆ ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ವಇ 66 ಹೆಚ್‌ಎಎಸ್ 2008, ಬೆಂಗಳೂರು, ದಿನಾಂಕ:4ನೇ ಏಪ್ರಿಲ್ 2009

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಸ್ಟಮ್ ಅನಾಲಿಸ್ಟ್‌ರ ಹುದೆಯ ಪೂರ್ವಪರಿಷ್ಕೃತ ವೇತನ ಶ್ರೇಣಿ ರೂ. 6000–11600ಕ್ಕೆ ಸಂವಾದಿ ಪರಿಷ್ಕೃತ ವೇತನ ಶ್ರೇಣಿ ರೂ. 11,400–21600ನ್ನು ದಿನಾಂಕ:1.4.2006 ರಿಂದ ಜಾರಿಗೆ ಬರುವಂತೆ ಸರ್ಕಾರದ ಅನುಮೋದನೆ ನೀಡಲಾಗಿದ್ದು, ಈ ವೇತನ ಪರಿಷ್ಕರಣೆಯ ಆರ್ಥಿಕ ಸೌಲಭ್ಯವು ಸದರಿ ಹುದ್ದೆಯನ್ನು ಭರ್ತಿ ಮಾಡಿದ ದಿನಾಂಕ 26.11.2008ರಿಂದ ಮಾತ್ರ ಲಭ್ಯವಾಗುತ್ತದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 847 ವೆಚ್ಚ–9/09, ದಿನಾಂಕ:24.3.2009ರಲ್ಲಿ ಸಹಮತಿಸಿದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1130 **ಕೆ.ಆರ್. ವಲ್ಲೂರ**

ಪೀಠಾಧಿಕಾರಿ–2, ವಸತಿ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಅನಿವಾಸಿ ಭಾರತೀಯ ಕೋಶ ರಚಿಸುವ ಬಗ್ಗೆ – ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇದರ ಉಪಾಧ್ಯಕ್ಷರ ಆಪ್ತಶಾಖೆಗೆ ಹಾಗೂ ಅವರ ಕಛೇರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1 ಸರ್ಕಾರದ ಆದೇಶ ಸಂ. ಕಸಂವಾಪ್ರ 67 ಕಸನಿ 2008, ದಿನಾಂಕ:18.12.2008
2. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರ ಪತ್ರ ಸಂಖ್ಯೆ ಕಸನಿ :47ಕಅ:2008–09, ದಿ:23.1.2009
3. ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 67 ಕಸನಿ 2008 ದಿ:7.2.2009.
4. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ಪತ್ರ ಸಂಖ್ಯೆ ಕಸನಿ 47:ಕಅ:2008–09, ದಿ:2.2.2009.
5. ಸರ್ಕಾರದ ಆದೇಶ ಸಂಖ್ಯೆ:ಕಸಂವಾಪ್ರ 21 ಕಸಧ 2008, ದಿ:19.3.2009.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿ. 18–12–2008ರ ಸರ್ಕಾರಿ ಆದೇಶದಲ್ಲಿ 2008–09ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವ ಅನಿವಾಸಿ ಭಾರತೀಯ ಸಮಿತಿಗೆ, ಅದರ ಉಪಾಧ್ಯಾಕ್ಷರ ಆಪ್ತ ಶಾಖೆಗೆ ಹಾಗೂ ಅವರ ಕಚೇರಿಯ ವೆಚ್ಚಗಳನ್ನು ನಿರ್ವಹಿಸಲು ಆಡಳಿತ ಇಲಾಖೆಯಾದ ಸಿಆಸುಇ (ರಾಜ್ಯ ಶಿಷ್ಟಾಚಾರ)ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕ ಶೀರ್ಷಿಕೆ 2205–00–800–0–09–059 (ಇತರೆ ಖರ್ಚು) (ಯೋಜನೆ)ಅಡಿಯಲ್ಲಿ ಒದಗಿಸಿರುವಂತೆ ರೂ. 100.00 ಲಕ್ಷಗಳನ್ನು ಬಿಡುಗಡೆ ಮಾಡಲು ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆರವರಿಗೆ ಸರ್ಕಾರದ ಮಂಜೂರಾತಿ ನೀಡಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ದಿನಾಂಕ:23.01.2009ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆರವರು ಸದರಿ ಲೆಕ್ಕ ಶೀರ್ಷಿಕೆಯಡಿ ಈಗಾಗಲೇ 2008ನೇ ಸಾಲಿನ ರಾಜ್ಯ ಪ್ರಶಸ್ತಿ ಪ್ರಧಾನ ಸಮಾರಂಭದ ವೆಚ್ಚ ಹಾಗೂ ಪ್ರಶಸ್ತಿ ವೆಚ್ಚ ಸೇರಿ ಒಟ್ಟು ರೂ.90.00 ಲಕ್ಷಗಳನ್ನು ಸರ್ಕಾರಿ ಆದೇಶ ಸಂಖ್ಯೆ ಕಸಂವಾಪ್ರ 217 ಕಸಧ 2008 ದಿನಾಂಕ:30.10.2008ರಲ್ಲಿ ಬಿಡುಗಡೆ ಮಾಡಿರುವುದರಿಂದ ಕೇವಲ ರೂ.10.00ಲಕ್ಷ ಉಳಿಕೆ ಹಣ ಇರುವುದಾಗಿ ತಿಳಿಸಿ, ಅನಿವಾಸಿ ಭಾರತೀಯ ಕೋಶಕ್ಕೆ ಹಣ ಬಿಡುಗಡೆ ಮಾಡಲು ಸಾಧ್ಯವಾಗದ ಕಾರಣ ಈ ಉಳಿಕೆ ಹಣವನ್ನು ಅನಿವಾಸಿ ಭಾರತೀಯ ಕೋಶಕ್ಕೆ ಬಿಡುಗಡೆ ಮಾಡಲು ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಿನಾಂಕ:18.12.2008ರಂದು ಹೊರಡಿಸಿದ ಆದೇಶವನ್ನು ರದ್ದುಗೊಳಿಸಿ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಅದರ ಉಪಾಧ್ಯಕ್ಷರ ಆಪ್ತ ಶಾಖೆಗೆ ಹಾಗೂ ಅವರ ಕಚೇರಿ ವೆಚ್ಚಗಳನ್ನು ನಿರ್ವಹಿಸಲು ಆಡಳಿತ ಇಲಾಖೆಯಾದ ಸಿಆಸುಇ (ರಾಜ್ಯ ಶಿಷ್ಟಾಚಾರ)ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖಯ ಲೆಕ್ಕ ಶೀರ್ಷಿಕೆ 2205–00–800–0–09–059 (ಇತರೆ ಖರ್ಚು) (ಯೋಜನೆ) ಯಡಿಯಲ್ಲಿ ಒದಗಿಸಿರುವ ರೂ.100.00 ಲಕ್ಷಗಳಲ್ಲಿ

ರೂ 10.00 ಲಕ್ಷಗಳನ್ನು ಬಿಡುಗಡೆ ಮಾಡಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆರವರಿಗೆ ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ:02.02.2009ರ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರು ಅನಿವಾಸಿ ಭಾರತೀಯ ಕೋಶಕ್ಕೆ ಒದಗಿಸಿರುವ ರೂ.100.00 ಲಕ್ಷಗಳಲ್ಲಿ ಕೊರತೆಯಾಗಿರುವ ರೂ.90.00 ಲಕ್ಷಗಳನ್ನು ಸುವರ್ಣ ಕರ್ನಾಟಕ ಯೋಜನೆಯಡಿ ಉಳಿತಾಯವಾಗುವ ಲೆಕ್ಕ ಶೀರ್ಷಿಕೆ 2205-00-102-4-09-059(ಯೋಜನೆ)ಯಿಂದ ಲೆಕ್ಕ ಶೀರ್ಷಿಕೆ 2205-00-800-0-09-059(ಯೋಜನೆ)ಗೆ ಮರು ಹೊಂದಾಣಿಕೆ ಮಾಡಿಕೊಳ್ಳಬಹುದಾಗಿರುತ್ತದೆಂದು ತಿಳಿಸಿ, ಮರು ಹೊಂದಾಣಿಕೆ ಮಾಡಿ ಬಿಡುಗಡೆ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಅನಿವಾಸಿ ಭಾರತೀಯರ ಕೋಶಕ್ಕೆ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನವನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಅಧಿಕಾರ ಪ್ರತ್ಯಾಯೋಜನೆ ಇರುವುದಿಲ್ಲವಾದ್ದರಿಂದ ಬೇರೆ ಉದ್ದೇಶಕ್ಕೆ ಅನುದಾನ ಉಪಯೋಗಿಸಲು ಹೊರಡಿಸಿದ ಆದೇಶವನ್ನು ರದ್ದು ಪಡಿಸಬೇಕೆಂದು ತೀರ್ಮಾನಿಸಿ, ಮೇಲೆ (5)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2008ನೇ ಸಾಲಿನ ರಾಜ್ಯ ಪ್ರಶಸ್ತಿ ಪ್ರಧಾನ ಮಾಡುವ ಸಮಾರಂಭದ ವೆಚ್ಚ ಹಾಗೂ ಪ್ರಶಸ್ತಿ ವೆಚ್ಚಕ್ಕಾಗಿ ರೂ.90.00ಗಳನ್ನು ಅನಿವಾಸಿ ಭಾರತೀಯ ಕೋಶಕ್ಕೆ ನಿಗಧಿಪಡಿಸಿದ್ದ ಲೆಕ್ಕ ಶೀರ್ಷಿಕೆ 2205-00-800-0-09-059(ಯೋಜನೆ)ಯಡಿ ಬಿಡುಗಡೆ ಮಾಡಲಾದ ಸರ್ಕಾರಿ ಆದೇಶ ಸಂಖ್ಯೆ: ಕಸಂಪಾಪ್ರ 217 ಕಸಧ 2008 ದಿನಾಂಕ:30-10-2008ನ್ನು ರದ್ದು ಪಡಿಸಲಾಗಿರುತ್ತದೆ. ಹಾಗೂ ಅನಿವಾಸಿ ಭಾರತೀಯರ ಕೋಶಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂಪಾಪ್ರ 67 ಕಸನಿ 2008, ಬೆಂಗಳೂರು, ದಿನಾಂಕ 20ನೇ ಮಾರ್ಚ್, 2009

ಪ್ರಸಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಅದರ ಉಪಾಧ್ಯಕ್ಷರ ಆಪ್ತಶಾಖೆಗೆ ಹಾಗೂ ಅವರ ಕಛೇರಿಯ ವೆಚ್ಚಗಳನ್ನು ನಿರ್ವಹಿಸಲು ಆಡಳಿತ ಇಲಾಖೆಯಾದ ಸಿಆಸುಇ (ರಾಜ್ಯ ಶಿಷ್ಟಾಚಾರ)ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಲೆಕ್ಕಶೀರ್ಷಿಕೆ 2205-00-800-0-09-059 (ಇತರೆ ಖರ್ಚು) (ಯೋಜನೆ) ಅಡಿಯಲ್ಲಿ ಒದಗಿಸಿರುವ ರೂ.100.00 ಲಕ್ಷಗಳಲ್ಲಿ ಬಾಕಿ ಉಳಿದ ರೂ.90.00 ಲಕ್ಷಗಳನ್ನು (ರೂಪಾಯಿ ತೊಂಭತ್ತು ಲಕ್ಷಗಳು) ಬಿಡುಗಡೆ ಮಾಡಲು ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರು ಸಮರ್ಪಕವಾಗಿ ಸದರಿ ಮೊತ್ತವನ್ನು ಡ್ರಾ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ) ರವರಿಗೆ ಬಿಡುಗಡೆ ಮಾಡಲು ಕ್ರಮವಹಿಸುವಂತೆ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:06-03-2009ರ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ. ಆಇ 278 ವೆಚ್ಚ: 7/2009ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1049

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ವಿಷಯ : ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಗ್ರಾಮದ ಬೆಟ್ಟದ ಮೇಲಿರುವ ಶ್ರೀ ಯೋಗನರಸಿಂಹ ಸ್ವಾಮಿ ದೇವಾಲಯದ ರಾಜಗೋಪುರದ ದುರಸ್ತಿ –ಅನುದಾನ ಮಂಜೂರಾತಿ

ಓದಲಾಗಿದೆ :

1 ಕಂದಾಯ ಇಲಾಖೆಯ ಅ.ಸ. ಪತ್ರ ಸಂಖ್ಯೆ: ಕಂಇ 45 ಮುಜರಾಯಿ 2007 ದಿನಾಂಕ 13.12.2007

2. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಅವರ ಪತ್ರ ಸಂಖ್ಯೆ: ಡಿಎಎಂ : ಎಸಿಟಿ.6:3/2007-08/176 ದಿನಾಂಕ 19.12.2007

3. ಸರ್ಕಾರಿ ಆದೇಶ ಸಂಖ್ಯೆ ಕಂಇ 45 ಮುಅಕಾ 2005 ದಿನಾಂಕ 23.07.2008

4. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಅವರ ಪತ್ರ ಸಂಖ್ಯೆ: ಡಿಎಎಂ:ಎಸಿಟಿ.6:105:2008-09 ದಿನಾಂಕ 17.09.2008,

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಅರೆ ಸರ್ಕಾರಿ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ಕಂದಾಯ ಇಲಾಖೆ, ಇವರು ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಗ್ರಾಮದ ಬೆಟ್ಟದ ಮೇಲಿರುವ ಶ್ರೀ ಯೋಗನರಸಿಂಹ ಸ್ವಾಮಿ ದೇವಾಲಯದ ರಾಜಗೋಪುರದ ದುರಸ್ತಿಗೆ ಸಂಬಂಧಿಸಿದಂತೆ ಸದರಿ ದೇವಸ್ಥಾನವು ಅತ್ಯಂತ ಪುರಾತನವಾಗಿದ್ದು ಶಿಥಿಲಾವಸ್ಥೆಯಲ್ಲಿದ್ದು, ಯಾವುದೇ ಸಮಯದಲ್ಲಿ ಜೀಳುವ ಸಂಭವವಿರುವುದರಿಂದ ಅತ್ಯಂತ ತುರ್ತಾಗಿ ದುರಸ್ಥಿ/ಜೀರ್ಣೋದ್ದಾರ ಮಾಡಬೇಕೆಂದು ಕೋರಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ 19.12.2007ರ ಪತ್ರದಲ್ಲಿ ನಿರ್ದೇಶಕರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ಮೈಸೂರು ಇವರು ಮೇಲುಕೋಟೆ ಗ್ರಾಮದ ಬೆಟ್ಟದ ಮೇಲಿರುವ ಶ್ರೀ ಯೋಗನರಸಿಂಹ ಸ್ವಾಮಿ ದೇವಾಲಯದ ಸಂರಕ್ಷಣಾ ಕಾರ್ಯವನ್ನು ಆರಂಭಿಸಲು ಹೆಚ್ಚುವರಿ ಅನುದಾನದ ರೂಪದಲ್ಲಿ ರೂ.30.00 ಲಕ್ಷ ಅನುದಾನ ನೀಡಬೇಕೆಂದು ಕೋರಿರುತ್ತಾರೆ.

ಮೇಲೆ (3) ರಲ್ಲಿ ಓದಲಾದ ದಿನಾಂಕ 23.07.2008ರ ಸರ್ಕಾರಿ ಆದೇಶದಲ್ಲಿ ರಾಜಗೋಪುರ ದುರಸ್ತಿ ಕಾರ್ಯಕ್ಕೆ ಪ್ರಾಚ್ಯವಸ್ತು ಇಲಾಖೆ ತಯಾರಿಸಿರುವ ರೂ.27.00 ಲಕ್ಷಗಳ ಅಂದಾಜು ಪಟ್ಟಿ ನಕ್ಷೆಗೆ ಅನುಮತಿ ನೀಡಿ ಕಾಮಗಾರಿಗೆ ಸರ್ಕಾರದಿಂದ ಮಂಜೂರಾದ ರೂ.10.00 ಲಕ್ಷಗಳನ್ನು ಭರಿಸಿಕೊಂಡು ಉಳಿದ ಮೊತ್ತದಲ್ಲಿ ರಾಜ್ಯ ಪ್ರಾಚ್ಯವಸ್ತು ಇಲಾಖಾ ವತಿಯಿಂದ ಹಾಗೂ ಶ್ರೀ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್‌ದಿಂದ ತಲಾ 8.10 ಲಕ್ಷಗಳನ್ನು ಭರಿಸಿಕೊಂಡು, ಉಳಿಕೆ ಮೊತ್ತವನ್ನು ದೇವಸ್ಥಾನದ ನಿಧಿಯಿಂದ ಭರಿಸಿಕೊಂಡು ಕಾಮಗಾರಿ ಪೂರ್ಣಗೊಳಿಸುವಂತೆ ಆದೇಶಿಸಿದೆ.

ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ಇವರು ಮೇಲೆ (4) ರಲ್ಲಿ ಓದಲಾದ ದಿನಾಂಕ 17.09.2008ರ ಪತ್ರದಲ್ಲಿ 2008-09ನೇ ಆರ್ಥಿಕ ಸಾಲಿನಲ್ಲಿ ಕ್ರಿಯಾಯೋಜನೆಯು ಈಗಾಗಲೇ ಸರ್ಕಾರದಿಂದ ಅನುಮೋದನೆ ಆಗಿರುವುದರಿಂದ ಮೇಲುಕೋಟೆ ಗ್ರಾಮದ ಬೆಟ್ಟದ ಮೇಲಿರುವ ಶ್ರೀ ಯೋಗನರಸಿಂಹ ಸ್ವಾಮಿ ದೇವಾಲಯದ ರಾಜಗೋಪುರ ದುರಸ್ತಿ ಕಾಮಗಾರಿಯು ಕ್ರಿಯಾಯೋಜನೆಯಲ್ಲಿ ಸೇರಿರುವುದಿಲ್ಲ ಆದರೆ ಕಂದಾಯ ಇಲಾಖೆಯು ತನ್ನ ಆದೇಶದಲ್ಲಿ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್ ಹಾಗೂ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ಸಹಭಾಗಿತ್ವದೊಂದಿಗೆ ಮ್ಯಾಚಿಂಗ್ ಗ್ರಾಂಟ್ ಮೂಲಕ ಈ ಕಾಮಗಾರಿಯನ್ನು ಕೈಗೊಳ್ಳಲು ಆದೇಶಿಸಿರುವುದರಿಂದ ಮಾನ್ಯ ಜಿಲ್ಲಾಧಿಕಾರಿಗಳ ಕೋರಿಕೆಯ ಮೇರೆಗೆ ಈ ಇಲಾಖೆಯ ವತಿಯಿಂದ ರೂ.8.10 ಲಕ್ಷವನ್ನು ಅವರಲ್ಲಿ ಠೇವಣಿ ಇಡಬೇಕಾಗಿದೆ. ಈ ಮೊಬಲಗನ್ನು ಪ್ರಸಕ್ತ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2205-00-103-0-01 (ಯೋಜನೇತರ) 059- ಇತರೆ ಖರ್ಚು ಅಡಿಯಲ್ಲಿನ ಸಂಭವನೀಯ ಉಳಿತಾಯದಲ್ಲಿ ಭರಿಸಬಹುದಾಗಿದೆಯೆಂದು ತಾಳೆ ಪಟ್ಟಿಯೊಂದಿಗೆ ಪ್ರಸ್ತಾವನೆ ಸಲ್ಲಿಸಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ಇಲಾಖಾ ವತಿಯಿಂದ ರೂ.8.10 ಲಕ್ಷವನ್ನು ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ ಇವರಲ್ಲಿ ಠೇವಣಿ ಇಡಲು ಮಂಜೂರಾತಿ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 278 ಕೆಎಂಯು 2007, ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಗ್ರಾಮದ ಬೆಟ್ಟದ ಮೇಲಿರುವ ಶ್ರೀ ಯೋಗನರಸಿಂಹ ಸ್ವಾಮಿ ದೇವಾಲಯದ ರಾಜಗೋಪುರದ ದುರಸ್ತಿ ಕಾರ್ಯವನ್ನು ರೂ.27.00 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ನಿರ್ಧರಿಸಿದಂತೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯ ಮ್ಯಾಚಿಂಗ್ ಗ್ರಾಂಟ್ ಆದ ರೂ.8.10 ಲಕ್ಷ (ರೂಪಾಯಿ ಎಂಟು ಲಕ್ಷದ ಹತ್ತು ಸಾವಿರಗಳು ಮಾತ್ರ) ವನ್ನು ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ ಮಂಡ್ಯ ಇವರಲ್ಲಿ ಠೇವಣಿ ಇಡಲು ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಮೈಸೂರು ಇವರಿಗೆ ಅನುಮತಿ ನೀಡಿದೆ. ಸದರಿ ಅನುದಾನವನ್ನು ಲೆಕ್ಕಶೀರ್ಷಿಕೆ 2205-00-103-0-01 (ಯೋಜನೇತರ) 059- ಇತರೆ ಖರ್ಚು ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ಅವರ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಇಡಿ 405 ಐಎಫ್ (ಬಿಎ) 2009 ದಿನಾಂಕ 17-02-2009ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1050

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ವಿಷಯ : ಕನ್ನಡ ಭವನ ಕದಂಬ ವಿಭಾಗದ ಲಿಫ್ಟ್‌ನ ವಾರ್ಷಿಕ ನಿರ್ವಹಣಾ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1 ಮೆ॥ ತೈಸ್ಸನ್ ಕ್ರುಪ್ ಎಲಿವೇಟರ್(ಇಂಡಿಯಾ) ಪ್ರೈ.ಲಿಮಿಟೆಡ್‌ಪತ್ರ ಸಂಖ್ಯೆ: ಟಿಕೆಇಐ/ ಬಿಎನ್‌ಜಿ/, ಮೈಂಟ್/ಎಂಕೆಹೆಚ್/ಎಂ.ಎಸ್.ವಿ.ಎಲ್.ಎಂ.ಬಿ 458/2008–09 ದಿನಾಂಕ: 10.2.2009

2. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅವರ ಪತ್ರ ಸಂಖ್ಯೆ: ಕಸನಿ:5: ಲಿಫ್ಟ್:2005–06 ದಿನಾಂಕ:26.02.2009

ಪ್ರಸ್ತಾವನೆ:

ಮೆ॥ ತೈಸ್ಸನ್ ಕ್ರುಪ್ ಎಲಿವೇಟರ್(ಇಂಡಿಯಾ) ಪ್ರೈ.ಲಿಮಿಟೆಡ್ ಬೆಂಗಳೂರು ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ 10.02.2009ರ ಪತ್ರದಲ್ಲಿ ಕನ್ನಡ ಭವನದಲ್ಲಿ ಕದಂಬ ವಿಭಾಗದಲ್ಲಿ ಅಳವಡಿಸಿರುವ ಲಿಫ್ಟ್‌ನ ದಿನಾಂಕ 01.02.2009 ರಿಂದ 31.01.2010ರವರೆಗಿನ ವಾರ್ಷಿಕ ನಿರ್ವಹಣೆಗೆ ರೂ. 62,300–00ಗಳು ಮತ್ತು ಅದರ ಮೇಲೆ ಶೇಕಡ 12.36% ರಷ್ಟು ಸೇವಾ ತೆರಿಗೆ ಸೇರಿಸಿ ಒಟ್ಟು ರೂ. 70,000–00 ಭರಿಸಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರನ್ನು ಕೋರಿರುತ್ತಾರೆ. ಮೇಲೆ (2)ರಲ್ಲಿ ಓದಲಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ದಿನಾಂಕ 26.02.2009ರ ಪತ್ರದಲ್ಲಿ ದಿನಾಂಕ: 15.12.2008ರಂದು ಕನ್ನಡ ಭವನದಲ್ಲಿ ಲೋಕೋಪಯೋಗಿ ಇಲಾಖೆಯ ವಿದ್ಯುತ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕದಂಬ ವಿಭಾಗದ ಲಿಫ್ಟ್ ಅಳವಡಿಸಿದ ಕಂಪನಿಯ ಸಹಾಯಕ ವ್ಯವಸ್ಥಾಪಕರೊಂದಿಗೆ ಇಲಾಖಾ ಅಧಿಕಾರಿಗಳು ಚರ್ಚಿಸಿ ವಾರ್ಷಿಕ ನಿರ್ವಹಣೆಯ ವೆಚ್ಚವನ್ನು ರೂ. 70,000–00 ಗಳಿಗೆ ನಿಗಧಿಪಡಿಸಿರುವುದರಿಂದ ಪ್ರಸಕ್ತ ಸಾಲಿನ ಲೆಕ್ಕ ಶೀರ್ಷಿಕೆ 4202–04–800–1–01–139 (ಯೋಜನೆ)ಯಡಿ ಈ ಮೊತ್ತವನ್ನು ಭರಿಸಲು ಸೂಕ್ತ ಆದೇಶ ನೀಡಬೇಕೆಂದು ಕೋರಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 28 ಕಸನಿ 2008, ಬೆಂಗಳೂರು, ದಿನಾಂಕ: 25ನೇ ಮಾರ್ಚ್ 2009

ಬೆಂಗಳೂರು ಜೆ.ಸಿ.ರಸ್ತೆಯಲ್ಲಿರುವ ಕನ್ನಡ ಭವನದ ಕದಂಬ ವಿಭಾಗದಲ್ಲಿರುವ ತೈಸ್ಸನ್ ಕ್ರುಪ್‌ನ ಎಲಿವೇಟರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ರವರು ಅಳವಡಿಸಿರುವ ಲಿಫ್ಟ್‌ನ ದಿನಾಂಕ 01.2.2009 ರಿಂದ 31.10.2010 ರವರೆಗಿನ ವಾರ್ಷಿಕ ನಿರ್ವಹಣೆಗೆ ವೆಚ್ಚವಾಗುವ ರೂ. 70,000–00 (ರೂಪಾಯಿ ಎಪ್ಪತ್ತು ಸಾವಿರ ಮಾತ್ರ) ಗಳನ್ನು ಭರಿಸಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರಿಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಸರ್ಕಾರದ ಅನುಮತಿ ನೀಡಲಾಗಿದೆ.

1. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ದ ಪ್ರಕಾರ ಕ್ರಮವಹಿಸುವುದು.
2. ಈ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋಅದೇ ಉದ್ದೇಶಕ್ಕೆ ಬಳಸಿಕೊಳ್ಳಬೇಕು.
3. ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸುವುದು.

ಈ ಮೊತ್ತವನ್ನು 2008–09ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 4202–04–800–1–01–139 (ಯೋಜನೆ) ಇದರಡಿ ನಯನ ರಂಗಮಂದಿರ ನಿರ್ವಹಣೆಗೆ ನಿಗಧಿಪಡಿಸಿರುವ ರೂ. 5.00 ಲಕ್ಷ ಅನುದಾನದ ಮೊತ್ತದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಶಿಇ 907 ಐಎಫ್(ಬಿಎ) 2009, ದಿನಾಂಕ 20.03.2009ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1086

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ : ಸುವರ್ಣ ಕರ್ನಾಟಕದ ಆಚರಣೆ ಸಂದರ್ಭದಲ್ಲಿ ನಾಡಿನ ಐತಿಹಾಸಿಕ ಸಂಸ್ಕೃತಿ ಉಳಿಸಲು ತಾಳೇಗರಿಗಳಲ್ಲಿರುವ ಸಾಹಿತ್ಯ ಮತ್ತು ಸಾಂಸ್ಕೃತಿಕ ಮಹತ್ವವನ್ನು ಸಾರುವ ಅಪ್ರಕಟಿತ ತಾಳೇಗರಿಗಳ ಪ್ರಕಟಣೆ ಕುರಿತ(2007–08ನೇ ಮುಂದುವರಿದ ಕ್ರಿಯಾ ಯೋಜನೆ) 2008–09ರಲ್ಲಿ ರೂಪಿಸಲು ಪ್ರಕಟಣೆಗೆ ಅನುದಾನ ನೀಡುವ ಬಗ್ಗೆ

ಓದಲಾಗಿದೆ : ನಿರ್ದೇಶಕರು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಅವರ ಪತ್ರ ಸಂ:ಎಆರ್‌ಎಸ್ 27 ಎಡಿಎಂ 2006 ದಿ:18.2.2009

ಪ್ರಸ್ತಾವನೆ:

ನಿರ್ದೇಶಕರು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಅವರ ಮೇಲೆ (1)ರಲ್ಲಿ ಓದಲಾದ ದಿನಾಂಕ 18.02.2009ರ ಪತ್ರದಲ್ಲಿ 2006-07ರ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ನಾಡಿನಲ್ಲಿ ಅಳಿದುಳಿದಿರುವ ಅಪ್ರಕಟಿತ ತಾಳೆಗರಿಗಳನ್ನು ಕರ್ನಾಟಕ ರಾಜ್ಯ ಪತ್ರಾಗಾರ ಮುಖೇನ ಪ್ರಕಟಿಸಲಾಗುವುದೆಂದು ತಿಳಿಸಿದ್ದು ಅದರನ್ವಯ ಸರ್ಕಾರವು ತಜ್ಞರ ಸಮಿತಿಯೊಂದನ್ನು ರೂಪಿಸಿದ್ದು ಅದರ ಮಾರ್ಗದರ್ಶನದಂತೆ 25. ಅಮೂಲ್ಯ ಅಪ್ರಕಟಿತ ಗ್ರಂಥಗಳನ್ನು ಮುದ್ರಿಸಿ ಪ್ರಕಟಿಸಲು ಕಾರ್ಯ ಹಮ್ಮಿಕೊಳ್ಳಲಾಯಿತು. ಈ ಗ್ರಂಥಗಳನ್ನು ಮುದ್ರಿಸಲು ಮುದ್ರಣ ಇಲಾಖೆಗೆ ನೀಡಲಾಗಿದ್ದು 25 ಗ್ರಂಥಗಳಲ್ಲಿ ಪ್ರತಿಯೊಂದು ಗ್ರಂಥದ 500 ಪ್ರತಿಗಳನ್ನು ಮುದ್ರಿಸಿ ಒದಗಿಸುವಂತೆ ಕೋರಲಾಗಿದ್ದು ಮುದ್ರಣದ ಒಟ್ಟು ಮೊತ್ತ ರೂ. 14,97,540-00ಗಳಾಗಿದ್ದು 2007-08ನೇ ಸಾಲಿನಲ್ಲಿ ಮೀಸಲಿರಿಸಿದ್ದ ರೂ. 10.00ಲಕ್ಷಗಳಲ್ಲಿ ರೂ.8.60 ಲಕ್ಷಗಳನ್ನು ಮುದ್ರಣ ಇಲಾಖೆಗೆ ಪಾವತಿಸಲಾಗಿರುತ್ತದೆ ಎಂದು ತಿಳಿಸುತ್ತಾ, 2008-09ನೇ ಸಾಲಿನಲ್ಲಿ ಅನುಮೋದಿತವಾಗಿರುವ ಯೋಜನೇತರ ಬಾಬ್ತಿನಿಂದ ಈ ಕಾರ್ಯ ಕೈಗೊಳ್ಳಲು ಹಾಗೂ ಮುದ್ರಣ ಇಲಾಖೆಗೆ ಬಾಕಿ ಮೊತ್ತವಾದ ರೂ. 6,37,540-00ನ್ನು ಪಾವತಿಸಬೇಕಾಗಿರುವುದರಿಂದ, ಈ ಬಗ್ಗೆ ಸರ್ಕಾರದ ಅದೇಶ ಹೊರಡಿಸಲು ನಿರ್ದೇಶಕರು ಕೋರಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 7 ರಾಪಸ 2009, ಬೆಂಗಳೂರು, ದಿನಾಂಕ: 25ನೇ ಮಾರ್ಚ್ 2009

ಸುವರ್ಣ ಕರ್ನಾಟಕದ ಆಚರಣೆ ಸಂದರ್ಭದಲ್ಲಿ ನಾಡಿನ ಐತಿಹಾಸಿಕ ಸಂಸ್ಕೃತಿ ಉಳಿಸಲು ತಾಳೇಗರಿಗಳಲ್ಲಿರುವ ಸಾಹಿತ್ಯ ಮತ್ತು ಸಾಂಸ್ಕೃತಿಕ ಮಹತ್ವವನ್ನು ಸಾರುವ ಅಪ್ರಕಟಿತ ತಾಳೇಗರಿಗಳ ಪ್ರಕಟಣೆ ಕಾರ್ಯವನ್ನು 2008-09ನೇ ಸಾಲಿನಲ್ಲಿ ಯೋಜನೇತರ ಬಾಬ್ತಿನಿಂದ ಕೈಗೊಳ್ಳಲು ಹಾಗೂ ಮುದ್ರಣ ಇಲಾಖೆಗೆ ಬಾಕಿ ಇರುವ ಮೊತ್ತ ರೂ. 6,37,540-00 (ರೂಪಾಯಿ ಆರು ಲಕ್ಷದ ಮೂವತ್ತೇಳು ಸಾವಿರದ ಐನೂರ ನಲವತ್ತು ಮಾತ್ರ) ಗಳನ್ನು ಪಾವತಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000 ದಲ್ಲಿನ ವಿದಿವಿಧಾನಗಳನ್ನು ಪಾಲಿಸುವ ಷರತ್ತಿಗೆ ಒಳಪಟ್ಟು ನಿರ್ದೇಶಕರು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಬೆಂಗಳೂರು ಇವರಿಗೆ ಈ ಮೂಲಕ ಸರ್ಕಾರದ ಅನುಮತಿ ನೀಡಲಾಗಿದೆ.

ಈ ಸಂಬಂಧ ತಗಲುವ ವೆಚ್ಚಗಳನ್ನು 2008-09ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205-00-104-0-01-051 (ಯೋಜನೇತರ) ಸಾಮಾನ್ಯ ವೆಚ್ಚಗಳ ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಶಿಇ 948 ಐಎಫ್(ಬಿಎ) 2009, ದಿನಾಂಕ 21.03.2009ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1087

ಎಂ.ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ:- ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ 2008-09ನೇ ಸಾಲಿನ ಎರಡನೇ ಕಂತಿನ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂ.ಗ್ರಾಅಪ.4.ಡಬ್ಲ್ಯೂಜಿಪಿ:2008 ದಿನಾಂಕ:16.4.2008.
2. ಸರ್ಕಾರದ ಸಮಸಂಖ್ಯೆಯ ಆದೇಶಗಳ ದಿನಾಂಕ:11.8.2008 ಹಾಗೂ 19.1.2009.
3. ಯೋಜನಾ ಆಯೋಗ (ಪಶ್ಚಿಮ ಘಟ್ಟಗಳ ಸಚಿವಾಲಯ), ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂ. ಪಿಸಿ (ಪಿ) 19/ 320/ ಎಸ್‌ಸಿಎ/2008-ಡಬ್ಲ್ಯೂಜಿಎಸ್ ದಿನಾಂಕ. 2.3.2009.
4. ಹಣಕಾಸು ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರ ಆದೇಶ ಸಂ.ಎಫ್.ನಂ.44(6) ಪಿಎಫ್I/2008-564 ದಿನಾಂಕ. 12.3.2009.
5. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂ.ಆಇ. 279. ಎಫ್‌ಆರ್‌ಸಿ.2009 ದಿನಾಂಕ. 19.3.2009.

ಪ್ರಸ್ತಾವನೆ:-

ಭಾರತ ಸರ್ಕಾರದ ಯೋಜನಾ ಆಯೋಗದ ಪಶ್ಚಿಮ ಘಟ್ಟಗಳ ಸಚಿವಾಲಯವು ಮೇಲೆ ಓದಲಾದ ಪತ್ರ(3)ರಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 2008-09ನೇ ಸಾಲಿನ ಒಟ್ಟಾರೆ ಅನುದಾನ ರೂ.2924.00 ಲಕ್ಷ ಪೈಕಿ ಶೇ.25 ರಷ್ಟು ಅಂದರೆ ರೂ.731.00 ಲಕ್ಷ ಆಗಲಿದ್ದು, ಅದರಲ್ಲಿ ವಿಶೇಷ ಕೇಂದ್ರ ಅನುದಾನದ ನಿಧಿ ಭಾಗದ ಮೊತ್ತವಾದ ರೂ.657.90 ಲಕ್ಷಗಳನ್ನು ಎರಡನೇ ಕಂತಿನ ಅನುದಾನವಾಗಿ ರಾಜ್ಯಕ್ಕೆ ಬಿಡುಗಡೆ ಮಾಡಲು ಪ್ರಸ್ತಾಪಿಸಿದ್ದು, ಭಾರತ ಸರ್ಕಾರದ ಹಣಕಾಸು ಮಂತ್ರಾಲಯವು ಸದರಿ ಅನುದಾನವನ್ನು ಮೇಲೆ ಓದಲಾದ ಪತ್ರ (4) ರಂತೆ ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತದೆ. ಈ ಅನುದಾನವು ರಾಜ್ಯ ಸರ್ಕಾರದ ಖಾತೆಗೆ ಜಮೆ ಆಗಿರುವ ಬಗ್ಗೆ ಆರ್ಥಿಕ ಇಲಾಖೆಯು ಮೇಲೆ ಓದಲಾದ ಪತ್ರ (5) ರಂತೆ ದಿನಾಂಕ:19.3.2009 ರಂದು ಜಮಾ ದೃಢೀಕರಣ ಪತ್ರವನ್ನು ನೀಡಿರುತ್ತದೆ.

2008-09ನೇ ಸಾಲಿಗೆ ರಾಜ್ಯ ಆಯವ್ಯಯದಲ್ಲಿ ಪೂರಕ ಅಂದಾಜಿನ ಮುಖಾಂತರ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒದಗಿಸಿರುವ ಹೆಚ್ಚುವರಿ ಅನುದಾನ ರೂ.839.00 ಲಕ್ಷ ಪೈಕಿ, 2008-09ನೇ ಸಾಲಿನ ಎರಡನೇ ಕಂತಿನ ಅನುದಾನವನ್ನು ರಾಜ್ಯದ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ. ಗ್ರಾಅಪ. 6. ಡಬ್ಲ್ಯೂಜಿಪಿ.2008, ಬೆಂಗಳೂರು ದಿನಾಂಕ: 26ನೇ ಮಾರ್ಚ್ 2009

ಕೇಂದ್ರ ಪುರಸ್ಕೃತ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮವನ್ನು 2008-09ನೇ ಸಾಲಿನಲ್ಲಿ ಅನುಮೋದಿತ ಕ್ರಿಯಾ ಯೋಜನೆಯ ಅನ್ವಯ ಅನುಷ್ಠಾನಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಕೇಂದ್ರ ಪಾಲಿನ ಎರಡನೇ ಕಂತಿನ ವಿಶೇಷ ಕೇಂದ್ರ ಅನುದಾನ ರೂ.657.90 ಲಕ್ಷ ಪೈಕಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಯೋಜನಾ ಕೋಶಕ್ಕೆ ರೂ.5.40 ಲಕ್ಷ ಅನುದಾನ ಹೊಂದಾಣಿಕೆ ಮಾಡಿಕೊಂಡು ಬಾಕಿ ಉಳಿದ ಅನುದಾನ ರೂ.652.50 ಲಕ್ಷ ಪೈಕಿ 2007-08ನೇ ಸಾಲಿನ ಅಂತ್ಯಕ್ಕೆ ಖರ್ಚಾಗದೇ ಉಳಿದಿರುವ ಅನುದಾನವನ್ನು ಭಾಗಶಃ ಕಡಿತಗೊಳಿಸಿ ಉಳಿಕೆ ಅನುದಾನ ರೂ.416.894 (ನಾಲ್ಕು ಕೋಟಿ ಹದಿನಾರು ಲಕ್ಷ ಎಂಭತ್ತೊಂಭತ್ತು ಸಾವಿರದ ನಾಲ್ಕು ನೂರು ರೂಪಾಯಿಗಳು ಮಾತ್ರ)ಗಳನ್ನು ರಾಜ್ಯದ 11 ಜಿಲ್ಲಾ ಪಂಚಾಯತಿಗಳಿಗೆ ಅನುಬಂಧ-1 ರಲ್ಲಿ ತೋರಿಸಿರುವಂತೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಬಿಡುಗಡೆ ಮಾಡಲಾಗಿದೆ.

1. 2008-09ನೇ ಸಾಲಿನಲ್ಲಿ ನಿಮ್ಮ ಜಿಲ್ಲೆಯ ಕ್ರಿಯಾ ಯೋಜನೆಯಲ್ಲಿ ನಮೂದಿಸಿರುವ ಕಾರ್ಯಕ್ರಮಗಳನ್ನು ಮಾತ್ರ ನಿಮ್ಮ ಜಿಲ್ಲೆಗೆ ನಿಗದಿಪಡಿಸಿರುವ ಅನುದಾನಕ್ಕೊಳಪಟ್ಟು ಅನುಷ್ಠಾನಗೊಳಿಸುವುದು.
2. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸುತ್ತಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸುವುದು.
3. ಒಂದು ವಲಯಕ್ಕೆ ನಿಗದಿಪಡಿಸಿರುವ ಅನುದಾನವನ್ನು ಇನ್ನೊಂದು ವಲಯಕ್ಕೆ ಯಾವುದೇ ಕಾರಣಕ್ಕೂ ವರ್ಗಾಯಿಸಬಾರದು.
4. ಹಾಲಿಬಿಡುಗಡೆ ಮಾಡಿರುವ ಅನುದಾನದಲ್ಲಿ ಅನುಮೋದಿತ ಕ್ರಿಯಾ ಯೋಜನೆಯಲ್ಲಿನ ಮುಂದುವರೆದ ಅಪೂರ್ಣ ಕಾಮಗಾರಿಗಳಿಗೆ ಪ್ರಥಮ ಆದ್ಯತೆ ನೀಡಿ ಪೂರ್ಣಗೊಳಿಸತಕ್ಕದ್ದು.
5. ಸಾಂಬಾರು ಮಂಡಳಿಯ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸರ್ಕಾರದ ಪತ್ರ ಸಂ.ಗ್ರಾಅಪ.5.ಡಬ್ಲ್ಯೂಜಿಪಿ. 2008(ಭಾ) ದಿನಾಂಕ:25.10.2008 ಹಾಗೂ 13.01.2009ರಲ್ಲಿ ಸೂಚಿಸಿರುವಂತೆ ನಿಗದಿತ ಅನುದಾನವನ್ನು ಆ ಮಂಡಳಿಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳು ಬಿಡುಗಡೆ ಮಾಡುವುದು.
6. 2007-08ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನದಲ್ಲಿ ದಿನಾಂಕ:31.03.2008ಕ್ಕೆ ಖರ್ಚಾಗದೇ ಉಳಿದಿರುವ ಅನುದಾನವನ್ನು, 2008-09ನೇ ಸಾಲಿಗೆ ನಿಮ್ಮ ಜಿಲ್ಲೆಯ ಅನುಮೋದಿತ ಆಯವ್ಯಯದಲ್ಲಿನ ಎರಡನೇ ಕಂತಿನ ಅನುದಾನದಲ್ಲಿ ಅನುಬಂಧ-1ರಲ್ಲಿ ತೋರಿಸಿರುವಂತೆ ವಸೂಲಾತಿ ಮಾಡಿಕೊಳ್ಳಲಾಗಿದೆ.
7. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲೇ ಪ್ರತಿ ತ್ರೈಮಾಸಿಕ ವರದಿಯನ್ನು ಸಕಾಲದಲ್ಲಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವುದು.
8. ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು ಸಹಾಯಾನುದಾನದ ಬಿಲ್ಲಿನ ಮೇಲೆ ನಿಯಮಗಳ ಪ್ರಕಾರ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಖಜಾನೆಯಿಂದ ಪಡೆಯುವುದು.

"2551-ಗುಡ್ಡಗಾಡು ಪ್ರದೇಶಗಳು-01-ಪಶ್ಚಿಮ ಘಟ್ಟಗಳು-198 ಗ್ರಾಮ ಪಂಚಾಯತಿಗಳಿಗೆ ಸಹಾಯ-6-ಗ್ರಾಮ ಪಂಚಾಯತ್- ಕೇಂದ್ರ ಪುರಸ್ಕೃತ ಯೋಜನೆ 02-ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ (ಯೋಜನೆ)"

ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ.ಗ್ರಾಅಪ.114.ಪಿಬಿಎಸ್.2009ರ ದಿನಾಂಕ.26-03-2009 ರಲ್ಲಿ ಸಹಮತಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಪಿ.ಸಿ. ಜಾಫರ್
ನಿರ್ದೇಶಕರು
ಯೋಜನೆ, ಸಮನ್ವಯ ಹಾಗೂ ಮೇಲ್ವಿಚಾರಣಾ ಘಟಕ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಅನುಬಂಧ-1

ಸರ್ಕಾರದ ಆದೇಶದ ಸಂ. ಗ್ರಾಅಪ. 6. ಡಬ್ಲ್ಯೂಜಿಪಿ 2008, ಬೆಂಗಳೂರು, ದಿನಾಂಕ:26.3.2009

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದಡಿ 2008-09ನೇ ಸಾಲಿನ ಜಿಲ್ಲಾವಾರು ಎರಡನೇ ಕಂತಿನ ಅನುದಾನ ಬಿಡುಗಡೆ ತಃಖ್ತೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ಜಿಲ್ಲೆಯ ಕೋಡ್	2008-09ನೇ ಸಾಲಿನ ಜಿಲ್ಲಾ-ವಾರು ಅನುದಾನ ಹಂಚಿಕೆ	ಜಿಲ್ಲೆಗಳಿಗೆ ಬಿಡುಗಡೆ ಮಾಡ ಬೇಕಾಗಿದ್ದ 2008-09 ನೇ ಸಾಲಿನ ಎರಡನೇ ಕಂತಿನ ಅನುದಾನ (ವಿಶೇಷ ಕೇಂದ್ರ ಅನುದಾನ)	2007-08ನೇ ಸಾಲಿನ ಅಂತಿಮ ಶಿಲ್ಕು (2007-08ನೇ ಸಾಲಿನ ಅಂತ್ಯಕ್ಕೆ ಖರ್ಚಾಗದೇ ಉಳಿದಿರುವ ಅನುದಾನ)	2007-08ನೇ ಸಾಲಿನ ಅಂತ್ಯಕ್ಕೆ ಖರ್ಚಾಗದೇ ಉಳಿದಿರುವ ಅನುದಾನದ ಅಂತಿಮ ವಸೂಲಾತಿ/ ಕಡಿತ	ಜಿಲ್ಲೆಗಳಿಗೆ ಬಿಡುಗಡೆ ಮಾಡುತ್ತಿರುವ ಎರಡನೇ ಕಂತಿನ ಅನುದಾನ
1	2	3	4	5	6	7	8
1	ಬೆಳಗಾಂ	413	473.75	106.594	15.743	15.743	90.851
2	ಚಾಮರಾಜನಗರ	456	86.20	19.395	2.477	2.477	16.918
3	ಚಿಕ್ಕಮಗಳೂರು	408	276.35	62.179	57.782	57.782	4.397
4	ದಕ್ಷಿಣ ಕನ್ನಡ	409	206.30	46.417	0.602	0.602	45.815
5	ಧಾರವಾಡ	415	67.20	15.120	10.985	10.985	4.135
6	ಹಾಸನ	410	221.65	49.871	2.081	2.081	47.790
7	ಕೊಡಗು	411	247.90	55.778	5.225	5.225	50.553
8	ಮೈಸೂರು*	407	96.95	21.814	40.983	21.814	0.000
9	ಶಿವಮೊಗ್ಗ	405	410.45	92.351	34.921	34.921	57.430
10	ಉಡುಪಿ	457	296.85	66.791	44.990	44.990	21.801
11	ಉತ್ತರ ಕನ್ನಡ	416	516.40	116.190	38.986	38.986	77.204
	ಒಟ್ಟು:		**2900.00**	**652.500**	**254.775**	**235.606**	**416.894**
12	ಪ. ಘ. ಅ.ಕಾ ಯೋಜನಾ ಕೋಶ		24.00	5.400	0.000	0.000	5.400
	ಜುಮ್ಲಾ		**2924.00**	**657.900**	**254.775**	**235.606**	**422.294**

* 2007-08ನೇ ಸಾಲಿನ ಅಂತ್ಯಕ್ಕೆ ಖರ್ಚಾಗದೇ ಉಳಿದಿರುವ ಅನುದಾನವನ್ನು ವಸೂಲಾತಿ ಮಾಡಿಕೊಂಡಿರುವುದರಿಂದ ಮೈಸೂರು ಜಿಲ್ಲೆಗೆ ಎರಡನೇ ಕಂತಿನ ಅನುದಾನ ಬಿಡುಗಡೆಗೆ ಲಭ್ಯವಿರುವುದಿಲ್ಲ.

ಡಾ: ಪಿ.ಸಿ. ಜಾಫರ್
ನಿರ್ದೇಶಕರು
ಯೋಜನೆ, ಸಮನ್ವಯ ಹಾಗೂ ಮೇಲ್ವಿಚಾರಣಾ ಘಟಕ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪಿ.ಆರ್. 1111

ವಿಷಯ:- ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದಡಿ 2008-09ನೇ ಸಾಲಿನ ವಿಶೇಷ ಯೋಜನೆಗಳಿಗಾಗಿ ಚಿಕ್ಕಮಗಳೂರು, ಹಾಸನ, ಮೈಸೂರು, ಶಿವಮೊಗ್ಗ, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲಾ ಪಂಚಾಯತಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-
1. ಯೋಜನಾ ಆಯೋಗ, ಭಾರತ ಸರ್ಕಾರ, ನವದೆಹಲಿ ರವರ ಪತ್ರ ಸಂ. PC(P)19/125/KAR/2008-WGS ದಿನಾಂಕ.26.8.2008, 27.1.2009 ಹಾಗೂ 2.3.2009.
2. ಯೋಜನಾ ಆಯೋಗ (ಪಶ್ಚಿಮ ಘಟ್ಟಗಳ ಸಚಿವಾಲಯ), ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂ. ಪಿಸಿ (ಪಿ) 19/ 320/ ಎಸ್‌ಸಿಎ/2008-ಡಬ್ಲ್ಯೂಜಿಎಸ್ ದಿನಾಂಕ. 2.3.2009.
3. ಹಣಕಾಸು ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರ ಆದೇಶ ಸಂ.ಎಫ್.ನಂ.44(6) ಪಿಎಫ್I/2008-564 ದಿನಾಂಕ. 12.3.2009.
4. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂ.ಆಇ. 279. ಎಫ್‌ಆರ್‌ಸಿ.2009 ದಿನಾಂಕ. 19.3.2009.

ಪ್ರಸ್ತಾವನೆ:-

ಭಾರತ ಸರ್ಕಾರದ ಯೋಜನಾ ಆಯೋಗದ ಪಶ್ಚಿಮ ಘಟ್ಟಗಳ ಸಚಿವಾಲಯವು ಮೇಲೆ ಓದಲಾದ ಪತ್ರ(1)ರಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದಡಿ 2007-08 ನೇ ಸಾಲಿನ ಅಂತ್ಯಕ್ಕೆ ಖರ್ಚಾಗದೇ ಉಳಿದ ಅನುದಾನಕ್ಕೆ ಅನುಗುಣವಾಗಿ, 2008-09 ನೇ ಸಾಲಿನಲ್ಲಿ ರಾಜ್ಯದ ಚಿಕ್ಕಮಗಳೂರು, ಹಾಸನ, ಮೈಸೂರು, ಶಿವಮೊಗ್ಗ, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲೆಗಳ ಒಟ್ಟು ರೂ.254.775 ಲಕ್ಷ ಮೊತ್ತದ ವಿಶೇಷ ಯೋಜನೆಗಳ ಅನುಷ್ಠಾನಕ್ಕಾಗಿ ಮಂಜೂರಾತಿ ನೀಡಿ, ಅನುದಾನವನ್ನು ಬಳಸಲು ಅನುಮೋದನೆ ನೀಡಿದೆ. 2007-08 ನೇ ಸಾಲಿನ ಅಂತ್ಯಕ್ಕೆ ಖರ್ಚಾಗದೇ ಉಳಿದ ಭಾಗಶ: ಅನುದಾನವನ್ನು ಹಾಲಿ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಸದರಿ ವಿಶೇಷ ಯೋಜನೆಗಳ ಅನುಷ್ಠಾನಕ್ಕಾಗಿ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ಅನುದಾನವನ್ನು ಬಿಡುಗಡೆ ಮಾಡಬೇಕಿರುತ್ತದೆ. ಆದರೆ, 2008-09 ನೇ ಸಾಲಿಗೆ ರಾಜ್ಯ ಆಯವ್ಯಯದಲ್ಲಿ ಪೂರಕ ಅಂದಾಜಿನ ಮುಖಾಂತರ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒಟ್ಟಾರೆ ಹೆಚ್ಚುವರಿ ಅನುದಾನ ರೂ.839.00 ಲಕ್ಷ ಒದಗಿಸಿದ್ದರೂ, ಜಿಲ್ಲಾವಾರು ಹಂಚಿಕೆಯಲ್ಲಿ ಚಿಕ್ಕಮಗಳೂರು(ರೂ.17.217 ಲಕ್ಷ) ಹಾಗೂ ಹಾಸನ(ರೂ.30.255 ಲಕ್ಷ) ಜಿಲ್ಲೆಗಳಿಗೆ ಸೇರಿ ಒಟ್ಟಾರೆ ರೂ.47.472 ಲಕ್ಷ ಅನುದಾನದ ಕೊರತೆ ಉಂಟಾಗಿರುತ್ತದೆ. ಮುಂದುವರೆದು, 2008-09ನೇ ಸಾಲಿನ ಸದರಿ ವಿಶೇಷ ಯೋಜನೆಗಳನ್ನು ತುರ್ತಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲಾ ಪಂಚಾಯತಿಗಳಿಗೆ ಪ್ರಸಕ್ತ ಸಾಲಿನ ರಾಜ್ಯ ಆಯವ್ಯಯ ಹಂಚಿಕೆಯಂತೆ ಲಭ್ಯವಿರುವ ಭಾಗಶ: ಅನುದಾನವನ್ನು ಹಾಗೂ ಮೈಸೂರು, ಶಿವಮೊಗ್ಗ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗಳಿಗೆ ವಿಶೇಷ ಯೋಜನೆಗಳ ಮಂಜೂರಾತಿ ಅನ್ವಯ ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ.ಗ್ರಾಅಪ.6.ಡಬ್ಲ್ಯೂಜಿಪಿ.2008(ಭಾ) ಬೆಂಗಳೂರು, ದಿನಾಂಕ: 26ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಕೇಂದ್ರ ಸರ್ಕಾರದ ಯೋಜನಾ ಆಯೋಗವು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದಡಿ 2008-09 ನೇ ಸಾಲಿನಲ್ಲಿ ಮಂಜೂರಾತಿ ನೀಡಿರುವ ರಾಜ್ಯದ ಆರು ವಿಶೇಷ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಬಿಡುಗಡೆ ಮಾಡಬೇಕಾಗಿದ್ದ ಅನುದಾನ ರೂ.254.775 ಲಕ್ಷ ಪೈಕಿ ಭಾಗಶ: ಅನುದಾನ ಅಂದರೆ ಅನುಬಂಧದಲ್ಲಿ ತೋರಿಸಿರುವಂತೆ ಒಟ್ಟು ರೂ.188.133 ಲಕ್ಷ (ಒಂದು ಕೋಟಿ ಎಂಭತ್ತೆಂಟು ಲಕ್ಷ ಹದಿಮೂರು ಸಾವಿರದ ಮೂರು ನೂರು ರೂಪಾಯಿಗಳು ಮಾತ್ರ) ಗಳನ್ನು ರಾಜ್ಯದ ಆರು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದೆ.

ಸದರಿ ವಿಶೇಷ ಯೋಜನೆಗಳನ್ನು ಈ ಕೆಳಕಂಡ ನಿಬಂಧನೆಗಳ ಅಡಿಯಲ್ಲಿ ಅನುಷ್ಠಾನಗೊಳಿಸುವುದು.

1. 2008-09ನೇ ಸಾಲಿನಲ್ಲಿ ಮಂಜೂರಾಗಿರುವ ಮೇಲ್ಕಂಡ ವಿಶೇಷ ಕ್ರಿಯಾ ಯೋಜನೆಗಳಲ್ಲಿ ನಮೂದಿಸಿರುವ ಕಾರ್ಯಕ್ರಮಗಳನ್ನು ಮಾತ್ರ ನಿಮ್ಮ ಜಿಲ್ಲೆಗೆ ನಿಗದಿಪಡಿಸಿರುವ ಅನುದಾನಕ್ಕೊಳಪಟ್ಟು ಅನುಷ್ಠಾನಗೊಳಿಸುವುದು.
2. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಕಾಲಕಾಲಕ್ಕೆ ಹೊರಡಿಸುತ್ತಿರುವ ಮಾರ್ಗಸೂಚಿಗಳನ್ವಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
3. ಒಂದು ವಲಯದ ಅನುದಾನವನ್ನು ಇನ್ನೊಂದು ವಲಯಕ್ಕೆ ಯಾವುದೇ ಕಾರಣಕ್ಕೂ ವರ್ಗಾಯಿಸಬಾರದು
4. ಈ ವಿಶೇಷ ಯೋಜನೆಗಳ ಪ್ರಗತಿ ಬಗ್ಗೆ ಮಾಸಿಕ ವರದಿ, ಹಣ ಬಳಕೆ ಪ್ರಮಾಣ ಪತ್ರ ಹಾಗೂ ಆಡಿಟ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.
5. ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಸಹಾಯಾನುದಾನದ ಬಿಲ್ಲಿನ ಮೇಲೆ ನಿಯಮಗಳ ಪ್ರಕಾರ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಖಜಾನೆಯಿಂದ ಪಡೆಯುವುದು.

"2551–ಗುಡ್ಡಗಾಡು ಪ್ರದೇಶಗಳು–01–ಪಶ್ಚಿಮ ಘಟ್ಟಗಳು–198 ಗ್ರಾಮ ಪಂಚಾಯತಿಗಳಿಗೆ ಸಹಾಯ–6–ಗ್ರಾಮ ಪಂಚಾಯತ್–02–ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ (ಯೋಜನೆ)"

ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂ.ಗ್ರಾಅಪ.114.ಪಿಬಿಎಸ್.2009ರ ದಿನಾಂಕ.26–03–2009 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಪಿ.ಸಿ. ಜಾಫರ್

ನಿರ್ದೇಶಕರು

ಯೋಜನೆ, ಸಮನ್ವಯ ಹಾಗೂ ಮೇಲ್ವಿಚಾರಣಾ ಘಟಕ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸರ್ಕಾರದ ಆದೇಶ ಸಂ.ಗ್ರಾಅಪ.6:ಡಬ್ಲ್ಯೂಜಿಪಿ.2008(ಭಾ) ಬೆಂಗಳೂರು, ದಿನಾಂಕ. 26–03–2009ಕ್ಕೆ ಅನುಬಂಧ

(ರೂ.ಲಕ್ಷಗಳಲ್ಲಿ)

ಕ. ಸಂ.	ಜಿಲ್ಲಾ ಪಂಚಾಯತ್	ಯೋಜನೆ	ಒಟ್ಟು ಮಂಜೂರಾದ ಅನುದಾನ	ಕಾಲಂ 4 ರ ಪೈಕಿ		
				ಹೊಂದಾಣಿಕೆ ಮಾಡಿ ಕೊಂಡಿರುವ (2007–08 ನೇ ಸಾಲಿನ ಅಂತ್ಯಕ್ಕೆ ಖರ್ಚಾಗದೇ ಉಳಿದ) ಅನುದಾನ	ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನ	ಬಿಡುಗಡೆಗೆ ಬಾಕಿ ಇರುವ ಅನುದಾನ
1	ಚಿಕ್ಕಮಗಳೂರು	ಚಿಕ್ಕಮಗಳೂರು ಜಿಲ್ಲೆಯ ಮಳೆ ನೀರು ಕೊಯ್ಲು ಹಾಗೂ ಅರಣ್ಯೀಕರಣ ವಿಶೇಷ ಯೋಜನೆ	75.000	–	57.783	17.217
2	ಹಾಸನ	ಸಕಲೇಶಪುರ ತಾಲ್ಲೂಕಿನ ಕೂಡು ರಸ್ತೆ ನಿರ್ಮಾಣ ವಿಶೇಷ ಯೋಜನೆ	32.335	–	2.080	30.255
3	ಮೈಸೂರು	ಹೆಚ್.ಡಿ.ಕೋಟೆ ತಾಲ್ಲೂಕಿನ ಗ್ರಾಮೀಣ ರಸ್ತೆ ಹಾಗೂ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿ ವಿಶೇಷ ಯೋಜನೆ	19.170	19.170	–	–
4	ಶಿವಮೊಗ್ಗ	ತೀರ್ಥಹಳ್ಳಿ ತಾಲ್ಲೂಕಿನ ಹೆಡ್ಡೂರು ಜಲಾನಯನ ಅಭಿವೃದ್ಧಿ ವಿಶೇಷ ಯೋಜನೆ	34.920	–	34.920	–
5	ಉಡುಪಿ	ಕುಂದಾಪುರ ಹಾಗೂ ಕಾರ್ಕಳ ತಾಲ್ಲೂಕುಗಳ ಕಾಲು ಸೇತುವೆ ನಿರ್ಮಾಣ ವಿಶೇಷ ಯೋಜನೆ	42.500	–	42.500	–
6	ಉತ್ತರ ಕನ್ನಡ	ಯಲ್ಲಾಪೂರ ತಾಲ್ಲೂಕಿನ ಕಿರು ಜಲಾನಯನ ಅಭಿವೃದ್ಧಿ ಹೆಚ್ಚುವರಿ ವಿಶೇಷ ಯೋಜನೆ	50.850	–	50.850	–
		ಒಟ್ಟು:	**254.775**	**19.170**	**188.133**	**47.472**

(ಮೊಬಲಗು ಒಂದು ಕೋಟಿ ಎಂಭತ್ತೆಂಟು ಲಕ್ಷ ಹದಿಮೂರು ಸಾವಿರದ ಮೂರು ನೂರು ರೂಪಾಯಿಗಳು ಮಾತ್ರ)

ಡಾ: ಪಿ.ಸಿ. ಜಾಫರ್

ನಿರ್ದೇಶಕರು

ಯೋಜನೆ, ಸಮನ್ವಯ ಹಾಗೂ ಮೇಲ್ವಿಚಾರಣಾ ಘಟಕ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪಿ.ಆರ್. 1112

ವಿಷಯ:- ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕಮದಡಿ 2008-09ನೇ ಸಾಲಿನ ವಿಶೇಷ ಯೋಜನೆಗಳ ಬಾಬ್ತು ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲಾ ಪಂಚಾಯತಿಗಳಿಗೆ ಬಾಕಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-
1. ಯೋಜನಾ ಆಯೋಗ, ಭಾರತ ಸರ್ಕಾರ, ನವದೆಹಲಿ ರವರ ಪತ್ರ ಸಂ. PC(P)19/125/KAR/2008-WGS ದಿನಾಂಕ.26.8.2008, 27.1.2009 ಹಾಗೂ 2.3.2009.
2. ಯೋಜನಾ ಆಯೋಗ(ಪಶ್ಚಿಮ ಘಟ್ಟಗಳ ಸಚಿವಾಲಯ), ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂ. ಪಿಸಿ (ಪಿ) 19/ 320/ ಎಸ್‌ಸಿಎ/2008-ಡಬ್ಲ್ಯೂಜಿಎಸ್ ದಿನಾಂಕ. 2.3.2009.
3. ಹಣಕಾಸು ಮಂತಾಲಯ, ಭಾರತ ಸರ್ಕಾರ, ನವದೆಹಲಿ ಇವರ ಆದೇಶ ಸಂ.ಎಫ್.ನಂ.44(6) ಪಿಎಫ್I/2008-564 ದಿನಾಂಕ. 12.3.2009.
4. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂ.ಆಇ. 279. ಎಫ್‌ಆರ್‌ಸಿ.2009 ದಿನಾಂಕ. 19.3.2009.
5. ಸರ್ಕಾರದ ಸಮಸಂಖ್ಯೆಯ ಆದೇಶದ ದಿನಾಂಕ:26.3.2009.
6. ಸರ್ಕಾರದ ಆದೇಶ ಸಂ.ಗ್ರಾಅಪ.6.ಡಬ್ಲ್ಯೂಜಿಪಿ.2008 ದಿನಾಂಕ:30.3.2009.

ಪ್ರಸ್ತಾವನೆ:-

ಭಾರತ ಸರ್ಕಾರದ ಯೋಜನಾ ಆಯೋಗದ ಪಶ್ಚಿಮ ಘಟ್ಟಗಳ ಸಚಿವಾಲಯವು ಮೇಲೆ ಓದಲಾದ ಪತ್ರ(1)ರಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕಮದಡಿ 2007-08 ನೇ ಸಾಲಿನ ಅಂತ್ಯಕ್ಕೆ ಖರ್ಚಾಗದೇ ಉಳಿದ ಅನುದಾನಕ್ಕೆ ಅನುಗುಣವಾಗಿ, 2008-09 ನೇ ಸಾಲಿನಲ್ಲಿ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯ ರೂ.75.00 ಲಕ್ಷ ಹಾಗೂ ಹಾಸನ ಜಿಲ್ಲೆಯ ರೂ.32.335 ಲಕ್ಷ ಮೊತ್ತದ ವಿಶೇಷ ಯೋಜನೆಗಳ ಅನುಷ್ಠಾನಕ್ಕಾಗಿ ಮಂಜೂರಾತಿ ನೀಡಿ, ಅನುದಾನವನ್ನು ಬಳಸಲು ಅನುಮೋದನೆ ನೀಡಿದೆ. ಈ ಪೈಕಿ ಮೇಲೆ ಓದಲಾದ ಆದೇಶ(5)ರಲ್ಲಿ ರಾಜ್ಯದ ಜಿಲ್ಲಾವಾರು ಆಯವ್ಯಯ ಹಂಚಿಕೆಯಲ್ಲಿನ ಕೊರತೆಯಿಂದಾಗಿ ಸದರಿ ವಿಶೇಷ ಯೋಜನೆಗಳ ಬಾಬ್ತು ಚಿಕ್ಕಮಗಳೂರು ಜಿಲ್ಲಾ ಪಂಚಾಯತಿಗೆ ರೂ.57.783 ಹಾಗೂ ಹಾಸನ ಜಿಲ್ಲಾ ಪಂಚಾಯತಿಗೆ ರೂ.2.080 ಲಕ್ಷ ಭಾಗಶ: ಅನುದಾನವನ್ನು ಮಾತ್ರ ಬಿಡುಗಡೆ ಮಾಡಿದ್ದು, ಒಟ್ಟಾರೆ ರೂ.47.472 (ರೂ.17.217+ರೂ.30.255)ಲಕ್ಷ ಅನುದಾನ ಬಿಡುಗಡೆಗೆ ಬಾಕಿ ಇರುತ್ತದೆ. ಆನಂತರ, ಮೇಲೆ ಓದಲಾದ ಆದೇಶ(6)ರಲ್ಲಿ ಸದರಿ ಅನುದಾನವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿನ ಹೆಚ್ಚುವರಿ ಹಂಚಿಕೆಯಿಂದ ಉಳಿತಾಯವಾಗುತ್ತಿರುವ ಜಿಲ್ಲೆಗಳಿಂದ ಪುನರ್ವಿನಿಯೋಗದ ಮೂಲಕ ಮರು ಹಂಚಿಕೆ ಮಾಡಿಕೊಳ್ಳಲಾಗಿದೆ. ಅದರಂತೆ ಹಾಲಿ ಲಭ್ಯವಾಗಿರುವ ಆಯವ್ಯಯ ಹಂಚಿಕೆಯಿಂದ ಮೇಲ್ಕಂಡ ವಿಶೇಷ ಯೋಜನೆಗಳ ಬಾಬ್ತು ಬಿಡುಗಡೆಗೆ ಬಾಕಿ ಇರುವ ಅನುದಾನವನ್ನು ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ.ಗ್ರಾಅಪ.6.ಡಬ್ಲ್ಯೂಜಿಪಿ.2008(ಭಾ) ಬೆಂಗಳೂರು, ದಿನಾಂಕ: 30ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಕೇಂದ್ರ ಸರ್ಕಾರದ ಯೋಜನಾ ಆಯೋಗವು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕಮದಡಿ 2008-09 ನೇ ಸಾಲಿನಲ್ಲಿ ಮಂಜೂರಾತಿ ನೀಡಿರುವ ರಾಜ್ಯದ ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳ ವಿಶೇಷ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಬಿಡುಗಡೆ ಮಾಡಬೇಕಾಗಿದ್ದ ಬಾಕಿ ಅನುದಾನ ರೂ.47.472 ಲಕ್ಷ (ನಲವತ್ತೇಳು ಲಕ್ಷ ನಲವತ್ತೇಳು ಸಾವಿರದ ಎರಡು ನೂರು ರೂಪಾಯಿ) ಗಳನ್ನು ಮಾತ್ರ ಈ ಕೆಳಕಂಡಂತೆ ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲಾ ಪಂಚಾಯತಿ	ಯೋಜನೆ	ಒಟ್ಟು ಮಂಜೂರಾದ ಅನುದಾನ	ಸರ್ಕಾರದ ಆದೇಶ ದಿನಾಂಕ:26-3-2009 ರಂತೆ ಈಗಾಗಲೇ ಬಿಡುಗಡೆ ಮಾಡಿರುವ ಅನುದಾನ	ಹಾಲಿ ಬಿಡುಗಡೆ ಮಾಡುತ್ತಿರುವ ಬಾಕಿ ಅನುದಾನ
1	ಚಿಕ್ಕಮಗಳೂರು	ಚಿಕ್ಕಮಗಳೂರು ಜಿಲ್ಲೆಯ ಮಳೆ ನೀರು ಕೊಯ್ಲು ಹಾಗೂ ಅರಣ್ಯೀಕರಣ ವಿಶೇಷ ಯೋಜನೆ	75.000	57.783	17.217
2	ಹಾಸನ	ಸಕಲೇಶಪುರ ತಾಲ್ಲೂಕಿನ ಕೂಡು ರಸ್ತೆ ನಿರ್ಮಾಣ ವಿಶೇಷ ಯೋಜನೆ	32.335	2.080	30.255
		ಒಟ್ಟು:	107.335	59.863	47.472

ಸದರಿ ವಿಶೇಷ ಯೋಜನೆಗಳನ್ನು ಈ ಕೆಳಕಂಡ ನಿಬಂಧನೆಗಳ ಅಡಿಯಲ್ಲಿ ಅನುಷ್ಠಾನಗೊಳಿಸುವುದು.

1. 2008–09ನೇ ಸಾಲಿನಲ್ಲಿ ಮಂಜೂರಾಗಿರುವ ಮೇಲ್ಕಂಡ ವಿಶೇಷ ಕ್ರಿಯಾ ಯೋಜನೆಗಳಲ್ಲಿ ನಮೂದಿಸಿರುವ ಕಾರ್ಯಕ್ರಮಗಳನ್ನು ಮಾತ್ರ ನಿಮ್ಮ ಜಿಲ್ಲೆಗೆ ನಿಗದಿಪಡಿಸಿರುವ ಅನುದಾನಕ್ಕೊಳಪಟ್ಟು ಅನುಷ್ಠಾನಗೊಳಿಸುವುದು.
2. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಕಾಲಕಾಲಕ್ಕೆ ಹೊರಡಿಸುತ್ತಿರುವ ಮಾರ್ಗಸೂಚಿಗಳನ್ವಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
3. ಒಂದು ವಲಯದ ಅನುದಾನವನ್ನು ಇನ್ನೊಂದು ವಲಯಕ್ಕೆ ಯಾವುದೇ ಕಾರಣಕ್ಕೂ ವರ್ಗಾಯಿಸಬಾರದು
4. ಈ ವಿಶೇಷ ಯೋಜನೆಗಳ ಪ್ರಗತಿ ಬಗ್ಗೆ ಮಾಸಿಕ ವರದಿ, ಹಣ ಬಳಕೆ ಪ್ರಮಾಣ ಪತ್ರ ಹಾಗೂ ಆಡಿಟ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.
5. ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಸಹಾಯಾನುದಾನದ ಬಿಲ್ಲಿನ ಮೇಲೆ ನಿಯಮಗಳ ಪ್ರಕಾರ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಖಜಾನೆಯಿಂದ ಪಡೆಯುವುದು.

"2551–ಗುಡ್ಡಗಾಡು ಪ್ರದೇಶಗಳು –01–ಪಶ್ಚಿಮ ಘಟ್ಟಗಳು–198 ಗ್ರಾಮ ಪಂಚಾಯತಿಗಳಿಗೆ ಸಹಾಯ–6–ಗ್ರಾಮ ಪಂಚಾಯತ್–02–ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮ (ಯೋಜನೆ)"

ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂ.ಗ್ರಾಅಪ.114.ಪಿಬಿಎಸ್.2009ರ ದಿನಾಂಕ.26–03–2009 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಪಿ.ಸಿ. ಜಾಫರ್

ನಿರ್ದೇಶಕರು

ಯೋಜನೆ, ಸಮನ್ವಯ ಹಾಗೂ ಮೇಲ್ವಿಚಾರಣಾ ಘಟಕ

ಪಿ.ಆರ್. 1113

ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ವಿಷಯ: 2008–09 ನೇ ಸಾಲಿಗೆ ಎಸ್‌ಜಿಎಸ್‌ವೈ ಎರಡನೇ ಕಂತಿನ ಹಾಗೂ ಕಡಿತಗೊಳಿಸಿದ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022/1/2008 ಎಸ್‌ಜಿಎಸ್‌ವೈ–I (12) ದಿನಾಂಕ :02–04–08, (39) ದಿನಾಂಕ 22–05–08 ಮತ್ತು (63) ದಿನಾಂಕ 26–06–08
2) ರಾಜ್ಯ ಸರ್ಕಾರದ ಆದೇಶ ಸಮ ಸಂಖ್ಯೆ ದಿನಾಂಕ 12–05–08 ಮತ್ತು 29–07–08.
3) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022/1/2008 ಎಸ್‌ಜಿಎಸ್‌ವೈ–I (126) ದಿನಾಂಕ: 18–12–08, (146) ದಿನಾಂಕ 14–01–09, (171) ದಿನಾಂಕ:28–01–09, (183) ದಿನಾಂಕ:09–02–09, (198) ದಿನಾಂಕ 18–02–09, (226) ದಿನಾಂಕ 12–03–09 ಮತ್ತು (227) ದಿನಾಂಕ 12–03–09
4) ರಾಜ್ಯ ಸರ್ಕಾರದ ಆದೇಶ ಸಮ ಸಂಖ್ಯೆ ದಿನಾಂಕ 30–01–09, 16–02–09, 02–03–09 ಮತ್ತು 21–03–09.
5) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ:ಜೆ 12022 / 1 / 2008 ಎಸ್‌ಜಿಎಸ್‌ವೈ–I. (276) ದಿನಾಂಕ 23–03–09 ಮತ್ತು (277) ದಿನಾಂಕ 23–03–09
6) ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 65 ಎಸ್‌ಜೆವೈ 2008 ದಿನಾಂಕ 11–03–09.
7) ಸರ್ಕಾರದ ಆದೇಶದ ಸಂಖ್ಯೆ : ಗ್ರಾಅಪ 65 ಎಸ್‌ಜೆವೈ 2008 ದಿನಾಂಕ 21–03–09.

ಪ್ರಸ್ತಾವನೆ:

2008–09ನೇ ಸಾಲಿನಲ್ಲಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಕೇಂದ್ರ ಸರ್ಕಾರವು ಓದಲಾಗಿದೆ (1) ರಲ್ಲಿ ಒಂದನೇ ಕಂತಿನ ಅನುದಾನವಾಗಿ ಒಟ್ಟು ರೂ.40,08,44,000 ಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದ್ದು, ಇದರನ್ವಯ ಓದಲಾಗಿದೆ (2) ರನ್ವಯ ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಜಿಲ್ಲೆಗಳಿಗೆ ಲಭ್ಯವಿರುವ ಅನುದಾನದಂತೆ ತನ್ನ ಪಾಲಿನ ಮೊದಲನೇ ಕಂತಿನ ಅನುದಾನ ರೂ.13,21,59,000 ಬಿಡುಗಡೆ ಮಾಡಲಾಗಿದೆ. ಓದಲಾಗಿದೆ (3) ರಲ್ಲಿನ ದಿನಾಂಕಗಳಲ್ಲಿ ಕೇಂದ್ರ ಸರ್ಕಾರ ಈ ಯೋಜನೆಗೆ ರಾಜ್ಯದ 28 ಜಿಲ್ಲೆಗಳಿಗೆ ಎರಡನೇ

ಕಂತಿನ ಅನುದಾನವಾಗಿ ಒಟ್ಟು ರೂ.29,23,37,000 ಗಳನ್ನು ಬಿಡುಗಡೆ ಮಾಡಿದೆ ಹಾಗೂ ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗೆ ಕಡಿತಗೊಳಿಸಿದ್ಧ ಅನುದಾನವನ್ನು ಪೂರ್ವಸ್ಥಿತಿಗೆ ತಂದು ರೂ.23,38,000 ಗಳನ್ನು ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಜಿಲ್ಲೆಗೆ ಲಭ್ಯವಿರುವ ಅನುದಾನದ ಆಧಾರದ ಮೇಲೆ ಓದಲಾಗಿದೆ (4) ರ ಆದೇಶದಲ್ಲಿ ತನ್ನ ಪಾಲಿನ ಎರಡನೇ ಕಂತಿನ ಅನುದಾನ ರೂ. 9,36,49,000 ಗಳನ್ನು ಬಿಡುಗಡೆ ಮಾಡಿದೆ.

ಓದಲಾಗಿದೆ (5) ರ ಪತ್ರಗಳಲ್ಲಿ ಕೇಂದ್ರ ಸರ್ಕಾರ ಎಸ್‌ಜಿಎಸ್‌ವೈ ಯಡಿ ರಾಜ್ಯದ ದಾವಣಗೆರೆ ಜಿಲ್ಲಾ ಪಂಚಾಯತಿಗೆ ಎರಡನೇ ಕಂತಿನ ಅನುದಾನವಾಗಿ ರೂ.1,27,75,000 ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ ರಾಜ್ಯ ಸರ್ಕಾರವು ದಾವಣಗೆಗೆ ಜಿಲ್ಲಾ ಪಂಚಾಯತಿಗೆ ತನ್ನ ಪಾಲಿನ ಎರಡನೇ ಕಂತಿನ ಅನುದಾನ ರೂ.42,58,000 ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಇದಲ್ಲದೆ, ಕೇಂದ್ರ ಸರ್ಕಾರ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವಾಗ ಕಡಿತಗೊಳಿಸಿದ್ದ ಅನುದಾನವನ್ನು ಪೂರ್ವಸ್ಥಿತಿಗೆ ತಂದು ಓದಲಾಗಿದೆ (5) ರ ಪತ್ರ ಸಂಖ್ಯೆ (277) ದಿನಾಂಕ 23-03-2009 ರಲ್ಲಿ ರಾಜ್ಯದ 24 ಜಿಲ್ಲಾ ಪಂಚಾಯತಿಗಳಿಗೆ ರೂ.9,20,18,000 ಗಳನ್ನು ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನ ರೂ.3,06,73,000 ಬಿಡುಗಡೆ ಮಾಡಬೇಕಾಗಿದೆ. ಆದರೆ ಕೆಲವೊಂದು ಜಿಲ್ಲಾ ಪಂಚಾಯತಿಗಳಿಂದ ಮರ್ನವಿನಿಯೋಗ ಮಾಡಿಕೊಂಡು ಓದಲಾಗಿದೆ (6) ಮತ್ತು (7) ರಲ್ಲಿ ಅನುದಾನ ಕೊರತೆ ಇದ್ದ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿತ್ತು. ಈ ಕಾರಣವಾಗಿ ಕೆಲವೊಂದು ಜಿಲ್ಲಾ ಪಂಚಾಯತಿಗಳಲ್ಲಿ ಅನುದಾನ ಲಭ್ಯತೆ ಇರುವುದಿಲ್ಲ. ಆದುದರಿಂದ ಜಿಲ್ಲಾ ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನದ ಆಧಾರದ ಮೇಲೆ ರಾಜ್ಯದ 24 ಜಿಲ್ಲಾ ಪಂಚಾಯತಿಗಳಿಗೆ ರೂ.77,72,000 ಬಿಡುಗಡೆಗೊಳಿಸಬೇಕಾಗಿದೆ. ರಾಜ್ಯದ 25 ಜಿಲ್ಲಾ ಪಂಚಾಯತಿಗಳಿಗೆ ರೂ.1,20,30,000 ಗಳನ್ನು ಬಿಡುಗಡೆ ಮಾಡ ಬೇಕಾದುದರಿಂದ ಈ ಆದೇಶ:

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 32 ಎಸ್‌ಜೆವೈ 2008, ಬೆಂಗಳೂರು, ದಿನಾಂಕ: 26ನೇ ಮಾರ್ಚ್ 2009

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನವನ್ನು ಅನುಬಂಧದಲ್ಲಿ ತೋರಿಸಿರುವ 25 ಜಿಲ್ಲಾ ಪಂಚಾಯತಿಗಳಿಗೆ ಒಟ್ಟು ರೂ.1,20,30,000 ಗಳನ್ನು (ರೂ. ಒಂದು ಕೋಟಿ ಇಪ್ಪತ್ತು ಲಕ್ಷದ ಮೂವತ್ತು ಸಾವಿರ ಮಾತ್ರ) ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಷರತ್ತುಗಳು :

1999 ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯ ಮಾದರಿ ಕೇಂದ್ರ ಮತ್ತು ರಾಜ್ಯದ ನಡುವೆ 75 : 25 ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ 2501-ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು-01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-198-ಗ್ರಾಮ ಪಂಚಾಯತ್‌ಗಳಿಗೆ ಸಹಾಯ-6-ಗ್ರಾಮ ಪಂಚಾಯತ್‌ಗಳು-01-ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2008-09 (2501-01-198-6-01) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ 14-07-2005 ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 14 ಎಸ್ ಜೆ ವೈ 2007 ದಿನಾಂಕ 18-04-2007 ರ ಸೂಚನೆಯಂತೆ ಕ್ರಮ ಕೈಗೊಳ್ಳುವುದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

2008-09ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರು ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಮಾಸಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ onlineಗೆ upload ಮಾಡಿ ಪ್ರತಿಯನ್ನು ಸ್ವ ಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ : ಗ್ರಾಅಪ 116 ಪಿಬಿಎಸ್ 2009 ದಿನಾಂಕ 26-03-2009 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಶಮ್ಲಾ ಇಕ್ಬಾಲ್

ನಿರ್ದೇಶಕರು (ಸ್ವಉಕಾ) ಹಾಗೂ

ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅನುಬಂಧ

ಸರ್ಕಾರದ ಆದೇಶದ ಸಂಖ್ಯೆ : ಗ್ರಾಅಪ 32 ಎಸ್‌ಜಿವೈ 2008, ಬೆಂಗಳೂರು, ದಿನಾಂಕ : 26-03-2009

(ಅ) (ರೂ.ಗಳಲ್ಲಿ)

ಕ್ರ ಸಂ	ಜಿಲ್ಲಾ ಪಂಚಾಯತಿ ಹೆಸರು	ಜಿ.ಪಂ. ಕೋಡ್	ಡಿ.ಡಿ.ಓ **ಕೋಡ್**	ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಎರಡನೇ ಕಂತಿನ ಅನುದಾನ	ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿರುವ ಎರಡನೇ ಅನುದಾನ
1	ದಾವಣಗೆರೆ	451	1700ZZ0002	1,27,75,000	42,58,000

(ಆ)

ಕ್ರ ಸಂ	ಜಿಲ್ಲಾ ಪಂಚಾಯತಿ ಹೆಸರು	ಜಿ.ಪಂ. ಕೋಡ್	ಡಿ.ಡಿ.ಓ **ಕೋಡ್**	ಕೇಂದ್ರ ಸರ್ಕಾರ 2ನೇ ಕಂತಿನ ಅನುದಾನ ಬಿಡುಗಡೆ ಮಾಡುವಾಗ ಕಡಿತಗೊಳಿಸಿದ್ದ ಅನುದಾನವನ್ನು ಪೂರ್ವ ಸ್ಥಿತಿಗೆ ತಂದು ಬಿಡುಗಡೆ ಮಾಡಿದ ಅನುದಾನ	ಇದಕ್ಕನುಗುಣವಾಗಿ ರಾಜ್ಯ ಸರ್ಕಾರವು ಬಿಡುಗಡೆ ಮಾಡ ಬೇಕಾದ ಅನುದಾನ	ಜಿಲ್ಲಾ ಪಂಚಾಯತಿಗಳಲ್ಲಿ ಲಭ್ಯತೆಗೆ ಅನುಗುಣವಾಗಿ ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿರುವ ಅನುದಾನ
1	ಬೆಂಗಳೂರು (ಗ್ರಾ)	402	0300ZZ8001	34,79,000	11,60,000	0
2	ಬೆಂಗಳೂರು ನಗರ	401	0100ZZ8001	8,30,000	2,77,000	2,77,000
3	ಬೆಳಗಾಂ	413	2200ZZ0002	25,42,000	8,47,000	8,47.000
4	ಬಳ್ಳಾರಿ	418	3400ZZ0001	70,000	23,000	23,000
5	ಬಿಜಾಪುರ	414	2800ZZ9152	68,64,000	22,88,000	0
6	ಚಾಮರಾಜನಗರ	456	1000ZZ0001	40,44,000	13,48,000	0
7	ಚಿಕ್ಕಮಗಳೂರು	408	1800ZZ0017	50,04,000	16,68,000	0
8	ಚಿಕ್ಕಬಳ್ಳಾಪುರ	453	0600ZZ0001	41,22,000	13,74,000	0
9	ಚಿತ್ರದುರ್ಗ	403	1600ZZ0001	25,82,000	8,61,000	8,61,000
10	ದಕ್ಷಿಣ ಕನ್ನಡ	409	1900ZZ0047	12,72,000	4,24,000	0
11	ಧಾರವಾಡ	415	2500ZZ8798	2,25,000	75,000	75,000
12	ಗುಲ್ಬರ್ಗಾ	417	3200ZZ0003	21.99,000	7,33,000	7,33,000

13	ಹಾಸನ	410	1300ZZ0003	11,13,000	3,71,000	3,71,000
14	ಹಾವೇರಿ	463	2700ZZ0001	12,41,000	4,14,000	4,14,000
15	ಕೊಡಗು	411	1200ZZ0001	32,11,000	10,70,000	2,52,000
16	ಕೋಲಾರ	404	0700ZZ8002	82,97,000	27,66,000	0
17	ಕೊಪ್ಪಳ	466	1500ZZ0010	77,55,000	25,85,000	0
18	ಮಂಡ್ಯ	412	1100ZZ0001	87,01,000	29,00,000	0
19	ಮೈಸೂರು	407	0900ZZ0001	27,09,000	9,03,000	9,03,000
20	ರಾಯಚೂರು	420	3600ZZ0001	70,94,000	23,65,000	0
21	ಶಿವಮೊಗ್ಗ	405	1400ZZ0002	13,79,000	4,60,000	4,60,000
22	ತುಮಕೂರು	406	0800ZZ0001	63,04,000	21,01,000	0
23	ಉಡುಪಿ	457	2000ZZ0001	33,95,000	11,32,000	11,32,000
24	ಉತ್ತರ ಕನ್ನಡ	416	3000ZZ0080	75,86,000	25,29,000	14,24,000
	ಒಟ್ಟು:			**9,20,18,000**	**3,06,73,000**	**77,72,000**

ಘೋಷ್ವಾರೆ

(ಅ)	42,58,000
(ಆ)	77,72,000
ಒಟ್ಟು ರೂ.	**1,20,30,000**

ಡಾ: ಶಮ್ಲಾ ಇಕ್ಬಾಲ್
ನಿರ್ದೇಶಕರು (ಸ್ವಉಕಾ) ಹಾಗೂ
ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. 1118

ವಿಷಯ:– ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕು, ಜತ್ರಾಟ ಗ್ರಾಮ ಪಂಚಾಯತಿಯ ಶಿರ್ಪೇವಾಡಿ ಗ್ರಾಮದಲ್ಲಿ ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ (ರಿ), ಯಕ್ಸಾಂಬ ಚಿಕ್ಕೋಡಿ ತಾಲ್ಲೂಕು ರವರು ಬೆಳಗಾಂ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಬಸವಜ್ಯೋತಿ ಸಿದ್ಧ ಉಡುಪು ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ:–
1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾಂ ರವರ ಪತ್ರದ ಸಂ.ಜಿಪಂ/ಎಸ್‌ಜಿಎಸ್‌ವೈ/ವಿವ/158/08–09 ದಿನಾಂಕ.13.01.2009.
2. ನಿರ್ದೇಶಕರು, ಸ್ವ ಉಕಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:23–05–2009 ರಂದು ನಡೆಸಿದ ವಿಡಿಯೋ ಕಾನ್ ಫರೆನ್ಸ್ ಸಭೆಯ ನಡವಳಿ.

ಪ್ರಸ್ತಾವನೆ:–

ಕೃಷಿ ನಂತರ ಹೆಚ್ಚಿನ ಉದ್ಯೋಗ ಒದಗಿಸುವ ಕ್ಷೇತ್ರ ಜವಳಿ ವಲಯವಾಗಿರುತ್ತದೆ. ಸಿದ್ಧ ಉಡುಪು ಕೈಗಾರಿಕೆಗಳು ಬೆಂಗಳೂರಿನಲ್ಲಿ ಮಾತ್ರ ಕೇಂದ್ರೀಕೃತವಾಗಿದ್ದು, ಉಳಿದ ಜಿಲ್ಲೆಗಳಲ್ಲಿ ಸಿದ್ಧ ಉಡುಪು ತಯಾರಿಕೆಯಲ್ಲಿ ನುರಿತ ಕೆಲಸಗಾರರು ಸಿಗದ ಪ್ರಯುಕ್ತ ಸಿದ್ಧ ಉಡುಪು ಘಟಕಗಳು ವಿವಿಧ ಜಿಲ್ಲೆಗಳಲ್ಲಿ ಸ್ಥಾಪನೆಯಾಗುತ್ತಿಲ್ಲ. ವಿವಿಧ ಜಿಲ್ಲೆಗಳಲ್ಲಿ ಸಿದ್ಧ ಉಡುಪು ಘಟಕಕ್ಕೆ ಅವಶ್ಯವಿರುವ ನುರಿತ ಕೆಲಸಗಾರರನ್ನು ತಯಾರು ಮಾಡುವುದು ಹಾಗೂ ಜಿಲ್ಲೆಯಲ್ಲಿ ಸಿದ್ಧ ಉಡುಪು ಉದ್ಯಮಕ್ಕೆ ಬೇಡಿಕೆ ಸೃಷ್ಟಿಸುವುದು ಅವಶ್ಯವಿರುತ್ತದೆ ಹಾಗೂ ಎಸ್‌ಜಿಎಸ್‌ವೈ ಯೋಜನೆಯಲ್ಲಿ ಸ್ವ ಉದ್ಯೋಗ ಸೃಷ್ಟಿಸುವುದು ಅವಶ್ಯವಿರುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುವ ಸ್ವಯಂ ಸೇವಾ ಸಂಸ್ಥೆ ಜೊತೆ ತರಬೇತಿಯು ಪ್ರಾರಂಭಿಸುವ ಉದ್ದೇಶ ರಾಜ್ಯ ಸರ್ಕಾರ ಹೊಂದಿರುತ್ತದೆ. ಇದರಂತೆ, ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕು, ಜತ್ರಾಟ ಗ್ರಾಮ ಪಂಚಾಯತಿಯ ಶಿರ್ಪೇವಾಡಿ ಗ್ರಾಮದಲ್ಲಿ ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ (ರಿ), ಯಕ್ಸಾಂಬ ಚಿಕ್ಕೋಡಿ ತಾಲ್ಲೂಕು ರವರು ಬೆಳಗಾಂ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಬಸವಜ್ಯೋತಿ ಸಿದ್ಧ ಉಡುಪು ಮತ್ತು ತರಬೇತಿ ಕೇಂದ್ರವನ್ನು

ಸ್ಥಾಪಿಸಲು ಉದ್ದೇಶ ಹೊಂದಿರುವ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾಂ ಇವರು ಓದಲಾಗಿದೆ (1) ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿ, ಸದರಿ ಸಂಸ್ಥೆಯು ಬಾಡಿಗೆ ಕಟ್ಟಡದಲ್ಲಿ ಕೇಂದ್ರ ಸ್ಥಾಪಿಸಲು ಉದ್ದೇಶ ಹೊಂದಿರುವುದರಿಂದ ಕೇಂದ್ರ ಅನುಮತಿ ನೀಡಲು ಕೋರಿರುತ್ತಾರೆ. ಸದರಿ ಪ್ರಸ್ತಾವನೆ ಬಗ್ಗೆ ದಿ:23–05–09 ರಂದು ನಿರ್ದೇಶಕರು ಸ್ವಉಕಾ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆಸಿದ ವಿಡಿಯೋ ಕಾನ್‌ಫರೆನ್ಸ್ ಸಭೆಯಲ್ಲಿ ಬಸವಜ್ಯೋತಿ ಸಿದ್ಧ ಉಡುಪು ಮತ್ತು ತರಬೇತಿ ಕೇಂದ್ರ ಸ್ಥಾಪಿಸಲು ಮಂಜೂರಾತಿ ನೀಡಲು ಕೈಗೊಂಡ ನಿರ್ಧಾರಕ್ಕೆ ಸರ್ಕಾರದ ಕಾರ್ಯದರ್ಶಿಗಳು ಅನುಮೋದನೆ ನೀಡಿದ್ದು, ಕೇಂದ್ರ ಸ್ಥಾಪಿಸಲು ಮಂಜೂರಾತಿ ನೀಡಬೇಕಾಗಿರುತ್ತದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ.18.ಎಸ್‌ಜಿವೈ(ಇನ್‌ಪ್ರಾ)2009ಬೆಂಗಳೂರು, ದಿನಾಂಕ: 28ನೇ ಮೇ 2009

ರಾಜ್ಯ ಸರ್ಕಾರವು ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕು, ಜತ್ರಾಟ ಗ್ರಾಮ ಪಂಚಾಯತಿಯ ಶಿರ್ಪೇವಾಡಿ ಗ್ರಾಮದಲ್ಲಿ ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ (ರಿ), ಯಸ್ನಾಂಬ ಚಿಕ್ಕೋಡಿ ತಾಲ್ಲೂಕು ರವರು ಬೆಳಗಾಂ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಬಸವಜ್ಯೋತಿ ಸಿದ್ಧ ಉಡುಪು ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಮತ್ತು ಈ ಕೇಂದ್ರಕ್ಕೆ ಯಂತ್ರೋಪಕರಣ, ಪೀಠೋಪಕರಣ ಮತ್ತು ವಿದ್ಯುತ್‌ಚ್ಛಕ್ತಿ ಸಂಪರ್ಕಕ್ಕಾಗಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯ ಮೂಲಭೂತ ಸೌಕರ್ಯ ನಿಧಿಯಿಂದ ರೂ.20.00 ಲಕ್ಷ (ರೂ. ಇಪ್ಪತ್ತು ಲಕ್ಷ ಮಾತ್ರ) ಬಿಡುಗಡೆ ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಮಂಜೂರಾತಿ ನೀಡಲಾಗಿದೆ.

ಷರತ್ತುಗಳು:

1) ಯಂತ್ರೋಪಕರಣ, ಪೀಠೋಪಕರಣ ಹಾಗೂ ವಿದ್ಯುಚ್ಛಕ್ತಿ ಸಂಪರ್ಕಕ್ಕಾಗಿ ಗರಿಷ್ಠ ರೂ. 20.00 ಲಕ್ಷ (ರೂ. ಇಪ್ಪತ್ತು ಲಕ್ಷ ಮಾತ್ರ) ಅಥವಾ ನೈಜ ವೆಚ್ಚ ಇವೆರಡರಲ್ಲಿ ಕಡಿಮೆ ಇರುವ ಮೊತ್ತವನ್ನು ಮಾತ್ರ ಪಾವತಿಸುವುದು. ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಭರಿಸತಕ್ಕದ್ದು.

2) ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಜಿಲ್ಲೆಯವರು ಅನುದಾನ ಬಿಡುಗಡೆ ಮಾಡುವ ಮೊದಲು ಸಂಸ್ಥೆಯವರು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರಬೇಕು.

ಅ) ತರಬೇತಿ ಸಂಸ್ಥೆ ನಡೆಸಲು ಅವಶ್ಯವಿರುವ ಸ್ವಂತ ಕಟ್ಟಡ/ಬಾಡಿಗೆ ಅಥವಾ ಲೀಸ್ ಆಧಾರದ ಕಟ್ಟಡ ಸಂಸ್ಥೆಯ ಹೆಸರಿನಲ್ಲಿರಬೇಕು. ತರಬೇತಿ ಕೇಂದ್ರವು 4000 ಚ.ಅಡಿ ಸ್ಥಳಾವಕಾಶ ಹೊಂದಿರಬೇಕು.

ಆ) ಈ ಕಟ್ಟಡದಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕ ಶೌಚಾಲಯ ಹೊಂದಿರಬೇಕು.

ಇ ತರಬೇತಿ ನಡೆಸಲು ಅವಶ್ಯವಿರುವ 20 HP ವಿದ್ಯುತ್ ಲಭ್ಯವಿರುವ/ಮಂಜೂರಾಗಿರುವ ಬಗ್ಗೆ ಸಂಬಂಧಪಟ್ಟ ವಿದ್ಯುತ್ ಸರಬರಾಜು ಸಂಸ್ಥೆಯವರಿಂದ ದೃಢೀಕರಣ ಪತ್ರ ಪಡೆದಿರಬೇಕು.

ಈ ತರಬೇತಿ ನಡೆಸಲು ಅವಶ್ಯವಿರುವ ತರಬೇತುದಾರರನ್ನು ನೇಮಕ ಮಾಡಿಕೊಂಡಿರಬೇಕು/ ಸ್ಥಳೀಯವಾಗಿ ತರಬೇತಿ ನೀಡಲು ಇಚ್ಛಿಸುವವರನ್ನು TOT (Training of trainers) ತರಬೇತಿಗಾಗಿ ATDC/ILFS ಅಥವಾ ಇತರೆ ಪ್ರತಿಷ್ಠಿತ ಸಂಸ್ಥೆಗೆ ನಿಯೋಜಿಸಬೇಕು.

3) ತರಬೇತಿ ಕೇಂದ್ರವನ್ನು ಜೂನ್ 2009 ರಲ್ಲಿ ಪ್ರಾರಂಭಿಸಲು ಅವಶ್ಯವಿರುವ ಎಲ್ಲಾ ಪೂರ್ವ ಸಿದ್ಧತೆ–ಗಳನ್ನು ಮಾಡಿಕೊಳ್ಳುವುದು.

4) ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಅಂದಾಜು ವೆಚ್ಚ, ಅಗತ್ಯವಿರುವ ಯಂತ್ರೋಪಕರಣಗಳು, ಪೀಠೋಪಕರಣಗಳು, ಸಲಕರಣೆಗಳು ಮತ್ತು ವಿದ್ಯುತ್ ಸಲಕರಣೆಗಳ ಬಗ್ಗೆ ವಿವರಗಳನ್ನು ಅನುಬಂಧ–ಎ ರಲ್ಲಿ ಮತ್ತು ಸಂಸ್ಥೆಯ ಸಿಬ್ಬಂದಿ ವಿವರಗಳನ್ನು ಅನುಬಂಧ–ಬಿ ರಲ್ಲಿ ವಿವರಿಸಲಾಗಿದೆ.

5) ಯಂತ್ರೋಪಕರಣ ಖರೀದಿಯಲ್ಲಿ ಪಾರದರ್ಶಕ ಕಾಯಿದೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

6) ಯಂತ್ರೋಪಕರಣಗಳ ವೆಚ್ಚವನ್ನು ಎಸ್ ಜಿ ಎಸ್ ವೈ ಮೂಲಭೂತ ಸೌಕರ್ಯ ನಿಧಿಯಿಂದ ಭರಿಸುವುದು. ಈ ಯಂತ್ರೋಪಕರಣಗಳು ಜಿಲ್ಲಾ ಪಂಚಾಯತಿ, ಬೆಳಗಾಂ ಇದರ ಆಸ್ತಿಯಾಗಿದ್ದು, ರಿಜಿಸ್ಟರ್ ನಲ್ಲಿ ದಾಖಲೆ ಮಾಡುವುದು.

7) ಎಸ್ ಜಿ ಎಸ್ ವೈ ಯೋಜನೆಯ ಮೂಲಭೂತ ಸೌಕರ್ಯದಡಿ ಯಂತ್ರೋಪಕರಣ/ ಪೀಠೋಪಕರಣವನ್ನು ನೀಡಲಾಗುತ್ತಿದ್ದು, ಸಂಸ್ಥೆಯವರು ಅನಿವಾರ್ಯ ಕಾರಣದಿಂದ ತರಬೇತಿ ಕೇಂದ್ರವನ್ನು ಸ್ಥಗಿತಗೊಳಿಸಿದರೆ ಯಂತ್ರೋಪಕರಣ/ಪೀಠೋಪಕರಣವನ್ನು ಬೇರೆ ಕೇಂದ್ರಕ್ಕೆ ವರ್ಗಾಯಿಸುವ ಅಥವಾ ಸದರಿ ಸಂಸ್ಥೆಯ ಕಟ್ಟಡದಲ್ಲಿಯೇ ಬಾಡಿಗೆಯ ಆಧಾರದ ಮೇಲೆ ನಡೆಸುವ ಅಧಿಕಾರ ಜಿಲ್ಲಾ ಪಂಚಾಯತಿಯದಾಗಿರುತ್ತದೆ. ಇದರ ಬಗ್ಗೆ ಜಿಲ್ಲಾ ಪಂಚಾಯತ್ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

8) ಕೇಂದ್ರ ಪ್ರಾರಂಭ ಆದ ನಂತರ "ಬಸವಜ್ಯೋತಿ ಸಿದ್ಧ ಉಡುಪು ಮತ್ತು ತರಬೇತಿ ಕೇಂದ್ರ" ಜಿಲ್ಲಾ ಪಂಚಾಯತ್, ಬೆಳಗಾಂ ಇವರ ಸಹಯೋಗದಲ್ಲಿ ನಾಮಫಲಕ ಹಾಕುವುದು.

9) ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ಕನಿಷ್ಠ 10 ವರ್ಷ ಸ್ವಯಂ ಸೇವಾ ಸಂಸ್ಥೆಗಳು ಕಡ್ಡಾಯವಾಗಿ ನಡೆಸಬೇಕು.

10) ಈ ತರಬೇತಿ ಮತ್ತು ಉತ್ಪಾದನಾ ಕೇಂದವು ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್(ATDC) ಬೆಂಗಳೂರು ಇವರು ಅಳವಡಿಸಿದ 1) ಪಠ್ಯಕ್ರಮ 2) ಯಂತ್ರೋಪಕರಣ 3) ತರಬೇತಿಯ ಗುಣಮಟ್ಟವನ್ನು ಬೆಂಚ್ ಮಾರ್ಕ್ ಆಗಿ ಇಟ್ಟುಕೊಂಡು ಈ ಮಾದರಿಯಲ್ಲಿ ತರಬೇತಿ ಕೇಂದ್ರವನ್ನು ಸ್ಥಾಪಿಸತಕ್ಕದ್ದು.

11) ಈ ತರಬೇತಿ ಸಂಸ್ಥೆಯ ನಿರ್ವಹಣೆಗಾಗಿ ಆವರ್ತಕ ವೆಚ್ಚವನ್ನು ಕಪಾರ್ಟ ಸಂಸ್ಥೆಯಿಂದ ಪಡೆಯುವುದು. ಎಸ್ ಜಿ ಎಸ್ ವೈ ಫಲಾನುಭವಿಗಳಿಗೆ ಎಸ್ ಜಿ ಎಸ್ ವೈ ತರಬೇತಿ ನಿಧಿಯಿಂದ ನೀಡುವ ತರಬೇತಿ ವೆಚ್ಚ/ಗೌರವಧನ ಮತ್ತು ಇತರೆ ಫಲಾನುಭವಿಗಳಿಗೆ ಆಯಾ ಇಲಾಖೆಯವರು ನೀಡುವ ಗೌರವ ಧನದಿಂದ ಮತ್ತು ತರಬೇತಿ ಸಂಸ್ಥೆಯು ನಡೆಸುವ ಪ್ರತ್ಯೇಕ ತರಬೇತಿಗಳಿಂದ ಪಡೆದ ಶಿಷ್ಯವೇತನ ಮತ್ತು ಗೌರವಧನದಲ್ಲಿ ತರಬೇತಿ ಸಂಸ್ಥೆಯ ನಿರ್ವಹಣಾ ವೆಚ್ಚವನ್ನು ಭರಿಸಬೇಕು.

12) ತರಬೇತಿಯ ಗೌರವಧನಕ್ಕಿಂತ ಆವರ್ತಕ ವೆಚ್ಚ ಹೆಚ್ಚಾದಲ್ಲಿ ಉಳಿದ ಹಣವನ್ನು ಸಂಸ್ಥೆಯವರೇ ಭರಿಸುವುದು.

14) ಸದರಿ ತರಬೇತಿ ಮತ್ತು ಉತ್ಪಾದನಾ ಕೇಂದ್ರದಲ್ಲಿ ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮ, ಡಿ.ದೇವರಾಜ ಅರಸ್ ಅಭಿವೃದ್ಧಿ ನಿಗಮ, ಕೈಮಗ್ಗ ಮತ್ತು ಜವಳಿ ಇಲಾಖೆ, ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯ ಫಲಾನುಭವಿಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಫಲಾನುಭವಿಗಳು ಹಾಗೂ ಇತರೆ ಇಲಾಖೆಯ ಯೋಜನೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ತರಬೇತಿ ನೀಡುವುದು. ಇತರೆ ಅಭ್ಯರ್ಥಿಗಳಿಗೆ ತರಬೇತಿ ನೀಡಲು ತರಬೇತಿ ಅವಧಿಯನ್ನು ಹಾಗೂ ತರಬೇತಿಯ course fee ಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಜೊತೆ ಸೇರಿ ನಿರ್ಧರಿಸುವುದು.

15) ಸಂಸ್ಥೆಗೆ ಬೇಕಾದ ಸಿಬ್ಬಂದಿಯನ್ನು ತಾಂತ್ರಿಕ ನೈಪುಣ್ಯತೆಯ ಅಧಾರದ ಮೇಲೆ ನೇಮಿಸುವ ಜವಾಬ್ದಾರಿ ಜಿಲ್ಲಾ ಪಂಚಾಯತ್ ಮತ್ತು ಸ್ವಯಂ ಸೇವಾ ಸಂಸ್ಥೆಯದಾಗಿರುತ್ತದೆ.

16) ಪ್ರತಿ ತಿಂಗಳು ಕನಿಷ್ಠ 30 ಅಭ್ಯರ್ಥಿಗಳಿಗೆ ತರಬೇತಿ ನೀಡುವುದು.

17) ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಸಮಿತಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ರಚನೆ ಮಾಡಲಾಗಿದೆ. ಈ ಸಮಿತಿಯು ಪ್ರತಿ ತಿಂಗಳು ಪ್ರಗತಿ ಪರಿಶೀಲನಾ ಸಭೆ ನಡೆಸುವುದು.

18) ತರಬೇತಿ ಸಂಸ್ಥೆಯ ಆದಾಯ ಮತ್ತು ಖರ್ಚನ್ನು ಪ್ರತ್ಯೇಕವಾಗಿ ನಿರ್ವಹಿಸುವುದು.

19) ಈ ಕೇಂದ್ರವು ಮುಖ್ಯ ಮಾತೃ ಕೇಂದ್ರವಾಗಿ ನಿರ್ವಹಿಸಿ ಜಿಲ್ಲೆಯಲ್ಲಿ ಉಪ ಉತ್ಪಾದನಾ ಕೇಂದ್ರಗಳನ್ನು (ancillary unit) ಜಿಲ್ಲೆಯಲ್ಲಿ ಸ್ಥಾಪಿಸಲು ಕ್ರಮವಹಿಸುವುದು.

ಮೇಲಿನ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ "ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕು, ಜತ್ರಾಟ ಗ್ರಾಮ ಪಂಚಾಯತಿಯ ಶಿರ್ಪೆವಾಡಿ ಗ್ರಾಮದಲ್ಲಿ ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ (ರಿ), ಯಕ್ಸಾಂಬ ಚಿಕ್ಕೋಡಿ ತಾಲ್ಲೂಕು ರವರು ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಬಸವಜ್ಯೋತಿ ಸಿದ್ಧ ಉಡುಪು ಮತ್ತು ತರಬೇತಿ ಕೇಂದ್ರ" ಮತ್ತು ಜಿಲ್ಲಾ ಪಂಚಾಯತ್, ಬೆಳಗಾಂ ರವರು ಒಡಂಬಡಿಕೆ ಮಾಡಿಕೊಂಡು ಅದರ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಶಮ್ಲಾ ಇಕ್ಬಾಲ್

ನಿರ್ದೇಶಕರು(ಸ್ವಉಕಾ)

ಹಾಗೂ ಪದ ನಿಮಿತ್ತ ಉಪ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

Annexure-A

Detail of Machinery & Equipments

Sl. No.	Details	Make & Specifications	No.s.	Amount (Approximate)
1	Power Operated High speed SNLS Sewing Machine	JUKI Company Model No. DDL-8300	35	6.02.000
2	Specialised Machines			
a	High Speed Single Needle Lock stich Button holing Machine	Juki Company Model No. LBH-781 U		
b	High Speed Direct Drive Button Sewing Machine	Juki Company LK-1903 ASS		

c	High speed Direct Drive Bar tacking Machine (Computer Controlled)	Juki Company LK-1900 ASS		
d	Two Needle Lock stitch,Fixed Needle Bar Machine	Juki Company LH-3128		
e	Single Needle Zig-Zag Machine	Juki Company LZ-2284 N		
f	Five thread overlock machine	Juki MO-6716 S-DE4-40H	1	
g	Cutting Machine	Eastman	1	
h	Double Needle lock stich split bar machine	Juki LH/3568 SF		
i	Ironing Table with 2 Iron Boxes	Ramson company		
j	Diesel Generating Set 20 KVA	Kirloskar or Other reputed company	1	
k	Electrical Wiring with materials			
		* Item No. 2 total restricted to Rs:	11.98,000	
Office Equipments				
1	Steel Almirah		2	
2	Steel Racks (Slotted Angles)		4	
3	Office Table		1	
4	Office Chairs	S type	8	
5	Mechanic Table		1	
6	Pattern making table		2	
7	Water Purifer	Aqua Guard or Reputed company	2	
8	Black & White Board/Ceramic Magnetic Writing Green Board	3"x4"	1	
9	Pin up Board	2"x3"	1	
10	Computer & Printer with UPS		1	
11	Overhead Project			
12	Library Books	As per requirement		
		** Item No. 1 to 12 Total Rs.		2,00,000
		Grand Total Rs		20,00,000

* Specilised machines, DG set & Electrical Wiring is restricted to Rs .11,98,000/-

** Furniture is restricted to Rs. 2,00,000/-

Dr. SHAMLA IQBAL
Director (SEP) &
E/o Deputy Secretary to Government,
Rural Development & Pan. Raj Dept.,

ANNEXURE-B

Sl. No.	Details	No. s	* Salary per month (Approximate Rs)
I	Teaching Staff		
1	Principal cum Senior instructor	1	7,500
2	Instructor	1	5,000
3	Machine Mechanic	1	4,000

II	Administrative Staff		
1	Accountant	1	3,000
2	Data entry Operator	1	2,500
3	peon /assistant	1	2,000
	Total	6	24,000

* Recurring expenditure is to be met out of assistance from CAPART and honourorium received towards training from RDPR/Other Departments & Own Sources

Dr. SHAMLA IQBAL

P.R. 1456

Director (SEP) &

E/o Deputy Secretary to Government,

Rural Development & Pan. Raj Dept.,

ಇಂಧನ ಸಚಿವಾಲಯ

ವಿಷಯ : ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯ, ಇವರಿಗೆ ಕಛೇರಿ ಉಪಯೋಗಕ್ಕಾಗಿ ಒಂದು ಹೊಸ ವಾಹನವನ್ನು ಖರೀದಿಸುವ ಬಗ್ಗೆ.

ಓದಲಾಗಿದೆ : 1 ಮುಖ್ಯ ವಿದ್ಯುತ್ ಪರಿವೀಕ್ಷಕರ ಪತ್ರ ಸಂಖ್ಯೆ:ಮುವಿಪ/ಸಿಸ1/31790/08–09 ದಿನಾಂಕ:12.12.2008.

2. ಮುಖ್ಯ ವಿದ್ಯುತ್ ಪರಿವೀಕ್ಷಕರ ಪತ್ರ ಸಂಖ್ಯೆ:ಮುವಿಪ/ಉವಿಪ(2) ವಾಹನಗಳು/ಸಿಸ1/36762/08–09 ದಿನಾಂಕ:3.2.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ(1) ಮತ್ತು (2) ರ ಪತ್ರಗಳಲ್ಲಿ ವಿದ್ಯುತ್ ಪರಿವೀಕ್ಷಣಾ ಇಲಾಖಾ ಮುಖ್ಯಸ್ಥರು ಹಾಲಿ ಉಪಯೋಗಿಸುತ್ತಿರುವ ವಾಹನ ಸಂಖ್ಯೆ: ಕೆ.ಎಂ.01 ಜಿ. 2230 ಅಂಬಾಸಿಡರ್ ಕಾರನ್ನು 1995ರಲ್ಲಿ ಖರೀದಿಸಿದ್ದು, ಸದರಿ ವಾಹನವು ಇಲ್ಲಿಯವರೆಗೆ ಸುಮಾರು 3,66,030 ಕಿ.ಮಿ.ಗಳಷ್ಟು ದೂರವನ್ನು ಕ್ರಮಿಸಿದ್ದು, ವಾಹನವು ಮೇಲಿಂದ ಮೇಲೆ ದುರಸ್ಥಿಗೆ ಒಳಪಡುತ್ತಿದ್ದು, ಇಲಾಖಾ ಮುಖ್ಯಸ್ಥರು ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೆ ಪ್ರವಾಸ ಕೈಗೊಳ್ಳಬೇಕಾಗಿದ್ದು, ಅತೀ ಮುಖ್ಯವಾಗಿ ವಿಶೇಷ ಸಂದರ್ಭದಲ್ಲಿ ತುರ್ತು ಪ್ರವಾಸ ಕೈಗೊಳ್ಳುವಂತಹ ಅಂದರೆ, ವಿಶೇಷವಾಗಿ ನ್ಯಾಯಾಲಯಗಳಿಗೆ ಸಾಕ್ಷಿ ನೀಡಲು ಅವಶ್ಯ ಪ್ರವಾಸ ಕೈಗೊಳ್ಳಬೇಕಾದ ಸಂದರ್ಭಗಳು ಹೆಚ್ಚಾಗಿರುವುದರಿಂದ ಹೊಸ ಅಂಬಾಸಿಡರ್ ಕಾರನ್ನು ಖರೀದಿಸುವುದು ಸೂಕ್ತವೆಂದು ಹೊಸ ಮಾಡೆಲ್ ಕಾರನ್ನು ಖರೀದಿಸುವ ಸಲುವಾಗಿ ಮುಖ್ಯ ವಿದ್ಯುತ್ ಪರಿವೀಕ್ಷಕರು ಈ ಕೆಳಗಿನ ಸಂಸ್ಥೆಗಳಿಂದ ಅವರ ಕನಿಷ್ಠ ದರ ಪಟ್ಟಿಯನ್ನು ಪಡೆದು ಸಲ್ಲಿಸಿರುತ್ತಾರೆ.

1) ಮೆ: ಸದರನ್ ಮೋಟರ್ಸ್ ಬೆಂಗಳೂರು –ಅಂಬಾಸಿಡರ್ (ಪೆಟ್ರೋಲ್) ರೂ. 4,78,888/+ವ್ಯಾಟ್ ರೂ. 59861/–

2) ಮೆ: ಸದರನ್ ಮೋಟರ್ಸ್ ಬೆಂಗಳೂರು –ಅಂಬಾಸಿಡರ್ (ಡೀಸೆಲ್) ರೂ. 4,99,900/+ವ್ಯಾಟ್ ರೂ. 62487/–

3) ಮೆ: ಮೆಟ್ರೊ ಪೋರ್ಡ್ ಪಿಯಾಸ್ತ, ಫೋರ್ಡ್ ಪಿಯಸ್ತ (ಪೆಟ್ರೋಲ್) ರೂ, 6,39,111/– +ವ್ಯಾಟ್ ರೂ. 79889/–

ಮೇಲ್ಕಂಡ ಮೂರು ವಾಹನಗಳ ಬಗ್ಗೆ ಅವುಗಳ ಅಧಿಕೃತ ಮಾರಾಟಗಾರರಲ್ಲಿ ವಿಚಾರಿಸಲಾಗಿ ಆ ವಾಹನಗಳು ಹವಾನಿಯಂತ್ರಣ ಮತ್ತು ಆಧುನಿಕ ಸಲಕರಣೆಗಳ ವ್ಯವಸ್ಥೆಯನ್ನು ಹೊಂದಿರುತ್ತದೆ ಎಂದು ತಿಳಿಸಿರುತ್ತಾರೆ. ಅಲ್ಲದೆ ಅಂಬಾಸಿಡರ್ ಡೀಸೆಲ್ ಕಾರು 1ಲೀಟರ್ ಡೀಸೆಲ್ ಗೆ 9 ರಿಂದ 14 ಕಿ.ಮೀ. ಮೈಲೇಜ್‌ನ್ನು ನೀಡುವುದಾಗಿ ತಿಳಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 134 ಶಿವಾನೀ 2006, ದಿನಾಂಕ:25.11.2006 ರ ಆದೇಶದಲ್ಲಿ ಇಲಾಖಾ ಮುಖ್ಯಸ್ಥರಿಗೆ ವಾಹನ ಖರೀದಿಗೆ ರೂ. 6.50 ಲಕ್ಷಗಳು (ತೆರಿಗೆ ಹೊರತುಪಡಿಸಿ) ಗರಿಷ್ಠಮಿತಿಯನ್ನು ನಿಗಧಿಪಡಿಸಿದ್ದು ಅನಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಸಿಆಸುಇ 174 ಶಿವಾನೀ 2007 ದಿನಾಂಕ:12.5.2008ರಲ್ಲಿ ಈ ಮಿತಿಯನ್ನು ಪರಿಷ್ಕರಿಸಿ ರೂ. 5 ಲಕ್ಷಗಳಿಗೆ ನಿಗಧಿಪಡಿಸಿದೆ (ತೆರಿಗೆ ಹೊರತುಪಡಿಸಿ), ಪ್ರಸ್ತುತ ವಾಹನದ ಮುಖ ಬೆಲೆಯು ರೂ. 4,99,900/–ಆಗಿದ್ದು, ವ್ಯಾಟ್ ಬೆಲೆ ರೂ. 62,487/– ಆಗಿರುವುದೆಂದು ತಿಳಿಸುತ್ತಾ, ವಾಹನವನ್ನು ಖರೀದಿಸಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ. ಮತ್ತು ಅದಕ್ಕಾಗಿ ಒಟ್ಟು ರೂ., 5.65 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಲೆಕ್ಕ ಶೀರ್ಷಿಕೆ 2045 ಸರಕು ಮತ್ತು ಸೇವೆಗಳ ಮೇಲಣ ತೆರಿಗೆ ಮತ್ತು ಶುಲ್ಕ ಇದರ ಉಪ ಶೀರ್ಷಿಕೆ 195 ಸಾರಿಗೆ ವೆಚ್ಚದಡಿ ಮಂಜೂರು ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಖ್ಯ ವಿದ್ಯುತ್ ಪರಿವೀಕ್ಷಕರವರ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಇಎನ್ 116 ಇಬಿಎಸ್ 2008, ಬೆಂಗಳೂರು, ದಿನಾಂಕ:22ನೇ ಮೇ 2009

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಮುಖ್ಯ ವಿದ್ಯುತ್ ಪರಿವೀಕ್ಷಕರವರ ಕಛೇರಿ ಉಪಯೋಗಕ್ಕೆ ಸಿ.ಆ.ಸು.ಇ. ಅನಧಿಕೃತ ಟಿಪ್ಪಣಿ ಸಂಖ್ಯೆ:174 ಶಿವಾನೀ 2007, ದಿನಾಂಕ:12.5.2008ರಲ್ಲಿ ಪರಿಷ್ಕರಿಸಿರುವಂತೆ ವಾಹನದ ಮುಖ ಬೆಲೆ ರೂ. 5,00,000/- ಲಕ್ಷಗಳಿಗೆ (ಐದು ಲಕ್ಷ ರೂಪಾಯಿಗಳು ಮಾತ್ರ) (ತೆರಿಗೆ ಹೊರತುಪಡಿಸಿ) ಒಂದು ಹೊಸ ಅಂಬಾಸಿಡರ್ ಕಾರನ್ನು ಖರೀದಿಸಲು ಸರ್ಕಾರ ಅನುಮತಿ ನೀಡಿದೆ.

ನಿಯಮಾನುಸಾರ ಹಳೆ ವಾಹನವನ್ನು ವಿಲೇವಾರಿ ಮಾಡಲು ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಎಫ್‌ಡಿ 626 ವೆಚ್ಚ-1/09,. ದಿನಾಂಕ:7.5.2009ರ ಸಹಮತಿಯೊಂದಿಗೆ ಹೊರಡಿಸಿದೆ.

ಪಿ.ಆರ್. **1333**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುಜಾತಮ್ಮ
ಪೀಠಾಧಿಕಾರಿ, ಇಂಧನ ಇಲಾಖೆ

ಶಿಕ್ಷಣ ಸಚಿವಾಲಯ

ವಿಷಯ: 2009-10ನೇಸಾಲಿಗೆ ಗ್ರಂಥಾಲಯ ಕಟ್ಟಡಗಳ ದುರಸ್ಥಿ ಮತ್ತು ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಇಡಿ 76:ಯೋಯೋಕ 2009, ದಿನಾಂಕ: 28.4.2009: ಇಡಿ:61: ಸ್ವೀಮರ (ಯುನಿಕ್) 2009, ದಿನಾಂಕ:28.4.2009.
2. ಸರ್ಕಾರದ ಆದೇಶ ಸಂಖ್ಯೆ ಇಡಿ:76:ಯೋಯೋಕ[ಭಾಗ-2] 2009, ದಿನಾಂಕ:15.6.2009
3. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ರವರ ಪತ್ರ ಸಂಖ್ಯೆ ಸಾಗ್ರಂಇ/ನಿಕ/ಅವಿ.ಬಿ1/08/2009-10/2007/ದಿನಾಂಕ:1.6.2009.

ಪ್ರಸ್ತಾವನೆ:

1 ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2009-10ನೇ ಸಾಲಿನ ಸಾರ್ವಜನಿಕ ಗ್ರಂಥಾಲಯಗಳ ಮುಂದುವರಿಕೆ ಕಾರ್ಯಕ್ರಮಕ್ಕೆ ಅನುಮೋದನೆ ನೀಡಿದೆ.

2 ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2009-10ನೇ ಸಾಲಿನ ಸಾರ್ವಜನಿಕ ಗ್ರಂಥಾಲಯಗಳ ಮುಂದುವರಿಕೆ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಶೇ 25ರಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿ ಲೆಕ್ಕ ಶೀರ್ಷಿಕೆ 2205-00-105-0-15-101ರಡಿ 200.00ಲಕ್ಷರೂಗಳನ್ನು ಒದಗಿಸಿದ್ದು, ಶೇ. 25ರಷ್ಟು ಎಂದರೆ 50.00 ಲಕ್ಷರೂಗಳನ್ನು ಖರ್ಚು ಮಾಡಲು ಅನುಮತಿ ನೀಡಿದೆ.

3 ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ ಬೆಂಗಳೂರು ರವರು, 2009-10ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2205-00-105-0-15 (ಯೋಜನೆ) ಅಡಿ ಒದಗಿಸಲಾಗಿರುವ 200.00 ಲಕ್ಷರೂಗಳಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ ಮತ್ತು ಸೇರ್ಪಡೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

4 ಸರ್ಕಾರವು ಪ್ರಸ್ತಾವನೆಯಲ್ಲಿರುವ ಅಂಶವನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ 152:ಯೋಯೋಕ 2009, ಬೆಂಗಳೂರು, ದಿನಾಂಕ:4ನೇ ಜುಲೈ 2009
[ಇಡಿ:88:ಸ್ವೀಮರ (ಯುನಿಕ್) 2009, ದಿನಾಂಕ:4.7.2009]

5 2009-10ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2205-00-105-0-15 (ಯೋಜನೆ) ಅಡಿ ಒದಗಿಸಲಾಗಿರುವ 200.00 ಲಕ್ಷರೂಗಳಲ್ಲಿ ಅನುಬಂಧದಲ್ಲಿ ತೋರಿಸಿರುವ ಸ್ಥಳಗಳ ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣ ಮತ್ತು ಸೇರ್ಪಡೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಅನುಮತಿ ನೀಡಿದ್ದು, ಅದರಲ್ಲಿ ಪ್ರಥಮತಃ ಸರ್ಕಾರದ ಆದೇಶ ಸಂಖ್ಯೆ:ಇಡಿ:76:ಯೋಯೋಕ [ಭಾಗ-2]2009, ದಿನಾಂಕ:15.6.2009ರಲ್ಲಿ ಮೊದಲ ತ್ರೈಮಾಸಿಕ ಕಂತಾಗಿ ಬಿಡುಗಡೆ ಮಾಡಿರುವ ಅನುದಾನವನ್ನು ಬಳಸಿಕೊಂಡು ಕೂಡಲೇ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ)

1 ಪ್ರಸ್ತಾಪಿತ ಜಮೀನಿನ ಭೂ ಉಪಯೋಗ ಬದಲಾವಣೆ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 18ರನ್ವಯ ಶಾಸನಬದ್ಧ ಶುಲ್ಕವನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.

2 ಈ ಭೂ ಉಪಯೋಗ ಬದಲಾವಣೆಯನ್ನು ಮಹಾ ಯೋಜನೆಯಲ್ಲಿ ಪ್ರಾಧಿಕಾರವು ಅಳವಡಿಸಿಕೊಳ್ಳತಕ್ಕದ್ದು..

3 ಪ್ರಸ್ತಾಪಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಅನುಮೋದಿತ ವಲಯ ನಿಯಮಾವಳಿಗಳನ್ವಯ ವಸತಿ ವಿನ್ಯಾಸಕ್ಕೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.

4 ಮಾಸ್ಟರ್‌ಪ್ಲಾನ್ ಪರಿಷ್ಕರಣೆ ಸಂದರ್ಭದಲ್ಲಿ ಯೋಜನೆಯಲ್ಲಿ ಅಳವಡಿಸಬಹುದಾದ ಉದ್ದೇಶಿತ ರಸ್ತೆ ಪರಿಚಲನೆಗೆ ಬೇಕಾಗುವ ಅಗತ್ಯ ಜಮೀನನ್ನು ಬಿಟ್ಟುಕೊಡತಕ್ಕದ್ದು.

5 ಅರ್ಜಿದಾರರೇ ಸದರಿ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳತಕ್ಕದ್ದು.

6 ಸದರಿ ಜಮೀನಿನಲ್ಲಿ ಮಳೆ ನೀರಿನ ನೀರು ಸಂಗ್ರಹಣೆ ತೊಟ್ಟಿ (Rain water harvesting storage) ವ್ಯವಸ್ಥೆಯನ್ನು ಅರ್ಜಿದಾರರೇ ರೂಪಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ .

ಸಿ.ಟಿ. ನಾರಾಯಣಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ಪಿ.ಆರ್. 110

I -F10 -B/B

ವಿಷಯ : ಕೋಟನೂರ–ಡಿ ಅಭಿವೃದ್ಧಿ ಯೋಜನೆಯಡಿ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟ ಜಲ ಸಂಗ್ರಹಗಾರ ನಿರ್ಮಾಣ ಸಹಿತ ನೀರು ಸರಬರಾಜು ಕಾಮಗಾರಿಗೆ ಟೆಂಡರ್ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : 1 ಸರ್ಕಾರಿ ಆದೇಶ ಸಂಖ್ಯೆ:ನಅಇ 521 ಎಂಐಬಿ 1999, ದಿನಾಂಕ:12.2.2001

2 ಪ್ರಾಧಿಕಾರದ ಟೆಂಡರ್ ಪ್ರಕಟಣೆ (4ನೇ ಕರೆ) ಸಂಖ್ಯೆ:251, ದಿ:17–5–2008.

3 ಪ್ರಾಧಿಕಾರದ ಪತ್ರ ಸಂಖ್ಯೆ:ನಪ್ರಾಗು/ಡಿಬಿ/ಕೋ–ಡಿ/ನೀ.ಸ./2007–08/1110, ದಿ:15.10.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರಿ ಆದೇಶದಲ್ಲಿ ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರವು ಕೋಟನೂರು–ಡಿ ಗ್ರಾಮದ ಸರ್ವೆ ನಂ 18(ಭಾಗ), 19 (ಭಾಗ) 30 ಮತ್ತು 32 (ಭಾಗ) ಪ್ರದೇಶದಲ್ಲಿನ ವಸತಿ ಯೋಜನೆಯನ್ನು ರೂ. 431.00 ಲಕ್ಷಗಳ ಅಂದಾಜಿನಲ್ಲಿ ಕೈಗೊಳ್ಳಲು ಹಲವು ಷರತ್ತುಗಳಿಗೊಳಪಡಿಸಿ ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

ಈ ಯೋಜನೆಯಲ್ಲಿ ನೀರು ಸರಬರಾಜು ಯೋಜನೆ ಕುರಿತು ಒಟ್ಟು ರೂ. 80.30 ಲಕ್ಷಗಳಿಗೆ ತಾಂತ್ರಿಕ ಅನುಮೋದನೆಯನ್ನು ಪ್ರಾಧಿಕಾರವು ಮುಖ್ಯ ಇಂಜಿನಿಯರ್ ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿ, ಧಾರವಾಡ ರವರಿಂದ ಪಡೆದಿದ್ದು, ಅದರಂತೆ ಐಟಂವಾರು ಕಾಮಗಾರಿಗಳಿಗಾಗಿ ದಿನಾಂಕ:28.2.2008, 29–3–2008 ಮತ್ತು 31.5.2008 ರಂದು ಟೆಂಡರ್ ಪ್ರಕಟಣೆಗಳನ್ನು 3 ಬಾರಿ ಹೊರಡಿಸಿದ್ದು, ದಿನಾಂಕ:31–5–2008 ರಂದು ಪ್ರಕಟವಾದ ಟೆಂಡರ್ ಬುಲೆಟಿನ್‌ಗೆ ಒಬ್ಬರೇ ಗುತ್ತಿಗೆದಾರರಾದ ಶ್ರೀ ಮಡೆಪ್ಪ ಎಸ್., ಗುತ್ತಿಗೆದಾರರು ರವರು ಟೆಂಡರ್ ಗಿಟ್ಟ (2004–05ನೇ ಸಾಲಿನ ದರಪಟ್ಟಿಯಂತೆ) ಅಂದಾಜು ಮೊತ್ತ ರೂ. 62,50,000 ಕ್ಕೆ ಶೇ. 89.64 ರಷ್ಟು ಹೆಚ್ಚಿಸಿ ಒಟ್ಟು ರೂ. 1,17,66,973 ಗಳಿಗೆ ನಮೂದಿಸಿದ್ದು, ಈ ದರವು 2007–08ನೇ ಸಾಲಿನ ದರಪಟ್ಟಿಗೆ ಶೇ. 24.98 ಅಧಿಕವಾಗಿದ್ದು, 2008–09ನೇ ಸಾಲಿನ ಅನುಮೋದಿತ ದರಪಟ್ಟಿಗೆ ಶೇ. 19.43 ರಷ್ಟು ಹೆಚ್ಚಾಗಿರುತ್ತದೆ. ಈ ಬಡಾವಣೆಯಲ್ಲಿ ಸಾಕಷ್ಟು ಮನೆಗಳು ನಿರ್ಮಾಣವಾಗುತ್ತಿದ್ದು, ನೀರು ಸರಬರಾಜಿಗಾಗಿ ಸಾರ್ವಜನಿಕರು ಒತ್ತಾಯಿಸುತ್ತಿರುವುದರಿಂದ 5 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಟ್ಯಾಂಕ್ ನಿರ್ಮಾಣ, ಪೈಪ್ ಲೈನ್ ಅಳವಡಿಕೆ ಕಾಮಗಾರಿಗಳನ್ನು ಕೋಟನೂರು–ಡಿ ಅಭಿವೃದ್ಧಿ ಯೋಜನೆಯಡಿ ಕೈಗೆತ್ತಿಕೊಳ್ಳಲು ಶ್ರೀ ಮಡೆಪ್ಪ ಎಸ್. ರವರ ಟೆಂಡರ್ ಗುತ್ತಿಗೆಯನ್ನು ರೂ. 1,17,66,973 ಗಳಿಗೆ ಅನುಮೋದನೆ ನೀಡಲು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಗುಲ್ಬರ್ಗಾ ರವರು ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.,

ಮೇಲೆ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 46 ಗುಅಪ್ರಾ 2008, ಬೆಂಗಳೂರು, ದಿನಾಂಕ:27ನೇ ನವೆಂಬರ್ 2008

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೋಟನೂರ–ಡಿ ಅಭಿವೃದ್ಧಿ ಯೋಜನೆಯಡಿ 5.00 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟ ಜಲ ಸಂಗ್ರಹಗಾರ ನಿರ್ಮಾಣ ಸಹಿತ ನೀರು ಸರಬರಾಜು ಕಾಮಗಾರಿಗೆ ಶ್ರೀ ಮಡೆಯಪ್ಪ ಎಸ್., ಗುತ್ತಿಗೆದಾರರು ನಮೂದಿಸಿರುವ ರೂ. 1,17,66,973 ಗಳ ಗುತ್ತಿಗೆಯನ್ನು ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿಯ 2008–09ನೇ ಸಾಲಿನ ಅನುಮೋದಿತ ದರಪಟ್ಟಿಗೆ ಶೇ. 19.43 ರಷ್ಟು ಹೆಚ್ಚು ಮೊತ್ತಕ್ಕೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

(1) ಸದರಿ ಯೋಜನೆಯನ್ನು ನಿಗಧಿತ ವೇಳೆಯಲ್ಲಿ ಪೂರ್ಣಗೊಳಿಸುವುದು.

(2) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡತಕ್ಕದ್ದಲ್ಲ.

(3) ಕಾಮಗಾರಿಗಳನ್ನು ಕೈಗೊಳ್ಳಲು ಪ್ರಾಧಿಕಾರವು ತನ್ನ ಸ್ವಂತ ಸಂಪನ್ಮೂಲಗಳನ್ನು ಬಳಸಿಕೊಳ್ಳತಕ್ಕದ್ದು ಮತ್ತು ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯವನ್ನು ನೀಡಲಾಗುವುದಿಲ್ಲ.

(4) ಸದರಿ ಕಾಮಗಾರಿಯನ್ನು ಕೈಗೊಳ್ಳುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ನ್ನು ಪಾಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಪಿ.ಆರ್. 173

ಸಿ.ಟಿ. ನಾರಾಯಣಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

ವಸತಿ ಸಚಿವಾಲಯ

ವಿಷಯ : ನಿರ್ಮಲಜ್ಯೋತಿ 2ನೇ ಹಂತದ ಕಾಮಗಾರಿಗಳಿಗೆ 2008-09ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1 ಸರ್ಕಾರದ ಆದೇಶ ಸಂಖ್ಯೆ:ವಇ 26 ಕೊಮಂಲೆ, 07, ಬೆಂಗಳೂರು, ದಿನಾಂಕ:7.1.2008
2 ಸರ್ಕಾರದ ಆದೇಶ ಸಂಖ್ಯೆ:ವಇ 26 ಕೊಮಂಲೆ, 07, ಬೆಂಗಳೂರು, ದಿನಾಂಕ:29.3.2008
3 ಆಯುಕ್ತರು, ಕಕೊನಿಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಕೊನಿಮ/ಲೆಪಶಾ/ಅನುದಾನ:ನಿಜ್ಯೋ: 2:2008-09, ದಿನಾಂಕ:28.8.2008.
4 ಸರ್ಕಾರದ ಆದೇಶ ಸಂಖ್ಯೆ:ವಇ 26 ಕೊಮಂಲೆ, 07, ಬೆಂಗಳೂರು, ದಿನಾಂಕ:4.9.2008
5 ಆಯುಕ್ತರು, ಕಕೊನಿಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಕೊನಿಮ/ ಲೆಪಶಾ/ ಅನುದಾನ: ನಿಜ್ಯೋ: 2:2008-09, ದಿನಾಂಕ:13.10.2008

ಪ್ರಸ್ತಾವನೆ:

ನಿರ್ಮಲ ಜ್ಯೋತಿ ಯೋಜನೆಯನ್ನು ರೂ. 40.00 ಕೋಟಿಗಳಿಗೆ ಸೀಮಿತಗೊಳಿಸಿ ಸ್ಥಗಿತಗೊಳಿಸಬೇಕೆಂಬ ಷರತ್ತಿನೊಂದಿಗೆ ರೂ. 36.39 ಕೋಟಿ ಹಾಗೂ ಅನಂತರದ ಆಯುಕ್ತರ ಕೋರಿಕೆ/ಪ್ರಸ್ತಾವನೆ ಮೇರೆಗೆ ರೂ. 3,61 ಕೋಟಿ ಒಟ್ಟು 40.00 ಕೋಟಿ ಹಣವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2) ರ ಆದೇಶದನ್ವಯ ಮಂಡಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಆಯುಕ್ತರು 2008-09ನೇ ಸಾಲಿನ ಆಯವ್ಯಯದಲ್ಲಿ ನಿರ್ಮಲ ಜ್ಯೋತಿ ಕಾಮಗಾರಿಗಳಿಗೆ ರೂ. 2000.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಅಲ್ಲದೆ ಕಾಮಗಾರಿಗಳ ಪ್ರಗತಿಯಲ್ಲಿರುವುದರಿಂದ ರೂ. 1000.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸಲ್ಲಿಸಿದ ಪ್ರಸ್ತಾವನೆಯ ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ 1ನೇ ಮತ್ತು 2ನೇ ತ್ರೈಮಾಸಿಕ ಸೇರಿ ಒಟ್ಟು 1000.00 ಲಕ್ಷಗಳ ಅನುದಾನವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ ಅವರ ಆರ್ಥಿಕ ವ್ಯಾಪ್ತಿಯಲ್ಲಿ ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರಲ್ಲಿ ಮಂಡಳಿಯ ಆಯುಕ್ತರು ಈಗಾಗಲೇ ನಿರ್ಮಲ ಜ್ಯೋತಿ ಯೋಜನೆ ಕಾಮಗಾರಿಗಳು ಶೇಕಡ 80 ರಿಂದ 90 ರಷ್ಟು ಭೌತಿಕ ಪ್ರಗತಿಯನ್ನು ಸಾಧಿಸಿದ್ದು, 2008-09 ಸಾಲಿನ ಆಯವ್ಯಯದಲ್ಲಿ ಬಾಕಿ ಇರುವ ಮೊತ್ತ ರೂ. 1000.00 ಲಕ್ಷಗಳನ್ನು ಮಂಡಳಿಗೆ ಬಿಡುಗಡೆ ಮಾಡಲು ಹಾಗೂ ಡಿಸೆಂಬರ್ 2008ರ ಅಂತ್ಯದೊಳಗೆ ಆರ್ಥಿಕವಾಗಿ ಹಾಗೂ ಭೌತಿಕವಾಗಿ ಪೂರ್ಣಗೊಳಿಸಲಾಗುವುದು. ಸದರಿ ಯೋಜನೆ ಮಂಜೂರಾತಿಯಂತೆ ಪೂರ್ಣಗೊಳಿಸಲು ಬೇಕಾಗಿರುವ ಉಳಿಕೆ ಮೊತ್ತ ರೂ. 1111.91 ಲಕ್ಷಗಳನ್ನು 2008-09ನೇ ಸಾಲಿನ ಪೂರಕ ಆಯವ್ಯಯದಲ್ಲಿ ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ವ ಇ 26 ಕೊಮಂಲೆ 2007, ಬೆಂಗಳೂರು ದಿನಾಂಕ:15ನೇ ಜನವರಿ 2009

ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿರವರ ಪ್ರಸ್ತಾವನೆಯಂತೆ ನಿರ್ಮಲ ಜ್ಯೋತಿ ಯೋಜನೆಯ 2ನೇ ಹಂತದ ಕಾಮಗಾರಿಗಳಿಗೆ 2008-09ನೇ ಸಾಲಿನ ಆಯವ್ಯಯದಲ್ಲಿ ಕೊಳಚೆ ಸುಧಾರಣೆ ಯೋಜನೆಯ ಲೆಕ್ಕ ಶೀರ್ಷಿಕೆ 4217-04-191-2-02 ರಡಿಯಲ್ಲಿ ಬಾಕಿ ಇರುವ ಮೊತ್ತ ರೂ. 1000.00 ಲಕ್ಷಗಳ (ರೂಪಾಯಿ ಒಂದು ಸಾವಿರ ಲಕ್ಷ ಮಾತ್ರ) ಅನುದಾನವನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಈಗಾಗಲೇ ನಿರ್ಮಲ ಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಇರುವ ಸೂಚನೆಗಳನ್ನು ಪಾಲಿಸಬೇಕೆಂಬ ಷರತ್ತಿಗೆ ಒಳಪಟ್ಟು ಬಿಡುಗಡೆ ಮಾಡಲಾಗಿದೆ.

ಹೆಚ್ಚುವರಿ ಅನುದಾನದ ಅವಶ್ಯಕತೆ ಇದ್ದಲ್ಲಿ ಮಂಡಳಿಗೆ ಸರ್ಕಾರವು ಈಗಾಗಲೇ ಬಿಡುಗಡೆ ಮಾಡಲಾಗಿರುವ ಅನುದಾನದ ಬಳಕೆ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಆಯವ್ಯಯದ ಮುಕ್ತಾಯದ ಅವಧಿಯೊಳಗೆ ಸರ್ಕಾರಕ್ಕೆ ಹೆಚ್ಚುವರಿ ಅನುದಾನದ ಪ್ರಸ್ತಾವನೆ ಸಲ್ಲಿಸಬಹುದಾಗಿರುತ್ತದೆ.

ಈ ಮೊತ್ತವನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ವಸತಿ ಇಲಾಖೆಯ ಉಪ ಕಾರ್ಯದರ್ಶಿಯವರ ಮೇಲು ಸಹಿ ಪಡೆದ ನಂತರ ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಎಫ್‌ಡಿ 793 ವೆಚ್ಚ-9/2008, ದಿನಾಂಕ:3.1.2009ರ ಸಮ್ಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಜಿ.ಆರ್. 330

ಜಿ.ಆರ್. ನಾಗರಾಜ

ಪೀಠಾಧಿಕಾರಿ-4, ವಸತಿ ಇಲಾಖೆ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

ವಿಷಯ : ಶ್ರೀ ಜಿ. ಚನ್ನಬಸಪ್ಪ, ಸಂಶೋಧನಾಧಿಕಾರಿ, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು ಇವರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳು ಹಾಗೂ ಮಂಡನಾಧಿಕಾರಿಗಳನ್ನು ನೇಮಿಸುವ ಬಗ್ಗೆ ಆದೇಶ

ಓದಲಾಗಿದೆ : 1 ಸರ್ಕಾರವು ಆಪಾದಿತ ನೌಕರರಿಗೆ ನೀಡಿದ ನೋಟೀಸು ಸಂಖ್ಯೆ:ಸಂವ್ಯಶಾಇ 46 ಭಾನಿವಿ 2006, ದಿನಾಂಕ:11.11.2006.

2 ಆಪಾದಿತ ನೌಕರರ ವಿವರಣಾ ಮನವಿ ಸಲ್ಲಿಕೆ ದಿನಾಂಕ:21.11.2008 ಮತ್ತು 24.11.2008.

3 ಸರ್ಕಾರದ ಸುತ್ತೋಲೆ ಸಂಖ್ಯೆ:ಲಾ 140 ಎಲ್ ಎಎಂ 2007, ದಿನಾಂಕ:29.3.2008.

ಪ್ರಸ್ತಾವನೆ:

ಮೇಲೆ (1)ರಲ್ಲಿ ಸರ್ಕಾರವು ಆಪಾದಿತ ನೌಕರರಾದ ಶ್ರೀ ಜಿ. ಚನ್ನಬಸಪ್ಪ, ಸಂಶೋಧನಾಧಿಕಾರಿ, ಭಾಷಾಂತರ ನಿರ್ದೇಶನಾಲಯ, ಇವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಿರುತ್ತದೆ. ಸದರಿ ದೋಷಾರೋಪಣಾ ಪಟ್ಟಿಯೊಂದಿಗೆ ಆಪಾದಿತ ನೌಕರರ ವಿರುದ್ಧ ಹೊರಿಸಲಾದ ಆರೋಪಗಳನ್ನು ಅನುಬಂಧ-1ರಲ್ಲಿ ಆರೋಪದ ವಿವರಗಳನ್ನು ಅನುಬಂಧ-2 ರಲ್ಲಿ ಆರೋಪಗಳನ್ನು ದೃಢಪಡಿಸುವ ದಾಖಲೆಪಟ್ಟಿಗಳನ್ನು ಅನುಬಂಧ-3ರಲ್ಲಿ ಹಾಗೂ ಆರೋಪ ಗಳನ್ನು ಸಮರ್ಥಿಸುವ ಸಾಕ್ಷಿಗಳನ್ನು ಅನುಬಂಧ-4ರಲ್ಲಿ ನೀಡಲಾಗಿದೆ.

ಮೇಲೆ (2)ರಲ್ಲಿ ಆಪಾದಿತ ನೌಕರರು ತಮ್ಮ ವಿರುದ್ಧ ಸಲ್ಲಿಸಲಾದ ಆರೋಪಗಳ ಬಗ್ಗೆ ವಿವರಣೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿವರಣೆ ತೃಪ್ತಿಕರವಲ್ಲದ ಕಾರಣ, ಆಪಾದಿತ ನೌಕರರ ವಿರುದ್ಧ 1957ರ ಕರ್ನಾಟಕ ಸಿವಿಲ್ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ 11ನೇ ನಿಯಮದ ರೀತ್ಯಾ ವಿಚಾರಣೆ ನಡೆಸಲು ಶಿಸ್ತುಪ್ರಾಧಿಕಾರವು ನಿರ್ಣಯಿಸಿರುತ್ತದೆ.

ಮೇಲೆ (3)ರಲ್ಲಿ ಸರ್ಕಾರವು, 1957ರ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ 11ನೇ ನಿಯಮದ ರೀತ್ಯಾ ಇಲಾಖೆ ವಿಚಾರಣೆಯನ್ನು ನಡೆಸಲು ಹಾಗೂ ಸದರಿ ವಿಚಾರಣೆಯನ್ನು ನಿವೃತ್ತ ನ್ಯಾಯಾಧೀಶರುಗಳಿಗೆ ವಹಿಸಲು ಸುತ್ತೋಲೆ ಹೊರಡಿಸಿರುತ್ತದೆ.

ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ:ಸಂವ್ಯಶಾಇ 46 ಭಾನಿವಿ 2006, ದಿನಾಂಕ:27ನೇ ಡಿಸೆಂಬರ್ 2008

ಪ್ರಸ್ತಾವನೆಯಲ್ಲಿ ವಿವರಿಸ್ಪಟ್ಟ ಸಂದರ್ಭಗಳಿಂದಾಗಿ ಕರ್ನಾಟಕ ನಾಗರೀಕ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 11(2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು, ಶ್ರೀ ಜಿ. ಚನ್ನಬಸಪ್ಪ, ಸಂಶೋಧನಾಧಿಕಾರಿ, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಶ್ರೀ ಎನ್. ಸುಬ್ಬರಾವ್ ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ.

ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು ಕರ್ನಾಟಕ ನಾಗರೀಕ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, ನಿಯಮ 11(5)(c)ರಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಶ್ರೀ ಹೆಚ್. ರಾಜ್ ಕುಮಾರ್, ಶಾಖಾಧಿಕಾರಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಇವರನ್ನು ಮಂಡನಾಧಿಕಾರಿಯನ್ನಾಗಿ ಈ ಮೂಲಕ ನೇಮಿಸಲಾಗಿದೆ.

ಸದರಿ ಇಲಾಖಾ ವಿಚಾರಣೆಯನ್ನು ಈ ಆದೇಶದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ಸದರಿ ಇಲಾಖಾ ವಿಚಾರಣಾಧಿಕಾರಿಗಳಿಗೆ ಇಲಾಖಾ ವಿಚಾರಣೆ ನಡೆಸಲು ಸೂಕ್ತ ಸ್ಥಳ ಹಾಗೂ ಶೀಘ್ರಲಿಪಿಗಾರರ ವ್ಯವಸ್ಥೆಯನ್ನು ಮಾಡುವಂತೆ ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯಕ್ಕೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಪಿ.ಆರ್. 231

ಜಿ. ಶ್ರೀಧರ್

ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

WOMEN & CHILD DEVELOPMENT SECRETARIAT

Sub : Appointment of CRISIL Ltd., Mumbai as consultant for selecting Fund Manager and Central Record keeping Agency for implementation of Bhagyalakshmi scheme.

Read :
1) Government Order No. WCD 99 SWW 2007 dt:17.10.2008
2) Government Order No. WCD 152 SWW 2008 dt:14.8.2008
3) Government Order No. WCD 152 SWW 2008 dt:6.9..2008

Preamble:

In order to show the State Government's concern for the girl child and change society's attitude towards her, in the order read at (1) above, Government of Karnataka have sanctioned 'Bhagyalakshmi' scheme under which Government of Karnataka would deposit Rs. 10,000/- in the name of girl child born in BPL family, so that the said beneficiary would get the deposited amount along with interest on attaining the age of 18 years subject to fulfillment of conditions laid down in the said Order.

In the Order read at (2) above," Bhagyalakshmi" Scheme has been partially modified, inter alia, revising the amount to be deposited in the name of the beneficiary, so that the girl child would get an amount of not exceeding Rs. 1,00,000/- on attaining the age of 18 years and also she would be entitled to procure a loan of Rs. 50,000/- on attaining the age 15th year if she desires to study further after passing Secondary Schoold Leaving Certificate, by mortgaging the fixed deposit bond issued by the selected financial institution, in any Scheduled Bank, The said Government Order also provides for selecting a Central Record Keeping Agency in line with guidelines of the Pension Regulatory Fund and Development Authority Government of India for maintaining and protecting the records of the beneficiaries and a partner financial institution, which will maximize the amount deposited in the name of the beneficiary, so that the beneficiary would get an amount not exceeding Rs. 1,00,000/- on attaining the age of 18 years. The said two external Agencies will have to be selected in accordance with the Karnataka Transparency Public Procurement Act, 1999 and the Rules made there under.

In the Government Order read at (3) above, pending selection of the said two External Agencies, sanction has been accorded to implement the Revised 'Bhagyalakshmi' Scheme sanctioned in the Order read at (2) above, in co-ordination of Life Insurance Corporation of India for a period of three months OR till selection of Partner Financial Institution whichever is earlier.

In order to take steps for selecting the two External Agencies, a meeting was held on Dt: 18-8-2008, along with the Secretary to Government.,FD (B&R) and Sri K.P. Krishnan, Joint Secretary, Department of Economic Affairs, Government of India, Having regard, to take immediate steps within a time frame and also prescribe conditions and modalities to be followed by the said the two External Agencies to be selected. It was felt necessary to appoint Messrs. CRISIL Ltd., Mumbai as consultant to assist the Government of Karnataka for selecting the said two External Agencies.

Messrs. CRISIL Ltd., Mumbai is India's leading writings, research and policy and advisory company having unimpeachable credibility and unmatched, analytical rigour having assisted in the past. Employees Provident Fund Organisation, Pension Fund Regulatory and Development Authority and Coal Mines Provident Fund Organisations in selecting Investment Managers to manage their respective Retirement Schemes.

Messrs. CRISIL Ltd., Mumbai have proposed for their appointment as consultant for selecting a suitable Central Record Keeping Agency and Investment Managers, so that the minimum amount deposited in the name of the beneficiary could fetch a maximum of Rs, 1,00,000/- to the beneficiary on attaining the age of 18 years on payment of fee of Rs 25,00,000/- along with applicable taxes for the main

assignment and Rs. 7,00,000./- along with applicable taxes for one year's assignment for monitoring of AMC 's performance along with the terms and conditions.

After careful scrutiny of the proposal of Messrs. CRISIL Ltd., Mumbai and pending issue of exemption under Section 4 (g) of the Karnataka Transparency in Public procurement Act 1999, the following Orders are issued.

Order No .WCD 152 SWW 08, Bangalore, Dated:16th December 2008

Sanction has been accorded to appoint Messrs. CRISIL Ltd., Mumbai as consultant on a fee of Rs 25,00,000/- (Rs Twentyfive lakhs only) along with applicable taxes but inclusive of travel and out of pocket expenses for assisting the Governemnt of Karnataka to select suitable External Agency as Central Record Keeping Agency for maintaining the records of the beneficiaries under 'Bhagyalakshmi' Scheme and another External Agency as Investment Manager for depositing amounts in the names of beneficiaries, so that the beneficiaries could secure not more than Rs. 1,00,000/- on attaining the age of 18 years besides having liberty to secure a maximum loan of 50,000/- by mortgaging the Fixed Deposit Bond/Receipt on attaining the 15th year of age for pursuing studies further to passing of Secondary School Leaving Certificate to perform the following in assisting the Government of Karnataka to select the said two External Agencies:

1. Preparing of request of a aproposal for selection of Investment Managers.
2. To prepare tender document.
3. Preparation of the evaluation of frame work for selection of Investment Managers.
4. Developing frame work for monitoring the performance of the chosen Investment Managers which would also include among others the methodology for development of a bench mark index.
5. Framing Investment Pattern for management of the fund under "Bhagyalakshmi" Scheme.
6. Preparation of the Investment Management Agreement to be entered into between the Government of Karnataka and the selected Investment Managers.
7. Studying the frame work for the verification process of the scheme and assisting the Government in developing MIS formats in which the data collected by the fleet on street, in this process can be sent to the Central Record Keeping Agency, so as to ensure optimal effectiveness of the functioning of the CRA.
8. Studying the current trustee organization structure and composition and suggest steps for improvement, if any.
9. Preparation of request, for proposal for selection of Central Record Keeping Agency.
10. Preparation of the evaluation frame work for selection of the CRA
11. Drafting of agreement to be entered into between the Government and the selected CRA
12. Monitoring the investment performance of the selected Investment Managers for a year which would include inter alia, the maintainance of an appropriate bench mark index to be developed for this purpose.

The aaforesaid assignment shall be completed in accordance with the time frame, to be prescribed, as would be mutually agreed upon.

Sanction has also been accorded to CRISIL for monitoring of AMC 's performance for a period of one year on a fee of Rs .7,00,000/- (Rs Seven lakhs only) along with aplicable taxes inclusive of travel and out of pocket expenses.

Sanction has been accorded to the Director, Women & Child Development Department to enter into an agreement with Messrs .CRISIL Ltd., Mumbai in terms of the above.

Orders granting exemption to Messrs. CRISIL Ltd., Mumbai under the provisions of the Karnataka Transparency in Public Procurement Act 1999 shall be issued separately.

The expenditure in this regard shall be borne under "Bhagyalakshmi Scheme-2235-02-102-0-25-100(P)"

This Order issues with the concurrence of the Finance Department vide their No. 4951/SECY (B&R)/2008 dt:16.12.2008.

By order and in the name of the Governor of Karnataka

D.S. ASHWATH

P.R. 205

Secretary to Government,

Women & Child Development Department

ಆರ್ಥಿಕ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯಲ್ಲಿ ಅಬಕಾರಿ ಅಧಿಕಾರಿ /ಸಿಬ್ಬಂದಿ ಕರ್ತವ್ಯಲೋಪದ ಬಗ್ಗೆ ಅಬಕಾರಿ ಉಪ ಆಯುಕ್ತರಾಗಿದ್ದ ಶ್ರೀ ತಿಪ್ಪಣ್ಣ ಬಿ. ಕೊಂಡಾಪುರ್ ಮತ್ತು ಶ್ರೀ ಎ.ಎಸ್. ಮಂಗಾಣಿ, ಅಬಕಾರಿ ಅಧೀಕ್ಷಕರು, ಗುಲ್ಬರ್ಗಾ ಅಬಕಾರಿ ಜಂಟಿ ಆಯುಕ್ತರ ಕಛೇರಿ, ಗುಲ್ಬರ್ಗಾ ರವರುಗಳ್ನು ಕರ್ತವ್ಯಲೋಪಕ್ಕಾಗಿ ಅಮಾನತ್ತುಗೊಳಿಸಲಾಗಿರುವ ಬಗ್ಗೆ.

ಓದಲಾಗಿದೆ :

1 ಅಬಕಾರಿ ಆಯುಕ್ತರ ಪತ್ರ ಸಂಖ್ಯೆ:ಇಸಿಇ 13 ಡಿಎಸ್‌ಸಿ (2) 2008, ದಿನಾಂಕ:4.10.2008.

2 ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ), ಗುಲ್ಬರ್ಗಾ ವಿಭಾಗ ಇವರ ವರದಿ ಸಂಖ್ಯೆ:ಜಿಸಿಇ/ಆಡಳಿತ/08–09, ದಿನಾಂಕ:3.10.2008.

3 ಸರ್ಕಾರದ ಆದೇಶ ಸಂಖ್ಯೆ:ಆಇ 192 ಇಪಿಎಸ್ 2008, ದಿನಾಂಕ:10.10.2008.

4 ಶ್ರೀ ಎ.ಎಸ್. ಮಂಗಾಣಿ, ಅಬಕಾರಿ ಅಧೀಕ್ಷಕರು (ಅಮಾನತ್ತಿನಲ್ಲಿ) ರವರು ಸರ್ಕಾರಕ್ಕೆ ಸಲ್ಲಿಸಿರುವ ಮನವಿ ದಿನಾಂಕ:22.10.2008.

ಪ್ರಸ್ತಾವನೆ:

ಮೇಲೆ ಓದಲಾದ (1) ಮತ್ತು (2)ರ ಉಲ್ಲೇಖಿತ ಪತ್ರಗಳಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದ, ಚಿಂಚೋಲಿ ಅಫಜಲ್ ಪುರ ಮತ್ತು ಯಾದಗಿರಿ ವಲಯ/ತಾಲ್ಲೂಕುಗಳಲ್ಲಿ ಅಕ್ರಮ ಅಬಕಾರಿ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಅಲ್ಲಿನ ಸ್ಥಳೀಯ ಅಬಕಾರಿ ಅಧಿಕಾರಿಗಳು/ಸಿಬ್ಬಂದಿ ವರ್ಗದವರು ಸೂಕ್ತ ಕ್ರಮ ಜರುಗಿಸದೇ ಕರ್ತವ್ಯ ನಿರ್ಲಕ್ಷ್ಯತೆ ಮತ್ತು ಕರ್ತವ್ಯಲೋಪವೆಸಗಿರುವ ಬಗ್ಗೆ ಗುಲ್ಬರ್ಗಾ ಜಿಲ್ಲೆಯ ಅಬಕಾರಿ ಅಧೀಕ್ಷಕರಾಗಿ (EIB ಮುಖ್ಯಸ್ಥರು) ದಿನಾಂಕ:18.1.2006 ರಿಂದ 31.3.2008ರ ವರೆಗೆ ಕಾರ್ಯ ನಿರ್ವಹಿಸಿದ್ದ ಶ್ರೀ ಎ.ಎಸ್. ಮಂಗಾಣಿ, ಅಬಕಾರಿ ಅಧೀಕ್ಷಕರವರನ್ನು ಉಲ್ಲೇಖ(3)ರಲ್ಲಿರುವ ಆದೇಶಾನುಸಾರ ಸಮಾನತ್ತುಗೊಳಿಸಲಾಗಿತ್ತು.

ಸದರಿ ಅಧಿಕಾರಿಯವರು ಸರ್ಕಾರಕ್ಕೆ ಸಲ್ಲಿಸಿರುವ ಉಲ್ಲೇಖ (4)ರಲ್ಲಿರುವ ದಿನಾಂಕ: 22.10.2008ರ ಮನವಿಯಲ್ಲಿ ಉದ್ದೇಶಿತ ಶಿಸ್ತು ಕ್ರಮವನ್ನು ಕೈಬಿಡಲು ಹಾಗೂ ಪುನರ್ ನೇಮಕಗೊಳಿಸಲು ಸರ್ಕಾರವನ್ನು ಕೋರಿರುತ್ತಾರೆ. ಇದಕ್ಕೆ ಪೂರಕವಾಗಿ ಅವರ ಪ್ರಭಾರದ ಅವಧಿಯಲ್ಲಿ ಒಟ್ಟು 325 ಮೊಕದ್ದಮೆಗಳನ್ನು ದಾಖಲು ಮಾಡಿದ್ದು, 1250 ಪ್ರಕಣಗಳಲ್ಲಿ ಅಂತಿಮ ವರದಿಯನ್ನು ಸಲ್ಲಿಸಿರುವುದಾಗಿ ಹಾಗೂ ಪ್ರಮುಖವಾಗಿ 13 ಪ್ರಕರಣಗಳಲ್ಲಿ ದಂಡನೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ವಿಷಯವನ್ನು ಪರಿಶೀಲಿಸಿ, ಶ್ರೀ ಎ.ಎಸ್. ಮಂಗಾಣಿ, ಅಬಕಾರಿ ಅಧೀಕ್ಷಕರು ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸದರಿಯವರ ಅಮಾನತ್ತನ್ನು ತೆರವು ಗೊಳಿಸಿ, ಸರ್ಕಾರದ ಸೇವೆಗೆ ಪುನರ್ ನೇಮಕ ಮಾಡಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಆಇ 192 ಇಪಿಎಸ್ 2008, ಬೆಂಗಳೂರು, ದಿನಾಂಕ:17ನೇ ಡಿಸೆಂಬರ್ 2008

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ಶ್ರೀ ಎ.ಎಸ್ ಮಂಗಾಣಿ, ಅಬಕಾರಿ ಅಧೀಕ್ಷಕರು, ಅಬಕಾರಿ ಜಂಟಿ ಆಯುಕ್ತರ ಕಚೇರಿ ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ ಇವರ ವಿರುದ್ಧದ ಇಲಾಖಾ

ವಿಚಾರಣೆಯನ್ನು ಕಾಯ್ದಿರಿಸಿ, ಸದರಿಯವರ ಅಮಾನತ್ತನ್ನು ರದ್ದುಪಡಿಸಲು ಹಾಗೂ ಇವರನ್ನು ಸರ್ಕಾರದ ಸೇವೆಗೆ ಪುನರ್ ನೇಮಕಗೊಳಿಸಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎನ್. ಜಗದೀಶ್

ಪಿ.ಆರ್. 200 ಸರಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಅಬಕಾರಿ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ:ಮಮಇ 9 ಎಸ್‌ಜೆಡಿ 2008(ಭಾ) ಬೆಂಗಳೂರು, ದಿನಾಂಕ:10ನೇ ಡಿಸೆಂಬರ್ 2008

ಸರ್ಕಾರದ ಅಧಿಸೂಚನೆ ಸಂಖ್ಯೆ:ಮಮಇ 9 ಎಸ್‌ಜೆಡಿ 2008 ದಿ:7–8–2008ರ 5ನೇ ಸಾಲಿನಲ್ಲಿ ನಮೂದಿಸಿರುವ ರೂ. 14050–350–14400–400–16800–450–19500–525–22650–600–25050ರ ವೇತನ ಶ್ರೇಣಿ ಎಂಬ ಬದಲಿಗೆ ರೂ. 7400–200–8800–260–10880–320–13120ರ ವೇತನ ಶ್ರೇಣಿ (ಪರಿಷ್ಕೃತ ವೇತನ ಶ್ರೇಣಿ ರೂ 14050–350–14400–400–16800–450–19500–525–22650–600–25050) ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಪಿ.ಆರ್. 206 ಆರ್. ನರಸಿಂಹಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ–2(ಪ್ರಭಾರ),

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ವಿಷಯ : ಶ್ರೀ ಜೆ.ಬಿ. ಕಿರಣ್, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು (ಅಮಾನತ್ತಿನಲ್ಲಿರುವವರು) ಅರಸೀಕೆರೆ, ಇವರನ್ನು ಸೇವೆಗೆ ಪುನರ್ ಸ್ಥಾಪಿಸುವ ಬಗ್ಗೆ.

ಓದಲಾಗಿದೆ : ಸರ್ಕಾರಿ ಆದೇಶ ಸಂಖ್ಯೆ:ಮಮಇ 326/ಎಸ್ ಜೆಡಿ 2008, ದಿ:19.7.2008

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:19–7–2008ರ ಆದೇಶದಲ್ಲಿ ಶ್ರೀ ಜೆ.ಬಿ. ಕಿರಣ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಅರಸೀಕೆರೆ, ಹಾಸನ ಜಿಲ್ಲೆ, ಇವರನ್ನು ಶ್ರೀಮತಿ ಭಾಗ್ಯಬಾಯಿ ಕೋಂ ಕೆಂಪನಾಯ್ಕ ಎಂಬ ಮಹಿಳೆಯೊಂದಿಗೆ ಅನುಚಿತ ವರ್ತನೆ ಆರೋಪ ಕಾರಣಕ್ಕಾಗಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಿದೆ. ಸದರಿಯವರ ವಿರುದ್ಧ ಜಿಲ್ಲಾ ಪಂಚಾಯತ್, ಹಾಸನ ಇವರ ವತಿಯಿಂದ ಪರಿಶೀಲನಾ ಸಮಿತಿಯು ವಿಚಾರಣೆ ನಡೆಸುತ್ತಿದ್ದು, ಈ ಸಮಿತಿಯ ವರದಿಯು ಬಾಕಿ ಇರುತ್ತದೆ. ಪ್ರಕರಣವನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ವಿಚಾರಣೆ ಬಾಕಿ ಇರಿಸಿ ಸದರಿ ಅಧಿಕಾರಿಯವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸೇವೆಗೆ ಪುನರ್ ಸ್ಥಾಪಿಸಲು ನಿರ್ಧರಿಸಿ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಮಮಇ 326 ಎಸ್‌ಜೆಡಿ 2008, ಬೆಂಗಳೂರು, ದಿ:22ನೇ ಡಿಸೆಂಬರ್ 2008

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಜೆ.ಬಿ. ಕಿರಣ್ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಅರಸೀಕೆರೆ, ಹಾಸನ ಜಿಲ್ಲೆ ಇವರನ್ನು ಅವರ ಮೇಲಿನ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ಹಾಗೂ ಜಿಲ್ಲಾ ಪಂಚಾಯತಿ ಹಾಸನ ಇವರು ಈ ಬಗ್ಗೆ ರಚಿಸಿರುವ ಪರಿಶೀಲನಾ ಸಮಿತಿಯ ವರದಿಯ ಶಿಫಾರಸ್ಸುಗಳನ್ನು ಕಾಯ್ದಿರಿಸಿ ಇವರ ಅಮಾನತ್ತನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ತೆರವುಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಶ್ರೀನಿವಾಸಪುರ, ಕೋಲಾರ ಜಿಲ್ಲೆ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ನರಸಿಂಹಯ್ಯ

ಪಿ.ಆರ್. 207 ಸರ್ಕಾರದ ಅಧೀನ ಕಾರ್ಯದರ್ಶಿ–2(ಪ್ರಭಾರ),

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕೃಷಿ ಸಚಿವಾಲಯ

ವಿಷಯ : ಶ್ರೀ ವಿಷ್ಣುದಾಸ್ ಮುರ್ಗಾಕರ್, ಸಹಾಯಕ ಕೃಷಿ ನಿರ್ದೇಶಕರು, ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬೀದರ್, ಇವರು ಸ್ವ ಇಚ್ಛಾ ನಿವೃತ್ತಿ ಹೊಂದಲು ಅನುಮತಿ.

ಓದಲಾಗಿದೆ : 1 ಕೃಷಿ ಆಯುಕ್ತರ ಪತ್ರ ಸಂ:ಕೃಷಿಪ–1/31/2008–09 ದಿನಾಂಕ:23.9.2008 & 18.11.2008.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ ಶ್ರೀ ವಿಷ್ಣುದಾಸ್ ಮುರ್ಗಾಕರ, ಸಹಾಯಕ ಕೃಷಿ ನಿರ್ದೇಶಕರ (ವಿ.ತ)., ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬೀದರ್ ಇವರು ತಮ್ಮ ಕೌಟುಂಬಿಕ ಕಾರಣಗಳನ್ನು ಉಲ್ಲೇಖಿಸಿ ದಿನಾಂಕ:30–9–2008ರಿಂದ ಜಾರಿಗೆ ಬರುವಂತೆ ಸ್ವ ಇಚ್ಛಾ ನಿವೃತ್ತಿ ಕೋರಿ ಸಲ್ಲಿಸಿರವ ದಿನಾಂಕ:2.8.2008ರ ಮನವಿಯೊಂದಿಗೆ, ಸದರಿ ಅಧಿಕಾರಿಯು ಈ ಹಿಂದೆ ಸಲ್ಲಿಸಿರುವ ಕಚೇರಿಗಳಿಂದ ಬಂದಿರುವ ಮಾಹಿತಿಗಳಂತೆ ಸರ್ಕಾರಕ್ಕೆ ಬರಬೇಕಾದ ಬಾಕಿ ಯಾವುದೂ ಇರುವುದಿಲ್ಲ ಜೊತೆಗೆ ಈ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಇರುವುದಿಲ್ಲವೆಂದು ಹಾಗೂ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 285(1) ಅನ್ವಯ ಸ್ವಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಕೃತೋಇ 305 ಕೃಪಸೇ 2008, ಬೆಂಗಳೂರು, ದಿನಾಂಕ:29ನೇ ಡಿಸೆಂಬರ್ 2008

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ವಿಷ್ಣುದಾಸ ಮುರ್ಗಾಕರ, ಸಹಾಯಕ ಕೃಷಿ ನಿರ್ದೇಶಕರು, ಇವರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಏನಾದರೂ ಇದ್ದರೆ ಅದನ್ನು ಅವರಿಗೆ ನೀಡಬೇಕಾದ ಸವಲತ್ತುಗಳಿಂದ ವಸೂಲಿ ಮಾಡುವ ಷರತ್ತಿಗೊಳಪಟ್ಟು ಅವರ ಸ್ವಂತ ಇಚ್ಛೆಯ ಮೇಲೆ ಕೃಷಿ ಇಲಾಖೆಯ ಸೇವೆಯಿಂದ ದಿನಾಂಕ:31.12.2008ರಿಂದ ಜಾರಿಗೆ ಬರುವಂತೆ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮ 285(1)(ಎ) ಅನ್ವಯ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಪಿ.ಆರ್. 216

ಜಿ.ಕೆ. ಗುರಾಣಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ

INFRASTRUCTURE DEVELOPMENT SECRETARIAT

Sub : Release of HG\oK's Share towards cost sharing Railway project-Shimoga-Talaguppa gauge conversion project-Reg.

Read : 1) G.O.No. IDD 52 NSW 2007 dated:24.7.2007

2) 2. G.O.No.IDD 52 NSW 2007 dated.19.9.2007

3) Letter No. W. 63/B/CN/BNC/Genl dated:16.12.2008 of Chief Engineer, (Con.,)SWR, Bangalore.

Preamble:

In the Government Order referred to at Sl.No. (1) above Government of Karnataka has released an amount of Rs. 20.00 crore towards cost sharing for Shimoga-talaguppa gauge conversion project with the condition of having an MoU with railways for sharing this project on 50:50 cost sharing basis and getting matching share from MoR.

2. However SWR in their letter dated 21.8.07 clarified that the railways have not entered into MoU for cost sharable work for other cost sharing railway projects. Accordingly in G.O. read at Sl.No. (2) above, the said condition has been deleted.

3. The Chief Engineer, South Western Railways, Bangalore in his letter read at Sl.No. (3) above, has stated that the railways had already exceeded the proportionate share of their expenditure and have spent Rs. 90.4781 crore towards Shimoga-Talaguppa gauge conversion project. He has therefore requested for immediate balance deposit of 50% share of Government of Karnataka which comes to Rs. 34.71 crore.

4. The proposal of Railways has been examined and it has been decided to release an amount of Rs. 30.00 crore out of the Budget of Rs. 100.00 crore provided under the Head of Account "5465-01-190-0-3-05"(Plan) 211 investment towards cost sharing for new railway projects during 2008-09. Hence this order.

Government Order No. IDD 52 NSW 2007, Bangalore, Dated:26th December 2008

After careful examination of the request of Railways, Government is pleased to release Rs. 30.00 crore (Rupees Thirty Crore only) towards Shimoga-Talaguppa gauge conversion project being the part of the balance 50:50 share of Government of Karnataka.

2. The expenditure shall be met under the Head of Account "5465-01-190-3-05" (Plan) 211 investment out of the budget provision Rs. 100.00 crore. towards cost sharing for new railway projects during 2008-09.

3. The Chief Executive Officer, K-RIDE is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the Financial Advisor and Chief Accounts Officer (Construction), South Western Railway, Bangalore.

4. This order is issued in accordance with the concurrence of Finance Department given vide U.O.Note, No.FD 1732 Exp-I /08 dated 23.12.2008.

By order and in the name of the Governor of Karnataka

N. MANJULA GEETHA

P.R. 222

Under Secretary to Government

Infrastructure Development Department

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ರೇಷ್ಮೆ ಇಲಾಖೆಯ ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆ, ಕೊಳ್ಳೇಗಾಲ ಇಲ್ಲಿಯ ಅವ್ಯವಹಾರ–ಶಿಸ್ತುಕ್ರಮ–ಜಂಟಿ ವಿಚಾರಣೆ ಬಗ್ಗೆ.

ಓದಲಾಗಿದೆ :

1 ಸಿಬ್ಬಂದಿ 3ಎ/ಶಿಸ್ತು/08/2007–08 ದಿನಾಂಕ:25.7.2007

2 ಕಾರಣ ಕೇಳುವ ನೋಟೀಸ್ ಸಂಖ್ಯೆ:ವಾಕೈ 84 ರೇಸೇವಿ 07 ದಿ:1.2.2008

3 ಶ್ರೀ ಕೆ.ಹೆಚ್. ಪೃಥ್ವಿರಾಜ್ ರೇಷ್ಮೆ ಉಪ ನಿರ್ದೇಶಕರು, ಇವರ ರಕ್ಷಣಾ ಹೇಳಿಕೆ ದಿನಾಂಕ:26.2.2008.

4 ಶ್ರೀ ಹೆಚ್.ಬಿ. ಬೋರಯ್ಯ, ರೇಷ್ಮೆ ವಿಸ್ತರಣಾಧಿಕಾರಿ ಇವರ ರಕ್ಷಣಾ ಹೇಳಿಕೆ ದಿನಾಂಕ:21.2.2008

5 ಶ್ರೀ ಹೆಚ್.ಪಿ. ಮರಿಬಸಪ್ಪ, ರೇಷ್ಮೆ ಪ್ರವರ್ತಕರು, ಇವರ ರಕ್ಷಣಾ ಹೇಳಿಕೆ ದಿನಾಂಕ:21.2.2008

6 ಶ್ರೀ ಎಸ್. ಮಹದೇವ ಪ್ರಸಾದ್ (ಸಂಖ್ಯಾತಿರಿಕ್ತ) ರೇಷ್ಮೆ ಪ್ರವರ್ತಕರು, ಇವರ ರಕ್ಷಣಾ ಹೇಳಿಕೆ ದಿನಾಂಕ:21.2.2008

7 ಪತ್ರ ಸಂಖ್ಯೆ:ವಾಕೈ 84 ರೇಸೇವಿ 2007 ದಿನಾಂಕ:22.5.2008

8 ಪತ್ರ ಸಂಖ್ಯೆ:ಸಿಬ್ಬಂದಿ–3 (ಎ) /ಶಿಸ್ತು/8/2007–08, ದಿನಾಂಕ:18.6.2008

ಪ್ರಸ್ತಾವನೆ:

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಮೇಲೆ ಓದಲಾದ 1ರ ಪತ್ರದಲ್ಲಿ ಮಾನ್ಯ ರೇಷ್ಮೆ ಸಚಿವರು ಕೊಳ್ಳೇಗಾಲ ರೇಷ್ಮೆ ಗೂಡಿನ ಮಾರುಕಟ್ಟೆಗೆ ದಿನಾಂಕ:15.5.2007ರಂದು ಅನಿರೀಕ್ಷಿತವಾಗಿ ಭೇಟಿ ನೀಡಿ ಮಾರುಕಟ್ಟೆಯ ದೈನಂದಿನ ಚಟುವಟಿಕೆಗಳನ್ನು ಪರಿಶೀಲಿಸಿದಾಗ ಮಾರುಕಟ್ಟೆ ಘಟಕ 1ರ ಹಣ ಸ್ವೀಕರಿಸುವ ಕ್ಯಾಷ್ ಕೌಂಟರ್‌ನಲ್ಲಿ ಭೌತಿಕವಾಗಿ ಶೇಖರಿಸಲಾಗಿದ್ದ ರೂ. 1,65,000–00 ಕ್ಕಿಂತಲೂ ಹೆಚ್ಚು ಹಣ ಶೇಖರಿಸಿದ್ದ ಬಗ್ಗೆ ಆಕ್ಷೇಪ ಸೂಚಿಸಿ ಈ ಕೆಳಕಂಡ ಅಧಿಕಾರಿ/ನೌಕರರು ಈ ಅವ್ಯವಹಾರಕ್ಕೆ ಕಾರಣಕರ್ತರಾಗಿರುವುದರಿಂದ ಇವರ ವಿರುದ್ಧ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 13ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಕೋರಿರುತ್ತಾರೆ.

1) ಶ್ರೀ ಕೆ.ಹೆಚ್. ಪೃಥ್ವಿರಾಜ್ ರೇಷ್ಮೆ ಉಪ ನಿರ್ದೇಶಕರು,

2) ಶ್ರೀ ಹೆಚ್.ಬಿ. ಬೋರಯ್ಯ, ರೇಷ್ಮೆ ವಿಸ್ತರಣಾಧಿಕಾರಿ

3) ಶ್ರೀ ಹೆಚ್.ಪಿ. ಮರಿಬಸಪ್ಪ, ಪ್ರವರ್ತಕರು,

4) ಶ್ರೀ ಎಸ್. ಮಹದೇವ ಪ್ರಸಾದ್ ರೇಷ್ಮೆ (ಸಂ) ರೇಷ್ಮೆ ಪ್ರವರ್ತಕರು

ಈ ಮೇಲ್ಕಂಡ ಅಧಿಕಾರಿ/ ನೌಕರರುಗಳ ಮೇಲಿನ ಆರೋಪಿಗಳಿಗೆ ಸಂಬಂಧಿಸಿದಂತೆ ದೋಷಾರೋಪಣೆ ಪಟ್ಟಿಗಳನ್ನು ಮೇಲೆ ಓದಲಾದ 2ರ ಪತ್ರಗಳಲ್ಲಿ ಪ್ರತ್ಯೇಕವಾಗಿ ಜಾರಿ ಮಾಡಿ ರಕ್ಷಣಾ ಹೇಳಿಕೆಗಳನ್ನು ಪಡೆಯಲಾಗಿದೆ. ಅವರುಗಳು ತಮ್ಮಗಳ ಮೇಲೆ ಮಾಡಲಾಗಿರುವ ಆರೋಪಗಳನ್ನು ನಿರಾಕರಿಸಿ ಅವರುಗಳ ಮೇಲಿನ ಆರೋಪಗಳನ್ನು ಕೈಬಿಟ್ಟು ದೋಷಮುಕ್ತರನ್ನಾಗಿಸಲು ಕೋರಿರುತ್ತಾರೆ.

ಈ ಅಧಿಕಾರಿ/ನೌಕರರು ಸಲ್ಲಿಸಿದ್ದ ರಕ್ಷಣಾ ಹೇಳಿಕೆಗಳನ್ನು ರೇಷ್ಮೆ ಆಯುಕ್ತರಿಗೆ ಮೇಲೆ ಓದಲಾದ 7ರ ಪತ್ರದ ಮುಖೇನ ಕಳುಹಿಸಿ ಅವುಗಳನ್ನು ಪರಿಶೀಲಿಸಿ ಸದರಿಯವರ ವಿರುದ್ಧ ವಿಚಾರಣೆಯನ್ನು ನಡೆಸಬೇಕೇ ಅಥವಾ ವಿಚಾರಣೆಯನ್ನು ಕೈಬಿಟ್ಟು ದೋಷಮುಕ್ತರನ್ನಾಗಿಸಬೇಕೇ ಎಂಬ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಕೋರಲಾಗಿತ್ತು.

ರೇಷ್ಮೆ ಆಯುಕ್ತರು ಓದಲಾದ 8ರ ಪತ್ರದಲ್ಲಿ ಈ ಪ್ರಕರಣವು ಇಲಾಖಾ ಅಧಿಕಾರಿ ನೌಕರರನ್ನೊಳಗೊಂಡ ಜಂಟಿ ವಿಚಾರಣೆಯಾಗಿದ್ದು, ಸರ್ಕಾರವೇ ಶಿಸ್ತು ಪ್ರಾಧಿಕಾರ ಆಗಿರುವುದರಿಂದ ದಂಡನೆ ವಿಧಿಸುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವುದು ಸರ್ಕಾರದ ವಿವೇಚನೆಗೆ ಸೇರಿರುವ ವಿಷಯವಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

ಆದುದರಿಂದ ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಹಿಡಿಯಲು ಜಂಟಿ ವಿಚಾರಣೆಯ ಅವಶ್ಯಕತೆ ಇದೆ ಎಂದು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ವಾಕೈ 84 ರೇಸೇವಿ 2007, ಬೆಂಗಳೂರು, ದಿನಾಂಕ:29ನೇ ಡಿಸೆಂಬರ್ 2008

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ಕೊಳ್ಳೇಗಾಲ ಇಲ್ಲಿಯ ಘಟಕ 1ರ ಕ್ಯಾಷ್ ಕೌಂಟರ್‌ನಲ್ಲಿ ಭೌತಿಕವಾಗಿ ಶೇಖರಿಸಲಾಗಿದ್ದ ರೂ. 1,65,000–00 ಕ್ಕಿಂತಲು ಹೆಚ್ಚು ಹಣ ಶೇಖರಿಸಿದ್ದ ಬಗ್ಗೆ ನಡೆಯಿತೆನ್ನಲಾದ ಅವ್ಯವಹಾರ ಕುರಿತಂತೆ ಈ ಕೆಳಕಂಡ ಅಧಿಕಾರಿ/ ನೌಕರರ ವಿರುದ್ಧ ಮಾಡಲಾಗಿರುವ ದೋಷಾರೋಪಣೆಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 13ರ ಪ್ರಕಾರ ಜಂಟಿ ವಿಚಾರಣೆ ನಡೆಸಲು ಆದೇಶಿಸಿದೆ.

1) ಶ್ರೀ ಕೆ.ಹೆಚ್. ಪೃಥ್ವಿರಾಜ್ ರೇಷ್ಮೆ ಉಪ ನಿರ್ದೇಶಕರು,

2) ಶ್ರೀ ಹೆಚ್.ಬಿ. ಬೋರಯ್ಯ, ರೇಷ್ಮೆ ವಿಸ್ತರಣಾಧಿಕಾರಿ

3) ಶ್ರೀ ಹೆಚ್.ಪಿ. ಮರಿಬಸಪ್ಪ ರೇಷ್ಮೆ ಪ್ರವರ್ತಕರು,

4) ಶ್ರೀ ಎಸ್. ಮಹದೇವ ಪ್ರಸಾದ್ (ಸಂಖ್ಯಾತಿರಿಕ್ತ) ರೇಷ್ಮೆ ಪ್ರವರ್ತಕರು

ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು 1957ರ ನಿಯಮ 11ರ ಉಪ ನಿಯಮ(5)ನ್ನು ಓದಿಕೊಂಡಂತೆ ಅದೇ ನಿಯಮದ ಉಪ ನಿಯಮ (2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಚಾರಣೆಯನ್ನು ನಡೆಸಲು ಶ್ರೀ ಕೆ.ಆರ್. ಲಕ್ಷ್ಮೀಕಾಂತರಾಜ ಅರಸ್, ಜಂಟಿ ನಿರ್ದೇಶಕರು, ಮೈಸೂರು ವಿಭಾಗ, ಮೈಸೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ.

ಶಿಸ್ತು ಪ್ರಾಧಿಕಾರಿಯ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು 1957ರ ನಿಯಮ 11(5)(ಸಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಹೆಚ್.ಎಸ್. ಸರ್ವೇಶ್‌ಕುಮಾರ್, ಸಹಾಯಕ ನಿರ್ದೇಶಕರು, ರೇಷ್ಮೆ ಜಂಟಿ ನಿರ್ದೇಶಕರ ಕಛೇರಿ, ಮೈಸೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿದೆ.

ಸದರಿ ವಿಚಾರಣೆಯನ್ನು 3 ತಿಂಗಳ ಒಳಗಾಗಿ ಪೂರ್ಣಗೊಳಿಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಬಿ. ದೇವಿಕ

ಪಿ.ಆರ್. 226

ಸರ್ಕಾರದ ಅಧೀನ ಕಾರ್ಯದರ್ಶಿ(ರೇಷ್ಮೆ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್, ಇವರ ಅಮಾನತ್ತಿನ ಆದೇಶವನ್ನು ರದ್ದುಪಡಿಸಿ ಸೇವೆಗೆ ಪುನರ್ ಸ್ಥಾಪಿಸುವ ಕುರಿತು–ಆದೇಶ.

ಓದಲಾಗಿದೆ : 1 ಜಿಲ್ಲಾಧಿಕಾರಿಗಳು, ಬೀದರ್, ಕಚೇರಿ ಆದೇಶ ಸಂಖ್ಯೆ:ಕಂ/ಸಿಬ್ಬಂದಿ/ಸಿಆರ್/ಜಿಎ/2008–09/4770 ದಿ:16.8.2008.

2 ಕೆ.ಎ.ಟಿ. ಅರ್ಜಿ ಸಂಖ್ಯೆ:4069/2008 ರಲ್ಲಿ ಮಾನ್ಯ ನ್ಯಾಯಮಂಡಳಿಯು ದಿ:13.10.2008 ರಂದು ನೀಡಿರುವ ತೀರ್ಪು.

3 ಸರ್ಕಾರದ ಪತ್ರ ಸಂಖ್ಯೆ:ಮಮಇ 460 ಎಸ್‌ಜೆಡಿ 2008 ದಿ:1.12.2008

4 ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ ರವರ ಪತ್ರ ಸಂಖ್ಯೆ:ಸಿಆಸುಇ 9783 ಚುನಾವಣೆಗಳು 2008 ದಿ:10-12-2008.

ಪ್ರಸ್ತಾವನೆ:

ಬೀದರ್ ನಗರದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ ಬಗ್ಗೆ ಸಾರ್ವಜನಿಕರಿಂದ ಹಾಗೂ ಚುನಾಯಿತ ಪ್ರತಿನಿಧಿಗಳಿಂದ ಅನೇಕ ಬಾರಿ ದೂರುಗಳು ಬಂದ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳ ತಪಾಸಣೆಯನ್ನು ಹಿರಿಯ ಅಧಿಕಾರಿಗಳಿಂದ ನಡೆಸಿ ಕೇಂದ್ರಗಳ ತಪಾಸಣೆ ಬಳಿಕ ನ್ಯೂನತೆಗಳು ಇರುವುದು ವರದಿಯಾಗಿರುವ ಕುರಿತು ದಿ:16-8-2008 ರ ಜನಸ್ಪಂದನ ಸಮಿತಿ ಸಭೆಯಲ್ಲಿ ವಿವರವಾಗಿ ಚರ್ಚಿಸಿ ತಪಾಸಣೆ ತಂಡದವರ ಅಭಿಪ್ರಾಯದ ಪ್ರಕಾರ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲದಿರುವುದನ್ನು ಮನಗಂಡು, ಅನೇಕ ಅಂಗನವಾಡಿ ಕೇಂದ್ರಗಳಿಗೆ ವರ್ಷ ಕಳೆದರೂ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರು ನಿಯಮಿತವಾಗಿ ಭೇಟಿ ನೀಡಿ ಮೇಲ್ವಿಚಾರಣೆ ಮಾಡದೆ ಇರುವುದರಿಂದ ಈ ಕಾರ್ಯಕ್ರಮವು ಒಂದು ಖೋಟಾ ಕಾರ್ಯಕ್ರಮವಾಗಿ ಪರಿಗಣಿಸಿದ್ದು, ಮಕ್ಕಳು ಹಾಗೂ ಸ್ತ್ರೀಯರಿಗಾಗಿ ರೂಪಿಸಿದ ಕಾರ್ಯಕ್ರಮವನ್ನು ಬುಡಮೇಲು ಮಾಡಿದಂತಾಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ, ಬೀದರ್ ರವರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿ:16.8.2008ರ ಆದೇಶದಲ್ಲಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರನ್ನು ಅಮಾನತ್ತುಗೊಳಿಸಿ ಆದೇಶ ಹೊರಡಿಸಿರುತ್ತಾರೆ.

ಜಿಲ್ಲಾಧಿಕಾರಿಗಳು ಬೀದರ್ ರವರು ಅಮಾನತ್ತುಗೊಳಿಸಿ ಹೊರಡಿಸಿರುವ ದಿ:16.8.2008ರ ಆದೇಶವನ್ನು ಪ್ರಶ್ನಿಸಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ರವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ: 4069/2008 ರಲ್ಲಿ ಮೊಕದ್ದಮೆ ಹೂಡಿ, ಜಿಲ್ಲಾಧಿಕಾರಿ, ಬೀದರ್ ರವರು ಅಮಾನತ್ತುಗೊಳಿಸಿ ಹೊರಡಿಸಿರುವ ದಿ:16.8.2008ರ ಆದೇಶವನ್ನು ರದ್ದುಗೊಳಿಸುವಂತೆ ಕೋರಲಾಗಿದ್ದು, ಸದರಿ ಪ್ರಕರಣವನ್ನು ಮಾನ್ಯ ನ್ಯಾಯಮಂಡಳಿಯ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿ:13.10.2008 ರಂದು ವಿಚಾರಣೆ ನಡೆಸಿ ಶಿಸ್ತು ಪ್ರಾಧಿಕಾರವಲ್ಲದ ಹಾಗೂ ಜಿಲ್ಲಾಧಿಕಾರಿಗಳಿಗೆ ಗ್ರೂಪ್ 'ಎ' ಅಧಿಕಾರಿಯನ್ನು ಅಮಾನತ್ತುಗೊಳಿಸಲು ಅಧಿಕಾರವಿಲ್ಲದಿದ್ದರೂ ಸಹ ಜಿಲ್ಲಾಧಿಕಾರಿಗಳು, ಬೀದರ್ ರವರು ದಿ:16-8-2008 ರಂದು ಅಮಾನತ್ತುಗೊಳಿಸಿ ಹೊರಡಿಸಿರುವ ಆದೇಶವನ್ನು ಗಂಭೀರವಾಗಿ ಪರಿಗಣಿಸಿ ಜಿಲ್ಲಾಧಿಕಾರಿಗಳಿಗೆ ರೂ. 5,000/- ಗಳನ್ನು ದಂಡವನ್ನಾಗಿ ಪಾವತಿಸುವಂತೆ ಹಾಗೂ ಜಿಲ್ಲಾಧಿಕಾರಿಗಳು ಹೊರಡಿಸಿರುವ ಅಮಾನತ್ತಿನ ಆದೇಶವನ್ನು ರದ್ದುಪಡಿಸಿ ತೀರ್ಪು ನೀಡಿರುತ್ತದೆ. ಮಾನ್ಯ ನ್ಯಾಯಮಂಡಳಿಯು ದಿ:13.10.2008 ರಂದು ನೀಡಿರುವ ತೀರ್ಪಿನ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯವನ್ನು ಕೋರಲಾಗಿ , ಅದರಂತೆ ಕಾನೂನು ಕೋಶದ ಮುಖ್ಯಸ್ಥರು ಮಾನ್ಯ ನ್ಯಾಯಮಂಡಳಿಯು ನೀಡಿರುವ ತೀರ್ಪನ್ನು ಪರಿಶೀಲಿಸಿ ಸದರಿ ತೀರ್ಪು ಮೇಲ್ಮನವಿಗೆ ಅರ್ಹ ಪ್ರಕರಣವಲ್ಲವೆಂದು ತಿಳಿಸಿ ನೀಡಿರುವ ಅಭಿಪ್ರಾಯದ ಉದ್ಧೃತ ಭಾಗವು ಈ ಕೆಳಕಂಡಂತಿದೆ.

The Applicant has challenged the order of suspension passed by the Deputy Commissionr, Bidar District, Bidar i,e, Respondent No. 1 before the Hon'ble KAT in A.No. 4069/2008. The Hon'lble KAT has much discussed about the Rule (10) of the Karnataka Civil Service (CCA) Rules 1957 and come to the conculsion that the order of suspension passed by R1 is not sustainable as no power has vested with the R11 and on the other hand, the State Government alone is the competent authority under the said CCA Rules to place the officers belongs to Group-A and Group-B category under suspension and in this case applicant is a Group-A officer..

Considering the finding given by the Hon'ble KAT holding that R1 is not the competent authority to pass order of suspension of the applicant and also order passed setting aside the order of suspension passed by R1 and granting other relief's are found to be correct.

In view of the above, I found no error in the order passed by the Hon'ble KAT. For the above reasons, I am of the opinion that it is not a fit case to prefer a writ appeal.

ಸರ್ಕಾರವು ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿ:13.10.2008 ರ ತೀರ್ಪು ಹಾಗೂ ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯ ಹಾಗೂ ಪ್ರಕರಣದ ವಾಸ್ತವಾಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಇವರನ್ನು ಜಿಲ್ಲಾಧಿಕಾರಿಗಳು, ಬೀದರ್ ರವರು ಅಮಾನತ್ತುಗೊಳಿಸಿ

ದಿ:16.8.2008 ರಂದು ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ ಸೇವೆಗೆ ಪುನರ್ ಸ್ಥಾಪಿಸಲು ತೀರ್ಮಾನಿಸಿ ಅವರ ವಿರುದ್ಧದ ಆರೋಪಗಳನ್ನು ಹಿಂಪಡೆದು ಅವರಿಗೆ ಇನ್ನು ಮುಂದೆ ಬದ್ಧತೆಯಿಂದ ಕಾರ್ಯನಿರ್ವಹಿಸಲು ಎಚ್ಚರಿಕೆ ನೀಡಿ, ಅವರನ್ನು ಗುಲ್ಬರ್ಗಾದಲ್ಲಿ ಖಾಲಿ ಇರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಮಮಇ 460 ಎಸ್‌ಜಿಡಿ 2008, ಬೆಂಗಳೂರು, ದಿನಾಂಕ:23ನೇ ಡಿಸೆಂಬರ್ 2008

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಗಳ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಗಳು ಬೀದರ್ ರವರು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರನ್ನು ಕಛೇರಿ ಆದೇಶ ಸಂಖ್ಯೆ:ಸಿಬ್ಬಂದಿ/ಸಿಆರ್/ಜಿಎ/2008–09/4770 ದಿ:16–8–2008 ರಂದು ಅಮಾನತ್ತುಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ ಇವರ ವಿರುದ್ಧ ಇರುವ ಆರೋಪಗಳನ್ನು ಹಿಂಪಡೆದು ಅವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಗೆ ಪುನರ್ ಸ್ಥಾಪಿಸಿ ಮಹಿಳಾ ಮತು ಮಕ್ಕಳ ಅಭಿವೃದ್ಧಿ ಇಲಾಖೆ, ಗುಲ್ಬರ್ಗಾ, ಇಲ್ಲಿ ಖಾಲಿ ಇರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ. ಮುಂದುವರೆದು ಸದರಿಯವರು ಇನ್ನು ಮುಂದೆ ಅವರ ಕಾರ್ಯನಿರ್ವಹಣೆಯಲ್ಲಿ ಎಚ್ಚರಿಕೆ ವಹಿಸುವಂತೆ ಸೂಚಿಸಿ ಅವರಿಗೆ ಒಂದು ಆಡಳಿತಾತ್ಮಕ ಎಚ್ಚರಿಕೆಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಆರ್. ನರಸಿಂಹಯ್ಯ

ಪಿ.ಆರ್. 208

ಸರ್ಕಾರದ ಅಧೀನ ಕಾರ್ಯದರ್ಶಿ–2(ಪ್ರಭಾರ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ವಿಷಯ : ಭಾಗ್ಯಲಕ್ಷ್ಮಿ ಯೋಜನೆಯಡಿ ಪಾಲುದಾರ ಹಣಕಾಸು ಸಂಸ್ಥೆಯಾದ ಭಾರತೀಯ ಜೀವವಿಮಾ ನಿಗಮದೊಂದಿಗಿನ ಒಡಂಬಡಿಕೆಯ ಅವಧಿಯನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ :
1 ಸರ್ಕಾರಿ ಆದೇಶ ಸಂ:ಮಮಇ 99 ಮಭಾಅ 2006, ದಿನಾಂಕ:17.10.2006
2 ಸರ್ಕಾರಿ ಆದೇಶ ಸಂ:ಮಮಇ 152 ಮಭಾಅ 2008, ದಿನಾಂಕ:14.8.2008
3 ಸರ್ಕಾರಿ ಆದೇಶ ಸಂ:ಮಮಇ 152 ಮಭಾಅ 2008, ದಿನಾಂಕ:6.9.2008
4 ವಿಭಾಗೀಯ ವ್ಯವಸ್ಥಾಪಕರು (ಪಿ ಅಂಡ್ ಜಿಎಸ್), ಭಾರತೀಯ ಜೀವವಿಮಾ ನಿಗಮ ಇವರ ದಿನಾಂಕ:17.12.2008 ಮತ್ತು ದಿನಾಂಕ:18.12.2008ರ ಪತ್ರ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ಕರ್ನಾಟಕ ಸರ್ಕಾರವು ಹೆಣ್ಣು ಮಗುವಿನ ಸ್ಥಾನವನ್ನು ಕುಟುಂಬ ಹಾಗೂ ಸಮುದಾಯದಲ್ಲಿ ಹೆಚ್ಚಿಸಲು ಭಾಗ್ಯಲಕ್ಷ್ಮಿ ಎಂಬ ವಿನೂತನ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ. ಸದರಿ ಯೋಜನೆ 2006–07ನೇ ಸಾಲಿನಿಂದ ಜಾರಿಗೆ ಬಂದಿದ್ದು, ದಿನಾಂಕ:31.3.2006ರ ನಂತರ ಹುಟ್ಟಿದ ಹೆಣ್ಣು ಮಗುವಿನ ಹೆಸರಿನಲ್ಲಿ ರೂ. 10,000/– ಗಳನ್ನು ಪಾಲುಗಾರ ಹಣಕಾಸು ಸಂಸ್ಥೆಯಲ್ಲಿ ಠೇವಣಿ ಹೂಡಿ ಠೇವಣಿ ಮೇಲಿನ ಆದಾಯವನ್ನು ಗರಿಷ್ಠಗೊಳಿಸಿ ಠೇವಣಿ ಹಣವನ್ನು ಬಡ್ಡಿ ಸಮೇತವಾಗಿ ಫಲಾನುಭವಿಗೆ 18 ವರ್ಷಗಳು ಪೂರ್ಣಗೊಂಡ ನಂತರ ದೊರಕಿಸಿಕೊಡುತ್ತದೆ.

ಅದರಂತೆ, ಆಯ್ಕೆಯಾದ ಫಲಾನುಭವಿಯ ಹೆಸರಿನಲ್ಲಿ ಠೇವಣಿ ಹೂಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರನ್ವಯ ಭಾರತೀಯ ಜೀವವಿಮಾ ನಿಗಮವನ್ನು ಪಾಲುದಾರ ಹಣಕಾಸು ಸಂಸ್ಥೆಯಾಗಿ ಆಯ್ಕೆ ಮಾಡಿ ಅದರ ಸಹಭಾಗಿತ್ವದೊಂದಿಗೆ ದಿನಾಂಕ:13.7.2007ರಲ್ಲಿ ಭಾರತೀಯ ಜೀವವಿಮಾ ನಿಗಮದೊಂದಿಗೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಒಡಂಬಡಿಕೆಯ ಒಪ್ಪಂದ (MOU) ಮಾಡಿಕೊಂಡಿರುತ್ತಾರೆ.

ಭಾರತೀಯ ಜೀವವಿಮಾ ನಿಗಮದೊಂದಿಗೆ ಮಾಡಿಕೊಂಡಿದ್ದ ಒಪ್ಪಂದವು 2006–07 ಮತ್ತು 2007–08ನೇ ಸಾಲಿನಲ್ಲಿ ರೂ. 10,000/– ಮೊತ್ತವನ್ನು ಠೇವಣಿಯಲ್ಲಿರಿಸಿ 18 ವರ್ಷಗಳ ನಂತರ ಪರಿಪಕ್ವ ಮೊತ್ತವನ್ನು ಫಲಾನುಭವಿಗಳಿಗೆ ಒದಗಿಸುವ ಭಾಗ್ಯಲಕ್ಷ್ಮಿ ಯೋಜನೆಗೆ ಸೀಮಿತಗೊಂಡಿದ್ದು, ಸದರಿ ಅವಧಿಯ ನಂತರ ಯೋಜನೆಯ ಮುಂದುವರಿಕೆಯ ಅನುಷ್ಠಾನಕ್ಕೆ ಸಂಬಂಧಿಸಿರುವುದಿಲ್ಲ ಹಾಗೂ ಠೇವಣಿ ಹೂಡಿಕೆಯ ಒಪ್ಪಂದವು 2007–08ನೇ ಸಾಲಿಗೆ ಅಂತ್ಯವಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2) ರ ಆದೇಶದಲ್ಲಿ ದಿನಾಂಕ: 17.7.2008ರ ಆಯವ್ಯಯ ಭಾಷಣದಲ್ಲಿ ಭಾಗ್ಯಲಕ್ಷ್ಮಿ ಯೋಜನೆಗೆ ಸರ್ಕಾರವು ನೀಡುತ್ತಿದ್ದ ಕೊಡುಗೆಯನ್ನು ದ್ವಿಗುಣಗೊಳಿಸುವುದೆಂದು ಹೆಣ್ಣುಮಗುವು 18ನೇ ವಯಸ್ಸಿಗೆ ಬಂದಾಗ ರೂ 1.00 ಲಕ್ಷವನ್ನು ಪಡೆಯಲಾಗುವುದೆಂದು ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ್ದು, ಮೇಲೆ ಓದಲಾದ ಕ್ರಮಾಂಕ

(2)ರ ಆದೇಶದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯನ್ನು ಮೂಲವಾಗಿ ಅನುಷ್ಠಾನಗೊಳಿಸಿರುವ ದಿನಾಂಕ:17.10.2006ರ ಆದೇಶವನ್ನು ಪರಿಷ್ಕರಿಸಿ ಹೊರಡಿಸಲಾಗಿದೆ. ಈ ಪರಿಷ್ಕೃತ ಯೋಜನೆಯನ್ವಯ ದಿನಾಂಕ:1.8.2008ರ ನಂತರ ಬಡತನ ರೇಖೆಗಿಂತ ಕೆಳಗಿನ ಕುಟುಂಬದಲ್ಲಿ ಜನಿಸಿದ ಮಗುವಿಗೆ ಅನ್ವಯವಾಗುವಂತೆ 18 ವರ್ಷಗಳ ನಂತರ ರೂ. 1.00 ಲಕ್ಷ ಪರಿಪಕ್ವ ಮೊತ್ತವನ್ನು ಪಡೆಯಲು ಅವಶ್ಯವಿರುವಂತೆ ರೂ. 10,000/– ಕ್ಕಿಂತ ಹೆಚ್ಚಿನ ನಿಗಧಿಪಡಿಸುವ ಮೊತ್ತವನ್ನು ನಿಯಮಾನುಸಾರ ಆಯ್ಕೆ ಮಾಡುವ ಹಣಕಾಸು ಸಂಸ್ಥೆಯಲ್ಲಿ ಠೇವಣಿಯಲ್ಲಿರಿಸಬೇಕು ಮತ್ತು ಕೇಂದ್ರ ಸರ್ಕಾರದ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಾರ್ಗಸೂಚನೆಗಳ ಮಾನದಂಡದನ್ವಯ ಫಲಾನುಭವಿಗಳ ದಾಖಲೆಗಳನ್ನು ನಿರ್ವಹಿಸಿ ಸಂರಕ್ಷಿಸಿ ಪೂರೈಸುವಂತಹ ಬಾಹ್ಯ ಸಂಸ್ಥೆಯನ್ನು ಸಹ ನಿಯಮಾನುಸಾರ ಆಯ್ಕೆ ಮಾಡಬೇಕಾಗುತ್ತದೆ.

ಪರಿಷ್ಕರಿಸಿದ ಭಾಗ್ಯಲಕ್ಷ್ಮಿ ಯೋಜನೆಯಡಿ ದಾಖಲೆ ನಿರ್ವಹಿಸುವ ಮತ್ತು ಠೇವಣಿ ಹೂಡುವ ಎರಡು ಪ್ರತ್ಯೇಕ ಸಂಸ್ಥೆಯ ಆಯ್ಕೆಯನ್ನು ನಿಯಮಾನುಸಾರ ಮಾಡಲು ಕಾಲಾವಕಾಶದ ಅವಶ್ಯಕತೆಯಿರುವುದನ್ನು ಸರ್ಕಾರವು ಮನಗಂಡಿದ್ದು, ಯೋಜನೆಯ ಅನುಷ್ಠಾನವನ್ನು ವಿಳಂಬಕ್ಕೆ ಎಡೆಮಾಡಿಕೊಡದೆ, ತಕ್ಷಣದಿಂದ ಜಾರಿಗೆ ತರುವ ಅವಶ್ಯಕತೆ ಯನ್ನು ಪರಿಗಣಿಸಿ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ದಿನಾಂಕ:1.8.2008ರ ನಂತರ ಜನಿಸಿದ ಮಗುವಿಗೆ ಅನ್ವಯವಾಗುವಂತೆ ಮೇಲೆ ಕ್ರಮ ಸಂಖ್ಯೆ (2)ರ ಪರಿಷ್ಕೃತ ಭಾಗ್ಯಲಕ್ಷ್ಮಿ ಯೋಜನೆಯನ್ನು 3 ತಿಂಗಳ ಅವಧಿಗೆ ಅಥವಾ ಅರ್ಹ ಹಣಕಾಸು ಸಂಸ್ಥೆಯನ್ನು ನಿಯಮಾನುಸಾರ ಆಯ್ಕೆ ಮಾಡುವ ಅವಧಿಯವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಒಪ್ಪಂದವನ್ನು ಮಾಡಿಕೊಂಡ ಯೋಜನೆಯನ್ನು ಜಾರಿಗೊಳಿಸಲು ಮಂಜೂರಾತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ ಪರಿಷ್ಕೃತ ಭಾಗ್ಯಲಕ್ಷ್ಮಿ ಯೋಜನೆಯನ್ನು ಅನುಷ್ಠಾನಗೊಳಿಸಲು ಭಾರತೀಯ ಜೀವವಿಮಾ ನಿಗಮವನ್ನು ಪಾಲುದಾರ ಹಣಕಾಸು ಸಂಸ್ಥೆಯಾಗಿ ನೇಮಕಾತಿ ಮಾಡುವಂತೆ ಹಾಗೂ ಈಗಾಗಲೇ 3 ತಿಂಗಳ ಅವಧಿಗೆ ಜಾರಿ ಮಾಡಲು ನೀಡಿದ ಆದೇಶಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲ್ಲಿಸಲಾದ ದಿನಾಂಕ:1.9.2008ರ ಪತ್ರದಲ್ಲಿದ್ದಂತೆ ಮೊದಲನೇ ಮಗುವಿನ ಹೆಸರಿನಲ್ಲಿ ರೂ. 19,300/– ಮೊತ್ತವನ್ನು ಠೇವಣಿಯಲ್ಲಿರಿಸಿದಲ್ಲಿ 18 ವರ್ಷಗಳ ನಂತರ ಶಿಕ್ಷ ಸಹಯೋಗ ಯೋಜನೆ, ವಿದ್ಯಾರ್ಥಿ ವೇತನ ಒಳಗೊಂಡಂತೆ ರೂ. 1,00,097/–ಮೊತ್ತವನ್ನು ದೊರಕಿಸಿಕೊಡುವುದರ ಜೊತೆಗೆ 15ನೇ ವರ್ಷದಲ್ಲಿ ರೂ 50,000/– ಸಾಲವನ್ನು ಸಹ ಪಡೆಯಬಹುದೆಂದು ಮತ್ತು ಫಲಾನುಭವಿಯ ಪೋಷಕರ ಹೆಸರಿನಲ್ಲಿ "ಜನಶ್ರೀ ವಿಮಾ ಯೋಜನೆ" ಅನ್ವಯ ವಿಮೆಯನ್ನು ಮಾಡುವುದು ಕಡ್ಡಾಯವಾಗಿರುವುದೆಂದು ಸಹ ತಿಳಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ:14.8.2008ರ ಆದೇಶದಲ್ಲಿ ನಿಗಧಿಪಡಿಸಿರುವಂತೆ ಠೇವಣಿಯಲ್ಲಿರಿಸಬೇಕಾದ ಬಾಹ್ಯ ಹಣಕಾಸು ಸಂಸ್ಥೆ ಮತು ಕೇಂದ್ರ ಸರ್ಕಾರದ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಾರ್ಗಸೂಚಿಯ ಮಾನದಂಡದನ್ವಯ ಫಲಾನುಭವಿಗಳ ದಾಖಲೆಗಳನ್ನು ನಿರ್ವಹಿಸಿ ಸಂರಕ್ಷಿಸಿ ಪೋಷಿಸುವಂತಹ ಮತ್ತೊಂದು ಬಾಹ್ಯ ಸಂಸ್ಥೆಯನ್ನು ಆಯ್ಕೆ ಮಾಡುವ ಅಂಶಗಳನ್ನು ಮತ್ತು ಭಾರತೀಯ ಜೀವವಿಮಾ ನಿಗಮ ಕೋರಿರುವಂತೆ ಪಾಲುದಾರ ಹಣಕಾಸು ಸಂಸ್ಥೆಯಾಗಿ ನೇಮಕಾತಿ ಮಾಡುವುದನ್ನು ಪುನರ್ಪರಿಶೀಲಿಸಲಾಗಿದ್ದು, ಈ ಕೆಳಗೆ ಸೂಚಿಸಿದಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂ:ಮಮಇ 330 ಮಮಅ 2008(2) ಬೆಂಗಳೂರು, ದಿನಾಂಕ:23ನೇ ಡಿಸೆಂಬರ್ 2008

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಭಾಗ್ಯಲಕ್ಷ್ಮಿ ಯೋಜನೆಯನ್ನು ಪರಿಷ್ಕರಿಸಿ ಹೊರಡಿಸಲಾಗಿರುವ ಸರ್ಕಾರಿ ಆದೇಶ ಸಂ:ಮಮಇ 152 ಮಮಅ 2008 ದಿನಾಂಕ:14.8.2008ರ ಆದೇಶ ಭಾಗದ ಕಂಡಿಕೆ–(4)(ಅ)ನ್ನು ಭಾಗಶಃ ಮಾರ್ಪಡಿಸಿ ಪರಿಷ್ಕೃತ ಭಾಗ್ಯಲಕ್ಷ್ಮಿ ಯೋಜನೆಯನ್ವಯ ಫಲಾನುಭವಿಗಳ ಪ್ರಾರಂಭಿಕ ನೊಂದಣಿ, ನಿಗದಿತ ಅವಧಿಗೆ ಚುಚ್ಚುಮದ್ದು ಕೊಡಿಸುವಿಕೆ, ಅಂಗನವಾಡಿ ಕೇಂದ್ರಗಳಿಗೆ ಹಾಜರಾಗುವಿಕೆ, ಶಾಲೆಗೆ ಕ್ರಮವಾಗಿ ಹಾಜರಾಗುವಿಕೆ ಮತ್ತು 8ನೇ ತರಗತಿಯ ವ್ಯಾಸಂಗ ಪೂರ್ಣಗೊಳಿಸುವಿಕೆಯ ಉಸ್ತುವಾರಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಆಯ್ಕೆಯಾದ ಪಾಲುದಾರ ಹಣಕಾಸು ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

ಪರಿಷ್ಕೃತ ಭಾಗ್ಯಲಕ್ಷ್ಮಿ ಯೋಜನೆಯನ್ನು ದಿನಾಂಕ:1.8.2008ರ ನಂತರ ಜನಿಸಿದ ಮಗುವಿಗೆ ಅನ್ವಯವಾಗುವಂತೆ ಜಾರಿಗೊಳಿಸಲು ಪಾಲುದಾರ ಹಣಕಾಸು ಸಂಸ್ಥೆಯಾಗಿ ಭಾರತೀಯ ಜೀವವಿಮಾ ನಿಗಮದೊಂದಿಗೆ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ:31.7.2009ರ ವರೆಗೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಒಪ್ಪಂದವನ್ನು ಮಾಡಿಕೊಂಡು ಯೋಜನೆಯನ್ನು ಜಾರಿಗೊಳಿಸಲು ಸಹ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಪ್ರಕರಣ 4(ಜಿ)ರನ್ವಯ ಭಾರತೀಯ ಜೀವವಿಮಾ ನಿಗಮಕ್ಕೆ ವಿನಾಯಿತಿ ನೀಡುವ ಬಗ್ಗೆ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಈ ಆದೇಶವನ್ನು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು 1977ರ ನಿಯಮ 17(2)ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಪಿ. ಶಿವಕುಮಾರ್

ಪಿ.ಆರ್. 209 ಸರ್ಕಾರದ ಅಧೀನ ಕಾರ್ಯದರ್ಶಿ-1

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯ ವಿಶೇಷ ಕಾರ್ಯದರ್ಶಿಗಳಿಗೆ ಪೂರಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : 1 ಅಧಿಸೂಚನೆ ಸಂಖ್ಯೆ:ಡಿಪಿಎಆರ್ 499 ಎಸ್ ಎಎಸ್ 2008, ದಿನಾಂಕ:4.11.2008

2 ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯ ಟಿಪ್ಪಣಿ ಸಂಖ್ಯೆ:ಮೂಅಇ 33 ಉಕಾ 2008 ದಿನಾಂಕ:5.11.2008

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ:4.11.2008ರ ಅಧಿಸೂಚನೆಯಲ್ಲಿ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯ ವಿಶೇಷ ಕಾರ್ಯದರ್ಶಿಯವರನ್ನು ನೇಮಕ ಮಾಡಲಾಗಿದೆ. ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯು ಮೇಲೆ (2)ರಲ್ಲಿ ಓದಲಾದ ದಿನಾಂಕ:5.11.2008ರ ಅನಧಿಕೃತ ಟಿಪ್ಪಣಿಯಲ್ಲಿ ವಿಶೇಷ ಕಾರ್ಯದರ್ಶಿ ಹುದ್ದೆಗೆ ಪೂರಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸಲು ಕೋರಿದೆ. ಇದನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 875 ಸಅಸೇ 2008, ಬೆಂಗಳೂರು, ದಿನಾಂಕ:29ನೇ ಜನವರಿ 2009

ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯ ವಿಶೇಷ ಕಾರ್ಯದರ್ಶಿಗಳಿಗೆ ಈ ಕೆಳಕಂಡ ಪೂರಕ ಸಿಬ್ಬಂದಿ ಹುದ್ದೆಗಳೊಡನೆ ಸೃಜಿಸಿ ಮುಂದುವರಿಸಲಾಗಿದೆ.

ಕ್ರ.ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಆಪ್ತ ಕಾರ್ಯದರ್ಶಿ ಗ್ರೇಡ್-2	1 ಹುದ್ದೆ
2	ಆಪ್ತಸಹಾಯಕರು (ಶೀಘ್ರಲಿಪಿಗಾರರು)	2 ಹುದ್ದೆಗಳು
3	ಕಿರಿಯ ಸಹಾಯಕ	1 ಹುದ್ದೆ
4	ವಾಹನ ಚಾಲಕ	1 ಹುದ್ದೆ
5	ಜಮೇದಾರ್	2 ಹುದ್ದೆಗಳು

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: :ಆಇ 2440 ವೆಚ್ಚ-5/2008 ದಿನಾಂಕ:15.12.2008ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಪಿ.ಆರ್. 341 **ಎಂ.ಎಸ್. ಶಿವರಾಮ್**

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

HEALTH AND FAMILY WELFARE SECRETARIAT

CORRIGENDUM No. HFW(PR) 27 WBA 2008 , Bangalore, Dated:6th January 2008

In the Government Order No. HFW (PR) 27 WBA 2008, Bangalore dated 1.1.2009 for words "the date of his joining" mentioned in the order portion shall be read as "the date of his joining which is 15.12.2008"

By order and in the name of the Governor of Karnataka

SUSHAMA GODBOLE

P.R. 326 Deputy Secretary to Government, KHSDRP,

Health and Family Welfare Department

ವಸತಿ ಸಚಿವಾಲಯ

ವಿಷಯ : ಸರ್ಕಾರದ ಬೆಳ್ತಂಗಡಿ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ:ವಇ 42 ಹೆಚ್ಎಂ 1999 ದಿನಾಂಕ:10.5.2000

ಪ್ರಸ್ತಾವನೆ:

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್ರಚಿಸಲು ತೀರ್ಮಾನಿಸಿದ್ದು, ಅದರಂತೆ ಬೆಳ್ತಂಗಡಿ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ.ವಇ 31 ಹೆಚ್ಎಎಸ್ 2008, ಬೆಂಗಳೂರು, ದಿನಾಂಕ:12ನೇ ಡಿಸೆಂಬರ್ 2008

ಬೆಳ್ತಂಗಡಿ ಪಟ್ಟಣ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಶಂಕರಶೆಟ್ಟಿ ಬಿನ್ ಮುತ್ತಣ್ಣಶೆಟ್ಟಿ ಪಾರ ಮನೆ, ಗರ್ಡಾಡಿ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.	ಸಾಮಾನ್ಯ
2	ಶ್ರೀ ಡಾಕಯ್ಯ ಪೂಜಾರಿ ಬಿನ್ ಅಮ್ಮಿ ಪೂಜಾರಿ ಜೆ.ಎಲ್. ನಾರಾವಿ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ	ಹಿಂದುಳಿದ ವರ್ಗ
3	ಶ್ರೀ ಅಶೋಕ್ ಗೋವಿಯಸ್ ಬಿನ್ ಜೊಕ್ಕಿಂ ಗೋವಿಯಸ್, ಪುತ್ಯೆ ಮನೆ, ಪಡಂಗಡಿ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ,	ಅಲ್ಪಸಂಖ್ಯಾತರು
4	ಶ್ರೀಮತಿ ಜಯಂತಿ ಬಿನ್ ತನಿಯಪ್ಪ ನಾಯ್ಕ ಶಿಶಿಲ ಗ್ರಾಮ ಮತ್ತು ಅಂಚೆ ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ	ಮಹಿಳೆ (ಎಸ್.ಟಿ.)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 106

ಕೆ.ಆರ್. ವಲ್ಲೂರ

ಪೀಠಾಧಿಕಾರಿ-2, ವಸತಿ ಇಲಾಖೆ

ವಿಷಯ : ರಾಣೆಬೆನ್ನೂರ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ:ವಇ 42 ಹೆಚ್ಎಂ 1999 ದಿನಾಂಕ:10.5.2000

ಪ್ರಸ್ತಾವನೆ:

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್ರಚಿಸಲು ತೀರ್ಮಾನಿಸಿದ್ದು, ಅದರಂತೆ ರಾಣೇಬೆನ್ನೂರು ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ.ವಇ 32 ಹೆಚ್ಎಎಸ್ 2008, ಬೆಂಗಳೂರು, ದಿನಾಂಕ:31ನೇ ಡಿಸೆಂಬರ್ 2008

ರಾಣೇಬೆನ್ನೂರು ಪಟ್ಟಣ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಹೊನ್ನೇಶ ಗೊಲ್ಲರ, ಹರಳಯ್ಯ ನಗರ, ರಾಣೇಬೆನ್ನೂರ	ಎಸ್.ಸಿ
2	ಶ್ರೀ ಸಿದ್ದಯ್ಯ ಶಿವಲಿಂಗಯ್ಯ ನೂರಂದೇವರಮಠ, ದೊಡ್ಡಪೇಟೆ, ರಾಣೇಬೆನ್ನೂರು	ಸಾಮಾನ್ಯ
3	ಶ್ರೀ ಶಿವರಾಜ ಬ್ಯಾಡಗಿ, ದೊಡ್ಡಪೇಟೆ, ರಾಣೇಬೆನ್ನೂರು	ಒ.ಬಿ.ಸಿ
4	ಶ್ರೀಮತಿ ಕುರ್ಶಿದ್‌ಬಿ ಅಬ್ದುಲ್ ಗಫೂರ್‌ಸಾಬ್ ಅಖ್ತಾರ್, ರಾಣೇಬೆನ್ನೂರು	ಅಲ್ಪಸಂಖ್ಯಾತ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 217

ಕೆ.ಆರ್. ವಲ್ಲೂರ

ಪೀಠಾಧಿಕಾರಿ-2, ವಸತಿ ಇಲಾಖೆ

ವಿಷಯ : ಚನ್ನಗಿರಿ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ:ವಇ 42 ಹೆಚ್‌ಎಎಂ 1999 ದಿನಾಂಕ:10.5.2000

ಪ್ರಸ್ತಾವನೆ:

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್ರಚಿಸಲು ತೀರ್ಮಾನಿಸಿದ್ದು, ಅದರಂತೆ ಚನ್ನಗಿರಿ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ.ವಇ 53 ಹೆಚ್‌ಎಎಸ್ 2008, ಬೆಂಗಳೂರು, ದಿನಾಂಕ:31ನೇ ಡಿಸೆಂಬರ್ 2008

ಚನ್ನಗಿರಿ ಪಟ್ಟಣ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಸಿ.ಆರ್. ಕೆಂಚಪ್ಪ ಬಿನ್ ರಾಮಪ್ಪ, ಚನ್ನಗಿರಿ, ದಾವಣಗೆರೆ ಜಿಲ್ಲೆ	ಪ.ಪಂ.
2	ಶ್ರೀ ಪಟ್ಲಿ ನಾಗರಾಜ್ ಬಿನ್ ಸಣ್ಣರುದ್ರಪ್ಪ, ಹಳ್ಳಿಕಾರರ ರಸ್ತೆ, ಚನ್ನಗಿರಿ, ದಾವಣಗೆರೆ ಜಿಲ್ಲೆ	ಬಿ.ಸಿ.ಎಂ–ಎ (ಕುರುಬ)
3	ಶ್ರೀಮತಿ ಜರಿನಾಬಿ ಕೋಂ ಮಹಮದ್ ಉಸ್ಮಾನ್, ಟಿಪ್ಪುನಗರ, 4ನೇ ವಾರ್ಡ್ ಚನ್ನಗಿರಿ, ದಾವಣಗೆರೆ ಜಿಲ್ಲೆ	ಅಲ್ಪಸಂಖ್ಯಾತ ಮಹಿಳೆ
4	ಶ್ರೀ ಎಂ.ಎ. ರುದ್ರಪ್ಪ ಬಿನ್ ಅಡಿವೆಪ್ಪ, ಅಗಸರ ಬೀದಿ, ಚನ್ನಗಿರಿ, ದಾವಣಗೆರೆ ಜಿಲ್ಲೆ	ಸಾಮಾನ್ಯ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ,

ಪಿ.ಆರ್. 219

ಕೆ.ಆರ್. ವಲ್ಲೂರ

ಪೀಠಾಧಿಕಾರಿ–2, ವಸತಿ ಇಲಾಖೆ

ವಿಷಯ : ತೇರದಾಳ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : ಸರ್ಕಾರದ ಆದೇಶ ಸಂ:ವಇ 42 ಹೆಚ್‌ಎಎಂ 1999 ದಿನಾಂಕ:10.5.2000

ಪ್ರಸ್ತಾವನೆ:

ಸರ್ಕಾರವು ನಗರ ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್ರಚಿಸಲು ತೀರ್ಮಾನಿಸಿದ್ದು, ಅದರಂತೆ ತೇರದಾಳ ಪಟ್ಟಣ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ.ವಇ 58 ಹೆಚ್‌ಎಎಸ್ 2008, ಬೆಂಗಳೂರು, ದಿನಾಂಕ:31ನೇ ಡಿಸೆಂಬರ್ 2008

ತೇರದಾಳ ಪಟ್ಟಣ ಆಶ್ರಯ ಸಮಿತಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್ರಚಿಸಲಾಗಿದೆ.

	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀ ಶಂಕರ ಪರಪ್ಪ ಮಂಗಸೂಳಿ	ಸಾಮಾನ್ಯ
2	ಶ್ರೀ ಮುಸ್ತಾಫ್ ನಭಿಸಾಬ್ ನದಾಫ್	ಅಲ್ಪಸಂಖ್ಯಾತ
3	ಶ್ರೀ ಭರ್ಮಪ್ಪ ಭೀಮಪ್ಪ ಬಜೇಂತ್ರಿ	ಎಸ್.ಸಿ
4	ಶ್ರೀಮತಿ ರತ್ನಾ ಶ್ರೀಶೈಲ ಮೇಗಾಡಿ	ಹಿಂ.ವರ್ಗ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 220

ಕೆ.ಆರ್. ವಲ್ಲೂರ

ಪೀಠಾಧಿಕಾರಿ–2, ವಸತಿ ಇಲಾಖೆ

HORTICULTURE SECRETARIAT

Sub : Constitution of State Level Steering Committee for National Mission on Medicinal Plants.

Read :
1) GOI letter No 18020/32/2008-NMPB dated 17.10.2008
2) GOI letter No. 11019/22/2007-NMPB (Pt.I) dated 4.12.2008.

PREAMBLE

Government of india has launched a New Centrally Sponsored Scheme of National Mission o Medicinal Plants. The Opertional Guidelines has been circulated to the participating States vi Government of India letter read at (1) above.

Government of India has proposed calendar of activities for Constitution of State Level Steerin Committee, preparation of action plan, approval of action plan by the State Level Steering Committee an for consideration of State Action Plan in the standing Finance Committee/National Level Steerin Committee as per Government of India letter read at (2) above.

Hence. this Order.

Government Order No. AHD 174 HPP 2008. Bangalore Dated:17th December 2008

Government is pleased to constitute the State Level Steering Committee for National Mission o Medicinal Plants as below:

1	Additional Chief Secretary and Development Commissioer	Chairman
2	Principal Secretary /Secretary, Health and Family Welfare	. Member
3	Principal Secretary, Commerce and Industries Department	Member
4	Secretary, Horticulture Department	Member
5	Representative from National Medicinal Plants Board	Member
6	Chief Executive Officer, State Medical Plant Authority, Bangalore	Member
7	Director, Indian Institute of Horticultural Research, Bangalore	Member
8	Director, Central Institute for Medicinal and Aromatic Plants, Bangalore	Member
9	Principal Chief Conservator of Forests or his representative	Member
10	Domain experts in the field of Medicinal Plants & (two)	Member
11	Director of Horticulture and Mission Director,. Member- Secretary Karnataka State Horticulture Mission Agency Lalbagh Bangalore this Order Comes into immediate effect.	Member

By order and in the name of the Governor of Karnataka

P.R. 202

S. RAJU

Under Secretary to Government, Horticulture Department

FINANCE SECRETARIAT

Sub : Provision for price Adjustment for specified materials for works - Revision Reg

Read : Government Order No. FD 59 PRO CELL 2004, dated:26-11-2004

PREAMBLE:

In Government Order No. FD 59 PRO CELL 2004 dated 26th November 2004 read above, th following instructions were issued about price adjustment.

(a) A Price Adjustment clause shall be included in all Works contracts whose estimated cost pu to tender is Rs. 100 lakhs or more and the period of completion is 12 months or more.The Price Adjustment Clause and the formulae for adjustment shall be as per Annexure-1 of the said G.O.

(b) In works contracts where, Price Adjustment Clause is provided the Price Adjustment shall be admissible from the date of opening of tenders (original or extended).

(c) Price Adjustment Clause shall not be included in Goods and Equipment tender documents. However in respect of tender documents for procurement of electric cables, transformers, generators, motors, that have raw material component subject to price fluctuations, appropriate Price Adjustment clauses may be incorporated by the Tender Inviting Authority in the tender documents, with the specific approval of the concerned Head of the Department or Managing Director of the Public Undertaking /Board.

The PWD has requested for certain modifications in the above conditions as the Department is facing problem in procurement of agencies for implementation of various works due to rapid fluctuation of rates of construction materials especially cement, steel and bitumen. This has resulted in poor response to the tenders floated by the department and also slowdown or stoppage of on-going works by the agencies, Further, the tender Premiums being quoted by the agencies are very high which creates an opinion that the Schedule of Rates or the estimates are defective. Hence, P.W.D. has requested to resolve this problem suitably by modifying the existing contract agreement to absorb the fluctuation in the market prices of major construction viz.,cement, steel and bitumen.

- The bids should be submitted in two separate sealed covers prescribing the covers as **"TECHNICAL BID" & "FINANCIAL BID"** respectively. These two envelops should be kept in a bigger cover along with the itemwise DD towards EMD (enclosed with the Technical Bid) and addressed to the Deputy Director of Horticulture (Grapes), Lalbagh, Bangalore. The bids should be dropped in the tender box placed in the office of The Deputy Director of Horticulture (Grapes), Lalbagh, Bangalore.
- The Department is not bound to consider the lowest bidder only for the purpose. Awarding of the tender will be done on the basis of Technical suitability & cost based weightage system. The decision of the Director of Horticulture, Lalbagh, Bangalore is final and binding.
- The validity of the tender award is for a period of one year from the date tender awarded.
- The supplier shall ensure quality of the materials supplied/work carried out to the satisfaction of the inspecting authority. Any deviation in quality of materials and implementation as prescribed in the technical bid amounts to cancellation of tender award and forfeiting EMD including listing the firm under fraudulent list.
- The tenderer should clearly mention his intension of taking up work in all farms & nurseries. The undersigned reserves the right to award tender of all the farms to any one firm or distribute among the eligible firms, depending on the work quality / suitability expected.
- The successful and qualified bidders in the technical bid are only eligible for consideration for opening of their financial bids.

- The Department is not responsible for any delay in the receipt of bids from any bidders due to any reason. No bids will be received after the scheduled date and time fixed.
- The supplier shall enclose the previous annual income tax declaration certificate and PAN/TAN certificate along with the tender document.
- As per the Government norms, Income tax (2.3%) of suppliers and contractor and other taxes (if any) as per the government norms will be deducted at source.
- The work will be commenced with all earnestness within 7 days from the date of issue of work order.
- The bidder should complete the work within stipulated time, and after satisfaction / completion of work as per estimate details, the bill should be submitted in triplicate for payment to the concerned officers. No interim payment will be done by the Agency / Department.
- Corrigendum / modifications / corrections if any will be published in newspapers & notice board.
- An undertaking towards acceptance of the above terms & conditions should be given on a paper with seal & signature along with the Technical bid.

Documents to be submitted:

1. Filled in technical bid along with DD of itemwise EMD amount, work experience, eligibility criteria and other details of firm.
2. Filled in financial bid in the prescribed format.
3. Any other related documents, the tenderer would like to submit.
4. Acceptance letter in writing of meeting the scope of professional service terms and conditions.
5. Any other documents as per check list.

P.R. 665 Director of Horticulture

ವಾಣಿಜ್ಯ ತೆರಿಗೆ ಆಯುಕ್ತರವರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ-1, ಗಾಂಧೀನಗರ, ಬೆಂಗಳೂರು-560 009

ಅಧಿಸೂಚನೆ

ಧಾರವಾಡದ ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತರು (ಆಡಳಿತ) ಮೌಲ್ಯವರ್ಧಿತ ತೆರಿಗೆ ವಿಭಾಗದ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವ **ಶ್ರೀಮತಿ ನುಸರತ್ ಬೇಗಮ್. ಎಂ. ರಾಟಿಮನಿ** ಅವರಿಗೆ ಅವರ ಹೆಸರನ್ನು **ಶ್ರೀಮತಿ ನುಸರತ್ ಬೇಗಮ್. ಎಸ್. ಸೌದಾಗರ** ಎಂದು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಪ್ರದೀಪ್ ಸಿಂಗ್ ಖರೋಲಾ

ಪಿ.ಡಿ. 120 ವಾಣಿಜ್ಯ ತೆರಿಗೆ ಆಯುಕ್ತರು, (ಕರ್ನಾಟಕ) ಬೆಂಗಳೂರು

FORM - IV

(See Rule 12)

NOTICE

It is hereby notified that the undersigned has changed his/her name from **CHANNAPPA.S. LAMANI** to **CHANNAPPA.S. RATHOD**

P.D. 121 **CHANNAPPA.S. LAMANI**

[ನಮೂನೆ-1]

(9ನೇ ನಿಯಮ ನೋಡಿ)

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಅಧಿಸೂಚನೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ನೆಲಮಂಗಲ ಇಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-2) ಆಗಿ ಕೆಲಸ ಮಾಡುತ್ತಿರುವ **ಡಿ. ಈರಪ್ಪ** ರವರ ಹೆಸರನ್ನು **ಡಿ. ಹೇಮಂತ್** ಎಂದು ಹೆಸರು ಬದಲಾವಣೆಗೆ ಅನುಮತಿ ನೀಡಲಾಗಿದೆ.

ಹೆಚ್.ಸಿ. ರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಡಿ. 125 ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

(ಸೇವೆಗಳು-ಎ ಮತ್ತು ಸಮನ್ವಯ)

ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಶಿವಮೊಗ್ಗ

ಅಧಿಸೂಚನೆ

ಸಂ.ಜಿಜಅಅ/ಜಅಇ/ಶಿ/ಸಿಬ್ಬಂದಿ/ಅ.ವ/ವಿಲೇವಾರಿ/09-10, ದಿನಾಂಕ: 28ನೇ ಜುಲೈ 2009

ವಿಷಯ: ಈ ಕಛೇರಿಯ ಅನುಪಯುಕ್ತ ವಸ್ತುಗಳ ಬಹಿರಂಗ ಹರಾಜು ಮಾಡುವ ಬಗ್ಗೆ.

ಉಲ್ಲೇಖ: 1) ಜಿಲ್ಲಾ ಪಂಚಾಯತ್ ಕಾರ್ಯಾಲಯದ ಪತ್ರದ ಸಂ: ಜಿಪಂಶಿ-ಸಿಬ್ಬಂದಿ (4) ಜಲಾನಯನ ವಿವ-28 ದಿನಾಂಕ: 10.12.08.

2) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರ ಕಛೇರಿ ಪತ್ರ ಸಂ:ಜಅಇ/ ಆಡಳಿತ/ ವಿನಿ-5/ವಿವ-54/04-05 ದಿನಾಂಕ: 8.11.04.

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಉಲ್ಲೇಖಿತ ಆದೇಶದಲ್ಲಿ ನಿರುಪಯುಕ್ತಗೊಳಿಸಲಾಗಿರುವ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳವರ ಕಛೇರಿ, ಶಿವಮೊಗ್ಗದಲ್ಲಿನ ಈ ಕೆಳಕಂಡ ಅನುಪಯುಕ್ತ ವಸ್ತುಗಳನ್ನು ದಿನಾಂಕ: 8.10.09 ರಂದು ಬೆಳಿಗ್ಗೆ 11.00 ಗಂಟೆಗೆ ಕಛೇರಿಯ ಆವರಣದಲ್ಲಿ ಬಹಿರಂಗ ಹರಾಜು ಮಾಡಲು ನಿಗದಿಪಡಿಸಲಾಗಿದೆ. ಆದುದರಿಂದ ಇಚ್ಛೆಯುಳ್ಳವರು ಸದರಿ ಹರಾಜಿನಲ್ಲಿ ಭಾಗವಹಿಸಿ ಅನುಪಯುಕ್ತ ವಸ್ತುಗಳನ್ನು ಖರೀದಿಸಬಹುದಾಗಿದೆ.

ಕ್ರ. ಸಂ.	ಅನುಪಯುಕ್ತ ವಸ್ತುಗಳು	ಪ್ರಮಾಣ
1)	ಎಸ್. ಮಾದರಿಯ ಕುರ್ಚಿಗಳು	15
2)	ಎಕ್ಸಿಕ್ಯೂಟಿವ್ ರಿವಾಲ್ವಿಂಗ್ ಕುರ್ಚಿ	1
3)	ಎಕ್ಸಿಕ್ಯೂಟಿವ್ ಫುಲ್ ಹೈಬ್ಯಾಕ್ ವಿತ್ ರೆಸ್ಟ್ ರಿವಾಲ್ವಿಂಗ್ ಕುರ್ಚಿ	1
4)	ಸ್ಟೀಲ್ ರ್‍ಯಾಕ್ 3'x3'x1/4'	1
5)	ಕ್ಯಾಲುಕುಲೇಟರ್	2
6)	ಎಮರ್ಜೆನ್ಸಿ ಲೈಟ್	2
7)	ಬೀಗಗಳು	12
8)	ಪ್ಲೇನ್ ಪೇಪರ್ ಕಾಪಿಯರ್ ಜೆರಾಕ್ಸ್	1
9)	ಜಿಂಕ್ ಬಕೆಟ್	1
10)	ಪಂಚಿಂಗ್ ಮಷಿನ್	1
11)	ಸ್ಪಿಂಗ್ ಕಾಲಿಂಗ್ ಬೆಲ್	2
12)	ಸ್ಟೆಪ್ಲರ್	1

ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು:

1) ಹರಾಜಿನಲ್ಲಿ ಪಾಲ್ಗೊಳ್ಳಲು ಇಚ್ಛೆಯುಳ್ಳವರು ರೂ.1000/- ಮುಂಗಡ ಠೇವಣಿಯಾಗಿ ಹರಾಜಿನ ದಿನ ಬೆಳಿಗ್ಗೆ 10.00 ಗಂಟೆಗೆ ಕಟ್ಟಬೇಕು.
2) ಯಶಸ್ವಿ ಬಿಡ್ಡುದಾರರು ಮಾರಾಟ ತೆರಿಗೆಯನ್ನು ನಿಯಮದಂತೆ ಪಾವತಿಸಬೇಕು.
3) ಹರಾಜಿಗೆ ಇಟ್ಟ ವಸ್ತುಗಳನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಶಿವಮೊಗ್ಗ ಕಛೇರಿಯಲ್ಲಿ ಕೆಲಸದ ದಿನಗಳಂದು ವೀಕ್ಷಿಸಬಹುದು.
4) ಹೆಚ್ಚಿನ ಹರಾಜು ನಿರ್ಣಯವನ್ನು ಅತ್ಯುನ್ನತ ಹರಾಜು ಬೆಲೆಯ ಮೇಲೆ ನಿರ್ಣಯಿಸಲಾಗುವುದು.
5) ಹರಾಜಿನ ಪ್ರಕ್ರಿಯೆಯಲ್ಲಿ ಯಾವುದೇ ವಿವಾದವಾದ ಪಕ್ಷದಲ್ಲಿ ಹರಾಜನ್ನು ತಿರಸ್ಕರಿಸುವ, ಮುಂದುವರೆಸುವ ಹಾಗೂ ರದ್ದುಪಡಿಸುವ ಹಕ್ಕನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಶಿವಮೊಗ್ಗ ಇವರು ಹೊಂದಿರುತ್ತಾರೆ.
6) ಹರಾಜಿನ ಎಲ್ಲಾ ವಿಷಯಗಳಲ್ಲಿ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ ಮತ್ತು ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಈ ತೀರ್ಮಾನಕ್ಕೆ ಬದ್ಧರಾಗಿರಬೇಕು.
7) ಹರಾಜಿನಲ್ಲಿ ಅತಿ ಹೆಚ್ಚು ಬಿಡ್ ಮಾಡಿದ ಬಿಡ್ಡುದಾರರು ಬಿಡ್ಡಿನ ಶೇ.50 ರಷ್ಟು ಹಣವನ್ನು ಕೂಡಲೇ ಕಛೇರಿಗೆ ಜಮೆ ಮಾಡತಕ್ಕದ್ದು.
8) ನಂತರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ ಹಾಗೂ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಬಿಡ್ ದರ ಅನುಮೋದನೆಗೆ ಸಲ್ಲಿಸಿ ಅನುಮೋದನೆಯಾದ ನಂತರ ಬಿಡ್‌ದಾರರು ಉಳಿಕೆ ಮೊತ್ತವನ್ನು 7 ದಿನಗಳೊಳಗಾಗಿ ತೆರಿಗೆ ಸಹಿತ ನಗದು ರೂಪದಲ್ಲಿ ಪಾವತಿ ಮಾಡಿ ವಸ್ತುಗಳನ್ನು ಅವರ ಸ್ವಂತ ಖರ್ಚಿನಲ್ಲಿ ತೆಗೆದುಕೊಂಡು ಹೋಗತಕ್ಕದ್ದು. ಬಿಡ್ ದರ

ಅನುಮೋದನೆ ಆಗದಿದ್ದಲ್ಲಿ ಬಿಡ್‌ದಾರರಿಗೆ ಯಾವುದೇ ಬಡ್ಡಿಯಿಲ್ಲದೇ ಬಿಡ್ ಸಮಯದಲ್ಲಿ ಪಾವತಿಸಿದ ಶೇ.50% ರಷ್ಟು ಮೊತ್ತ ಹಾಗೂ EMD ಮೊತ್ತವನ್ನು ಹಿಂದಿರುಗಿಸಲಾಗುವುದು.

9) ಅತೀ ಹೆಚ್ಚು ಬಿಡ್ ಮಾಡಿದ ಹರಾಜುದಾರರನ್ನು ಹೊರತುಪಡಿಸಿ, ಉಳಿದ ಹರಾಜುದಾರರಿಗೆ ಮುಂಗಡ ಠೇವಣಿಯನ್ನು ಹರಾಜಿನ ನಂತರ ಹಿಂದಿರುಗಿಸಲಾಗುವುದು.

ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ,
ಜಲಾನಯನ ಅಭಿವೃದ್ಧಿ ಇಲಾಖೆ, ಶಿವಮೊಗ್ಗ.

ಪಿ.ಆರ್. 661

IN THE COURT OF DISTRICT AND SESSIONS JUDGE, AT CHICKBALLAPUR

Sub: Recruitment of Candidates for the Posts of Typist-Copyist, Process-Servers and Peons – reg.

Read: Letter No.LCA-II-205/2004 Dated : 17.06.2009 of Hon'ble High Court of Karnataka, Bangalore to fill up 01 Post of Typist-Copyists, 02 Posts of Process-servers & 03 Posts of Peons.

NOTIFICATION No.1/2009 Dated : 13/07/2009

LAST DATE FOR RECEIPT OF APPLICATIONS IS EXTENDED FROM : 13-08-2009 TO 23.09.2009 VIDE NOTIFICATION No.1(A)/2009

Dated : 12.08.2009.

Applications in prescribed Proforma appended to this Notification are invited from the candidates, who are qualified as on the last date fixed for receipt of the applications for appointment to the Posts of Typist-Copyist, Process-Servers and Peons in the Unit of District and Sessions Court, Chickballapur. The details of Vacancies are classified as under :-

Sl. No	Name of the Post	No.of Vacancies	Reserved For	Classification							
				GM	S.C.	S.T.	Cat-I	II-A	II-B	III-A	III-B
1	2	3	4	5	6	7	8	9	10	11	12
01	TYPIST-COPYIST	01	Women	--	--	--	--	--	--	--	--
			Ex-serviceman	--	--	--	--	--	--	--	--
			Physically handicapped	--	--	--	--	--	--	--	--
			Project affected	--	--	--	--	--	--	--	--
			Rural	--	--	--	--	--	--	--	--
			Kannada Medium	--	--	--	--	--	--	--	--
			Others	1	--	--	--	--	--	--	--
			TOTAL	**01**	**--**	**--**	**--**	**--**	**--**	**--**	**--**
02	PROCESS-SERVERS	02	Women	--	--	--	--	--	01	--	--
			Ex-serviceman	--	--	--	--	--	--	--	--
			Physically handicapped	--	--	--	--	--	--	--	--
			Project affected	--	--	--	--	--	--	--	--

1	2	3	4	5	6	7	8	9	10	11	12
			Rural	--	--	--	--	--	--	--	--
			Kannada Medium	--	--	--	--	--	--	--	--
			Others	01	--	--	--	--	--	--	--
			TOTAL	**01**	--	--	--	--	**01**	--	--
03	PEONS	03	Women	--	--	--	--	--	--	--	--
			Ex-serviceman	--	--	--	--	--	--	--	--
			Physically handicapped	--	--	--	--	--	--	--	--
			Project affected	--	--	--	--	--	--	--	--
			Rural	--	--	--	--	--	--	--	--
			Kannada Medium	--	--	--	--	--	--	--	--
			Others	2	--	--	--	1	--	--	--
			TOTAL	**02**	--	--	--	**01**	--	--	--

I. MINIMUM QUALIFICATION FOR THE POST OF TYPIST-COPYIST :

1) Must have passed SSLC or equivalent examination.
2) Must have passed Junior Typewriting both in Kannada and English Language conducted by the Department of Public Instructions of the Karnataka Secondary Examination both or possess an Equivalent Qualification.

Scale of Pay Rs.5800-100-6000-125-6500-150-7100-175-7800-200-8600-225-9500-250-10500 with admissible allowances.

II. MINIMUM QUALIFICATION FOR THE POST OF PROCESS-SERVERS :

1) Must have passed SSLC
2) Must be able to read and write in Kannada
3) Preference will be give to the candidates possessing Driving License.

Scale of Pay Rs.5200-100-6000-125-6500-150-7100-7800-200-8200 with admissible allowances.

III. MINIMUM QUALIFICATION FOR THE POST OF PEONS :

1) Must have passed VII Standard Examination.
2) Must be able to read and write in Kannada.

Scale of Pay Rs.4800-100-6000-125-6500-150-7100-175-7275 with admissible allowances.

IV. AGE LIMIT :

Must have attained the age of 18 years and must have not attained the age of :

1) 40 years in case of persons belonging to SC/ST and Category-I.
2) 38 years in case of a person belonging to any of the category-IIA, or II-B or III-A or III-B of other Backward Classes and
3) 35 years in case of others as on date of submission of his/her application.
4) Candidates claiming the benefit of reservation under the reservation Categories should furnish the certificate/s in the prescribed Form, Such Certificate/s should have been issued by the competent authority. The candidates should note that, if on verification the certificate is found to be false, the candidates who made such false certificate will be prosecuted in accordance with the relevant provision of Indian Penal Code and such candidates will also forfeit their claims for such selection.

V. METHOD OF RECRUITMENT :

Selection of Candidates shall be made in accordance with the provisions contemplated in the Karnataka Sub-Ordinate Courts (Ministerial and other Posts) (Recruitment) (Amendment) Rules 2007.

Test will be conducted for the post of Typist Copyist. The candidates must have to appear before the District and Sessions Judge, Chickballapur in the premises of District Court, Chickballapur at their own costs.

The qualifying tests for selection of the Typist-Copyist.

(1) A dictation for a duration about fifteen minutes shall be given and the candidate shall type the matter dictated.

(2) The number of candidates for the post of Typist-Copyist to be included in such a list of eligible candidates for include shall be equal to 25 times to total number of vacancies notified.

Recruitment to the post of Process-servers & Peons.

The number of candidates to be included in such list of eligible candidates for interview, for the post of process-server shall be equal is twenty five times the total number of vacancies notified.

The number of candidates included in such list of eligible candidates for Group 'D' post shall be equal to ten times to total number of vacancies notified.

VI. PROBATION :

Candidates will be appointed on probation for a period of two years and the provisions of KCS (Probation) Rules 1977 shall MUTATIS MUTANDIS apply to candidates so selected. During the probation the candidates shall pass the Kannada Language Examination and Departmental Examinations prescribed to the post under the K.C.S.(Kannada Language Examination) Rules 1974.

VII. APPLICANTS WHEN CALLED FOR INTERVIEWS MUST APPEAR AT THEIR OWN EXPENSES.

Candidates should submit their typed/computerized applications, complete in all aspects, together with copies of all the testimonials attested by the candidates in support of age, qualification and caste in the prescribed form issued by the competent authority so as to reach the District and Sessions Judge, Chickballapur on or before **13.08.2009 at 5.45 p.m.** Envelope containing the applications should be super scribed as "Applications for the Selection to the Post of ...."

1) The in-service candidates shall submit their applications through proper channel.
2) Defective/Incomplete/applications are liable to be rejected.
3) The candidates who attempt to obtain extraneous support for his/her candidature shall not be eligible for selection.
4) The candidates who wish to apply more than one post shall submit the application in separate.

APPLICATION IN THE PRESCRIBED PROFORMA SHOULD BE FILLED IN BY THE CANDIDATES IN THEIR HANDWRITING AND MUST BE ACCOMPANIED BY THE FOLLOWING :

1) Copies of marks card attested by the candidates.
2) Candidates claiming the benefit for reservations under SC/ST shall produce a certificate in the form prescribed by the Government issued by the Competent Authority.
3) Persons claiming the benefit of reservations under Category-I/II-A/II-B/III-A/III-B shall produce a certificate in the form prescribed by the Government issued by the competent authority.
4) Persons claiming reservations under the quota of Rural quota and Kannada medium quota shall produce certificates issued by competent authority.
5) Three Certificate of good character, one from the Principal of College/Head Master/Head Mistress or Institution in which he/she had last studied and two from respectable persons unconnected with him/her testifying to his/her character.

6) Copy of SSLC/VII Marks Card/LC/TC in support of age proof attested by the candidates.
7) Citizenship certificate (where the candidate is not a citizen of Indian by birth) issued by the DC/District Magistrate of the District in which the candidate is residing.
8) One pass port size photo of candidate shall be affixed on the application from with self-attestation.
9) Copies of the Rural Certificates issued by the Competitive authority who have claimed under Rural quota.
10) Applicants to produce self addressed envelope with required prescribed postal stamps of Rs.5/-.
11) Any applications received after the due date and incomplete application will not be entertained.
12) If he or she does not get intimation for the interview it shall be presumed that he/she is not eligible for the interview. No correspondence will be entertained there after if any of the Candidate is not called for the interview.
13) The number of vacancies on the classification as noted above is subject to variation.

Place : Chickballapur
Dated : 12.08.2009.

MOHAN SRIPAD SANKOLLI
District & Sessions Judge, Chickballapur

IN THE COURT OF DISTRICT AND SESSIONS JUDGE, AT CHICKBALLAPUR

NOTIFICATION No.1(A)/2009, Dated : 12th August 2009

The last date for receiving application from the eligible candidates for direct recruitment to the existing vacant posts in the Unit of District and Sessions Judge, Chickballapur as in Notification No.1/2009 Dated : 13.07.2009 has been extended from 13.08.2009 to 23.09.2009.

Place : Chickballapur,
Dated : 12.08.2009.

MOHAN SRIPAD SANKOLLI
P.R. 672 District and Sessions Judge, Chickballapur.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರ ಕಛೇರಿ

ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ : ಎ6/ಉಅಸಂ/ಮರ ಹರಾಜು/ಸಿಆರ್–27/2009–10, ದಿನಾಂಕ: 4ನೇ ಆಗಸ್ಟ್ 2009

ವಿಷಯ: ಮಾಗಡಿ ಸಾಮಾಜಿಕ ಅರಣ್ಯ ವಲಯದ ಮರೂರು ಸಸ್ಯಕ್ಷೇತ್ರದಲ್ಲಿ ಬೆಂಗಳೂರು – ಮಂಗಳೂರು ಹೆದ್ದಾರಿಯ ರಸ್ತೆ ಅಗಲೀಕರಣ ಕಾಮಗಾರಿಗೆ ಅಡಚಣೆಯಾಗಿರುವ ಮರಗಳ ಬಹಿರಂಗ ಹರಾಜು ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಮಾಗಡಿ ಸಾಮಾಜಿಕ ಅರಣ್ಯ ವಲಯದ ಮರೂರು ಸಸ್ಯಕ್ಷೇತ್ರದಲ್ಲಿ ಬೆಂಗಳೂರು – ಮಂಗಳೂರು ಹೆದ್ದಾರಿ (NH-48) ರಸ್ತೆ ಅಗಲೀಕರಣ ಕಾಮಗಾರಿಗೆ ಅಡಚಣೆಯಾಗಿರುವ ಮರೂರು ಸಸ್ಯಕ್ಷೇತ್ರದ ಸರ್ವೆ ನಂ. 267/ಪಿ1 (ಹೊಸ ಸಸ್ಯಕ್ಷೇತ್ರ) ಮತ್ತು 276 (ಹಳೇ ಸಸ್ಯಕ್ಷೇತ್ರ) ದ ಪ್ರದೇಶದಲ್ಲಿರುವ ಮರಗಳ ಹರಾಜು ಈ ಕೆಳಕಂಡ ಷೆಡ್ಯೂಲ್‌ನಲ್ಲಿರುವ ಮರಗಳನ್ನು ಬಹಿರಂಗ ಹರಾಜು ಮೂಲಕ ಕೆಳಕಂಡ ಸ್ಥಳ ಹಾಗೂ ದಿನಾಂಕದಂದು ಈ ಕೆಳಸಹಿದಾರರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕೃತ ಅಧಿಕಾರಿಯು ಕೆಳಕಂಡ ಷರತ್ತುಗಳ ಮೇಲೆ ಬಹಿರಂಗ ಹರಾಜನ್ನು ಮಾಡಲು ಉದ್ದೇಶಿಸಿ ಪ್ರಕಟಣೆ ಹೊರಡಿಸಲಾಗಿದೆ. ಇಚ್ಛೆಯುಳ್ಳ ಖರೀದಿದಾರರು ಹರಾಜಿನಲ್ಲಿ ಭಾಗವಹಿಸಿ ಈ ಕೆಳಕಂಡ ಷರತ್ತುಗೊಳಪಟ್ಟು ಮರಗಳನ್ನು ಖರೀದಿಸಬಹುದಾಗಿರುತ್ತದೆ.

ಷೆಡ್ಯೂಲ್

ಕ. ಸಂ	ವಲಯ	ಹರಾಜಿಗೆ ಇರುವ ಮರಗಳ ಜಾತಿ ಮತ್ತು ಸಂಖ್ಯೆ		ಹರಾಜು ದಿನಾಂಕ ಮತ್ತು ವೇಳೆ	ಹರಾಜು ನಡೆಯುವ ಸ್ಥಳ
1	ಸಾಮಾಜಿಕ ಅರಣ್ಯ, ವಲಯ, ಮಾಗಡಿ	ಸಿಲ್ವರ್ ಓಕ್ – 16	ಲಾಟ್ – 1	ದಿನಾಂಕ: 04–09–2009 ಬೆಳಿಗ್ಗೆ 11.00 ಗಂಟೆಗೆ	ಮಾಗಡಿ ತಾಲ್ಲೂಕು ಮರೂರು ಹೊಸ ಸಸ್ಯಕ್ಷೇತ್ರ ಸರ್ವೆ ನಂ. 267 (ಪಿ1)

ಕ. ಸಂ	ವಲಯ	ಹರಾಜಿಗೆ ಇರುವ ಮರಗಳ ಜಾತಿ ಮತ್ತು ಸಂಖ್ಯೆ		ಹರಾಜು ದಿನಾಂಕ ಮತ್ತು ವೇಳೆ	ಹರಾಜು ನಡೆಯುವ ಸ್ಥಳ
2	ಸಾಮಾಜಿಕ ಅರಣ್ಯ, ವಲಯ, ಮಾಗಡಿ	ಸಿಲ್ವರ್ ಓಕ್ – 16	ಲಾಟ್ – 2	ದಿನಾಂಕ: 04–09–2009 ಬೆಳಿಗ್ಗೆ 11.00 ಗಂಟೆಗೆ	ಮಾಗಡಿ ತಾಲ್ಲೂಕು ಮರೂರು ಹೊಸ ಸಸ್ಯಕ್ಷೇತ್ರ ಸರ್ವೆ ನಂ. 267 (ಪಿ1)
3	– " –	ನೆಲ್ಲಿ – 1 ತೇಗ – 7 ನೀಲಗಿರಿ – 2	ಲಾಟ್ – 3	– " –	– " –
4	– " –	ಸಿಲ್ವರ್ ಓಕ್ – 12	ಲಾಟ್ – 4	– " –	ಮಾಗಡಿ ತಾಲ್ಲೂಕು ಮರೂರು ಹಳೆ ಸಸ್ಯಕ್ಷೇತ್ರ ಸರ್ವೆ ನಂ. 276
5	– " –	ತೇಗ – 4	ಲಾಟ್ – 5	– " –	– " –
6	– " –	ಹಿಪ್ಪೆ – 1 ನೇರಳೆ – 6 ಬೇಲ – 1 ಹೊಂಗೆ – 1 ಆಲ – 1	ಲಾಟ್ – 6	– " –	– " –
7	– " –	ಹೆಬ್ಬೇವು – 3	ಲಾಟ್ – 7	– " –	– " –

ಷರತ್ತುಗಳು

1. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುನ್ನಾ ರೂ. 10,000/– ಪ್ರತಿ ಯೂನಿಟ್‌ಗೆ ಇಡಿಗಂಟು ಠೇವಣಿ (ಇ.ಎಂ.ಡಿ.) ಯನ್ನು ಪಾವತಿಸುವುದು. ಹೀಗೆ ಪಾವತಿಸಲಾದ ಇಎಂಡಿ ಮೊತ್ತವನ್ನು ಯಶಸ್ವಿ ಬಿಡ್ಡುದಾರರು ಖರೀದಿಸಲಾಗುವ ಮರಗಳ ಮೌಲ್ಯದ 1/2 ಭಾಗದ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.
2. ಷೆಡ್ಯೂಲ್‌ನಲ್ಲಿ ಸೂಚಿಸಿರುವ ನಿಗಧಿತ ಸಮಯ ಮತ್ತು ದಿನಾಂಕದಂದು ಹರಾಜನ್ನು ನಡೆಸಲಾಗುವುದು. ಒಂದೊಮ್ಮೆ ಸದರಿ ದಿನದಂದು ಹರಾಜು ನಡೆಸಲು ಅನಿವಾರ್ಯ ಕಾರಣಗಳಿಂದ ಸಾದ್ಯವಾಗದಿದ್ದಲ್ಲಿ ಮರು ಹರಾಜುನ್ನು ದಿನಾಂಕ: 09–09–2009 ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾಗುವುದು.
3. ಇಡಿಗಂಟನ್ನು ಜಮಾ ಮಾಡದೇ ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸುವ ಹಕ್ಕು ಇರುವುದಿಲ್ಲ.
4. ಹರಾಜಿಗೆ ಭಾಗವಹಿಸುವ ಮುನ್ನಾ ಷೆಡ್ಯೂಲ್‌ನಲ್ಲಿ ಇರುವ ಮರಗಳನ್ನು ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು.
5. ಯಶಸ್ವಿ ಬಿಡ್ಡುದಾರರು ತಮ್ಮ ಸ್ವಂತ ಖರ್ಚಿನಲ್ಲಿ ವಿಲೇವಾರಿ ಮಾಡಿಕೊಳ್ಳತಕ್ಕದ್ದು.
6. ಮರಗಳನ್ನು ಸಾಗಿಸಲು ಪರವಾನಗಿಯನ್ನು ನೀಡಲಾಗುವುದು. ಪರವಾನಗಿ ಶುಲ್ಕವನ್ನು ಯಶಸ್ವಿ ಬಿಡ್ಡುದಾರರು ವಲಯ ಅರಣ್ಯಾಧಿಕಾರಿ, ಮಾಗಡಿ ವಲಯ, ಮಾಗಡಿ ಇವರಲ್ಲಿ ಜಮಾ ಮಾಡತಕ್ಕದ್ದು.
7. ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ಹರಾಜಿನ ದಿನದಂದೇ ತಾವು ಸೂಚಿಸಿದ ಹರಾಜಿನ ಮೊತ್ತದ ಶೇಕಡ 50 ರಷ್ಟು ಹಣವನ್ನು ಹಾಗೂ ಸೂಚಿಸಿದ ಮೊತ್ತಕ್ಕೆ ಅನ್ವಯಿಸುವ ಪೂರ್ಣ ತೆರಿಗೆಯನ್ನು ಅಂದರೆ ವ್ಯಾಟ್ 12.5%, ಅರಣ್ಯ ಅಭಿವೃದ್ಧಿ ತೆರಿಗೆ 12%, ಆದಾಯ ತೆರಿಗೆ 2.5% ಮತ್ತು ಆದಾಯ ತೆರಿಗೆ ಮೇಲೆ ಸೆಸ್ 3% ರಷ್ಟು ತೆರಿಗೆಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು 2ನೇ ಬಿಡ್ಡುದಾರರನ್ನು ಯಶಸ್ವಿ ಬಿಡ್ಡುದಾರರೆಂದು ಪರಿಗಣಿಸಲಾಗುವುದು.
8. ಬಹಿರಂಗ ಹರಾಜಿನಲ್ಲಿ ಉದ್ಭವಿಸಬಹುದಾದ ತಂಟೆತಕರಾರುಗಳಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರು ನೀಡುವ ತೀರ್ಮಾನವೇ ಅಂತಿಮವಾಗಿರುತ್ತದೆ.
9. ಕಪ್ಪು ಪಟ್ಟಿಯಲ್ಲಿರುವ ಬಿಡ್‌ದಾರರು ಅಥವಾ ದಿವಾಳಿಯಾಗಿರುವವರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.
10. ಹರಾಜಿನ ನಂತರ ಬರುವ ಬೆಲೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
11. ಯಾವುದೇ ತಂಟೆತಕರಾರುಗಳಿದ್ದಲ್ಲಿ ಹರಾಜು ಪ್ರಾರಂಭಿಸುವ ಎರಡು ಗಂಟೆ ಮುಂಚಿತವಾಗಿ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಲಿಖಿತ ಮೂಲಕ ತರತಕ್ಕದ್ದು ಹಾಗೂ ಹರಾಜಿನ ನಂತರ ತಡವಾಗಿ ಬರುವ ಯಾವುದೇ ತರಹದ ದೂರುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

12. ಯಶಸ್ವಿ ಬಿಡ್‌ದಾರರು ಹರಾಜು ಸ್ಥಿರೀಕರಣ ಆದೇಶ ಪಡೆದ 7 ದಿನಗಳೊಳಗಾಗಿ ಮರಗಳ ಬಿಡ್ಡು ಮೊತ್ತವನ್ನು ಬಾಕಿ ಇರುವ ಬಿಡ್‌ನ ಮೊತ್ತವನ್ನು ವಲಯ ಅರಣ್ಯಾಧಿಕಾರಿ, ಮಾಗಡಿ ಪ್ರಾದೇಶಿಕ ವಲಯ, ಮಾಗಡಿ ಇವರಿಗೆ ಪಾವತಿಸಿ ಮರಗಳನ್ನು ತೆಗೆದುಕೊಂಡು ಹೋಗತಕ್ಕದ್ದು. ನಿಗಧಿತ ಅವಧಿಯಲ್ಲಿ ಮರಗಳನ್ನು ಸಾಗಿಸದ ಪಕ್ಷದಲ್ಲಿ E.M.D. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಬಿಡ್‌ದಾರರ ಜವಾಬ್ದಾರಿ ಮೇರೆಗೆ ಮರಗಳನ್ನು ಮರು ಹರಾಜು ಮಾಡಲಾಗುವುದು. ಮರು ಹರಾಜಿನಲ್ಲಿ ಕಡಿಮೆ ಬಿಡ್ ಬಂದು ಸರ್ಕಾರಕ್ಕೆ ನಷ್ಟವಾದಲ್ಲಿ 1963 ರ ಅರಣ್ಯ ಕಾಯ್ದೆ ಸೆಕ್ಷನ್ 109 ರಂತೆ ಬಾಕಿಯನ್ನು ಭೂಕಂದಾಯ ರೂಪದಲ್ಲಿ ವಸೂಲಿ ಮಾಡಲಾಗುವುದು ಅಥವಾ ಸರಕು ಸಾಮಗ್ರಿಗಳ ಮಾರಾಟದ ಕಾನೂನಿನನ್ವಯ ಅಥವಾ ಭಾರತೀಯ ದಂಡ ಸಂಹಿತೆ (Civil procedure) ಅನ್ವಯ ಕ್ರಮ ಕೈಗೊಳ್ಳಲಾಗುವುದು.

13. ಈ ಹರಾಜನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪಡೆದಿರುತ್ತಾರೆ.

14. ಬಿಡ್ಡುದಾರರು ಹರಾಜನ್ನು ನಡೆಸುವ ಅಧಿಕಾರಿಯ ಬಳಿ ನೀಡುವ ವಿಳಾಸವೇ ಅಂತಿಮ ಈ ವಿಳಾಸಕ್ಕೆ ಅಂಚೆ ದೃಢೀಕರಣ ಪತ್ರ ಪಡೆದು ಕಳುಹಿಸಿದ ಪತ್ರವು ಬಿಡ್ಡುದಾರರಿಗೆ ತಲುಪಿದೆ ಎಂದೇ ತಿಳಿಯಲಾಗುವುದು.

15. ಪ್ರತಿ ಲಾಟ್‌ಗೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ಹೆಸರನ್ನು ದಾಖಲಿಸಿ ಅವರ ಸಹಿಯನ್ನು ಬಿಡ್ಡರ್ಸ್ ಪಟ್ಟಿಯಲ್ಲಿ ತೆಗೆದುಕೊಳ್ಳಲಾಗುವುದು ಅನಂತರ ಯಾವುದೇ ಬಿಡ್ಡನ್ನು ಅಂಗೀಕರಿಸುವುದಿಲ್ಲ.

16. ಒಂದು ವೇಳೆ ಅತಿ ಹೆಚ್ಚು ಬಿಡ್ಡು ಮಾಡಿದ ಬಿಡ್ಡುದಾರರ ದರವನ್ನು ಹರಾಜು ನಡೆಸುವ ಅಧಿಕಾರಿ ತಿರಸ್ಕರಿಸಿದಲ್ಲಿ, ನಂತರದ ಅತಿ ಹೆಚ್ಚು ಬಿಡ್ಡು ಮಾಡಿರುವವರ ಬಿಡ್ಡನ್ನು ಅಧಿಕಾರಿಯು ಒಪ್ಪಬಹುದು ಅಥವಾ ಮರು ಹರಾಜು ಮಾಡಬಹುದು.

17. ವಿಫಲರಾದ ಬಿಡ್‌ದಾರರ ಠೇವಣಿ ಹಣವನ್ನು ಹರಾಜು ಮುಗಿದ ತಕ್ಷಣ ಹಿಂತಿರುಗಿಸಲಾಗುವುದು.

18. ಮರ ಕಡಿಯುವಾಗ, ಸಾಗಿಸುವಾಗ, ಸಸ್ಯಕ್ಷೇತ್ರದ ಕಲ್ಲುಕಂಬ ಮುಳ್ಳುತಂತಿ ಬೇಲಿ, ಸರ್ಕಾರಿ ಅಥವಾ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟ, ಜೀವಹಾನಿ, ರಸ್ತೆ ಸಂಚಾರಕ್ಕೆ ಅಡಚಣೆ, ಟೆಲಿಫೋನ್, ಕೆ.ಇ.ಬಿ. ವಾಟರ್ ಲೈನ್‌ಗಳು ಹಾಳಾಗದಂತೆ ಎಚ್ಚರಿಕೆ ವಹಿಸುವುದು ತಪ್ಪಿದಲ್ಲಿ ಹರಾಜಿನಲ್ಲಿ ಖರೀದಿಸಿದ ಬಿಡ್ಡುದಾರರೇ ಹೊಣೆಗಾರರಾಗಿರುತ್ತಾರೆ.

19. ಬಿಡ್ಡುದಾರರು ಎಲ್ಲಾ ಸಮಯದಲ್ಲೂ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಇತರೆ ಶಾಸನಬದ್ಧ ಮಾರ್ಪಾಟುಗಳಿಗೆ ಬದ್ಧರಾಗಿರುತ್ತಾರೆ.

20. ಬಿಡ್ಡುದಾರರು ಟೆಂಡರ್ ಷರತ್ತಿನ ಯಾವುದೇ ಅಂಶಗಳನ್ನು ಉಲ್ಲಂಘನೆ ಮಾಡಿದಲ್ಲಿ ಅವರ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

21. ಈ ಹರಾಜಿಗೆ ಸಂಬಂಧಿಸಿದಂತೆ ಬೇಕಾದ ಇತರೆ ಮಾಹಿತಿಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ತಿಳಿದುಕೊಳ್ಳಬಹುದು.

ವಿ. ಗೀತಾಂಜಲಿ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ.

ಪಿ.ಆರ್. 671

ತೋಟಗಾರಿಕೆ ಇಲಾಖೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, (ರಾಜ್ಯ ವಲಯ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕಬ್ಬನ್ ಉದ್ಯಾನವನ, ಬೆಂಗಳೂರು

ಸಂ:ಹಿಸತೋನಿ:ರಾವ:ಬೆಂಗ್ರಾ: 09–10, ದಿನಾಂಕ: 7ನೇ ಆಗಸ್ಟ್ 2009

ರಾಜ್ಯವಲಯ ತೋಟಗಾರಿಕೆ ಕ್ಷೇತ್ರಗಳ ಸೀಬೆ ಮತ್ತು ಸಪೋಟ ಫಸಲಿನ ವಿಲೇವಾರಿಗೆ ಟೆಂಡರ್ / ಬಹಿರಂಗ ಹರಾಜು ಪ್ರಕಟಣೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕಬ್ಬನ್ ಉದ್ಯಾನವನ ರವರ ವ್ಯಾಪ್ತಿಯಲ್ಲಿರುವ ಈ ಕೆಳಕಂಡ ತೋಟಗಾರಿಕೆ ಕ್ಷೇತ್ರಗಳಲ್ಲಿ 2009ನೇ ಸಾಲಿನ ಎರಡನೇ ಅವಧಿಯ ಸೀಬೆ ಮತ್ತು ಸಪೋಟ ಫಸಲಿನ ವಿಲೇವಾರಿಗೆ ಇಲಾಖೆಯ ಪರಿಷ್ಕೃತ ನಿಯಮಾವಳಿಗಳ ಪ್ರಕಾರ ಟೆಂಡರ್/ಹರಾಜು ಪ್ರಕ್ರಿಯೆಯನ್ನು ಅನುಬಂಧದಲ್ಲಿ ತಿಳಿಸಿರುವ ದಿನಾಂಕ ಮತ್ತು ವೇಳೆಯಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕಬ್ಬನ್ ಉದ್ಯಾನವನ, ಬೆಂಗಳೂರು–1 ರವರ ಕಛೇರಿಯಲ್ಲಿ ನಡೆಸಲಾಗುವುದು. ಆಸಕ್ತಿಯುಳ್ಳ ಸಾರ್ವಜನಿಕರು ಮತ್ತು ವ್ಯಾಪಾರಸ್ಥರು ಕ್ಷೇತ್ರದಲ್ಲಿರುವ ಫಸಲನ್ನು ವೀಕ್ಷಿಸಿ ನಂತರ ಸದರಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ಟೆಂಡರ್ ಫಾರಂಗಳನ್ನು ರೂ.25.00 ಪಾವತಿ ಮಾಡಿ ಈ ಕಛೇರಿ ಅಥವಾ ಆಯಾಯಾ ಕ್ಷೇತ್ರಗಳ ಕ್ಷೇತ್ರಾಧಿಕಾರಿಗಳ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಪಡೆಯಬಹುದು. ಟೆಂಡರ್‌ದಾರರು ಆಯಾಯ ಫಸಲಿಗೆ ನಿಗದಿಪಡಿಸಿದ ಠೇವಣಿ ಮೊತ್ತ ಮತ್ತು ಫಸಲಿಗೆ ತಾವು ನಮೂದಿಸುವ ಟೆಂಡರ್ ಮೊತ್ತದ ಶೇಕಡ 50 ಭಾಗದ ಮೊತ್ತವನ್ನು ಪ್ರತ್ಯೇಕವಾಗಿ ಅಷ್ಟಗೆರೆ ಎಳೆದ ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಬೆಂಗಳೂರು

ಗ್ರಾಮಾಂತರ ಜಿಲ್ಲೆ, ಕಬ್ಬನ್ ಉದ್ಯಾನವನ, ಬೆಂಗಳೂರು ರವರ ಹೆಸರಿನಲ್ಲಿ ಪಡೆದು ಟೆಂಡರ್ ಜೊತೆ ಕಡ್ಡಾಯವಾಗಿ ಲಗತ್ತಿಸಬೇಕು. ಟೆಂಡರ್ ಫಾರಂನಲ್ಲಿ ಟೆಂಡರ್‌ದಾರರು ತಾವು ದಾಖಲಿಸುವ ಮೊತ್ತವನ್ನು ಕಡ್ಡಾಯವಾಗಿ ನಮೂದಿಸಿ ತಮ್ಮ ಹೆಸರು, ವಿಳಾಸಗಳನ್ನು ಭರ್ತಿ ಮಾಡಿದ ಮೊಹರಾದ ಟೆಂಡರ್ ಫಾರಂಗಳನ್ನು ನಿಗದಿಪಡಿಸಿದ ದಿನಾಂಕ ಮತ್ತು ವೇಳೆಗೆ ಅಥವಾ ಅದಕ್ಕೂ ಮೊದಲು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕಬ್ಬನ್ ಉದ್ಯಾನವನ ರವರ ಕಛೇರಿಯಲ್ಲೇ ಸಲ್ಲಿಸಬೇಕು.

ಬಹಿರಂಗ ಹರಾಜಿನ ಬಿಡ್ಡು ಮಾಡುವವರು ನಿಗದಿಪಡಿಸಿದ ಠೇವಣಿ ಪಾವತಿಸಿ ಭಾಗವಹಿಸಬಹುದು. ಅತಿ ಹೆಚ್ಚಿನ ಬಿಡ್‌ನ ಮೊತ್ತದ ಶೇಕಡ 50 ಭಾಗ ಮೊತ್ತವನ್ನು ಸ್ಥಳದಲ್ಲಿಯೇ ನಗದು/ಡಿ.ಡಿ.ರೂಪದಲ್ಲಿ ಪಾವತಿ ಮಾಡಬೇಕು.

ಮೇಲಿನ ತೋಟಗಾರಿಕೆ ಕ್ಷೇತ್ರಗಳ ಫಸಲನ್ನು ಟೆಂಡರ್ / ಹರಾಜು ಅನುಮೋದನೆಯಾದ ದಿನಾಂಕದಿಂದ 10 ದಿನಗಳೊಳಗಾಗಿ ಪೂರ್ಣ ಮೊಬಲಗನ್ನು ಪಾವತಿ ಮಾಡಿ ಫಸಲನ್ನು ರೂಢಿಸಿಕೊಳ್ಳಬೇಕು. ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ತೋಟಗಾರಿಕೆ ನಿರ್ದೇಶಕರು ಪಡೆದಿರುತ್ತಾರೆ. ಇಲಾಖಾ ಅಧಿಕಾರಿಗಳ ತೀರ್ಮಾನವೇ ಅಂತಿಮವಾಗಿರುತ್ತದೆ. ಹೆಚ್ಚಿನ ಪರಿಷ್ಕೃತ ನಿಯಮಾವಳಿಗಳ ವಿವರಗಳನ್ನು ನಿಬಂಧನೆ ಮತ್ತು ಷರತ್ತುಗಳನ್ನು ಈ ಕಛೇರಿಯಲ್ಲಿ ಅಥವಾ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಅನುಬಂಧ

ಕ್ರ. ಸಂ.	ತೋಟಗಾರಿಕೆ ಕ್ಷೇತ್ರ / ಸಸ್ಯಾಗಾರದ ಹೆಸರು	ಫಸಲಿನ ಹೆಸರು	ಗಿಡಗಳ ಸಂಖ್ಯೆ	ಫಸಲನ್ನು ರೂಢಿಸಿ ಕೊಳ್ಳುವ ಕೊನೆ ದಿನಾಂಕ	ಠೇವಣಿ ಮೊತ್ತ ರೂ.	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ವೇಳೆ	ಟೆಂಡರ್ / ಹರಾಜು ನಡೆಸುವ ದಿನಾಂಕ ಮತ್ತು ವೇಳೆ
1.	ತಿಪ್ಪಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರ	ಸಪೋಟ ಸೀಬೆ	700 500	31.12.2009	2000 500	9.9.2009 3.00 P.M	9.9.2009 3.30 P.M
2.	ಇಂದಿರಾನಗರ ತೋಟಗಾರಿಕೆ ಕ್ಷೇತ್ರ	ಸಪೋಟ	164	31.12.2009	2000	9.9.2009 3.00 P.M	9.9.2009 3.30 P.M
3.	ದೊಡ್ಡಬಳ್ಳಾಪುರ ತೋಟಗಾರಿಕೆ ಕ್ಷೇತ್ರ	ಸಪೋಟ	295	31.12.2009	2000	9.9.2009 3.00 P.M	9.9.2009 3.30 P.M
4.	ನೆಲಮಂಗಲ ಸಸ್ಯಾಗಾರ	ಸಪೋಟ	10	31.12.2009	200	9.9.2009 3.00 P.M	9.9.2009 3.30 P.M

ವಿಶೇಷ ಸೂಚನೆ

ಟೆಂಡರ್/ಬಹಿರಂಗ ಹರಾಜು ನಡೆಯುವ ಸ್ಥಳ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ,
(ರಾಜ್ಯವಲಯ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕಬ್ಬನ್ ಉದ್ಯಾನವನ, ಬೆಂಗಳೂರು–1
(ವಿಶ್ವೇಶ್ವರಯ್ಯ ಮ್ಯೂಸಿಯಂ ಹಿಂಭಾಗ)

ರವರಿಗೆ,

ಪಿ.ಆರ್. 666

[ನಮೂನೆ–1]

(9ನೇ ನಿಯಮ ನೋಡಿ)

ಕಾರಾಗೃಹ ಇಲಾಖೆ

ಅಧಿಸೂಚನೆ

ಕಾರಾಗೃಹಗಳ ಇಲಾಖೆ ಬೀದರ್ ಜಿಲ್ಲಾ ಕಾರಾಗೃಹ ಕಾರ್ಯಾಲಯದಲ್ಲಿ ವೀಕ್ಷಕರಾಗಿ ಕೆಲಸ ಮಾಡುತ್ತಿರುವ **ಶಾಂತಪ್ಪ ಪುಂಡಲಿಕ ಹೊಲೇರ** ಇವರ ಹೆಸರನ್ನು **ಶಾಂತಪ್ಪ ಪುಂಡಲಿಕ** ಇಂಗಳಿಗಿ ಎಂದು ಹೆಸರು ಬದಲಾವಣೆಗೆ ಅನುಮತಿ ನೀಡಲಾಗಿದೆ.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು,
ಮತ್ತು ಕಾರಾಗೃಹಗಳ ಮಹಾ ನಿರೀಕ್ಷಕರು.

ಪಿ.ಡಿ. 126

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ನ್ಯಾಯಾಂಗ ಇಲಾಖೆ ಇವರ ಜಾಹೀರಾತು

ಅಧಿಸೂಚನೆ ಸಂಖ್ಯೆ: 1/2009 ಆಡಳಿತ : ದಿನಾಂಕ: 1ನೇ ಆಗಸ್ಟ್ 2009

ವಿಷಯ: ದಾವಣಗೆರೆ ಜಿಲ್ಲಾ ನ್ಯಾಯಾಂಗ ಘಟಕಕ್ಕೆ 1 ಬೆರಳಚ್ಚು ನಕಲುಗಾರ, 6 ಪ್ರೊಸೆಸ್ ಸರ್ವರ್‌ರು, 3 ಜವಾನರ ಹುದ್ದೆಗಳನ್ನು ಹಾಗೂ ಶೀಘ್ರಲಿಪಿಗಾರರ 1 (ಬ್ಯಾಕ್‌ಲಾಗ್) ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: ಗೌ: ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: ಎಲ್‌ಸಿಎ II 205/2004 ದಿ: 02.05.2008 ಹಾಗೂ 17.06.2009 ರನ್ವಯ ವಿವಿಧ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ನೀಡಿದ ಅನುಮತಿ.

ದಾವಣಗೆರೆ ಜಿಲ್ಲೆಯ ನ್ಯಾಯಾಲಯಗಳಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿ **ದಿನಾಂಕ: 05.09.2009 ರಂದು ಸಂಜೆ 5.00 ಗಂಟೆಯ** ಒಳಗಾಗಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಇವರಿಗೆ ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 05.09.2009 ಸಂಜೆ 5.00 ಗಂಟೆಯವರೆಗೆ

ಹುದ್ದೆಗಳ ವರ್ಗೀಕರಣ:

ಕ್ರ. ಸಂ.	ಹುದ್ದಯ ಹೆಸರು	ಹುದ್ದೆಗಳ ಸಂಖ್ಯೆ	ಮೀಸಲಾತಿ	ಹುದ್ದೆಗಳ ವರ್ಗೀಕರಣ					
				ಸಾ.ಅ.	ಪ.ಜಾ	ಪ.ಪಂ.	II-ಎ	III-ಎ	III-ಬಿ
1	ಶೀಘ್ರಲಿಪಿಗಾರರ (ಬ್ಯಾಕ್‌ಲಾಗ್ ಹುದ್ದೆ)	1	ಇತರೆ	–	–	1	–	–	–
2	ಬೆರಳಚ್ಚು ನಕಲುಗಾರರು	1	ಗ್ರಾಮೀಣ	1	–	–	–	–	–
3	ಪ್ರೊಸೆಸ್ ಸರ್ವರ್	6	ಇತರೆ	1	–	–	–	1	1
			ಮಹಿಳಾ	1	–	–	–	–	–
			ಗ್ರಾಮೀಣ	1	1	–	–	–	–
4	ಜವಾನರು	3	ಇತರೆ	–	–	–	1	–	–
			ಮಹಿಳಾ	–	1	–	–	–	–
			ಅಂಗವಿಕಲ	1	–	–	–	–	–

ಸಾ.ಅ. – ಸಾಮಾನ್ಯ ಅರ್ಹತೆ ಪ.ಜಾ. – ಪರಿಶಿಷ್ಟ ಜಾತಿ ಪ.ಪಂ. – ಪರಿಶಿಷ್ಟ ಪಂಗಡ

1) ವೇತನ ಶ್ರೇಣಿ:

ಶೀಘ್ರಲಿಪಿಗಾರರು:	ರೂ.7275–175–7800–200–8600–225–9500–250–10500–300–12300–350–13350 ಮತ್ತು ಇತರೆ ಭತ್ಯೆಗಳು
ಬೆರಳಚ್ಚು ನಕಲುಗಾರರು	ರೂ.5800–100–6000–125–6500–150–7100–175–7800–200–8600–225–9500–250–10500 ಮತ್ತು ಇತರೆ ಭತ್ಯೆಗಳು
ಪ್ರೊಸೆಸ್ ಸರ್ವರ್	ರೂ.5200–100–6000–125–6500–150–7100–175–7800–200–8200 ಮತ್ತು ಇತರೆ ಭತ್ಯೆಗಳು
ಜವಾನರು	ರೂ.4800–100–6000–125–6500–150–7100–175–7275 ಮತ್ತು ಇತರೆ ಭತ್ಯೆಗಳು.

2) ವಯೋಮಿತಿ:

ಕನಿಷ್ಠ: 18 ವರ್ಷಗಳು

ಗರಿಷ್ಠ: 1) ಸಾಮಾನ್ಯ ವರ್ಗ 35 ವರ್ಷ

2) ಪ್ರವರ್ಗ–2ಎ, 2–ಬಿ, 3–ಎ, 3–ಬಿ 38 ವರ್ಷ

3) ಪ.ಜಾ /ಪ.ಪಂ./ಪ್ರವರ್ಗ–1 40 ವರ್ಷ

ಸರ್ಕಾರಿ ಸೇವೆಯಲ್ಲಿರುವವರಿಗೆ ವಿಧವೆಯರಿಗೆ, ಮಾಜಿ ಸೈನಿಕರಿಗೆ ಹಾಗೂ ಅಂಗವಿಕಲರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

ಅರ್ಜಿಯನ್ನು ಸ್ವೀಕರಿಸುವ ಕೊನೆಯ ದಿನಾಂಕಕ್ಕೆ ಮೇಲ್ಕಂಡ ಕನಿಷ್ಠ ವಯೋಮಿತಿಯನ್ನು ಹೊಂದಿರತಕ್ಕದ್ದು ಮತ್ತು ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

ಟಿಪ್ಪಣಿ: ಗರಿಷ್ಠ ವಯೋಮಿತಿಯ ಸೌಲಭ್ಯ ಕೋರುವ ಅಭ್ಯರ್ಥಿಯು ವಿಧವೆಯಾಗಿದ್ದರೆ, ಅವಳು ವಿಧವೆಯೆಂಬ ಬಗ್ಗೆ ತಹಶೀಲ್ದಾರರ ದರ್ಜೆಗೆ ಕಡಿಮೆ ಅಲ್ಲದ ರೆವಿನ್ಯೂ ಪ್ರಾಧಿಕಾರಿಯಿಂದ ಪಡೆದ ಪ್ರಮಾಣ ಪತ್ರಗಳನ್ನು ದ್ವಿಪ್ರತಿಯಲ್ಲಿ ಅರ್ಜಿಯೊಂದಿಗೆ ಲಗತ್ತಿಸಬೇಕು.

3) ವಿದ್ಯಾರ್ಹತೆ:

1) ಶೀಘ್ರಲಿಪಿಗಾರರ ಹುದ್ದೆಗೆ:

1) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.

2) ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ಅಥವಾ ಕರ್ನಾಟಕ ಸೆಕೆಂಡರಿ ಪ್ರೌಢ ಶಿಕ್ಷಣ ಪರೀಕ್ಷೆಗಳ ಮಂಡಳಿ ವತಿಯಿಂದ ನಡೆಸಲಾದ ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲಿ ಸೀನಿಯರ್ ದರ್ಜೆಯ ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರತಕ್ಕದ್ದು ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರತಕ್ಕದ್ದು ಅಥವಾ

3) ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖಾ ಮಂಡಳಿಯವರಿಂದ ನೀಡಲಾದ ಸೆಕ್ರೆಟರಿಯಲ್ ಪ್ರಾಕ್ಟೀಸ್‌ನಲ್ಲಿ ಡಿಪ್ಲೋಮೋ ಪಡೆದವರಾಗಿದ್ದು ಅದರಲ್ಲಿ ಆಂಗ್ಲ ಮತ್ತು ಕನ್ನಡ ಭಾಷೆಗಳೆರಡರಲ್ಲಿ ಬೆರಳಚ್ಚು ಮತ್ತು ಶೀಘ್ರಲಿಪಿ ವಿಷಯಗಳನ್ನು ಐಚ್ಛಿಕ ವಿಷಯಗಳನ್ನಾಗಿ ಆಯ್ದುಕೊಂಡು ಉತ್ತೀರ್ಣರಾಗಿರಬೇಕು.

2) ಬೆರಳಚ್ಚು-ನಕಲುಗಾರರ ಹುದ್ದೆಗೆ:

1) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.

2) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲಿ ಜ್ಯೂನಿಯರ್ ದರ್ಜೆಯ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

3) ಪ್ರೊಸೆಸ್ ಸರ್ವರ್‌ರ (ಜಾರಿಕಾರರ) ಹುದ್ದೆಗೆ:

ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

(ವಾಹನ ಚಾಲನಾ ಪರವಾನಿಗೆಯನ್ನು ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು)

4) ಜವಾನರ ಹುದ್ದೆಗೆ:

ಎ) 7ನೇ ತರಗತಿಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಬಿ) ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರಬೇಕು.

4) ಆಯ್ಕೆ ವಿಧಾನ:

ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು ಮತ್ತು ಕರ್ನಾಟಕ ಅಧೀನ ನ್ಯಾಯಾಲಯಗಳು (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) ನಿಯಮಗಳು 1982 ಹಾಗೂ (ತಿದ್ದುಪಡಿ) ನಿಯಮಗಳು 2007ರ ಮೇರೆಗೆ ಸಂದರ್ಶನದ ಆಧಾರದ ಮೇಲೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದು.

ಶೀಘ್ರಲಿಪಿಗಾರರು ಹಾಗೂ ಬೆರಳಚ್ಚು ನಕಲುಗಾರರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಅರ್ಹತಾ ಪರೀಕ್ಷೆ ಮತ್ತು ಈ ಕೆಳಗೆ ನಮೂದಿಸಿರುವಂತೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು.

ಶೀಘ್ರಲಿಪಿಗಾರರ ಹುದ್ದೆಗೆ:

1) ಅಭ್ಯರ್ಥಿಯು ನೇಮಕಾತಿ ಪ್ರಾಧಿಕಾರದಿದ ನಾಮ ನಿರ್ದೇಶಿಸಲ್ಪಟ್ಟ ಪರೀಕ್ಷಕರು ಪ್ರತಿ ನಿಮಿಷಕ್ಕೆ 120 ಪದಗಳ ವೇಗದಂತೆ 5 ನಿಮಿಷಗಳಲ್ಲಿ ನೀಡುವ ಉಕ್ತ ಲೇಖನವನ್ನು ಸುಮಾರು 45 ನಿಮಿಷಗಳಲ್ಲಿ ಲಿಪ್ಯಂತರಿಸತಕ್ಕದ್ದು.

2) ಈ ಪರೀಕ್ಷೆಯು ಗರಿಷ್ಠ 100 ಅಂಕಗಳದ್ದಾಗಿದ್ದು ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಕನಿಷ್ಠ 50 ಅಂಕಗಳನ್ನು ಪಡೆಯತಕ್ಕದ್ದು.

ಬೆರಳಚ್ಚು ನಕಲುಗಾರರ ಹುದ್ದೆಗೆ:

ಅಭ್ಯರ್ಥಿಯು ನೇಮಕಾತಿ ಪ್ರಾಧಿಕಾರದಿಂದ ನಾಮನಿರ್ದೇಶಿಸಲ್ಪಟ್ಟ ಅಧಿಕಾರಿಯವರಿಂದ ಸುಮಾರು 15 ನಿಮಿಷಗಳ ಕಾಲ ಉಕ್ತಲೇಖನವನ್ನು ಬೆರಳಚ್ಚುಪಡಿಸತಕ್ಕದ್ದು. ಈ ಪರೀಕ್ಷೆಯು ಗರಿಷ್ಠ 100 ಅಂಕಗಳದ್ದಾಗಿದ್ದು ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಕನಿಷ್ಠ 50 ಅಂಕಗಳನ್ನು ಪಡೆಯತಕ್ಕದ್ದು.

5) ನಿರೀಕ್ಷಣಾ ಅವಧಿ:

ನೇಮಕ ಹೊಂದಿದ ಅಭ್ಯರ್ಥಿಗಳು ಎರಡು ವರ್ಷಗಳ ನಿರೀಕ್ಷಣಾ ಅವಧಿಯಲ್ಲಿರತಕ್ಕದ್ದು. ಮತ್ತು ಸದರಿ ಅವಧಿಯಲ್ಲಿ ತಮ್ಮ ಹುದ್ದೆಗಳಿಗೆ ಯಾವುದಾದರೂ ಇಲಾಖಾ ಪರೀಕ್ಷೆಗಳನ್ನು ನಿಯಮದಡಿ ಗೊತ್ತುಪಡಿಸಿದ್ದರೆ ಅವುಗಳಲ್ಲಿ ಉತ್ತೀರ್ಣರಾಗತಕ್ಕದ್ದು.

6) ಅರ್ಜಿಯೊಂದಿಗೆ ಲಗತ್ತಿಸಬೇಕಾಗಿರುವ ದಾಖಲಾತಿಗಳು:

ಅಭ್ಯರ್ಥಿಗಳು ಈ ಕೆಳಕಂಡ ಪ್ರಮಾಣ ಪತ್ರಗಳ ಒಂದೊಂದು ಫೋಟೋ ಪ್ರತಿಗಳನ್ನು ಸ್ವಯಂ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು. ಯಾವುದೇ ಕಾರಣಕ್ಕೂ ಮೂಲ ದಾಖಲಾತಿಗಳನ್ನು ಲಗತ್ತಿಸತಕ್ಕದ್ದು.

1) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳು
2) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ : ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ
3) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ 2ಎ, ಪ್ರವರ್ಗ 2ಬಿ ಪ್ರವರ್ಗ 3ಎ ಮತ್ತು ಪ್ರವರ್ಗ 3ಬಿ ಗಳ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದ್ದಲ್ಲಿ ಹಾಗೂ ವಯೋಮಿತಿ ಸಡಿಲಿಕೆ ಕೋರಿದ್ದಲ್ಲಿ)
4) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ – 1 ಮತ್ತು 2 ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)
5) ಅಂಗವಿಕಲತೆಯ ಕುರಿತು ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
6) ಅಭ್ಯರ್ಥಿಯು ವಾಸವಾಗಿರುವ ಸ್ಥಳದ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ ಲಗತ್ತಿಸತಕ್ಕದ್ದು. ಅದು ಅರ್ಜಿ ಸ್ವೀಕರಿಸುವ ದಿನಾಂಕದಿಂದ 6 ತಿಂಗಳೊಳಗೆ ಪಡೆದಿದ್ದಿರಬೇಕು. ಅದಕ್ಕಿಂತಲೂ ಹಿಂದಿನದಾಗಿದ್ದರೆ ತಿರಸ್ಕರಿಸಲಾಗುವುದು.
7) ವಿದ್ಯಾರ್ಹತೆ ಜನ್ಮ ದಿನಾಂಕ, ಶಾಲಾ ಮುಖ್ಯಸ್ಥರಿಂದ ಪಡೆದ ನಡತೆ ಪ್ರಮಾಣ ಪತ್ರ, ಅಂಕಪಟ್ಟಿ ಸದರಿ (ಇವುಗಳ ಸ್ವಯಂದೃಢೀಕೃತ ಪ್ರತಿಗಳನ್ನು ಲಗತ್ತಿಸತಕ್ಕದ್ದು)
8) 5-00 ರೂಪಾಯಿ ಅಂಚೆ ಚೀಟಿಯನ್ನೊಳಗೊಂಡ ಸ್ವ ವಿಳಾಸಿತ ಲಕೋಟೆ
9) ಅರ್ಜಿಯ ಮೇಲೆ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಒಂದು ಭಾವಚಿತ್ರವನ್ನು ಅಂಟಿಸತಕ್ಕದ್ದು ಹಾಗೂ ಅದರ ಮೇಲೆ ತಮ್ಮ ಸಹಿಯನ್ನು ಹಾಕತಕ್ಕದ್ದು.
10) ಅಭ್ಯರ್ಥಿಯು ಭಾರತೀಯ ನಾಗರೀಕನಲ್ಲದಿದ್ದಲ್ಲಿ ಜಿಲ್ಲಾಧಿಕಾರಿ/ಜಿಲ್ಲಾ ದಂಡಾಧಿಕಾರಿಯವರು ನೀಡಿರುವ ನಾಗರೀಕ ದೃಢೀಕರಣ ಪತ್ರ.
11) ಅಭ್ಯರ್ಥಿಗಳು ನಿವಾಸಿ ದೃಢೀಕರಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

7) ಪ್ರಮುಖವಾದ ಸೂಚನೆಗಳು:

1) ಅರ್ಜಿಯನ್ನು ಈ ಅಧಿಸೂಚನೆಗೆ ಲಗತ್ತಿಸಿದ ನಮೂನೆಯಲ್ಲಿ ಪೂರ್ಣ ವಿವರಗಳೊಂದಿಗೆ ಸಲ್ಲಿಸತಕ್ಕದ್ದು. ಅಪೂರ್ಣ ವಿವರಗಳನ್ನೊಳಗೊಂಡ ಅರ್ಜಿಗಳನ್ನು ಪರಿಗಣಿಸುವುದಿಲ್ಲ.
2) ಜವಾನ ಹುದ್ದೆಗೆ ಸಂಬಂಧಿಸಿದಂತೆ 7ನೇ ತರಗತಿಯ ಅಂಕಪಟ್ಟಿಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು. ಒಂದು ವೇಳೆ ಅವು ಅಥವಾ ಲಗತ್ತಿಸಿರುವ ಇನ್ನಿತರ ದಾಖಲೆಗಳು ಖೊಟ್ಟಿ ಎಂದು ಕಂಡು ಬಂದರೆ ಅಂಥವರ ವಿರುದ್ಧ ನಿಯಮಗಳ ರೀತ್ಯ ಕ್ರಮ ಕೈಗೊಳ್ಳಲಾಗುವುದು.
3) ಅವನ : ಅವಳ ಅಭ್ಯರ್ಥಿಕನಾಗಿ ಅಧಿಕಾರಿಗಳಿಂದಾಗಲೀ ಅಥವಾ ಅಧಿಕಾರೇತರರಿಂದಾಗಲೀ ಯಾವುದೇ ರೀತಿಯಲ್ಲಿ ಬಾಹ್ಯ ಬೆಂಬಲವನ್ನು ಪಡೆಯಲು ಪ್ರಯತ್ನಿಸುವ ಯಾವುದೇ ವ್ಯಕ್ತಿಯು ರಾಜ್ಯ ಸೇವೆಯ ನೇಮಕಾತಿಗೆ ಅರ್ಹನಾಗಿರುವುದಿಲ್ಲ.
4) ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿಯನ್ನು ತಮ್ಮ ಮೇಲಾಧಿಕಾರಿಗಳ ಮುಖಾಂತರ ಸಲ್ಲಿಸತಕ್ಕದ್ದು
5) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮರುದಿನದಂದು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು. ಕೊನೆಯ ದಿನಾಂಕದ ನಂತರ ಈ ಕಛೇರಿಗೆ ಬರುವ ಯಾವುದೇ ಅರ್ಜಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.
6) ಒಂದಕ್ಕಿಂತ ಹೆಚ್ಚು ಹುದ್ದೆಗೆ ಅರ್ಜಿ ಸಲ್ಲಿಸುವವರು ಪ್ರತಿ ಹುದ್ದೆಗೂ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
7) ಅರ್ಜಿಯಲ್ಲಿ ಹಾಗೂ ಅರ್ಜಿಯನ್ನು ಒಳಗೊಂಡಿರುವ ಲಕೋಟೆಯ ಮೇಲೆ ಅರ್ಜಿ ಸಲ್ಲಿಸಲಾಗುತ್ತಿರುವ ಹುದ್ದೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
8) ಅಭ್ಯರ್ಥಿಗಳು ಅರ್ಜಿಯ ಮೇಲ್ಭಾಗದ ಬಲಗಡೆಯ ತುದಿಯಲ್ಲಿ ಕೋರಿರುವ ಮೀಸಲಾತಿಯನ್ನು ತಪ್ಪದೆ ನಮೂದಿಸತಕ್ಕದ್ದು.
9) ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಿದ್ದಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.
10) ಅಭ್ಯರ್ಥಿಗಳಿಗೆ ಸಂದರ್ಶನದ ಬಗ್ಗೆ ಈ ಕಛೇರಿಯಿಂದ ಯಾವುದೇ ಮಾಹಿತಿಯು ಬಾರದೇ ಇದ್ದರೆ, ಅವರು ಸಂದರ್ಶನಕ್ಕೆ ಆಯ್ಕೆಯಾಗಿಲ್ಲ ಎಂದು ಭಾವಿಸತಕ್ಕದ್ದು ಮತ್ತು ಈ ರೀತಿ ತಿರಸ್ಕೃತ ಅರ್ಜಿಗಳ ಬಗ್ಗೆ ಅಥವಾ ಸಂದರ್ಶನಕ್ಕೆ ಅನರ್ಹರಾದ ಬಗ್ಗೆ ಯಾವುದೇ ಪತ್ರ ವ್ಯವಹಾರ ನಡೆಸಲು ಅವಕಾಶವಿರುವುದಿಲ್ಲ.

11) ಅಧಿಸೂಚನೆಯಲ್ಲಿ ನಮೂದಿಸಿರುವ ವರ್ಗೀಕರಣಕ್ಕನುಸಾರವಾಗಿ ಅರ್ಹ ಮಹಿಳೆ, ಗ್ರಾಮೀಣ ಅಭ್ಯರ್ಥಿಗಳಿಂದ ನಿಗದಿಪಡಿಸಿದಷ್ಟು ಅರ್ಜಿಗಳು ಬಾರದಿದ್ದಲ್ಲಿ ಅಥವಾ ಸೂಕ್ತ ಅಭ್ಯರ್ಥಿಯು ದೊರಕದಿದ್ದಲ್ಲಿ ಅದೇ ವರ್ಗದ ಪುರುಷ ಅಥವಾ ಇತರೇ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

12) ಅಭ್ಯರ್ಥಿಯು ಎಲ್ಲಾ ಪ್ರಮಾಣ ಪತ್ರಗಳು, ಅಂಕಪಟ್ಟಿಗಳು ಮುಂತಾದವುಗಳನ್ನು ಒಳಗೊಂಡ ಅರ್ಜಿಯನ್ನು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರಿಗೆ **ದಿನಾಂಕ: 05.09.2009 ರ ಸಂಜೆ 5.00 ಗಂಟೆಯ** ಒಳಗೆ ಅಥವಾ ಅದಕ್ಕೂ ಮುಂಚಿತವಾಗಿ ತಲುಪುವಂತೆ ಕಳುಹಿಸಬೇಕು. ನಿಗದಿಪಡಿಸಿದ **ಕೊನೆಯ ದಿನಾಂಕದ ತರುವಾಯ** ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

13) ಅಭ್ಯರ್ಥಿಗಳು ಮೀಸಲಾತಿ ಕೋರಿ ಸಲ್ಲಿಸಿದ ನಿಗದಿತ ಪ್ರಮಾಣ ಪತ್ರ ಅಥವಾ ಇನ್ನಿತರ ಯಾವುದೇ ದಾಖಲಾತಿಗಳು ತಪಾಸಣಾ ಅವಧಿಯಲ್ಲಿ ಸುಳ್ಳೆಂದು ಕಂಡು ಬಂದರೆ ಅವರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಮುಗಳಡಿ ಶಿಕ್ಷೆಗೆ ಗುರಿಪಡಿಸಲಾಗುವುದು ಮತ್ತು ಅವರ ಆಯ್ಕೆಯನ್ನು ರದ್ದುಪಡಿಸಲಾಗುವುದು.

14) ಅಭ್ಯರ್ಥಿಗಳು ಆಯ್ಕೆಗೊಂಡರೆ, ದಾವಣಗೆರೆ ಜಿಲ್ಲೆಯ ಯಾವುದೇ ನ್ಯಾಯಾಲಯದಲ್ಲಿಯಾದರೂ ಕಾರ್ಯ ನಿರ್ವಹಿಸಲು ಸಿದ್ಧರಿರತಕ್ಕದ್ದು.

ಬಸವರಾಜ ಎಸ್. ತಡಹಾಳ್

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ

ಅರ್ಜಿ ನಮೂನೆ

ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ ಜಿಲ್ಲೆ,
ದಾವಣಗೆರೆ – ಇವರಿಗೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ನ್ಯಾಯಾಂಗ ಘಟಕದ ಅಧಿಸೂಚನೆ ಸಂಖ್ಯೆ: 1/2009, ದಿನಾಂಕ: 03/08/2009ರ ಮೇರೆಗೆ ವಿವಿಧ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಲು ಆಹ್ವಾನಿಸಿದ್ದುದರ ಮೇರೆಗೆ ನಾನು ------------ ಹುದ್ದೆಗೆ – ಮೀಸಲಾತಿ ವರ್ಗದಡಿ ಆಯ್ಕೆ ಬಯಸಿ ಈ ಕೆಳಗಿನ ವಿವರಗಳನ್ನೊಳಗೊಂಡ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ.

ಸ್ವದೃಢೀಕರಿಸಿದ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಬೇಕು

1	ಅಭ್ಯರ್ಥಿಯ ಹೆಸರು (ಸ್ಪಷ್ಟವಾಗಿ ದಪ್ಪ ಲಕ್ಷರಗಳಲ್ಲಿ ಬರೆಯಬೇಕು)	:	
2	ಅಭ್ಯರ್ಥಿಯ ತಂದೆ : ತಾಯಿಯ : ಗಂಡನ : ಹೆಂಡತಿಯ : ಪೋಷಕರ ಹೆಸರು ಮತ್ತು ವೃತ್ತಿ	:	
3	ಅಭ್ಯರ್ಥಿಯ ಪೂರ್ಣ ವಿಳಾಸ	:	
4	ಅಭ್ಯರ್ಥಿಯು ಸ್ತ್ರೀಯರೇ ಅಥವಾ ಪುರುಷರೇ	:	
5	ಹುಟ್ಟಿದ ದಿನಾಂಕ ಮತ್ತು ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕಕ್ಕೆ ವಯಸ್ಸು (ಸೂಕ್ತ ದಾಖಲೆಯನ್ನು ಲಗತ್ತಿಸತಕ್ಕದ್ದು)	:	
6	ಅಭ್ಯರ್ಥಿಯ ರಾಷ್ಟ್ರೀಯತೆ ಮತ್ತು ಜಾತಿ	:	

7	ಅಭ್ಯರ್ಥಿಯು ಪ.ಜಾ. : ಪ್ರವರ್ಗ-1: 2ಎ : 2ಬಿ : 3ಎ : 3ಬಿ ಗೆ ಸೇರಿರುವಿರಾ? ಅಂಗವಿಕಲರೇ?, ವಿಧವೆಯೇ? (ಹಾಗಿದ್ದಲ್ಲಿ ಆ ಕುರಿತು ಸಕ್ಷಮ ಪ್ರಾಧಿಕಾಗದಿಂದ ಪಡೆದ ನಕಲು ಪ್ರತಿಯನ್ನು ಲಗತ್ತಿಸತಕ್ಕದ್ದು)				
8	ಅಭ್ಯರ್ಥಿಯು ಗ್ರಾಮೀಣ ಅಭ್ಯರ್ಥಿಯೇ? (ಹಾಗಿದ್ದಲ್ಲಿ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು)				
9	ಶೈಕ್ಷಣಿಕ ವಿದ್ಯಾರ್ಹತೆ:		ಉತ್ತೀರ್ಣರಾದ ವರ್ಷ ಮತ್ತು ತಿಂಗಳು	ಗರಿಷ್ಠ ಅಂಕಗಳು	ಪಡೆದ ಅಂಕಗಳು
	1) 7ನೇ / 10ನೇ ತರಗತಿ	:			
	2) ಕನ್ನಡ ಶೀಘ್ರಲಿಪಿ ಪ್ರೌಢದರ್ಜೆ	:			
	3) ಆಂಗ್ಲ ಶೀಘ್ರಲಿಪಿ ಪ್ರೌಢದರ್ಜೆ	:			
	4) ಕನ್ನಡ ಬೆರಳಚ್ಚು ಪ್ರೌಢದರ್ಜೆ	:			
	5) ಆಂಗ್ಲ ಬೆರಳಚ್ಚು ಪ್ರೌಢದರ್ಜೆ	:			
	6) ಕನ್ನಡ ಬೆರಳಚ್ಚು ಕಿರಿಯ ದರ್ಜೆ	:			
	7) ಆಂಗ್ಲ ಬೆರಳಚ್ಚು ಕಿರಿಯ ದರ್ಜೆ	:			
10	ಇತರ ಹೆಚ್ಚುವರಿ ವಿದ್ಯಾರ್ಹತೆ	:			
11	ಪ್ರೊಸೆಸ್ ಸರ್ವರ್ ಹುದ್ದೆಗೆ ಅರ್ಜಿ ಸಲ್ಲಿಸುವವರಾಗಿದ್ದರೆ ನೀವು ಚಾಲನಾ ಪರವಾನಿಗೆ ಹೊಂದಿದ್ದೀರಾ? ಹೊಂದಿದ್ದರೆ, ವಾಹನ ಚಾಲನಾ ಪರವಾನಿಗೆ ಸಂಖ್ಯೆ (ಲಘು ಅಥವಾ ಭಾರೀ ನಿರ್ದಿಷ್ಟವಾಗಿ ನಮೂದಿಸತಕ್ಕದ್ದು)	:			
12	ವಿವಾಹಿತರೇ : ಅವಿವಾಹಿತರೇ ವಿವಾಹಿತರಾಗಿದ್ದಲ್ಲಿ ಒಂದಕ್ಕಿಂತ ಹೆಚ್ಚು ಜೀವಂತ ಪತಿ : ಪತ್ನಿಯನ್ನು ಹೊಂದಿದ್ದೀರಾ?	:			
13	ಅಭ್ಯರ್ಥಿಗಳು ಯಾವುದೇ ಅಪರಾಧಗಳನ್ನು ಎದುರಿಸುತ್ತಿರುವಿರಾ ಅಥವಾ ನಿಮ್ಮ ವಿರುದ್ಧ ಯಾವುದೇ ಅಪರಾಧವನ್ನು ನೋಂದಾಯಿಸಿಕೊಳ್ಳಲಾಗಿದೆಯೇ?	:			
14	ಅಭ್ಯರ್ಥಿಗಳು ಯಾವುದಾದರೂ ಸರ್ಕಾರಿ ನೌಕರಿಯಲ್ಲಿದ್ದೀರಾ?	:			
15	ಲಗತ್ತಿಸಿರುವ ದಾಖಲಾತಿಗಳು	:			

ಮೇಲ್ಕಂಡ ವಿವರಣೆಗಳು ಸತ್ಯವಾಗಿರುತ್ತವೆ ಹಾಗೂ ಸರಿಯಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ. ಮೇಲ್ಕಂಡ ಮಾಹಿತಿಗಳು ಸುಳ್ಳು ಮಾಹಿತಿ ಎಂದು ತಿಳಿದು ಬಂದಲ್ಲಿ ಕಾನೂನು ರೀತ್ಯಾ ತೆಗೆದುಕೊಳ್ಳುವ ಕ್ರಮಕ್ಕೆ ಬದ್ಧನಾಗಿರುತ್ತೇನೆ.

ಸ್ಥಳ:

ದಿನಾಂಕ:

ಅಭ್ಯರ್ಥಿಯ ಸಹಿ

ಪಿ.ಆರ್. 659

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಚಿಕ್ಕಮಗಳೂರು

ಅಧಿಸೂಚನೆ ಸಂಖ್ಯೆ: ADMN-02/2009, ದಿನಾಂಕ: 11ನೇ ಆಗಸ್ಟ್ 2009

ವಿಷಯ: ಜಾರಿಕಾರ ಮತ್ತು ಜವಾನರ ಹುದ್ದೆಗಳ ನೇಮಕಾತಿ ಬಗ್ಗೆ.

ಉಲ್ಲೇಖ: 1. ಉಚ್ಚ ನ್ಯಾಯಾಲಯದ ಪತ್ರ ಸಂಖ್ಯೆ: LCA-II 205/2004 ದಿನಾಂಕ: 17-06-2009

2. ಸರ್ಕಾರಿ ಆದೇಶ ಸಂಖ್ಯೆ: LAW 32 LCE 2008 ದಿನಾಂಕ: 23-04-2008

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10-09-2009 ಸಂಜೆ 5-00 ಗಂಟೆ

ಅರ್ಜಿ ಸಲ್ಲಿಸಬೇಕಾದ ವಿಳಾಸ:- ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

I. **ಜಾರಿಕಾರರ ಹುದ್ದೆಗಳು: (Process Server):**

1. ಹುದ್ದೆಗಳ ಸಂಖ್ಯೆ: 01
2. ಹುದ್ದೆಯ ವರ್ಗೀಕರಣ: **ಪ್ರವರ್ಗ –1ರ ಮಹಿಳಾ ಅಭ್ಯರ್ಥಿಗೆ ಮಾತ್ರ** (ಮೀಸಲು)
3. ವೇತನ ಶ್ರೇಣಿ: 5200–100–6000–125–6500–150–7100–175–7800–200–8200. ಹಾಗೂ ಲಭ್ಯವಿರುವ ಇತರೆ ಭತ್ಯೆಗಳು.
4. **ಶೈಕ್ಷಣಿಕ ವಿದ್ಯಾರ್ಹತೆ:**

ಎ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

ಬಿ) ಡ್ರೈವಿಂಗ್ ಲೈಸೆನ್ಸ್ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

II. **ಜವಾನರ ಹುದ್ದೆಗಳು: (Peons)**

1. **ಹುದ್ದೆಗಳ ಸಂಖ್ಯೆ:** 04
2. **ವೇತನ ಶ್ರೇಣಿ:** 4800–100–6000–125–6500–150–7100–175–7275.
3. **ಹುದ್ದೆಗಳ ವರ್ಗೀಕರಣ:**
   ಎ) ಪರಿಶಿಷ್ಟ ಜಾತಿ – ಕನ್ನಡ ಮಾಧ್ಯಮ ಅಭ್ಯರ್ಥಿ – 1
   ಬಿ) ವರ್ಗ – 2A, ಇತರೆ – 1
   ಸಿ) ಸಾಮಾನ್ಯ ವರ್ಗ – ಮಹಿಳಾ ಅಭ್ಯರ್ಥಿ – 1
   ಡಿ) ಸಾಮಾನ್ಯ ವರ್ಗ – ಗ್ರಾಮೀಣ ಅಭ್ಯರ್ಥಿ – 1
4. **ಶೈಕ್ಷಣಿಕ ವಿದ್ಯಾರ್ಹತೆ:**

ಎ) ಏಳನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ರುಜು ಇರುವ ಅಂಕಪಟ್ಟಿಯನ್ನೇ ಹಾಜರುಪಡಿಸತಕ್ಕದ್ದು ಹಾಗೂ ಅರ್ಜಿಜೊತೆಯಲ್ಲಿ ಕೂಡಾ ಅದೇ ಅಂಕಪಟ್ಟಿಯ ಜೆರಾಕ್ಸ್ ನಕಲನ್ನು ಹಾಜರುಪಡಿಸತಕ್ಕದ್ದು.

ಬಿ) ಕನ್ನಡ ಓದಲು, ಬರೆಯಲು ತಿಳಿದಿರಬೇಕು.

ಅನುಸರಿಸಬೇಕಾದ ನಿಯಮಗಳು:

1. ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗತ್ತಿಸಿದ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು ಮಾಡಿಸಿದ ಅಥವಾ ಗಣಕೀಕೃತ ಅರ್ಜಿಯನ್ನು ತನ್ನ ಕೈ ಬರಹದಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.
2. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಹಾಕಲು ಬಯಸುವವರು ಹಾಗೂ ಒಂದೇ ಹುದ್ದೆಗೆ ವಿವಿಧ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವವರು ಪ್ರತ್ಯೇಕವಾಗಿ ಅರ್ಜಿಗಳನ್ನು ನಿಗದಿತ ಅರ್ಜಿ ನಮೂನೆಗಳಲ್ಲಿ ಖಡ್ಡಾಯವಾಗಿ ಯಾವ ವರ್ಗ / ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುತ್ತಿರುವಿರಿ ಎಂಬುದನ್ನು ನಮೂದಿಸಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
3. ಅಭ್ಯರ್ಥಿಯ ಇತ್ತೀಚಿನ ಪಾಸ್ ಪೋರ್ಟ್ ಸೈಜ್ ಫೋಟೋವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡತಕ್ಕದ್ದು.
4. ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕಾದ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಹಾಗೂ ಇತರ ಪ್ರಮಾಣ ಪತ್ರಗಳನ್ನು ಸ್ವಯಂ ದೃಢೀಕರಿಸತಕ್ಕದ್ದು ಅರ್ಜಿಯೊಂದಿಗೆ ಮೂಲ ಪ್ರತಿಗಳನ್ನು ಲಗತ್ತಿಸುವ ಅವಶ್ಯಕತೆ ಇರುವುದಿಲ್ಲ. ಲಗತ್ತಿಸಿದ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ದಿನಾಂಕದ ಒಳಗೆ ಪಡೆದಿರಬೇಕು.
5. ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ನಡತೆ ಮತ್ತು ಶೀಲನ ಬಗ್ಗೆ ತಮ್ಮ ಸಂಬಂಧಿಯಲ್ಲದ ಸಮಾಜದ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ಎರಡು ಪ್ರಮಾಣ ಪತ್ರಗಳನ್ನು ಹಾಗೂ ಕೊನೆಯಲ್ಲಿ ವ್ಯಾಸಂಗ ಮಾಡಿದ ಶಾಲೆ/ವಿದ್ಯಾಲಯದಿಂದ ಪಡೆದ ಒಂದು ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.
6. **ವಯೋಮಿತಿ:-**

ಅ) ಅರ್ಜಿಗಳನ್ನು ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

ಆ) ಗರಿಷ್ಠ ವಯೋಮಿತಿ:	ಸಾಮಾನ್ಯ ವರ್ಗ	: 35 ವರ್ಷಗಳು
	2ಎ, 2ಬಿ, 3ಎ, 3ಬಿ	: 38 ವರ್ಷಗಳು
	ಪರಿಶಿಷ್ಟ ಜಾತಿ / ಪಂಗಡ	: 40 ವರ್ಷಗಳು

ಇ) ಹುಟ್ಟಿದ ದಿನಾಂಕವನ್ನು ತೋರಿಸುವ ಬಗ್ಗೆ ದೃಢೀಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು

7. ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಕೋರಿದಲ್ಲಿ ಹಾಜರು ಪಡಿಸಬೇಕಾದ ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳು:

ಅ) ಜಾತಿ ಮೀಸಲಾತಿ ಕೋರುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ತಹಶೀಲ್ದಾರರಿಂದ ಪಡೆದಿರುವ ಪ್ರಮಾಣ ಪತ್ರ.

ಆ) ಗ್ರಾಮೀಣ ಮೀಸಲಾತಿ (1 ರಿಂದ 7ನೇ ತರಗತಿವರೆಗೆ) ಪ್ರಮಾಣ ಪತ್ರ ನಮೂನೆ – 1 ಮತ್ತು 2 ರಲ್ಲಿ

ಇ) ಕನ್ನಡ ಮಾಧ್ಯಮದಲ್ಲಿ 1ರಿಂದ 7ನೇ ತರಗತಿವರೆಗೆ ವ್ಯಾಸಂಗ ಮಾಡಿದ ಪ್ರಮಾಣ ಪತ್ರ.

8. ಆಯ್ಕೆ ವಿಧಾನ:

ಅ) ಅಭ್ಯರ್ಥಿಗಳ ಆಯ್ಕೆಯು ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ) (ನೇಮಕಾತಿ)(ತಿದ್ದುಪಡಿ) ನಿಯಮ 2007ರ ಪ್ರಕಾರ ನಡೆಸಲಾಗುವುದು.

ಆ) ಯಾವುದೇ ವರ್ಗಗಳ ಮಹಿಳಾ, ಗ್ರಾಮೀಣ ಕನ್ನಡ ಮಾಧ್ಯಮ ಮೀಸಲಾತಿ ಇರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ತುಂಬಿಕೊಳ್ಳಲಾಗುವುದು.

9. ಅಭ್ಯರ್ಥಿಗಳಿಗೆ ಸೂಚನೆಗಳು:–

ಅ) ಅಭ್ಯರ್ಥಿಗಳು ನೇಮಕಾತಿ ಸಂಬಂಧ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸಿರುವುದು ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸುವುದಿಲ್ಲ.

ಆ) ಅಪೂರ್ಣವಾಗಿರುವ, ಸಹಿ ಇಲ್ಲದೇ ಇರುವ, ಖಡ್ಡಾಯವಾಗಿ ತುಂಬಬೇಕಾದ ಕಾಲಂಗಳನ್ನು ಭರ್ತಿ ಮಾಡದೇ ಇರುವ, ವಿದ್ಯಾರ್ಹತೆ, ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಬಗ್ಗೆ ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಇ) ಸರ್ಕಾರಿ ಮತ್ತು ಅರೆ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಮುಚಿತ ಮಾರ್ಗದ ಮುಖಾಂತರ (Through proper Channel) ಸಲ್ಲಿಸಬೇಕು.

ಉ) ಅರ್ಜಿದಾರರು ಯಾವ ಹುದ್ದೆಗಳಿಗೆ ಹಾಗೂ ಯಾವ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸುತ್ತಿದ್ದಾರೆಂಬುದನ್ನು ದಪ್ಪ ಅಕ್ಷರಗಳಲ್ಲಿ ಲಕೋಟೆಯ ಮೇಲೆ ನಮೂದಿಸಬೇಕು.

ಊ) ಜಾರಿಕಾರರ ಹುದ್ದೆಗೆ 1:25 ರ ಅನುಪಾತ ಹಾಗೂ ಜವಾನರ ಹುದ್ದೆಗಳಿಗೆ 1:10 ರ ಅನುಪಾತದಲ್ಲಿ, ನಿಗದಿಪಡಿಸಿರುವ ವಿದ್ಯಾರ್ಹತೆಗೆ ಅನುಗುಣವಾಗಿ, ಅತೀ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆ ಮಾಡಲಾಗುವುದು, ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು.

ಋ) ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ, ಸಂದರ್ಶನಕ್ಕೆ ಅನರ್ಹರೆಂದು ತಿಳಿಯುವುದು, ಅಲ್ಲದೇ ಮುಂದಿನ ಪತ್ರ ವ್ಯವಹಾರಕ್ಕಾಗಲೀ ದೂರವಾಣಿ ಮೂಲಕ ಮಾಹಿತಿ ಕೋರುವುದಕ್ಕಾಗಲೀ ಅವಕಾಶವಿರುವುದಿಲ್ಲ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಅರ್ಜಿ ನಮೂನೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು – ಇವರಿಗೆ:

ಭಾವಚಿತ್ರ

ಮಾನ್ಯರೇ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಅಧಿಸೂಚನೆ ಸಂಖ್ಯೆ: 02/2009 ದಿನಾಂಕ: 11–08–2009ರ ಪ್ರಕಾರ **ಜಾರಿಕಾರ/ಜವಾನ** ಹುದ್ದೆಗೆ ನಾನು ಈ ಮೂಲಕ ನನ್ನ ವಿವರಗಳೊಂದಿಗೆ ಅರ್ಜಿ ಸಲ್ಲಿಸುತ್ತಿದ್ದೇನೆ.

1.	ಅಭ್ಯರ್ಥಿಯ ಹೆಸರು	
2.	ತಂದೆ / ತಾಯಿ / ಗಂಡನ ಹೆಸರು	
3.	ಪೂರ್ಣ ವಿಳಾಸ	

4.	ವಯಸ್ಸು ಮತ್ತು ಜನ್ಮ ದಿನಾಂಕ:				
5.	ಲಿಂಗ	ಪುರುಷ / ಮಹಿಳೆ			
6.	ರಾಷ್ಟ್ರೀಯತೆ: ಧರ್ಮ: ಜಾತಿ / ಉಪಜಾತಿ				
7.	ಯಾವ ವರ್ಗ / ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸುತ್ತಿದ್ದೀರಿ? (ಸಂಬಂಧಪಟ್ಟ ದಾಖಲಾತಿಗಳನ್ನು ಲಗತ್ತಿಸತಕ್ಕದ್ದು)				
8.	ಶೈಕ್ಷಣಿಕ ವಿದ್ಯಾರ್ಹತೆ (ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು)	ಉತ್ತೀರ್ಣ ಹೊಂದಿದ ವರ್ಷ ಮತ್ತು ನೊಂದಣಿ ಸಂಖ್ಯೆ:	ಗರಿಷ್ಠ ಅಂಕಗಳು	ಪಡೆದಿರುವ ಅಂಕಗಳು	ಶೇಕಡಾ ವಾರು ಅಂಕಗಳು
ಎ)	10ನೇ ತರಗತಿ / 7ನೇ ತರಗತಿ ಉತ್ತೀರ್ಣ				

ಸೂಚನೆ:- ಅಭ್ಯರ್ಥಿಗಳು ಎಲ್ಲಾ ಕಾಲಂಗಳನ್ನು ಖಡ್ಡಾಯವಾಗಿ ಭರ್ತಿ ಮಾಡತಕ್ಕದ್ದು.

ಘೋಷಣೆ

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ಸತ್ಯವಾಗಿದ್ದು ಒಂದು ವೇಳೆ ಅವು ಅಸತ್ಯವೆಂದು ಕಂಡು ಬಂದಲ್ಲಿ ತಾವು ತೆಗೆದುಕೊಳ್ಳುವ ತೀರ್ಮಾನಗಳಿಗೆ ಬದ್ಧನಾಗಿರುತ್ತೇನೆ / ಬದ್ಧಳಾಗಿರುತ್ತೇನೆ. ನಾನು ಆಯ್ಕೆಗೊಂಡ ಪಕ್ಷದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಯಾವುದೇ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧನಿರುತ್ತೇನೆ / ಸಿದ್ಧಳಿರುತ್ತೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ.

ಪಿ.ಆರ್. 679

ವಾರ್ತಾ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು–560001

ಬ್ಯಾಕ್‌ಲಿಟ್ ಸ್ಕ್ರೋಲಿಂಗ್ ಪ್ರದರ್ಶನ ಫಲಕ ಯಂತ್ರಗಳನ್ನು ಪೂರೈಸಿ ಅಳವಡಿಸಲು ಟೆಂಡರ್ ಆಹ್ವಾನ

ಸಂ:ವಾಇ.ಕ್ಷೇ.ಪ್ರ/ಬ್ಯಾಲಿಡಿಸಿ/2009–10/8385–87, ದಿನಾಂಕ: 1/4ನೇ ಆಗಸ್ಟ್ 2009

ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಜನತೆಗೆ ಮಾಹಿತಿ ನೀಡುವ ಸಲುವಾಗಿ 3x5 ಅಡಿ ಅಳತೆಯ ಹಾಗೂ ಕನಿಷ್ಟ 10 ಸ್ಲೈಡ್ಸ್‌ಗಳನ್ನೊಳಗೊಂಡ ಸ್ವಯಂಚಾಲಿತ ಬ್ಯಾಕ್‌ಲಿಟ್ ಸ್ಕ್ರೋಲಿಂಗ್ ಪ್ರದರ್ಶನ ಫಲಕ ಯಂತ್ರಗಳನ್ನು ಪೂರೈಸಲು ಟೆಂಡರ್ ಆಹ್ವಾನಿಸಲಾಗಿದೆ. ಖಾಲಿ ಟೆಂಡರ್ ನಮೂನೆಗಳನ್ನು ದಿನಾಂಕ:26.08.2009ರವರೆಗೆ ಅರ್ಜಿ ಶುಲ್ಕ ರೂ.500/–ಗಳನ್ನು ನಗದು ಅಥವಾ ಡಿಡಿ ರೂಪದಲ್ಲಿ ಸಲ್ಲಿಸಿ, ಪಡೆಯಬಹುದು. ಟೆಂಡರ್ ಸ್ವೀಕರಿಸುವ ಕೊನೆ ದಿನಾಂಕ: 3.9.2009ರ ಮಧ್ಯಾಹ್ನ 1.00 ಗಂಟೆ. ಟೆಂಡರ್‌ಗಳನ್ನು ಅದೇ ದಿನ ಸಂಜೆ 4.00 ಗಂಟೆಗೆ ತೆರೆಯಲಾಗುವುದು. ಟೆಂಡರ್‌ದಾರರು ಟೆಂಡರ್‌ನೊಂದಿಗೆ ಭದ್ರತಾ ಠೇವಣಿ ರೂ.65,000/–ಗಳ ಮೊತ್ತದ ಡಿಡಿಯನ್ನು ಆಯುಕ್ತರು, ವಾರ್ತಾ ಇಲಾಖೆ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಉಪನಿರ್ದೇಶಕರು (ಕ್ಷೇ.ಪ್ರ) ವಾರ್ತಾ ಇಲಾಖೆ, ಬೆಂಗಳೂರು ಇವರಿಂದ ಪಡೆಯಬಹುದಾಗಿದೆ.

ವಿವರಗಳು:

1. ಸರ್ಕಾರದ ಅಭಿವೃದ್ಧಿಪರ ಕಾರ್ಯಕ್ರಮಗಳ ಮಾಹಿತಿ ಹೊಂದಿದ ವರ್ಣಯುತ 10 ಸ್ಲೈಡ್ಸ್‌ಗಳ 3x5 ಅಡಿ ಅಳತೆಯ ಸ್ವಯಂಚಾಲಿತ ಬ್ಯಾಕ್‌ಲಿಟ್ ಸ್ಕ್ರೋಲಿಂಗ್ ಪ್ರದರ್ಶನ ಫಲಕಯಂತ್ರ (ಮಲ್ಟಿ ಸ್ಕ್ರೋಲಿಂಗ್ ಡಿಸ್‌ಪ್ಲೇ ಸಿಸ್ಟಂ) ಗಳನ್ನು ಒದಗಿಸಿ, ತದನಂತರ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಕಚೇರಿ ಹಾಗೂ ಜಿಲ್ಲಾ ಕೇಂದ್ರಗಳ ಬಸ್ ನಿಲ್ದಾಣಗಳಲ್ಲಿ ಸ್ಥಾಪಿಸಿ ಕೊಡುವುದು.

2. ಬ್ಯಾಕ್‌ಲಿಟ್ ಸ್ವಯಂ ಚಾಲಿತ ಪ್ರದರ್ಶನ ಫಲಕ ಯಂತ್ರಗಳು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕು.
   - ಹವಾಮಾನ ಪ್ರತಿರೋಧ ಗುಣ ಹೊಂದಿರಬೇಕು.
   - ಒಳಾಂಗಣ ಅಥವಾ ಹೊರಾಂಗಣದಲ್ಲಿ ಸ್ಥಾಪಿಸುವಂತಿರಬೇಕು.
   - ಯಂತ್ರದ ಮುಂಭಾಗವು ಹೈಡ್ರಾಲಿಕ್ ಆಲ್ಯೂಮಿನಿಯಂ ಕೇಸಿಂಗ್ ಹೊಂದಿರಬೇಕು.
   - ಸ್ವಯಂ ಚಾಲಿತ ಸ್ಕ್ರೋಲಿಂಗ್ ಹೊಂದಿರಬೇಕು.
   - ಪ್ರತಿಚಿತ್ರ ಒಂದು ಸೆಕೆಂಡ್ ಅವಧಿಯಿಂದ 99 ಸೆಕೆಂಡ್ ಅವಧಿಯವರೆಗೆ ನಿಲ್ಲುವಂತಿರಬೇಕು.
   - ಬೆಳಕು ಹಾಗೂ ಮೋಟಾರ್‌ನ್ನು ನಂದಿಸುವ ಮತ್ತು ಹಚ್ಚುವ ವ್ಯವಸ್ಥೆ ಇರಬೇಕು.
   - ಯಂತ್ರದ ಕವಚವು ಪೌಡರ್ ಲೇಪಿತ ಹಾಗೂ 18 ಎಸ್‌ಡಬ್ಲ್ಯೂಜಿ ಶೀಟ್‌ನಲ್ಲಿ ತಯಾರಿಸಿರಬೇಕು.
   - ಸದರಿ ಯಂತ್ರದಲ್ಲಿ 2 ಸಂಖ್ಯೆ ಸಿಂಕ್ರೋನಸ್ ಎ.ಸಿ. ಗೇರ್ ಮೋಟಾರ್‌ಗಳಿರಬೇಕು.
   - ಸದರಿ ಯಂತ್ರದಲ್ಲಿ 2 ಸಂಖ್ಯೆಯ ಎಲೆಕ್ಟ್ರಾನಿಕ್ಸ್ ಫಿಲಿಪ್ಸ್ ಚೋಕ್ ಅಂಡ್ ಟ್ಯೂಬ್ಸ್ ಇರಬೇಕು.
   - ಕನಿಷ್ಠ 10 ಪ್ರದರ್ಶನ ಫಲಕಗಳನ್ನು ಪ್ರದರ್ಶಿಸುವ ವ್ಯವಸ್ಥೆ ಹೊಂದಿರಬೇಕು.
   - ಯಂತ್ರವು ಒಂದು ಸೆನ್ಸಾರ್ (Sensor) ಒಳಗೊಂಡಿರಬೇಕು.
   - ಯಂತ್ರವು ಪಡೆಸ್ಟ್ರಿಯನ್ ಹಾಗೂ ಹಾರಿಜಾಂಟಲ್ ಮಾದರಿಯದ್ದಾಗಿರಬೇಕು.

ಷರತ್ತುಗಳು:

1. ಬ್ಯಾಕ್‌ಲಿಟ್ ಮೂವಿಂಗ್ ಪ್ರದರ್ಶನ ಯಂತ್ರಗಳನ್ನು ಮೇಲ್ಕಂಡಂತೆ ಸಿದ್ಧಪಡಿಸಿ, ಇಲಾಖೆಗೆ ಪೂರೈಸಬೇಕು. ತದನಂತರ ಇಲಾಖೆ ತಿಳಿಸುವ ಸ್ಥಳಗಳಿಗೆ ತೆರಳಿ ಅಳವಡಿಸಿಕೊಡಬೇಕು. ಅದರಂತೆ ಪ್ರತಿ ಬ್ಯಾಕ್‌ಲಿಟ್ ಮೂವಿಂಗ್ ಪ್ರದರ್ಶನ ಫಲಕವೊಂದಕ್ಕೆ ಟೆಂಡರ್ ದರ ನೀಡಬೇಕು.
2. ಟೆಂಡರ್‌ದಾರರು ಕಳೆದ 2007–08 ಮತ್ತು 2008–09ರ ಸಾಲಿನಲ್ಲಿ ಯಾವುದಾದರೂ ಒಂದು ವರ್ಷದಲ್ಲಿ ರೂ. 15.00 ಲಕ್ಷಗಳ ವೆಚ್ಚದಲ್ಲಿ ಯಾವುದಾದರೂ ಸರ್ಕಾರಿ ಇಲಾಖೆಗೆ ಇಂತಹುದೇ ಮಾದರಿ ಯಂತ್ರಗಳನ್ನು ಪೂರೈಸಿದ ಒಂದು ಕಾಮಗಾರಿಯ ಅನುಭವ ಪ್ರಮಾಣ ಪತ್ರವನ್ನು ಟೆಂಡರ್‌ನೊಂದಿಗೆ ಸಲ್ಲಿಸಬೇಕು.
3. ಇಎಂಡಿ ರೂ.65,000/–ಗಳನ್ನು ಆಯುಕ್ತರು, ವಾರ್ತಾ ಇಲಾಖೆ, ಬೆಂಗಳೂರು ಇವರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿಡಿ ರೂಪದಲ್ಲಿ ಟೆಂಡರ್‌ನೊಂದಿಗೆ ಸಲ್ಲಿಸಬೇಕು.
4. ಟೆಂಡರ್‌ನೊಂದಿಗೆ ಟೆಂಡರ್‌ದಾರರು ತಮ್ಮ ಸಂಸ್ಥೆಗೆ ಸಂಬಂಧಿಸಿದ 2008–09ನೇ ಸಾಲಿನ ಮಾರಾಟ ತೆರಿಗೆ ಸಲ್ಲಿಕೆ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.
5. ಟೆಂಡರ್‌ನೊಂದಿಗೆ ಟೆಂಡರ್‌ದಾರರು ತಮ್ಮ ಸಂಸ್ಥೆಗೆ ಸಂಬಂಧಿಸಿದ 2008–09ನೇ ಸಾಲಿನ ಆದಾಯ ತೆರಿಗೆ ಸಲ್ಲಿಕೆ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.
6. ಟೆಂಡರ್‌ನೊಂದಿಗೆ ಸಲ್ಲಿಸುವ ಎಲ್ಲಾ ದಾಖಲೆಗಳು ಟೆಂಡರ್ ಸಲ್ಲಿಸುವ ಆಯಾ ಸಂಸ್ಥೆಯ ಹೆಸರಿನಲ್ಲೇ ಇರಬೇಕು.
7. ಸಂಸ್ಥೆಯು ರಾಜ್ಯ ಸರ್ಕಾರದ ಸಣ್ಣ ಪ್ರಮಾಣ ಕೈಗಾರಿಕಾ ಸಂಸ್ಥೆಯಲ್ಲಿ ನೊಂದಾಯಿಸಿರಬೇಕು.
8. ಇಲಾಖೆ ನೀಡುವ ನಿಗದಿತ ಟೆಂಡರ್ ನಮೂನೆಯಲ್ಲಿಯೇ ಟೆಂಡರ್‌ನ್ನು ಸಲ್ಲಿಸಬೇಕು.
9. ರಾಷ್ಟ್ರೀಕೃತ ಬ್ಯಾಂಕಿನಿಂದ ರೂ. 30.00 ಲಕ್ಷಗಳಿಗೆ ಸಾಲ್ವೆನ್ಸಿ ಪತ್ರ ಪಡೆದು ಟೆಂಡರ್‌ನೊಂದಿಗೆ ಸಲ್ಲಿಸಬೇಕು.
10. ಟೆಂಡರ್ ಸಲ್ಲಿಸುವ ಲಕೋಟೆ ಮೇಲೆ "ಬ್ಯಾಕ್‌ಲಿಟ್ ಪ್ರದರ್ಶನ ಯಂತ್ರ ಒದಗಿಸಲು ಟೆಂಡರ್" ಎಂದು ನಮೂದಿಸಿರಬೇಕು.
11. ಕಾರ್ಯಾದೇಶ ನೀಡಿದ ದಿನಾಂಕದಿಂದ 20 ದಿನಗಳೊಳಗೆ ಈ ಕಾರ್ಯವನ್ನು ಪೂರ್ಣಗೊಳಿಸಿ ಕೊಡಬೇಕು.
12. ಟೆಂಡರ್‌ನ್ನು ಆಯುಕ್ತರು, ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು–560 001, ಇವರಿಗೆ ದಿನಾಂಕ: 3.9.2009ರಂದು ಮಧ್ಯಾಹ್ನ 1.00 ಗಂಟೆಯೊಳಗೆ ಸಲ್ಲಿಸಬೇಕು.
13. ಟೆಂಡರ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಇಲಾಖಾ ಮುಖ್ಯಸ್ಥರಿಗೆ ಇರುತ್ತದೆ. ಅಲ್ಲದೆ ಯಾವುದೇ ಮುನ್ಸೂಚನೆ ನೀಡದೆ ಟೆಂಡರ್‌ನ್ನು ರದ್ದು ಪಡಿಸುವ ಅಥವಾ ಮುಂದೂಡುವ ಅಧಿಕಾರ ಇಲಾಖಾ ಆಯುಕ್ತರಿಗೆ ಇರುತ್ತದೆ.

ಎನ್.ಆರ್. ವಿಶುಕುಮಾರ್

ನಿರ್ದೇಶಕರು, ವಾರ್ತಾ ಇಲಾಖೆ.

ಪಿ.ಆರ್. 682

V-F3-B/B

ವಾರ್ತಾ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು–560001

ಮೈಸೂರು ದಸರಾ ವಿಜಯದಶಮಿ ಮೆರವಣಿಗೆಗಾಗಿ ಸ್ತಬ್ಧಚಿತ್ರ ನಿರ್ಮಿಸಿಕೊಡಲು ಟೆಂಡರ್

ಸಂ:ವಾಇ/ಕ್ಷೇ.ಪ್ರ/ಮೈದಸ್ತಚಿ/2009–10/8809–11, ದಿನಾಂಕ: 7/11ನೇ ಆಗಸ್ಟ್ 2009

ಮೈಸೂರು ದಸರಾ ವಿಜಯದಶಮಿ ಮೆರವಣಿಗೆಯಲ್ಲಿ ವಾರ್ತ ಇಲಾಖೆ ಸ್ತಬ್ಧಚಿತ್ರದೊಂದಿಗೆ ಪಾಲ್ಗೊಳ್ಳುವ ಸಂಬಂಧ **"ಮನುಷ್ಯ ಜಾತಿ ತಾನೊಂದೇ ವಲಂ"** ಎಂಬ ವಿಷಯಾಧಾರಿತ ಸ್ತಬ್ಧಚಿತ್ರವನ್ನು ನಿರ್ಮಿಸಿಕೊಡಲು ಆಸಕ್ತರಿಂದ ಟೆಂಡರ್ ಆಹ್ವಾನಿಸಲಾಗಿದೆ. ಖಾಲಿ ಟೆಂಡರ್ ನಮೂನೆಗಳನ್ನು ದಿನಾಂಕ:3.9.2009ರವರೆಗೆ ಅರ್ಜಿಯನ್ನು ಶುಲ್ಕ ರೂ.400/–ಗಳನ್ನು ನಗದು ಅಥವಾ ಡಿಡಿ ರೂಪದಲ್ಲಿ ಸಲ್ಲಿಸಿ, ಕಚೇರಿ ವೇಳೆಯಲ್ಲಿ ಪಡೆಯಬಹುದು. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:8.9.2009ರ ಮಧ್ಯಾಹ್ನ 1.00 ಗಂಟೆ. ಟೆಂಡರ್‌ನ್ನು ಅದೇ ದಿನ ಸಂಜೆ 4.00 ಗಂಟೆಗೆ ತೆರೆಯಲಾಗುವುದು. ಇಎಂಡಿ ರೂ.10,000/– ಗಳನ್ನು ಆಯುಕ್ತರು, ವಾರ್ತಾ ಇಲಾಖೆ, ಬೆಂಗಳೂರು ಇವರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿಡಿ ರೂಪದಲ್ಲಿ ಪಡೆದು ಟೆಂಡರ್‌ನೊಂದಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಉಪನಿರ್ದೇಶಕರು (ಕ್ಷೇ.ಪ್ರ) ವಾರ್ತಾ ಇಲಾಖೆ, ಬೆಂಗಳೂರು ಇವರಿಂದ ಪಡೆಯಬಹುದಾಗಿದೆ.

ಸ್ತಬ್ಧ ಚಿತ್ರ ನಿರ್ಮಾಣ ಕಾರ್ಯದ ವಿವರಗಳು:–

1. 35x14x10 ಅಡಿ ಅಳತೆಯ ಟ್ರೇಲರ್ ಲಾರಿಯನ್ನು ಬಳಸಿ ಅದರ ಮೇಲ್ಭಾಗದಲ್ಲಿ ಸುತ್ತಲೂ ಸರ್ವೆ ಮರಗಳನ್ನು ಉಪಯೋಗಿಸಿ, ಸ್ತಬ್ಧಚಿತ್ರ ರಚನೆಗೆ ಸೂಕ್ತ ಸಿದ್ಧತೆ ಮಾಡಿಕೊಂಡು ನಂತರ ಸಿಲ್ವರ್ ಮರದ ರೀಪರ್‌ಗಳನ್ನು ಉಪಯೋಗಿಸಿ, ಸ್ತಬ್ಧಚಿತ್ರದ ಫ್ರೇಮುಗಳನ್ನು ಲಾರಿಯ ಮುಂಭಾಗ ಒಳಗೊಂಡಂತೆ ನಾಲ್ಕು ಭಾಗಗಳಿಗೂ ಹೊಂದುವಂತೆ ಅಳವಡಿಸಿ, ಅವುಗಳ ಮೇಲೆ ನಾಲ್ಕು ಎಂ ಎಂ ಪ್ಲೇವುಡ್ ಶೀಟ್‌ನ್ನು ಹಾಕಿ ತದನಂತರ ಇಲಾಖೆ ನೀಡುವ **"ಮನುಷ್ಯ ಜಾತಿ ತಾನೊಂದೇ ವಲಂ"** ಕುರಿತ ವಿನ್ಯಾಸಕ್ಕನುಗುಣವಾಗಿ ಧ್ವನಿ–ಮುದ್ರಣ, ಕಲಾವಿದರ ವೇಷಭೂಷಣಗಳನ್ನು ಅಳವಡಿಸಬೇಕು. ಅಲ್ಲದೆ ಪ್ಲಾಸ್ಟರ್ ಆಫ್ ಪ್ಯಾರೀಸ್, ಫೈಬರ್, ಆಕರ್ಷಕ ವಿನ್ಯಾಸ ಪೂರ್ವಕವಾದ ಪ್ರಾತ್ಯಕ್ಷಿತೆಯನ್ನು ರೂಪುಗೊಳಿಸಬೇಕು. ಟ್ರೇಲರ್ ಸುತ್ತಲೂ ಫ್ರೇಂ ಬೋರ್ಡ್‌ನಲ್ಲಿ ಪ್ರಚಾರ ಸಾಹಿತ್ಯವನ್ನು ರೂಪುಗೊಳಿಸಬೇಕು. **"ಮನುಷ್ಯ ಜಾತಿ ತಾನೊಂದೇ ವಲಂ"** ಸ್ತಬ್ಧಚಿತ್ರಕ್ಕೆ ಹೊಂದುವಂತಹ ಸಂಗೀತ ವ್ಯವಸ್ಥೆಗೆ ಧ್ವನಿಮುದ್ರಣ ಹಾಗೂ ಧ್ವನಿವರ್ಧಕ ಸೌಲಭ್ಯ ಅಳವಡಿಸಿಕೊಡಬೇಕು. ಮತ್ತು 20 ಜನ ರೂಪದರ್ಶಿ ಕಲಾವಿದರು ಸ್ತಬ್ಧಚಿತ್ರದಲ್ಲಿ ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡಬೇಕು. ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದರ ಮೂಲಕ ಒಟ್ಟಾರೆ ಒಂದು ಸ್ತಬ್ಧಚಿತ್ರ ನಿರ್ಮಿಸಿ ಕೊಡುವುದು.
2. ಈ ರೀತಿ ಸಿದ್ಧಪಡಿಸಿದ ಸ್ತಬ್ಧಚಿತ್ರವು ವಿಜಯದಶಮಿ ಮೆರವಣಿಗೆಯಲ್ಲಿ ಸಾಗುವಾಗ ಇಬ್ಬರು ಬಡಗಿಗಳು ಇದರ ಜೊತೆಗೆ ಸಾಗಲು ವ್ಯವಸ್ಥೆ ಮಾಡಬೇಕು.
3. ಸ್ತಬ್ಧಚಿತ್ರ ನಿರ್ಮಾಣ ಸಂಬಂಧ ಸಾಮಗ್ರಿ ವೆಚ್ಚ ಹಾಗೂ ಮಜೂರಿ ಸೇರಿದಂತೆ ದರವನ್ನು ಟೆಂಡರ್‌ನಲ್ಲಿ ನಮೂದಿಸಿ ಸಲ್ಲಿಸಬೇಕು.
4. ಸ್ತಬ್ಧಚಿತ್ರವನ್ನು ದಿನಾಂಕ: 26.9.2009ರ ಸಂಜೆ 5.00 ಗಂಟೆಯೊಳಗೆ ಸಿದ್ಧಪಡಿಸಿ, ಇಲಾಖೆಯ ಸುಪರ್ದಿಗೆ ನೀಡಬೇಕು.
5. ಟ್ರೇಲರ್ ಬಾಡಿಗೆ ಹಾಗೂ ಟ್ರೇಲರ್ ವಾಹನದ ಇಂಧನ ವೆಚ್ಚವನ್ನು ಟೆಂಡರ್‌ದಾರರೇ ಭರಿಸಬೇಕು.

ಷರತ್ತುಗಳು:

1. ಟೆಂಡರ್‌ದಾರರು ತಮ್ಮ ಸಂಸ್ಥೆಯ ಹೆಸರಿನಲ್ಲಿ ಸಣ್ಣ ಪ್ರಮಾಣ ಕೈಗಾರಿಕಾ ಘಟಕದಲ್ಲಿ ನೊಂದಾಯಿಸಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಬೇಕು.
2. ಇಎಂಡಿ ರೂ.10,000/–ಗಳನ್ನು ಆಯುಕ್ತರು, ವಾರ್ತಾ ಇಲಾಖೆ, ಬೆಂಗಳೂರು ಇವರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿಡಿ ರೂಪದಲ್ಲಿ ಟೆಂಡರ್‌ನೊಂದಿಗೆ ಸಲ್ಲಿಸಬೇಕು.
3. ಟೆಂಡರ್‌ನೊಂದಿಗೆ ಟೆಂಡರ್‌ದಾರರು 2008–09ನೇ ಸಾಲಿನ ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆ ಸಲ್ಲಿಕೆ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಬೇಕು.
4. ರಾಷ್ಟ್ರಮಟ್ಟದಲ್ಲಿ ಅಥವಾ ರಾಜ್ಯಮಟ್ಟದಲ್ಲಿ ರೂ. 3.00 ಲಕ್ಷಗಳಿಗಿಂತ ಮೇಲ್ಪಟ್ಟ ಸ್ತಬ್ಧಚಿತ್ರ ನಿರ್ಮಿಸಿರುವ ಅನುಭವದ ತೃಪ್ತಿಕರ ಪತ್ರವನ್ನು ಟೆಂಡರ್‌ನೊಂದಿಗೆ ಲಗತ್ತಿಸಬೇಕು.
5. ರಾಷ್ಟ್ರೀಕೃತ ಬ್ಯಾಂಕಿನಿಂದ ರೂ. 3.00 ಲಕ್ಷಗಳಿಗೆ ಸಾಲ್ವೆನ್ಸಿ ಪತ್ರ ಪಡೆದು ಟೆಂಡರ್‌ನೊಂದಿಗೆ ಸಲ್ಲಿಸಬೇಕು.

6. ಟೆಂಡರ್ ತೆರೆಯುವ ಸಂದರ್ಭದಲ್ಲಿ ಟೆಂಡರ್‌ದಾರರಾಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಪ್ರತಿನಿಧಿ ಇರಬಹುದು.
7. ಎಲ್ಲಾ ದಾಖಲೆಗಳು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕೃತಗೊಂಡಿರಬೇಕು.
8. ಟೆಂಡರ್ ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಇಲಾಖಾ ಮುಖ್ಯಸ್ಥರಿಗೆ ಇರುತ್ತದೆ.
9. ಖಾಲಿ ಅರ್ಜಿ ಶುಲ್ಕ ರೂ. 400/–ಗಳನ್ನು ನಗದು ಅಥವಾ ಡಿಡಿ ರೂಪದಲ್ಲಿ ಸಲ್ಲಿಸಬೇಕು.

ಎನ್.ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಇಲಾಖೆ.

ಪಿ.ಆರ್. 683

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಂಖ್ಯೆ:ಲೋಇ:ಮಂವಿ:ಟಿ.ಎನ್‌ಡಿ(23):2009–10:ಎಇ–1, ಮಂಗಳೂರು, ದಿನಾಂಕ: 12ನೇ ಆಗಸ್ಟ್ 2009

ಈ ಕೆಳಕಂಡ ಕೆಲಸಕ್ಕೆ ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ದ್ವಿಪ್ರತಿಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲಾದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಲಸದ ಹೆಸರನ್ನು ಮೊಹರಾದ ಲಕೋಟೆಯ ಮೇಲೆ ನಮೂದಿಸಿದ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ದಿನಾಂಕ: 31.08.2009ರಂದು ಸಂಜೆ:4.00 ಗಂಟೆಯವರೆಗೆ ಟೆಂಡರುಗಳನ್ನು ಸ್ವೀಕರಿಸುವರು.

